ಕಾರ್ಕಳ

ಒಂದು ಪ್ರಾದೇಶಿಕ ಅಧ್ಯಯನ

ಶ್ರೀ ಭುವನೇಂದ್ರ ಕಾಲೇಜ್
ರಜತೋತ್ಸವ ಸ್ಮಾರಕ ಸಂಪುಟ

1985

ರಜತೋತ್ಸವ ಸಮಿತಿ,
ಶ್ರೀ ಭುವನೇಂದ್ರ ಕಾಲೇಜ್, ಕಾರ್ಕಳ, ದ.ಕ.

KARKALA — An area Study - Published on the occasion o
Silver Jubilee of Sri Bhuvanendra College, Karkala 1985.
Pages: iv+169+12 Price Rs:

ಸಂಪಾದಕ ಮಂಡಲಿ.

ಶ್ರೀ ಕೆ. ದಾಮೋದರ ಕಿಣಿ, ಪ್ರಿನ್ಸ್‌ಪಾಲ್
ಅಧ್ಯಕ್ಷ

ಶ್ರೀ ಎಸ್. ರವೀಂದ್ರಮಲ್ಲಿ, ಎಂ. ಎ.
ಶ್ರೀ ಎಮ್. ರಾಮಚಂದ್ರ, ಎಂ. ಎ.
ಡಾ। ಪಿ. ಎನ್. ನರಸಿಂಹ ಮೂರ್ತಿ, ಎಂ. ಎ.
ಶ್ರೀ ಬಿ. ಕೆ. ಸೂರ್ಯನಾರಾಯಣ
ಡಾ। ಎಲ್. ಜಿ. ಭಟ್ಟ, ಎಂ. ಎ.
ಶ್ರೀ ಕೆ. ರಘುನಾಥ ಭಟ್ಟ, ಎಂ. ಎ.
ಸದಸ್ಯರು

ಮಣಿಪಾಲ ಪವರ್ ಪ್ರೆಸ್, ಮಣಿಪಾಲ.

ಪ್ರಸ್ತಾವನೆ

ಶ್ರೀ ಭುವನೇಂದ್ರ ಕಾಲೇಜಿನ 'ಬೆಳ್ಳಿಹಬ್ಬ'ದ ಸವಿನೆನಪು ನಿಡುಗಾಲ ಉಳಿಯಬೇಕೆಂದು ನಾವು ಮಾಡಿದ ಒಂದು ನಮ್ರ ಪ್ರಯತ್ನವೇ ಈ ಗ್ರಂಥ. ನಮಗೆ ತಿಳಿದಂತೆ ಕಾರ್ಕಳವನ್ನು ಕುರಿತು ಇಷ್ಟು ವಿಸ್ತೃತವಾದ, ಅಧಿಕೃತವಾದ ಗ್ರಂಥ ಈ ಮೊದಲು ಪ್ರಕಟವಾಗಿಲ್ಲ. ಕಾಲೇಜಿನ ಆರು ಮಂದಿ ಅಧ್ಯಾಪಕರು ಸಾಕಷ್ಟು ಕಾಲ ಕ್ಷೇತ್ರ ಪರ್ಯಟನ, ಸಂಶೋಧನ, ಅಧ್ಯಯನಗಳನ್ನು ಮಾಡಿ, ವಿಷಯವನ್ನು ಸಂಗ್ರಹಿಸಿ ಪ್ರಬಂಧಗಳನ್ನು ರಚಿಸಿದರು. ಹಾಗೆ ರಚಿಸಿದ ಪ್ರಬಂಧಗಳನ್ನು ಸಂಪಾದಕ ಸಮಿತಿಯ ಸಭೆಯಲ್ಲಿ ಓದಿ, ಚರ್ಚಿಸಿ, ಅದರ ಬೆಳಕಿನಲ್ಲಿ ಮತ್ತೆ ಅವುಗಳನ್ನು ಪರಿಷ್ಕರಿಸಿ ಅಚ್ಚಿಗೆ ಅಣಿಗೊಳಿಸಿದರು. ಅಷ್ಟಾದರೂ ಲೇಖನಗಳಲ್ಲಿ ದೋಷಗಳೋ ನ್ಯೂನತೆಗಳೋ ಇರುವುದು ಸಾಧ್ಯ ಎಂಬುದನ್ನು ಸಮಿತಿ ತಿಳಿದಿದೆ. ಆದರೆ ನಮಗೆ ಒಂದೇ ಸಮಾಧಾನ – ನಮಗಿಂತ ಶತಮಾನಗಳ ಹಿಂದಿನ ರಾಘವಾಂಕ ಪಂಡಿತ 'ನಡೆವರೆಡಹದೆ, ಕುಳಿತರೆಡಹುವರೆ' ಎಂದು ಕೇಳಿದ್ದಾನೆ; ನಡೆದು ಬಿದ್ದವರಿಗೆ, ಬೀಳಬಹುದಾದವರಿಗೆ ಸಂತೈಕೆಯ ಮಾತುಗಳನ್ನು ಹೇಳಿದ್ದಾನೆ. ಮಹಾಜನರು ನಮ್ಮೀ ಪ್ರಯತ್ನವನ್ನು ಅದೇ ಭಾವನೆಯಿಂದ, ಉದಾರತೆಯಿಂದ ಪರಿಗ್ರಹಿಸಬೇಕಾಗಿ ಕೋರುತ್ತೇವೆ.


ಪ್ರಬಂಧ ಸಿದ್ಧತೆಯಲ್ಲಿ ಆಯಾ ಲೇಖಕರು ಅನೇಕ ಮಹನೀಯರಿಗೆ, ಸಂಸ್ಥೆಗಳಿಗೆ, ಆಕರಗಳಿಗೆ ಋಣಿಗಳಾಗಿದ್ದಾರೆ. ಎಲ್ಲವನ್ನೂ ಪ್ರತಿಪ್ರತ್ಯೇಕವಾಗಿ ಸ್ಮರಿಸುವುದು ಕಷ್ಟಸಾಧ್ಯ. ಆದುದರಿಂದ ಸಮಷ್ಟಿಯಾಗಿ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಅಲ್ಪಾವಧಿಯಲ್ಲಿ ಆಕರ್ಷಕವಾಗಿ ಗ್ರಂಥವನ್ನು ಮುದ್ರಿಸಿದ ಮಣಿಪಾಲ ಪವರ್ ಪ್ರೆಸ್ಸಿನ ಅಧಿಕಾರಿಗಳಿಗೂ ಕಾರ್ಮಿಕರಿಗೂ ನಾವು ಕೃತಜ್ಞರಾಗಿದ್ದೇವೆ. ಗ್ರಂಥಕ್ಕೆ ಸಮುಚಿತವಾದ ಮುಖಚಿತ್ರವನ್ನು ಬರೆದ ಶ್ರೀ ಆರ್. ಕೆ. ದೇವಾಡಿಗಾರರಿಗೆ ನಮ್ಮ ಧನ್ಯವಾದ. 'ಮಾಲೆ ಕಟ್ಟಿದರೆ ಸಾಲದು' ಮುಡಿವ ಭೋಗಿಗಳೂ ಬೇಕು' ಎಂಬುದು ಒಂದು ಕವಿಸೂಕ್ತಿ. ಪ್ರಯತ್ನಸಾಧ್ಯವಾದ ಈ ಗ್ರಂಥವನ್ನು ಕೊಳ್ಳುವ, ಓದುವ, ಕೊಂಡಾಡುವ ಸಹೃದಯ ವಾಚಕ ಸ್ತೋಮಕ್ಕೆ ನಮ್ಮ ಮನಃಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

— ಸಂಪಾದಕ ಸಮಿತಿ.

ಪರಿವಿಡಿ

ಇತಿಹಾಸ - ಕಲೆ ಮತ್ತು ಸಂಸ್ಕೃತಿ

ು ಬೆ



ಡಾ। ಪಿ. ಎನ್. ನರಸಿಂಹಮೂರ್ತಿ, ಎಂ.ಎ.,ಪಿಎಚ್.ಡಿ.

1967 ರಿಂದ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಇತಿಹಾಸ ವಿಭಾಗದ ಉಪನ್ಯಾ
ಕರು ಮತ್ತು ಮುಖ್ಯಸ್ಥರು. 'ಕರ್ನಾಟಕದ ಕರಾವಳಿಯಲ್ಲಿ ಜೈನಧರ್ಮ' ವನ್ನು ಕುರಿತ
ಸಂಶೋಧನ ಪ್ರಬಂಧವನ್ನು ರಚಿಸಿ, ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ
ಪದವಿಯನ್ನು ಪಡೆದಿದ್ದಾರೆ. ಭಾರತೀಯ ಶಾಸನ ಸಂಶೋಧನ ಸಂಸ್ಥೆ, ಸ್ಥಳನಾಮ ಸಂ
ಗಳ ಸದಸ್ಯರಾಗಿರುವ ಮೂರ್ತಿಯವರು ವಿದ್ವತ್ಸಭೆಗಳಲ್ಲಿ ಅನೇಕ ಸಂಶೋಧ
ಪ್ರಬಂಧಗಳನ್ನು ಓದಿದ್ದಾರೆ. ಚಾರಿತ್ರಿಕ – ಸಾಂಸ್ಕೃತಿಕ ವಿಷಯಗಳನ್ನು ಕುರಿತಾ
ಅವರ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕೃತ ಲೇಖನದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ಮೊದಲಾಗಿ ಅರ್ವಾಚೀ
ಸ್ವಾತಂತ್ರ್ಯ ಸಂಗ್ರಾಮದವರೆಗಿನ ಕಾರ್ಕಳ ಚರಿತ್ರೆಯ ವಿವಿಧ ಘಟ್ಟಗಳನ್ನು ಗುರುತಿ
ಸಂಸ್ಕೃತಿಯನ್ನು ವಿಶ್ಲೇಷಿಸಿ, ಕಲಾ ವೈಭವಕ್ಕೆ ಕನ್ನಡಿ ಹಿಡಿಯುವ ಒಂದು ಪ್ರಯ
ವನ್ನು ಕಾಣಬಹುದು.

1 (ಅ) ಇತಿಹಾಸ

ಪ್ರಸ್ತಾವನೆ:

ಪರಶುರಾಮ ಸೃಷ್ಟಿ ಎಂದು ಪ್ರಸಿದ್ಧವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗ ಕಾರ್ಕಳ ತಾಲ್ಲೂಕು. ಇದು ಜಿಲ್ಲೆಯ ಇತರ ತಾಲ್ಲೂಕುಗಳಾದ ಬೆಳ್ತಂಗಡಿ, ಬಂಟವಾಳ, ಮಂಗಳೂರು, ಉಡುಪಿ ಮತ್ತು ಕುಂದಾಪುರಗಳಿಂದ ಸುತ್ತುವರಿಯಲ್ಪಟ್ಟಿದೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಇದರ ನೆರೆಯ ಜಿಲ್ಲೆಗಳು. ಸಹ್ಯಾದ್ರಿಯ ಸೆರಗಿನಲ್ಲಿರುವ ಕಾರ್ಕಳ ಮಲೆನಾಡ ತಾಲ್ಲೂಕಿನಂತಿದೆ. ಜಿಲ್ಲೆಯಲ್ಲೇ ಹೆಚ್ಚು ಮಳೆ ಬೀಳುವ ಪ್ರದೇಶ ಇದಾಗಿದ್ದು ಇಲ್ಲಿನ ಪರ್ವತ ಪ್ರದೇಶಗಳು ಅನೇಕ ನದಿಗಳಿಗೆ ಜನ್ಮಸ್ಥಳಲಾಗಿವೆ. ಶಾಂಭವಿ, ಸೀತಾ, ಸ್ವರ್ಣಾ ಇತ್ಯಾದಿ ನದಿಗಳು ಕಾರ್ಕಳ ತಾಲ್ಲೂಕಿನಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುತ್ತವೆ. ಇಲ್ಲಿನ ಪ್ರಕೃತಿ ಅತ್ಯಂತ ರಮಣೀಯ;– "ಎಲ್ಲಿ ಭೂರಮೆ ದೇವ ಸನ್ನಿಧಿ..." ಎಂಬ ಕವಿವಾಣಿಯನ್ನು ನೆನಪಿಗೆ ತರುವಂತಹುದು. ಸಸ್ಯಶಾಮಲೆ ಸೌಂದರ್ಯದ ಉತ್ತುಂಗಕ್ಕೆ ನಮ್ಮನ್ನು ಎಳೆದರೆ ಅಲ್ಲಿ ಹುಟ್ಟುವ ಜಲವಾಹಿನಿಗಳು ಮನುಕುಲದ ಜೀವನಾಡಿಗಳಾಗಿ ಇಲ್ಲಿ ಘಟಿಸಿದ ಭವ್ಯ ಇತಿಹಾಸ ಪರಂಪರೆಯತ್ತ ಮನ ಸೆಳೆಯುತ್ತವೆ. ಇಲ್ಲಿನ ಗುಡಿ-ಗೋಪುರಗಳು, ಹಾಳಾದ ಕೋಟೆ-ಕೊತ್ತಲಗಳು, ಮೂಕಸಾಕ್ಷಿಯಂತಿರುವ ಕಲ್ಬರಹಗಳು ಅವಲೋಕನಾರ್ಥ ಕೈಬೀಸಿ ಕರೆಯುತ್ತಿವೆ.

ಪ್ರಾಗೈತಿಹಾಸಿಕ ಕಾಲ:

ಕಾರ್ಕಳದಲ್ಲಿ ಜನಜೀವನ ಎಂದು ಆರಂಭವಾಯಿತು ಎಂಬುದಕ್ಕೆ ಅನಾದಿಕಾಲದ ಆಧಾರಗಳು ನಮಗೆ ಸಿಗುತ್ತಿಲ್ಲವಾದರೂ ಬೃಹತ್ ಶಿಲಾಯುಗಕ್ಕೆ ಕಾಲಿಟ್ಟಾಗ ಒಂದು ಸ್ಪಷ್ಟ ಚಿತ್ರ ದೊರೆಯುತ್ತದೆ. ತತ್ಸಂಬಂಧವಾದ ಹಲವಾರು ಪಳೆಯುಳಿಕೆಗಳು ಕಾಣಸಿಗುತ್ತವೆ. ಇಲ್ಲಿ ಹೆಸರಿಸಬಹುದಾದವುಗಳೆಂದರೆ ಗವಿಗಳು ಮತ್ತು ಸಮಾಧಿಗಳು. ಇಲ್ಲಿನ ಹಿರಿಯಂಗಡಿ ಬಳಿ ಇರುವ ಪರ್ಪಲೆ ಬೆಟ್ಟದ ಮಧ್ಯಭಾಗದಲ್ಲಿ ಒಂದು ಗವಿ ಇದೆ. ಪೂರ್ವಕ್ಕೆ ಮುಖವಿರುವ ಈ ಮುರಕಲ್ಲ ಗವಿ ಬೃಹತ್ ಶಿಲಾಯುಗದ್ದು. ಕಾಲನ ಪ್ರಭಾವದಿಂದಾಗಿ ಆದ ಹಲವಾರು ಬದಲಾವಣೆಗಳನ್ನು ನಾವು ಇಲ್ಲಿ ಕಾಣಬಹುದು. ಗವಿಯ ಮುಂದೆ ಕಿರಿದಾದ ಸಣ್ಣ ಕಣಿವೆ, ಇಲ್ಲೊಂದು ಅಷ್ಟೇ ಸಣ್ಣದಾದ ಝರಿ. ಇದು ಪ್ರಾಚೀನ ಕಾಲದಲ್ಲಿ ಮಾನವ ವಾಸ್ತವ್ಯಕ್ಕೆ ಅತ್ಯಂತ ಸೂಕ್ತವಾದ ಸ್ಥಳವಾಗಿತ್ತು. ಆಧುನಿಕ ಮಾನವನ ಸಂಪರ್ಕ ಹೊಂದಿರುವ ಈ ಗವಿ ಇದ್ದಿರಬಹುದಾದ ಪಳೆಯುಳಿಕೆಗಳನ್ನು ತನ್ನ ಗರ್ಭದಲ್ಲಿ ಸೇರಿಸಿಕೊಂಡಿದೆ.

ಬೆಳುವಾಯಿ ಸಮೀಪದ ದರೆಗುಡ್ಡೆ ಮತ್ತು ಬೈಲೂರು ಸಮೀಪದ ಕಣಜಾರು ಬೆಟ್ಟ ಪ್ರದೇಶಗಳಲ್ಲಿ ಹೆಬ್ಬಂಡೆ ವಾಸ್ತವ್ಯದ (Rock Shelters) ಕುರುಹುಗಳಿವೆ. ಇಲ್ಲಿ ಬೃಹತ್ ಶಿಲಾಯುಗಕ್ಕೂ ಹಿಂದಿನ ಕಾಲದ ಮಾನವ ವಾಸವಾಗಿದ್ದಿರಬಹುದು. ಸಾವಿರಾರು ವರ್ಷಗಳ ಘನಘೋರ ವರ್ಷಧಾರೆಯಿಂದ ಇಲ್ಲಿನ ಕುರುಹುಗಳು ನಾಶವಾಗಿವೆ.

ತೀರ ಶಿಥಿಲವಾದ ಮುರಕಲ್ಲ ಗವಿಯೊಂದು ಕಾಂತಾವರದ ಬಳಿಯ ಬೆಟ್ಟಸಾಲಿನಲ್ಲಿದೆ.

ಗವಿಯ ಒಳಭಾಗದಲ್ಲಿ ಸ್ವಲ್ಪ ದೂರಕ್ಕೆ ಒಂದು ಸಣ್ಣ ಝುರಿ ಹರಿಯುತ್ತದೆ. ಇವೆರಡನ್ನೂ ಕಿರಿದಾದ ಮಾರ್ಗವೊಂದಿದೆ. ಪಶ್ಚಿಮಕ್ಕೆ ಮುಖ ಮಾಡಿರುವ ಈ ಗುಹೆಯ ಮುಂದೆ ಸುಂ ದೊಡ್ಡ ಕಣಿವೆಯಿದೆ. ಇದಕ್ಕೆ ಸ್ವಲ್ಪ ದೂರದಲ್ಲಿ ಪ್ರಸಿದ್ಧ ಕಾಂತೇಶ್ವರ ದೇವಾಲಯವಿದೆ.

ಮೂಡಬಿದರೆ ಸಮೀಪ ಇರುವ ಕೊಣಾಜೆಯಲ್ಲಿ ಹೆಬ್ಬಂಡೆಗಳ ನಡುವೆ ಒಂದು ಗ ಸಾಕಷ್ಟು ವಿಶಾಲವಾಗಿರುವ ಈ ಗವಿ ಹಿಂದೆ ಕೆಲವು ಸಂಸಾರಗಳಿಗೆ ಆಸರೆ ಇತ್ತಿರಬಹುದು ದೇವೀ ಆರಾಧಕರೊಬ್ಬರು ಇಲ್ಲಿ ವಾಸಿಸುತ್ತಿದ್ದಾರೆ.

ಕೊಣಾಜೆ ಗವಿ ಸಮೀಪ ಕೆಲವು ಸಮಾಧಿಗಳಿವೆ. ಇವು ಬೃಹತ್ ಶಿಲಾಯುಗಕ್ಕೆ ಸೇ ಈ ಸಮಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆ ಕಾಲದಲ್ಲಿ ಜನ ವಾಸವಾಗಿದ್ದುದನ್ನು ಸೂಚಿಸುತ್ತವೆ

ರೆಂಜಾಳದ ಸಮೀಪ ಇರುವ ಬೋರುಕಟ್ಟೆ ಎಂಬ ಹಳ್ಳಿಯಲ್ಲಿ ಒಂದು ಬೃಹತ್ ಶಿಲಾ ಸ ಇದೆ. ಇದನ್ನು ಅಲ್ಲಿನ ಜನ **"ಪಾಂಡವರ ಕಲ್ಲು"** ಎಂದು ಕರೆಯುತ್ತಾರೆ. ಈ ಹೆಸರು ಸಮಾ ಪ್ರಾಚೀನತೆಯನ್ನು ಸೂಚಿಸುತ್ತದೆ ಅಷ್ಟೆ. ಜಿಲ್ಲೆಯ ಇತರೆಡೆಗಳಲ್ಲೂ **"ಪಾಂಡವರ ಕಲ್ಲು"** ಕರೆಸಿಕೊಳ್ಳುವ ಸ್ಥಳಗಳಿವೆ. ಅಲ್ಲೆಲ್ಲಾ ಕಾಣಸಿಗುವುದು ಬೃಹತ್ ಶಿಲಾ ಸಮಾಧಿಗಳು. ಬೋ ಸಮಾಧಿಯು ಸಣ್ಣ ರಂಧ್ರದ (Pot-hole) ಸಮಾಧಿ. ಇದರ ಮೇಲೆ ತೆಳುವಾದ ಕಲ್ಲು ಚಪ್ಪ ಒಂದು ಚಪ್ಪರ ಇದೆ. ಮಾನವ ಆ ವೇಳೆಗೆ ಲೋಹದ ಮುಖ್ಯವಾಗಿ, ಕಬ್ಬಿಣದ ಉಪಯೋಗ ಪ ನೆಂಬುದಕ್ಕೆ ಇದು ಸಾಕ್ಷಿ.

ಇಲ್ಲಿನ ಬೃಹತ್ ಶಿಲಾಯುಗದ ಸ್ಮಾರಕಗಳು ಸುಮಾರು ಕ್ರಿ.ಪೂ. 4ನೆಯ ಶತಮಾನ ಆನಂತರದ ಕಾಲದವೆಂದು ಅಂದಾಜಿಸಬಹುದು. ಆದರೆ ವೈಜ್ಞಾನಿಕವಾಗಿ ಉತ್ಖನನ ಕಾ ನಡೆಯುವ ವರೆಗೆ ಈ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಚಾರಿತ್ರಿಕ ಯುಗ:

ಪ್ರಾಕ್ಚಾರಿತ್ರಿಕ ಯುಗದಿಂದ ಕ್ರಮೇಣ ಮುಂದುವರಿದ ಮಾನವ ಇಲ್ಲಿನ ಸಂಸ್ಕೃತಿಗೆ ಅಡಿ ಹಾಕಿದನು. ಸಾಮಾಜಿಕ ವ್ಯವಸ್ಥೆ ರೂಪುಗೊಂಡಿತು. ಕ್ರಿ.ಶ. 4ನೆಯ ಶತಮಾನದ ವೇಳೆಗೆ ಜಿ ರಾಜಕೀಯ ವಾಹಿನಿಯಲ್ಲಿ ಕಾರ್ಕಳ ಸೇರಿಕೊಂಡಿತು. ಕದಂಬ ವಂಶ ಸ್ಥಾಪಕನಾದ ಮಯೂರ ಶ ರಾಂಚಿಯ ಪಲ್ಲವರೊಡನೆ ನಡೆಸಿದ ಯುದ್ಧಾನಂತರ ಅವರಿಂದ ಕರ್ನಾಟಕದ ಕರಾವಳಿ ಪ್ರದೇಶ ಪಡೆದನೆಂದು **ತಾಳಗುಂದ ಶಾಸನ** ತಿಳಿಸುತ್ತದೆ. ಎಂದರೆ ಈಗ ದಕ್ಷಿಣ ಕನ್ನಡ ಮತ್ತು ಉತ್ತರ ಎಂದು ಕರೆಯಲ್ಪಡುವ ಕರಾವಳಿಯ ಪೂರ್ಣ ಭಾಗವು ಕದಂಬರ ವಶವಾಯಿತು. ಕಾರ್ಕಳ ಈ ರಾ ಒಂದು ಭಾಗವಾಯಿತು.

ಬನವಾಸಿಯ ಕದಂಬರ ಅನಂತರ ಕರ್ನಾಟಕವನ್ನಾಳಿದ ಪ್ರತಿಯೊಂದು ಸಾರ್ವಭೌಮ ಮನೆತನವೂ ದಕ್ಷಿಣ ಕನ್ನಡ ಜಿಲ್ಲೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿತ್ತು. ಆದರೆ ಈ ಹಿ ಹೊಯ್ಸಳರ ಕಾಲದ ವರೆಗೆ ಪರೋಕ್ಷವಾಗಿಯೇ ಇತ್ತು. ಸಾರ್ವಭೌಮರ ಪ್ರತಿನಿಧಿಗಳಾಗಿ ಆಳಿದ ಆಳುಪರು. ಇವರು ಈ ಜಿಲ್ಲೆಯನ್ನು ಆಳಿದ ಅತ್ಯಂತ ಪ್ರಾಚೀನ ರಾಜವಂಶಜರು. ಇವರ ಆಳ್ವಖೇಡವೆಂದು ಪ್ರಸಿದ್ಧಿ ಪಡೆದಿತ್ತು. ಕಾರ್ಕಳ ಆಳ್ವಖೇಡದ ಒಂದು ಭಾಗವಾಯಿತು.

ಆಳುಪರ ಅಧೀನದಲ್ಲಿ:

ಕಾರ್ಕಳ ಭಾಗವನ್ನು ಆಳುಪ ಅರಸುಗಳು ಆಳಿದ್ದರು ಎಂಬುದಕ್ಕೆ ಹಲವಾರು ಶಾಸನಾಧಾ ಇವೆ. ಅವುಗಳಲ್ಲಿ ಅತ್ಯಂತ ಪ್ರಾಚೀನವಾದುದು 2ನೆಯ ಆಳುಪರಸನ ಬೆಳ್ಮಣ್ಣು ತಾಮ್ರಶ

ಕಾರ್ಕಳದ ಇತಿಹಾಸಕ್ಕೆ ಸಂಬಂಧಿಸಿದಂತೆ ದೊರೆಯುವ ಅತ್ಯಂತ ಪ್ರಾಚೀನ ಹಾಗೂ ಪ್ರಾಮುಖ್ಯವಾದ ಶಾಸನ ಇದು. ಹೆಮ್ಮೆ ಪಡಬೇಕಾದ ವಿಷಯವೆಂದರೆ ಪ್ರಸ್ತುತ ದೊರೆತಿರುವ ಕನ್ನಡದ ಪ್ರಾಚೀನತಮ ತಾಮ್ರ ಶಾಸನಗಳ ಸಾಲಿನಲ್ಲಿ ಬೆಳ್ಮಣ್ಣು ತಾಮ್ರಶಾಸನವು ಪ್ರಪ್ರಥಮವೆಂದು ಪರಿಗಣಿಸಲ್ಪಟ್ಟಿದೆ. ಆಳುಪರ ಆಡಳಿತಕ್ಕೆ ಸಂಬಂಧಿಸಿದಂತೆ ದೊರೆತಿರುವ ಪ್ರಥಮ ತಾಮ್ರಶಾಸನವೂ ಹೌದು.

ಕ್ರಿ.ಶ. 8ನೆಯ ಶತಮಾನದ ಮಧ್ಯಭಾಗಕ್ಕೆ ಸೇರುವ ಈ ಶಾಸನದ ಮುಖ್ಯ ವಿಷಯವೆಂದರೆ ಶಿವಳ್ಳಿಯ ಸಭೆಗೆ ಇದ್ದ ಶಾಸನ ಮರ್ಯಾದೆಯನ್ನು ಬೆಳ್ಮಣ್ಣಿನ ಸಭೆಗೂ ಅನ್ವಯಿಸುವಂತೆ ಆಜ್ಞೆ ಹೊರಡಿಸಿರುವುದು. ಬೆಳ್ಮಣ್ಣು ಆ ಕಾಲದಲ್ಲಿ "ಮಹಾನಾಡು" ಎಂಬ ಸಭೆಯನ್ನು ಹೊಂದಿ ಮಹತ್ತರ ರಾಜಕೀಯ ಪ್ರಭಾವವನ್ನು ಬೀರಿತ್ತು ಎಂಬುದು ಈ ಶಾಸನದಿಂದ ವ್ಯಕ್ತವಾಗುತ್ತದೆ. ಕಾನ್ತಾಪುರ (**ಈಗಿನ ಕಾಂತಾವರ**)ದ ಮಾಣಿದೇವ ಮತ್ತು ಬೇಳ (ಈಗಿನ ಬೋಳ)ದ ನನ್ದನರು ಇಲ್ಲಿ ಉದಾಹರಿಸ ಲ್ಪಟ್ಟಿದ್ದಾರೆ. ಈ ಎರಡು ಸ್ಥಳಗಳೂ ಬೆಳ್ಮಣ್ಣಿಗೆ ಸಮೀಪದಲ್ಲಿದೆ. ಕಾಂತಾವರವು ತನ್ನ ಶಿವದೇವಾಲಯ ದಿಂದ ಪ್ರಸಿದ್ಧಿ ಪಡೆದಿದ್ದರೆ ಬೋಳದ ನಂದ ಪ್ರಾಯಶಃ ಬೆಳ್ಮಣ್ಣು ಮಹಾನಾಡಿನ ಒಬ್ಬ ಅಧಿಕಾರಿ ಯಾಗಿದ್ದಿರಬೇಕು. ಮಾಣಿದೇವ ಮತ್ತು ನಂದರಿಗೆ ಈ ಶಾಸನವನ್ನು ಕ್ರಮವಾಗಿ ನಡೆಸಿಕೊಂಡು ಮತ್ತು ರಕ್ಷಿಸಿಕೊಂಡು ಬರುವ ಕೆಲಸ. ಒಟ್ಟಿನಲ್ಲಿ ಆಳುಪರಾಜರ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ ಬಹಳ ಚೆನ್ನಾಗಿತ್ತೆಂದು ಈ ಶಾಸನದಿಂದ ಗೊತ್ತಾಗುತ್ತದೆ.

ಕಡಂದಲೆಯಲ್ಲಿ ದೊರೆತಿರುವ ಕ್ರಿ.ಶ. 9ನೆಯ ಶತಮಾನದ ಪೂರ್ವಾರ್ಧದ ಶಾಸನ ಕಾರ್ಕಳದ ಎರಡನೆಯ ಅತ್ಯಂತ ಪ್ರಾಚೀನ ಶಾಸನ. ಇದು ಸಿರಿಎಲೆ ಬೊಯ್ಗ ವರ್ಮರಸು ಕುಂದಪೂಳ ಭಟಾರ ದೇವರಿಗೆ (ಕಡಂದಲೆಯ ಸುಬ್ರಹ್ಮಣ್ಯ) ಪಾರಿಪಾಳೀ ಎಂಬ ಕ್ಷೇತ್ರವನ್ನು ದಾನವಾಗಿ ಕೊಟ್ಟ ವಿಚಾರ ತಿಳಿಸುತ್ತದೆ. ಅನಂತರ ಸುಮಾರು ನಾಲ್ಕು ಶತಮಾನಗಳ ವರೆಗೆ ಆಳುಪರ ಶಾಸನಗಳಾವುವೂ ದೊರೆತಿಲ್ಲ. ಮುಂದೆ ಕ್ರಿ.ಶ. 1204, 1205 ಮತ್ತು 1215ಕ್ಕೆ ಸೇರಿದ ಒಂದನೆಯ ಕುಲಶೇಖರ ಆಳುಪೇಂದ್ರನ ಮೂರು ಶಾಸನಗಳು ಮೂಡಬಿದುರೆಯಲ್ಲಿ ದೊರೆಯುತ್ತವೆ. ಇವು ಮೂಡಬಿದುರೆಯ ಪ್ರಾಂತದ ಗೌರಿ ದೇವಾಲಯದಲ್ಲಿದ್ದು ರಾಜ ಈ ದೇವಿಗೆ ಮಾಡಿದ ಧರ್ಮಕಾರ್ಯವನ್ನು ತಿಳಿಸುತ್ತವೆ.

ಕ್ರಿ.ಶ. 1285ಕ್ಕೆ ಸಲುವ ಮೂಡಬಿದುರೆ ಸೆಟ್ಟಿ ಬಸದಿಯಲ್ಲಿ ದೊರೆತಿರುವ ಶಾಸನ ಬಮ್ಮ ದೇವಾಳ್ವೇಂದ್ರ ದೇವನಿಗೆ ಸೇರಿದ್ದು. ಈ ನಿಷಧಿ ಶಾಸನವು ಉತ್ತಮ ಸೆಟ್ಟಿಯ ಸಮಾಧಿ ಮರಣವನ್ನು ಸೂಚಿಸುತ್ತದೆ. ಮೂರನೆಯ ಕುಲಶೇಖರ ಮತ್ತು ಎರಡನೆಯ ವೀರಪಾಂಡ್ಯ ಈ ಭಾಗವನ್ನು ಆಳಿದ್ದರೆಂಬುದಕ್ಕೆ ಸಾಕ್ಷಿಯಾಗಿ ಮೂಡಬಿದುರೆಯಲ್ಲಿ ಎರಡು ಶಾಸನಗಳು ದೊರೆತಿವೆ. ಮೊದಲ ಶಾಸನ ತ್ರುಟಿತವಾಗಿದೆ. ಎರಡನೆಯದು ಗೌರೀದೇವಿಗೆ ಮಾಡಿದ ದಾನ ತಿಳಿಸುತ್ತದೆ.

ಒಟ್ಟಿನಲ್ಲಿ ಆಳುಪರು ಕದಂಬರ ಕಾಲದಿಂದ ಪ್ರಾರಂಭಿಸಿದ ತಮ್ಮ ರಾಜಕೀಯ ಜೀವನವನ್ನು 14ನೆಯ ಶತಮಾನದ ಕೊನೆಯ ವರೆಗೆ ಮುಂದುವರೆಸಿದ್ದರು. 12ನೆಯ ಶತಮಾನದ ಉತ್ತರಾರ್ಧದಿಂದ ಮೂಡಬಿದುರೆ ಅವರ ಒಂದು ಪ್ರಮುಖ ಕಾರ್ಯಕ್ಷೇತ್ರವಾಯಿತು. ಅವರ ರಾಜಕೀಯ ಅಂಕದ ಪರದೆ ಇಲ್ಲೇ ಬಿದ್ದದ್ದು. ಆಳುಪರು ಶೈವರಾದರೂ ಶೈವ-ಜೈನ ಧರ್ಮಗಳ ಸಮನ್ವಯಕಾರರಾಗಿದ್ದರು.

ಅಧಿಕಾರಿ ಸಾಮಂತ ರಾಜರು:

ಆಳುಪರ ಅಧೀನದಲ್ಲಿ ಹಲವಾರು ಅಧಿಕಾರಿ ಸಾಮಂತರಿದ್ದರು. ಕಾರ್ಕಳಕ್ಕೆ ಸಂಬಂಧಿಸಿದ್ದಂತೆ ಹೆಸರಿಸಬಹುದಾದ ಇಬ್ಬರು ಪ್ರಮುಖರೆಂದರೆ: (1) **ಪುತ್ತಿಗೆಯ ಕೆಲ್ಲರು**; (2) **ಶಾಂತಾರರು**.

ಪುತ್ತಿಗೆಯ ಕೆಲ್ಲರು ಪ್ರಮುಖ ಜೈನ ಸಾಮಂತ ಅರಸುಗಳು. ಹಲ್ಮಿಡಿ ಶಾಸನಕಾಲ (ಕ್ರಿ.ಶ. 450) ದಿಂದಲೂ ಇವರ ಉಲ್ಲೇಖ ಶಾಸನಗಳಲ್ಲಿವೆ. ಅವುಗಳಲ್ಲಿ ಪ್ರಮುಖವಾದವು ಪೊಳಲಿ, ವೇಣೂರು

ಮತ್ತು ಕೆಲ್ಲ-ಪುತ್ತಿಗೆಗಳಲ್ಲಿವೆ. ಈ ಶಾಸನಗಳೆಲ್ಲವೂ ವೀರ ಸ್ಮಾರಕಗಳು. ಸ್ವಾಮಿನಿಷ್ಠರಾಗಿದ್ದ ಆಳುಪರ ಪರ ಯುದ್ಧಮಾಡಿ ಮಡಿದ ವಿಚಾರವನ್ನು ಇವು ಪರೋಕ್ಷವಾಗಿ ತಿಳಿಸುತ್ತವೆ. ಪೂ ಮತ್ತು ಚಾಲೂಳ್ಕೆ ಎಂಬ ಎರಡು ಭಾಗಗಳನ್ನು ಇವರು ಸ್ವತಃ ಆಳುತ್ತಿದ್ದರು. ಕೆಲ್ಲಪುತ್ತಿಗೆ ಪ್ರಾ ಇವರ ರಾಜಧಾನಿ. ಊರಿಗೆ ಈ ಹೆಸರು ಬರಲು ಕಾರಣ ಕೆಲ್ಲ ಅರಸುಗಳು. ಇವರ ಆರು ವೀ ಶಾಸನಗಳು ದೊರೆತಿರುವುದು ಈ ಊರಿನ ಬನದಲ್ಲಿ.

ಅರಕೆಲ್ಲ, ಸೇಬ್ಯ ಅರಕೆಲ್ಲ, ಸೇವ್ಯಗೆಲ್ಲ, ಕಲಿಕೆಲ್ಲ, ಪುತ್ತಿಗೆಯ ಸೇಬ್ಯಕೆಲ್ಲ ಮತ್ತು ಪಯಿದರ ಶಾಸನಗಳಲ್ಲಿ ಸೂಚಿತವಾಗಿರುವ ಕೆಲ್ಲ ಅರಸುಗಳು. ಆಳುಪರ ಪ್ರಾಂತ್ಯಾಧಿಕಾರಿಗಳಾಗಿ ಹಾಗೂ ನಾಯಕರಾಗಿ ಇವರು ಸಲ್ಲಿಸಿದ ಸೇವೆ ಅಪಾರ. ಪ್ರಾಯಶಃ ಇವರು ಸದಾ ಜನಹಿತ ಕಾರ್ಯಗ ನಡೆಸಿದ್ದರು. ಇದರ ಫಲವೆಂಬಂತೆ ವೇಣೂರಿನ ಶಾಸನವನ್ನು ನಿಲ್ಲಿಸಿದ ಮೈನ್ದುವಾಳನು ಇವರ ಸ ವರ್ಷಗಳ ಆಳ್ವಿಕೆಯನ್ನು ಬಯಸಿದ್ದಾನೆ.

ಕೆಲ್ಲರು ಜೈನರು. ಆ ಕಾಲದಲ್ಲಿ ಈ ಭಾಗದಲ್ಲಿದ್ದ ಜೈನರಲ್ಲಿದ್ದ 'ಬಳಿ'ಗಳು ಇವರ ಶಾಸನ ಪ್ರಕಾಶಗೊಂಡಿವೆ. ಬಳಿ ಜೈನ ಸಮೂಹದಲ್ಲಿ ಗೋತ್ರಕ್ಕೆ ಬದಲಾದ ವ್ಯವಸ್ಥೆ. ಇವರ ಕೆಲ್ಲಪುತ್ತಿ ಎಲ್ಲ ಶಾಸನಗಳು ಬಹಳ ಮಹತ್ವವಾದವು. ಇಲ್ಲಿ ಒಂದನ್ನು ಉದಾಹರಿಸಬಹುದು:

"ಸ್ವಸ್ತಿ ಶ್ರೀಮತು ಪುತ್ತಿಗೆಯ ಸೌಬ್ಯಕೆಲ್ಲರ್ಗೆ ಉಳ್ಳಿವೆ
ವಳಿಯ ಎರೆಗ ಪಢೆವಳನಿರಿಸಿದಂ ವೀರಸಾಸ್ವತಮಂ ॥"

ಉಳ್ಳಿವೆ ಬಳಿಯ ಎರೆಗ ಪಢೆವಳನು ಪುತ್ತಿಗೆಯ ಸೇಬ್ಯಕೆಲ್ಲರಿಗೆ ವೀರಸಾಸ್ವತವನ್ನು ಕೋರಿ ನಿ ಕಲ್ಲು ಇದು. ಜೈನರಲ್ಲಿ ಪಡಿವಾಳ ಎಂಬ ಉಪನಾಮವನ್ನು ನಾವು ಈಗ ಕಾಣುತ್ತೇವೆ. ಅದು '**ಪಢೆವ** ರೂಪಾಂತರ ಎಂಬುದು ಈ ಶಾಸನದಿಂದ ಪ್ರಪ್ರಥಮವಾಗಿ ಗೊತ್ತಾಗುತ್ತದೆ. ಲಿಪಿಯ ಆಧ ಮೇಲೆ ಈ ಶಾಸನವನ್ನು 12ನೆಯ ಶತಮಾನದ್ದೆಂದು ನಿರ್ಧರಿಸಲಾಗಿದೆ.

ನೆರೆ ರಾಜ್ಯಗಳೊಂದಿಗೆ ಆಗಿಂದಾಗ್ಗೆ ಘಟಿಸುತ್ತಿದ್ದ ಯುದ್ಧಗಳಿಂದ ಜರ್ಝರಿತವಾದ ಕೆಲ್ಲ ಕ್ರಮೇಣ ರಾಜಕೀಯದಿಂದ ಹಿಂದೆ ಸರಿಯಿತು. ಕೆಲ್ಲಪುತ್ತಿಗೆಯ ವೀರಗಲ್ಲು ಇದಕ್ಕೊಂದು ಉದಾಹರಣೆ ಎಂದು ಹೇಳಬಹುದು. ಆ ನಂತರ 'ಕೆಲ್ಲ' ಒಂದು ಉಪನಾಮವಾಗಿ ಉಳಿದುಕೊ ಬಂದಿರುವುದನ್ನು ಈಗಲೂ ನಾವು ನೋಡಬಹುದು.

ಶಾಂತಾರರು:

"ತುಳು ರಾಜ್ಯ ಪ್ರತಿಷ್ಠಾಪನಾಚಾರ್ಯ" ರೆಂದೇ ಬಿರುದಾಂಕಿತರಾದ ಹೊಂಬುಚದ ಶಾಂತ ಇತಿಹಾಸ ಆಳುಪರ ಇತಿಹಾಸದಲ್ಲಿ ಹಾಸು ಹೊಕ್ಕಾಗಿದೆ. ಕ್ರಿ.ಶ. 8ನೆಯ ಶತಮಾನದಿಂದ ಸಖ್ಯ ಪ್ರಾರಂಭ. ಸುಮಾರು ಕ್ರಿ.ಶ. 10ನೆಯ ಶತಮಾನದ ವೇಳೆಗೆ ವೈವಾಹಿಕ ಸಂಬಂಧಗಳಿಗೂ ಎಡೆಮಾಡಿತ್ತು. ಒಂದನೆಯ ಬಂಕಿ ದೇವ ಚೋಳರ ದಾಳಿಯಿಂದಾಗಿ ತನ್ನ ರಾಜ್ಯವನ್ನು ಕಳೆದುಕೊಂ ಶಾಂತಾರ ಅಮ್ಮಣಿ ದೇವನು "ತುಳು ವಿಷಯದಲ್ಲಿ ನಿಜಾಜ್ಞೆಯಂ" ನಿಲಿಸಿದನು. ಬಾರಕೂರಿನ ಶ ವೊಂದು ಈ ಕಾರ್ಯವನ್ನು ಬಹಳ ಸುಂದರವಾಗಿ ವರ್ಣಿಸಿದೆ –

"ಮಾಱಿ ಮೇಲೆ ವನ್ದ ಚೋೞನ ದಣ್ಡಂ ಬೆಂಕೊಣ್ಡಱಿಯಟ್ಟಿ
ಕೋಮರದಣ್ಣ ಮುಖ್ಯರಾಗಿಟ್ಟ ಮಣ್ಡಳಿಕ ಮಹಾ
ಮಣ್ಡಳಿಕನ್ನರ್ ಱುಪ್ಪದಿಂಬರಂ ಪಗಲಲ್ಲಿ ನಿಜಸ್ವಾಮಿ
ಶ್ರೀ ಬಂಕಿಯಾಳು ಪೇನ್ದ್ರ ದೇವಗ್ರ್ಗೊಪ್ಪಿಸಿ ....

* * * *

ಸಾನ್ತಳಿ ಸಾಯಿರಮಂ ಏಕಚ್ಛತ್ರಚ್ಛಾಯ ಯಿಂ
ರಾಜ್ಯಂಗೆಯ್ಯುತಂ ...."

ಸುಮಾರು ಕ್ರಿ.ಶ. 1020ಕ್ಕೆ ಸಲುವ ಈಶಾಸದಲ್ಲಿ ಶಾಂತಾರ ರಾಜನ ಹೆಸರು ಇದ್ದಿರ ಬಹುದಾದ ಭಾಗ ಹಾಳಾಗಿದೆ. ಆದರೆ ಹುಂಚ ಶಾಸನವೊಂದರ ಆಧಾರದ ಮೇಲೆ ಈತ ಶಾಂತಾರ ಅಮ್ಮಣ್ಣ ದೇವನೆಂದು ನಿರ್ಧರಿಸಲಾಗಿದೆ. 1ನೆಯ ಬಂಕಿದೇವನು ಶಾಂತಾರ ರಾಜ ಅಮ್ಮಣ್ಣ ದೇವನ ಮಗಳನ್ನು ಮದುವೆಯಾಗಿದ್ದನು. ಅಲ್ಲದೆ ತನ್ನ ತಂಗಿಯನ್ನು ಅಮ್ಮಣ ದೇವನ ಮಗನಿಗೆ ವಿವಾಹ ಮಾಡಿಕೊಟ್ಟಿದ್ದನು.

ಕಾರ್ಕಳದ ವಿಸ್ತಾರವಾದ ಭಾಗವು ಸ್ವಾಮಿನಿಷ್ಠ ಚತುರಮತಿ ವೀರ ಯೋಧರಾದ ಶಾಂತಾರ ರಾಜರ ಕೃಪಾ ಕಟಾಕ್ಷದಿಂದ ಶಾಂತಿ ಮತ್ತು ಸಮೃದ್ಧಿಯನ್ನು ಹೊಂದಿತ್ತು.

ಆಳುಪರಾಜ 1ನೆಯ ಕುಲಶೇಖರನ (ಸು.ಕ್ರಿ.ಶ. 1060-1120) ತರುವಾಯ ಶಾಂತಾರರೇ ಸ್ವಲ್ಪಕಾಲ ಇಲ್ಲಿನ ಆಡಳಿತದ ಹೊಣೆ ಹೊರಬೇಕಾಯಿತು. ಈ ಋಣ ಭಾರವನ್ನು ಹೊತ್ತವ ಶಾಂತಾರ ಕುಂದಣ. ಇವನ ಏಕೈಕ ಶಾಸನ ವರಾಂಗದ ನೇಮೀಶ್ವರ ಬಸದಿಯಲ್ಲಿದೆ. ತೇದಿವಿವರ ವಿಲ್ಲದ ಈ ಶಾಸನವನ್ನು ಲಿಪಿ ಆಧಾರದ ಮೇಲೆ ಸುಮಾರು ಕ್ರಿ.ಶ. 1220ಕ್ಕೆ ಸೇರಿದ್ದೆಂದು ನಿರ್ಧರಿಸಲಾಗಿದೆ. ಆಳುಪ ರಾಜಕೀಯ ಮತ್ತು ವಂಶಾವಳೀ ವಿಷಯಗಳಿಗೆ ಸಂಬಂಧಿಸಿದಂತೆ ಇದು ಒಂದು ಪ್ರಮುಖ ಶಾಸನ. ಆಳುಪ ರಾಜರುಗಳಾದ ಪಟ್ಟಿಯೊಡೆಯ, ಪಾಂಡ್ಯ ಪಟ್ಟಿಯೊಡೆಯ, ಕವಿಯಾಳುಪೇಂದ್ರ ಮತ್ತು ಪಟ್ಟಿಯೊಡೆಯ ಕುಲಶೇಖರ [1ನೆಯ ಕುಲಶೇಖರ] ಇವರುಗಳು ಈ ಶಾಸನದಲ್ಲಿ ಉಧೃತ ರಾಗಿದ್ದಾರೆ. ಅಲ್ಲದೆ ಇವರುಗಳು ಒಬ್ಬರ ನಂತರ ಮತ್ತೊಬ್ಬರಂತೆ ಕ್ರಮವಾಗಿ ಆಳ್ವಖೇಡವನ್ನು ಆಳಿದರು ಎಂದೂ ಇದರಿಂದ ಗೊತ್ತಾಗುತ್ತದೆ. ಕಿಂಚಿತ್ತಾದರೂ ಆಳುಪ ವಂಶಾವಳಿಯನ್ನು ಸೂಚಿಸುವ ಶಾಸನ ಇದೊಂದೆ. ಈ ರಾಜರುಗಳು "ಧರ್ಮವೆಂಬ ನುಡಿಯಂ ಕಂನಡಿಸಿಧರ್ಮ್ಮಮಂ ಸದ್ಧರ್ಮ" ದಿಂದ ರಕ್ಷಿಸುತ್ತಿದ್ದರು.

ಒಂದನೆಯ ಕುಲಶೇಖರನ ನಂತರ ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯನೆಂದು ಬಿರುದಾಂಕಿತನಾದ ಶಾಂತಾರ ಕುಂಡಣ (ಕುಂದಣ)ನು "ಧರ್ಮ ರಕ್ಷಕ" (ರಾಜ್ಯ ರಕ್ಷಕ)ನಾದನೆಂದು ಶಾಸನ ತಿಳಿಸುತ್ತದೆ. ಈತನ ಕ್ಷಾತ್ರ, ವಿದ್ಯೆ ಮತ್ತು ತೇಜಸ್ಸುಗಳನ್ನು ಇದು ಬಹಳ ಸುಂದರವಾಗಿ ವರ್ಣಿಸುತ್ತದೆ. ಇವು ಅವನಲ್ಲಿದ್ದ ಸಹಜ ಗುಣಗಳು. ಹಾಗಾಗಿ ಶಾಸನದಲ್ಲಿನ ವರ್ಣನೆ ಉತ್ಪ್ರೇಕ್ಷೆಯೇನಲ್ಲ. ಇಂತಹ ಒಬ್ಬ ರಾಜ ಕಾರ್ಕಳ ಭಾಗವನ್ನು ಆಳಿದ ಅಷ್ಟೆ ಅಲ್ಲ, ಇಡೀ ಆಳ್ವಖೇಡವನ್ನು ಪರಿಪಾಲಿಸಿದನೆಂಬುದು ಹೆಮ್ಮೆಯ ಸಂಗತಿ.

ಶಾಂತಾರಕುಂದಣನು ರಾಯಗಜಾಂಕುಶ, ನೂರ್ಮಡಿ ಚಕ್ರವರ್ತಿ, ದಾನಚಿಂತಾಮಣಿ ಎಂಬಿತ್ಯಾದಿ ಬಿರುದಾಂಕಿತನಾದ ತ್ರಿಭುವನ ಶಾಂತಾರನ ಕಿರಿಯ ಸಹೋದರ. ಈತ ಯಾವ ಕಾರಣ ದಿಂದ ಆಳ್ವಖೇಡಕ್ಕೆ ಉತ್ತರಾಧಿಕಾರಿಯಾದ ಎಂಬುದನ್ನು ಶಾಸನ ಸ್ಪಷ್ಟ ಪಡಿಸುವುದಿಲ್ಲ. 1ನೇ ಕುಲಶೇಖರನ ಮರಣ ಕಾಲಕ್ಕೆ ಅವನ ಮಗ ತೀರ ಎಳೆಯವನಿರಬೇಕು. ಆಗ ರಾಜ್ಯಕ್ಕೆ ರಕ್ಷಕರೊಬ್ಬರ ಆವಶ್ಯಕತೆ ಉಂಟಾಯಿತು. ಆರಕ್ಷಕ (guardian) ಸ್ಥಾನವನ್ನು ಕುಂದಣ ತುಂಬಿ ಸ್ವಲ್ಪ ಕಾಲ (ಸು.ಕ್ರಿ.ಶ. 1220-1230)ದ ವರೆಗೆ ಆಳಿದ ಎಂಬ ಒಂದು ಅಭಿಪ್ರಾಯವಿದೆ.

"ತನ್ನಾಳ್ವದೇಶದೊಳ್ ಮುನ್ನಂ ವರಾಂಗನೆಂಬ ಮಹಾಪುರುಷಂ ಧರ್ಮಮಂ ಮಾಡಿ ನಾಡೇಳ್ಬ ಳಿಯುಂ ಕರೆದು ಕೈವೆಡೆ ಗೊಟ್ಟದನಂತಪ್ಪ ಧರ್ಮಮಂ ಸುಧರ್ಮದಿಂ ಕುಂಡಣೋರ್ವೀಶ್ವರಂ ರಕ್ಷಿಸಿ ಪ್ರಕಟೀ ಭೂತಂ ಮಾಡಿದ" ಎಂದು ಶಾಸನ ತಿಳಿಸುತ್ತದೆ. ಎಂದರೆ ಹಿಂದೆ ವರಾಂಗ ಮಹಾಪುರುಷನು ಮಾಡಿದ ಧರ್ಮವು ಪ್ರಾಯಶಃ ಕ್ಷೀಣವಾದಾಗ ಕುಂದಣನು ಅದನ್ನ ರಕ್ಷಿಸಿ ಪುನಃ ನಡೆಯುವಂತೆ ಮಾಡಿದನು. ಇದು ಇಲ್ಲಿನ ನೇಮೀಶ್ವರ ಬಸದಿಗೆ ಮಾಡಿದ ಧರ್ಮವಾಗಿದೆ.

ಈ ಶಾಸನದ ಕಾಲಕ್ಕಾಗಲೆ ವರಾಂಗ ಅತ್ಯಂತ ಪವಿತ್ರವಾದ ಜೈನತೀರ್ಥ ಕ್ಷೇತ್ರವಾಗಿ ಮೆರ "ಶ್ರೀ ಮತ್ಪವಿತ್ರಮಕಳಂಕಮನಂತಕಲ್ಪಂ ಸ್ವಾಯಂಭುವಂ ಸಕಳ ಮಂಗಳ ಮಾದಿತೀ "ಭೂಚಕ್ರ ವರಾಂಗ ತೀರ್ಥ" ಎಂದು ಮುಂತಾಗಿ ಈ ಕ್ಷೇತ್ರವನ್ನು ಶಾಸನ ವರ್ಣಿಸುತ್ತದೆ ಒಂದು ಪ್ರಾಚೀನ ಜೈನ ಮಠ ಹಾಗು ಗುರು ಪರಂಪರೆ ಇತ್ತು. ಮೂಲಸಂಘ, ಕೊಂಡ ಕುಂದಾ ಕಾನೂರ್ಗಣ, ಮೇಷಪಾಣಗಚ್ಛಕ್ಕೆ ಸೇರಿದ ಮಠ ಇದು. ಜೈನಯತಿಗಳಾದ ಮಲಧಾರಿ ಮಾಧವಚಂದ್ರ, ಪ್ರಭಾಚಂದ್ರ ಮತ್ತು ಶ್ರೀ ಚಂದ್ರ ಇಲ್ಲಿಯ ಗುರು ಪೀಠವನ್ನಲಂಕರಿಸಿದ್ದರು. ಮಹಾನ್ ತಪಶ್ಚರಣರು, ಜೈನಶಾಸನ ರಕ್ಷಾಮಣಿಗಳು ಹಾಗು ವಾದಿಕೋಳಾಹಳರು. ಜಿನಸ ಕರ್ತ್ಯಗಳಾದ ಇವರು ಇದ್ದಲ್ಲಿ ವನರಾಜಿ ಪಲ್ಲವಿಸುತ್ತಿತ್ತು. ಇಂತಹ ಮಹಿಮಾತಿಶಯರ ಸು ವರ್ಣನೆಯನ್ನು ವರಾಂಗ ಶಾಸನ ಕೊಡುತ್ತದೆ. ಎಂದರೆ ಬೇರಾವ ಜೈನ ತೀರ್ಥ ಕ್ಷೇತ್ರಗಳೂ ಜಿಲ್ಲೆ ಹುಟ್ಟುವುದಕ್ಕೆ ಮೊದಲು ವರಾಂಗ ಕ್ಷೇತ್ರವಾಗಿ ಬೆಳೆದಿತ್ತು. ಅಲೆವೂರು, ಕುರುಳಿಕುಂದಗಳ ಬಸದಿಗಳಿದ್ದು ಇವುಗಳೆಲ್ಲಕ್ಕೂ ಕೋಟಿಕೂಟದ ಸಂಬಂಧವಿತ್ತೆಂದು ಈ ಶಾಸನ ತಿಳಿಸುತ್ತದೆ.

ಈ ಪವಿತ್ರ ವರಾಂಗ ಕ್ಷೇತ್ರದಲ್ಲಿ 1ನೆಯ ಕುಲಶೇಖರನ ರಾಣಿ ಜಾಕಲಮಹಾದೇವಿಯು ಒ ಬೃಹತ್ ತಟಾಕವನ್ನು ನಿರ್ಮಿಸುವ ಧರ್ಮಕಾರ್ಯ ಮಾಡಿದಳು.

ಕುಂದಣನ ಆಳ್ವಿಕೆ, ಶೈವ-ಜೈನ ಸಂಬಂಧ, ತೀರ್ಥಕ್ಷೇತ್ರವೊಂದರ ಪುರೋಭಿವೃದ್ಧಿಗೆ ಎ ಕಾರ್ಯ-ಎಲ್ಲವೂ ಕಾರ್ಕಳದ ಹಿರಿಮೆಯ ಸಂಕೇತಗಳು.

ಹೊಯ್ಸಳರ ಕಾಲ:

ಕರ್ನಾಟಕವನ್ನಾಳಿದ ಹಿರಿಯ ಅರಸು ಮನೆತನಗಳಲ್ಲಿ ಹೊಯ್ಸಳ ವಂಶವೂ ಒಂದು. ರಾಜ ವಿ ವರ್ಧನನ ಕಾಲದಲ್ಲಿ ಈ ವಂಶ ಗರಿಗೆದರಿ ಎಲ್ಲೆಡೆ ಹಾರಾಡಲು ಉಪಕ್ರಮಿಸಿತು. ತುಳುನಾಡೂ ವಂಶದ ವಶವಾಯಿತು. ಆದರೆ ಇದರ ಮೇಲೆ ನೇರ ಆಳ್ವಿಕೆ ಪ್ರಾರಂಭವಾದುದು ಹೊಯ್ಸಳ 3ನ ಬಲ್ಲಾಳನ ಕಾಲದಲ್ಲಿ, ಚಿಕ್ಕಾಯಿತಾಯಿ ಈತನ ಒಬ್ಬಳು ರಾಣಿ. ಈಕೆ ತುಳುನಾಡಿನವಳು. ನಂಬಿ ರಾಜ್ಯಪಾಲರುಗಳ ನೆರವಿನಿಂದ ಈಕೆ ಹೊಯ್ಸಳರ ನೇರ ಪ್ರಭುತ್ವವನ್ನು ಸ್ಥಾಪಿಸಿದಳು. ಕೀರ್ತಿ ಪಡೆದ ಈ ದಿಸೆಯಲ್ಲಿ ದಕ್ಷಿಣ ಕನ್ನಡವನ್ನೂ ನೇರ ಪ್ರಭುತ್ವಕ್ಕೆ ಒಳಪಡಿಸಿಕೊಂಡ ಸಾರ್ವಭೌಮ ವಂಶಗ ಹೊಯ್ಸಳರೇ ಮೊದಲಿಗರಾದರು.

ಕಾರ್ಕಳ ಭಾಗವೂ ಈ ಜಿಲ್ಲೆಯ ರಾಜಕೀಯ ಪ್ರವಾಹದಲ್ಲಿ ಸೇರಿದ್ದರಿಂದ ಹೊಯ್ಸಳರ ಆಳ ಒಳಪಟ್ಟಿತು. ತತ್ಸಂಬಂಧವಾದ ಶಾಸನಗಳು ಕಾರ್ಕಳ ಮತ್ತು ಮೂಡಬಿದುರೆಗಳಲ್ಲಿ ದೊರೆಯುತ್ತ ಮೂಡಬಿದರೆಯ ಶಾಸನ ಕ್ರಿ.ಶ. 1342ಕ್ಕೆ ಸೇರಿದ್ದು 3ನೆಯ ಬಲ್ಲಾಳನನ್ನು ನೇರವಾಗಿ ಹೆಸರಿಸುತ್ತ ಕಾನೂನು ಮತ್ತು ಶಿಸ್ತನ್ನು ಸ್ಥಾಪಿಸಿ, ಪರಿಪಾಲಿಸುವಲ್ಲಿ ರಾಜ ಹೆಚ್ಚಿನ ಕಾಳಜಿ ವಹಿಸಿದ್ದ ಎನ್ನುವ ಈ ಶಾಸನದಿಂದ ಗೊತ್ತಾಗುತ್ತದೆ. ಕಾನೂನು ಭಂಜಕರಿಗೆ ಕೊಡಬಹುದಾದ ಶಿಕ್ಷೆಗಳನ್ನು ಈ ಶಾ ನಿರೂಪಿಸುತ್ತದೆ.

ಕಾರ್ಕಳದಲ್ಲಿ ದೊರೆತಿರುವ ಶಾಸನಗಳಲ್ಲಿ ಹೊಯ್ಸಳರ ನೇರ ಪ್ರಸ್ತಾವ ಇಲ್ಲ. ಆದರೂ ಅವರ ರಾಪ್ಯಪಾಲರಿಗೆ ಸೇರಿದವುಗಳಾದ್ದರಿಂದ ಸಾರ್ವಭೌಮರ ಆಳ್ವಿಕೆ ಇಲ್ಲಿತ್ತು ಎಂದೇ ಭಾವಿಸಬೆ ಎರಡೂ ಶಾಸನಗಳು ಮಹಾ ಮಂಡಲೇಶ್ವರ ಲೋಕನಾಥ ದೇವನಿಗೆ ಸೇರಿದವು.

ಲೋಕನಾಥದೇವರಸನು ಶಾಂತಾರ ವಂಶಜನು. ಶಾಂತಾರರ ಆಳ್ವಿಕೆ ಕಾರ್ಕಳ ಭಾಗದಲ್ಲಿ ಮುಂ ವರೆದುಕೊಂಡು ಬಂದಿತ್ತು ಎನ್ನುವ ವಿಚಾರ ಇವನ ಆಳ್ವಿಕೆಯಿಂದ ಗೊತ್ತಾಗುತ್ತದೆ. ಬದಲ ಪರಿಸ್ಥಿತಿಗೆ ಹೊಂದಿಕೊಂಡುತೆ ಶಾಂತಾರರು ಘಟ್ಟದಮೇಲೆ ಹಾಗು ಕೆಳಗೆ ಹೊಯ್ಸಳರ ಪ್ರಭ ಒಪ್ಪಿಕೊಂಡರು. ಅವರ ಮಹಾಮಂಡಲೇಶ್ವರರಾದರು. ಲೋಕನಾಥ ದೇವ ಅಂತಹವರಲ್ಲಿ ಒಬ್ಬನ ಕಾರ್ಕಳ ಪ್ರಾಂತವನ್ನು ಆಳಿದ.

ಲೋಕನಾಥ ದೇವರಸನು ಕೇವಲ ನೆಪ ಮಾತ್ರ ಹೊಯ್ಸಳ ಮಹಾಮಂಡಲೇಶ್ವರನಾಗಿದ್ದನು. ಹಿರಿಯಂಗಡಿಯ ಶಾಸನವು ಇವನನ್ನು ಶ್ರೀ ಪೃಥ್ವೀ ವಲ್ಲಭ, ಮಹಾರಾಜಾಧಿರಾಜ, ರಾಜ ಪರಮೇಶ್ವರ, ಪರಮಭಟ್ಟಾರಕ ಎಂಬುದಾಗಿ ಸಾರ್ವಭೌಮಪಟ್ಟ ಸೂಚಕ ಬಿರುದುಗಳಿಂದ ಕರೆದಿದೆ. ಇದು ಆಂತರಿಕ ವ್ಯವಹಾರದಲ್ಲಿ ಇವನಿಗಿದ್ದ ಪೂರ್ಣ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಈತ ಹಿರಿಯಂಗಡಿಯ ಗುರುಗಳ ಬಸದಿಗೂ, ಕಾಬೆಟ್ಟುವಿನ ವೇಣುಗೋಪಾಲ ದೇವಸ್ಥಾನಕ್ಕೂ ಹಣ ಮತ್ತು ಭೂದಾನಗಳನ್ನು ಮಾಡಿರುತ್ತಾನೆ. ಭೂಕೊಡುಗೆಯು ಸರ್ವಮಾನ್ಯವಾದುದು.

ಲೋಕನಾಥ ದೇವರಸನು ಕಾರ್ಕಳದ ಭಾಗವನ್ನು ಸುದೀರ್ಘ ಕಾಲದವರೆಗೆ (ಸು.ಕ್ರಿ.ಶ. 1277-1344) ಆಳಿದ. ಪ್ರಧಾನಿ, ಅಧಿಕಾರಿಗಳು ಮತ್ತು ಕಾರಕಳದ ಹಲರು (ಸಮಾಜ ಪ್ರತಿಷ್ಠಿತರು) ರಾಜ್ಯಾಡಳಿತದಲ್ಲಿ ರಾಜನಿಗೆ ನೆರವಾಗಿದ್ದನು. ಒಟ್ಟಿನಲ್ಲಿ ಇವನ ಕಾಲವು ಶಾಂತಿ ಮತ್ತು ಸಮೃದ್ಧಿಯಿಂದ ಕೂಡಿದ್ದು ಹೊಯ್ಸಳ-ವಿಜಯನಗರ ಕಾಲಗಳಿಗೆ ಕೊಂಡಿಯಂತಿದೆ.

ವಿಜಯನಗರ ಕಾಲ:

ಹೊಯ್ಸಳರ ಪತನಾನಂತರ ವಿಜಯನಗರದ ಅರಸುಗಳು ಕರ್ನಾಟಕದ ಚಕ್ರೇಶರಾದರು. ಅದಕ್ಕೆ ಹೊಯ್ಸಳ ಆಶೀರ್ವಾದ ಇತ್ತು. ಹಾಗಾಗಿ ಹೊಯ್ಸಳರಿಗಿದ್ದ ಎಲ್ಲ ಭಾಗಗಳ ಮೇಲೂ ವಿಜಯನಗರದ ಅರಸುಗಳು ತಮ್ಮ ಸ್ವಾಮ್ಯವನ್ನು ಸ್ಥಾಪಿಸಿದರು. ದಕ್ಷಿಣ ಕನ್ನಡ ಹೊಸ ಸಾಮ್ರಾಜ್ಯದ ಒಂದು ಅಂಗ ವಾಯಿತು. ವಿಶಾಲವಾದ ಈ ಪ್ರದೇಶ ಎರಡು ರಾಜ್ಯ (ಪ್ರಾಂತ್ಯ) ಗಳಾಯಿತು. ಅವು ಬಾರಕೂರು ಮತ್ತು ಮಂಗಳೂರು ರಾಜ್ಯಗಳು. ಕಾರ್ಕಳ ಈ ಎರಡೂ ಭಾಗಗಳಿಗೆ ಸೇರಿಕೊಂಡಿತು. ಆ ವೇಳೆಗಾಗಲೇ ಹುಟ್ಟಿಕೊಂಡು ಅಂತಹ ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿದ್ದ ಹಲವಾರು ರಾಜವಂಶಗಳು ಗರಿಗೆದರಿ ಕೊಂಡವು. ಇವೆಲ್ಲವೂ ಜೈನವಂಶಗಳಾದುದು ಕಾಕತಾಳೀಯ. ಹಾಗಾಗಿ ಪರ್ವ ಕಾಲವೊಂದರ ಸೃಷ್ಟಿ. ಜೈನ ಧರ್ಮಕ್ಕೊಂದು ಸ್ವರ್ಣ ವೃಷ್ಟಿ.

ಜಿಲ್ಲೆಯಲ್ಲಿ ಬದಲಾದ ರಾಜಕೀಯ ಪರಿಸ್ಥಿತಿ ಕಾರ್ಕಳದಲ್ಲೂ ಪ್ರಭಾವ ಬೀರಿತು. ಇಲ್ಲಿ ಮೂರು ಸ್ವತಂತ್ರ. ರಾಜವಂಶಗಳು ಹುಟ್ಟಿಕೊಂಡಿವು. ಅವುಗಳು ಯಾವುದೆಂದರೆ. (1) ಕಳಸ-ಕಾರ್ಕಳವಂಶ (ಭೈರರಸ ವಂಶ) (2) ಪುತ್ತಿಗೆಯ ಚೌಟ ವಂಶ (3) ವೇಣೂರು - ಆಳದಂಗಡಿಯ ಅಜಿಲ ವಂಶ. ಹೊಯ್ಸಳರ ಕಾಲದಿಂದಲೇ ಪ್ರಬಲವಾಗುತ್ತ ಬಂದ ಅಜಿಲರು ಚಿಕ್ಕದಾದರೂ ಒಂದು ಸ್ವತಂತ್ರ ರಾಜ್ಯವನ್ನು ಕಟ್ಟಿದರು. ವೇಣೂರು ಇವರ ರಾಜಧಾನಿಯಾಯಿತು. ಭೈರರಸರು ಮತ್ತು ಬಂಗರ ಮಧ್ಯೆ ಸಿಕ್ಕಿಕೊಂಡ ಇವರು ಸ್ವಲ್ಪದರಲ್ಲೆ ತೃಪ್ತಿ ಪಡೆದಿದ್ದರು. ಆದರೆ ಬೇರಾವುದೇ ಹಿರಿಯ ವಂಶದ ಕಾಣಿಕೆಗೆ ಸರಿಯಾಗುವಂತಹ ಅಥವಾ ಮೀರಿಸುವಂತಹ ಕಲಾ ಕಾಣಿಕೆಗಳನ್ನು ಇವರು ಇತ್ತರು. ಕ್ರಮೇಣ ಆಳದಂಗಡಿ ಇವರ ರಾಜಧಾನಿಯಾಯಿತು. ವೇಣೂರು ರಾಜಕೀಯವಾಗಿ ಸ್ವಲ್ಪ ಹಿಂದೆ ಸರಿಯಿತು. ಈಗ ಈ ಎರಡೂ ಊರುಗಳಿರುವ ಅಜಿಲ ರಾಜ್ಯ ಪ್ರದೇಶವು ಬೆಳ್ತಂಗಡಿ ತಾಲ್ಲೂಕಿಗೆ ಸೇರಿರುವುದರಿಂದ ಈ ವಂಶದ ಕಾರ್ಯಾವಲೋಕನವನ್ನೂ ಇಷ್ಟಕ್ಕೆ ಸೀಮಿತಗೊಳಿಸ ಲಾಗಿದೆ.

ಪುತ್ತಿಗೆಯ ಚೌಟರು:

ವಿಜಯನಗರ ಕಾಲದಲ್ಲಿ ಹುಟ್ಟಿಕೊಂಡು ಕೆಳದಿ ನಾಯಕರ ಕಾಲದಲ್ಲಿ ರಾಜಕೀಯ ನಿವೃತ್ತಿ ಪಡೆದ ಚೌಟರು ಪುತ್ತಿಗೆಯಿಂದ ಆಳಿದ ಜೈನ ಅರಸರು. ಪುತ್ತಿಗೆ ಇವರ ರಾಜಧಾನಿಯಾಗಿತ್ತು. ವಿಜಯ ನಗರ ಕಾಲಾನಂತರ ಇದು ಮೂಡಬಿದಿರೆಗೆ ಸ್ಥಳಾಂತರಗೊಂಡಿತು.

ಚೌಟ ವಂಶದ ಮೂಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. **ಚೌಟರ ಕೈಫಿಯತ್ತು** ಪ್ರಕಾರ ಇವರು ಉಲ್ಲಾಳದ ಬಳಿಯ ಸೋಮೇಶ್ವರದಲ್ಲಿದ್ದರು. ಮುಂದೆ ಇವರು ಪುತ್ತಿಗೆಗೆ ತಮ್ಮ ನೆಲೆಯನ್ನು ಬದ ಲಾಯಿಸಿಕೊಂಡರು. ಕೈಫಿಯತ್ತಿನ ಪ್ರಕಾರ ಈ ವಂಶದ 23 ರಾಜರು ಕ್ರಿ.ಶ. 1160 ರಿಂದ 1805ರ

ವರೆಗೆ ಆಳಿದರು. ಪ್ರತಿಯೊಬ್ಬ ರಾಜರ ಬಗ್ಗೆಯೂ ಕೈಫಿಯತ್ತಿನಲ್ಲಿ ಕೊಟ್ಟಿರುವ ತೇದಿ ವಿವ ಬಹಳ ಕರಾರುವಕ್ಕಾಗಿವೆ. ಹಾಗಾಗಿ ಇದನ್ನು ಕೆಲವು ವಿದ್ವಾಂಸರು ನಂಬಿದ್ದಾರೆ. ಆದರೆ ಶಾಸನಗಳಿಂದ ದೊರೆಯುವ ನಿಜವಾದ ಇತಿಹಾಸಕ್ಕೂ ಕೈಫಿಯತ್ತಿಗೂ ಬಹಳ ವ್ಯತ್ಯಾ ಒಂದೆರಡು ಸಂಗತಿಗಳನ್ನು ಉದಾಹರಣೆಗಾಗಿ ನಾವು ಇಲ್ಲಿ ನೋಡಬಹುದು. ಕ್ರಿ.ಶ. 1245 1283 ರವರೆಗೆ ಆಳಿದ ತಿರುಮಲರಾಯ ಚೌಟನು ಪಣಂಬೂರಿನ ಮದ್ದ ಹೆಗ್ಗಡೆಯ ಸ್ನೇಹಿತ ಹೇಳಿದೆ. ಈ ಮದ್ದ ಹೆಗ್ಗಡೆಯ ಕಾಲ 15ನೆಯ ಶತಮಾನದ ಉತರಾರ್ಧ. ಹಾಗೆ ಕ್ರಿ.ಶ. 1316 1350 ರವರೆಗೆ ಆಳಿದ ಭೋಜರಾಯನು ವಿಜಯನಗರದ ಅಚ್ಯುತ-ಕೃಷ್ಣರಾಯರ ಸಮಕ ಎಂದು ತಿಳಿಸುತ್ತಾರೆ. ವಿಜಯನಗರದ ಅಚ್ಚುತರಾಯನಾಗಲಿ, ಕೃಷ್ಣದೇವರಾಯನಾಗಲೀ ದಲ್ಲಿರಲಿಲ್ಲ ಎಂಬುದು ಐತಿಹಾಸಿಕ ಸತ್ಯ. ಕ್ರಿ.ಶ.1350 ರಿಂದ 1382ರವರೆಗೆ ಆಳಿದ ಪದುಮಲ ದೇ ಮೂಲ್ಕಿಯ ದುಗ್ಗಣ ಸಾವಂತನ ರಾಣಿ ಎಂದು ಕೈಫಿಯತ್ತು ತಿಳಿಸುತ್ತದೆ. ಶಾಸನಗಳ ಪ್ರಕಾರ ದ ಸಾವಂತನ ಕಾಲ ಕ್ರಿ.ಶ. 1543-1559.

ಇದೇ ರೀತಿ ಕೈಫಿಯತ್ತಿನಲ್ಲಿ ಕೊಟ್ಟಿರುವ ಚೌಟ ವಂಶಾವಳಿ ಶಾಸನಗಳಲ್ಲಿ ದೊರೆ ವಂಶಾವಳಿಯೊಂದಿಗೆ ತಾಳೆಯಾಗುವುದಿಲ್ಲ. ಶಾಸನಗಳ ಪ್ರಕಾರ ದೊರೆಯುವ ವಂಶಾವಳಿ ಇ

ವಿಕ್ರು ಚೌಟ (ಕ್ರಿ.ಶ. 1390)
|
ಬಿರುಮಣ್ಣ ಚೌಟ (ಕ್ರಿ.ಶ. 1400)
|
ಚೌಟಸಾಂತೇಯ (ಕ್ರಿ.ಶ. 1431)
|
ಜೋಗಿ ಒಡೆಯ ಚೌಟ (ಕ್ರಿ.ಶ. 1434)
|
ಅಲ್ಲಪ್ಪ ಶೇಖರ ಚೌಟ (ಕ್ರಿ.ಶ. 1465)
|
ತಿರುಮಲರಾಯ ಚೌಟ (ಕ್ರಿ.ಶ. 1508-1512)
|
ತುಳುವರಸ ಚೌಟ (ಕ್ರಿ.ಶ. 1528)
|
ತಿರುಮಲರಸ ಚೌಟ (ಕ್ರಿ.ಶ. 1543)
|
ಲೋಕಾದೇವಿ ಚೌಟ (ಕ್ರಿ.ಶ. 1571)
|
ಅಬ್ಬಕ್ಕದೇವಿ (I) (ಕ್ರಿ.ಶ. 1571)
|
ಚಿಕ್ಕರಾಯ ಚೌಟ (ಕ್ರಿ.ಶ. 1578)
|
ಚಿಕ್ಕರಾಯ ಒಡೆಯ (ಕ್ರಿ.ಶ. 1640)
|
ಅಬ್ಬಕ್ಕದೇವಿ (II) (ಕ್ರಿ.ಶ. 1667)

ಹದಿನೆಂಟನೆಯ ಶತಮಾನಕ್ಕೆ ಕಾಲಿಟ್ಟಾಗ ಕೈಫಿಯತ್ತು ಐತಿಹಾಸಿಕ ಸತ್ಯವನ್ನು ಸೂಚಿಸುವಂತೆ ಕಾಣುತ್ತದೆ. ಕಾರಣ ಇದು 19ನೆಯ ಶತಕದ ಪ್ರಾರಂಭದಲ್ಲಿ ರಚಿಸಲ್ಪಟ್ಟಿದ್ದು. ಹಾಗಾಗಿ ಸಾಧಾರಣ ಒಂದುನೂರು ವರ್ಷಗಳ ಚರಿತ್ರೆ ವಿಚಾರ ಸಾಮಾನ್ಯವಾಗಿ ಜನಜನಿತವಾಗಿತ್ತು.

ಚೌಟರ ಹೆಚ್ಚಿನ ಶಾಸನಗಳು ರಾಜಕೀಯ ವಿಚಾರಕ್ಕೆ ಸಂಬಂಧಿಸಿದವು. ಇವರು ಕಾರ್ಕಳದ ಭೈರರಸರು, ಮೂಲ್ಕಿ ಸಾವಂತರು, ಬಂಗವಾಡಿಯ ಬಂಗರು ಮತ್ತು ಪಣಂಬೂರಿನ ಹೆಗ್ಗಡೆಯೊಂದಿಗೆ ಮಾಡಿಕೊಂಡ ರಾಜಕೀಯ ಒಪ್ಪಂದಗಳನ್ನು ಶಾಸನಗಳು ಸೂಚಿಸುತ್ತವೆ. ಐತಿಹಾಸಿಕವಾಗಿ ಗುರುತಿಸಬಲ್ಲ ಕಾಲಕ್ಕೆ ಈ ವಂಶ ಯುದ್ಧನಿರತವಾಗಿದ್ದುದು ಕಂಡುಬರುತ್ತದೆ. ಕ್ರಿ.ಶ. 1398ಕ್ಕೆ ಸೇರುವ ಉತ್ತರ ಕನ್ನಡದ ಕಾಯ್ಕಿಣಿಯ ಶಾಸನ ಚೌಟರಿಗೂ ವಿಜಯನಗರ ಚಕ್ರೇಶ್ವರರಿಗೂ ಘಟಿಸಿದ ಯುದ್ಧವನ್ನು ತಿಳಿಸುತ್ತದೆ. ಇದರಲ್ಲಿ ವಿಕ್ರುಚೌಟನ ಸೈನ್ಯ ದುರ್ಭರ ಸೋಲನ್ನು ಅನುಭವಿಸಿತು.

ತುಳುವರಸ ಚೌಟನ ಸುಜೇರು ಶಾಸನ ಈ ದೃಷ್ಟಿಯಲ್ಲಿ ಪ್ರಾಮುಖ್ಯವಾದುದು. ಕ್ರಿ.ಶ. 1528ಕ್ಕೆ ಸೇರುವ ಈ ಶಾಸನ ಒಂದು ರಾಜಕೀಯ ಶಾಂತಿ ಒಪ್ಪಂದವನ್ನು ತಿಳಿಸುತ್ತದೆ. ತುಳುವರಸ ಚೌಟ ಮತ್ತು ವೀರನರಸಿಂಹ ಬಂಗ ಇವರ ನಡುವೆ ಈ ಒಪ್ಪಂದವೇರ್ಪಟ್ಟಿತು. ಇದರ ಪ್ರಕಾರ ಯಾರೊಬ್ಬರೂ ಇನ್ನು ಮುಂದೆ ಮತ್ತೊಬ್ಬರ ಓಡಾಟಕ್ಕೆ ಅಡ್ಡಿಪಡಿಸಬಾರದು; ಈರ್ವರೂ ಜನರ ಓಡಾಟಕ್ಕೆ ಅಡ್ಡಿಪಡಿಸಿ ತೊಂದರೆ ಉಂಟುಮಾಡಬಾರದು; ಯಾರೊಬ್ಬರೂ ಕೆರಸಾಸೆಯ ರಾಜನಿಂದ ಸೈನ್ಯ ಕುದುರೆಗಳನ್ನು ಪಡೆಯಬಾರದು; ಮತ್ತೊಬ್ಬರ ಪ್ರದೇಶದ ಮೇಲೆ ಧಾಳಿ ನಡೆಸಬಾರದು ಮತ್ತು ಅವರ ಬಲ್ಲಾಳು ಗಳನ್ನು ಸೆರೆಹಿಡಿಯಬಾರದು. ಸಂಧಾನಕಾರರಾಗಿ ಈ ಒಪ್ಪಂದ ಏರ್ಪಡಿಸುವುದರಲ್ಲಿ ಯಶಸ್ವಿ ಯಾದವರೆಂದರೆ ವೇದಾನಂದವೊಡೆಯ ಮತ್ತು ತಿರುಮಲರಸ ಕಿನ್ನಿಕ ಹೆಗ್ಗಡೆ.

ಈ ಶಾಸನದ ವಕ್ಕಣೆ ಆ ಕಾಲದಲ್ಲಿ ಬಂಗರಿಗೂ ಚೌಟರಿಗೂ ಇದ್ದ ವೈಮನಸ್ಯ ತತ್ಪರಿಣಾಮವಾಗಿ ನಡೆಯುತ್ತಿದ್ದ ಅಘೋಷಿತ ಯುದ್ಧಗಳೆಲ್ಲವನ್ನು ಬಹಳ ಸೂಚ್ಯವಾಗಿ ತಿಳಿಸುತ್ತದೆ. ಅಷ್ಟೇ ಅಲ್ಲ, ಯುದ್ಧ ಸಾಮಗ್ರಿಗಳನ್ನು ಬೇಕಾದವರಿಗೆ ಸರಬರಾಜು ಅಥವಾ ಮಾರಾಟ ಮಾಡುವಂತಹ ಶಕ್ತಿವಂತ ರಾಜವಂಶ ಕೆರವಾಸೆಯಲ್ಲಿತ್ತು ಎನ್ನುವುದು ಇದರಿಂದ ಬೆಳಕಿಗೆ ಬಂದಿದೆ.

ತುಳುವರಸ ಚೌಟನು ಈ ಒಪ್ಪಂದಕ್ಕೆ ಸಹಿ ಹಾಕಿದ ಕೇವಲ ಒಂದು ವಾರದಲ್ಲಿ (14 ಮೇ 1528) ಕಿನ್ನಿಕ ಹೆಗ್ಗಡೆಯೊಂದಿಗೆ ಮಿಲಿಟರಿ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಇದೇ ರೀತಿ ಇವನ ನಂತರ ಬಂದ ತಿರುಮಲರಸ ಚೌಟನು ಕಾರ್ಕಳದ ರಾಜ ಪಾಂಡ್ಯಪ್ಪ ವೊಡೆಯನೊಡನೆ ಸ್ನೇಹ ಮತ್ತು ಶಾಂತಿ ಒಪ್ಪಂದ ಮಾಡಿಕೊಳ್ಳುತ್ತಾನೆ (ಕ್ರಿ.ಶ. 1543). ಇದು ಪರಸ್ಪರ ರಕ್ಷಣಾ ಒಪ್ಪಂದವೂ ಹೌದು.

16ನೆಯ ಶತಮಾನದ ಉತ್ತರಾರ್ಧದಲ್ಲಿ ಚೌಟ ವಂಶದಲ್ಲೇ ಪರಸ್ಪರ ವೈಮನಸ್ಸು ತಲೆದೋರಿತ್ತು ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ. ಸೋದರಿಯರಾದ ಲೋಕಾದೇವಿ ಚೌಟ ಮತ್ತು ಅಬ್ಬಕ್ಕದೇವಿ ಚೌಟರು ತಮ್ಮ ಒಡಹುಟ್ಟಿದ ಪದುಮಲದೇವಿಯ ಜ್ಞಾಪಕಾರ್ಥ ಮೂಡುಬಿದರೆ ಬಸದಿಗೆ ಪ್ರತ್ಯೇಕವಾಗಿ ದಾನ, ಧರ್ಮಗಳನ್ನು ಮಾಡಿದರು. ಈ ಧರ್ಮವನ್ನು ಪುತ್ತಿಗೆಯ ಅರಸರು (ಚೌಟರು) ಕೆಡಿಸಬಾರದು ಎಂಬ ಅಂಕಿತವನ್ನು ತಾವು ಕೊಟ್ಟ ದಾನ ಶಾಸನದಲ್ಲಿ ಹಾಕಿಸಿದ್ದಾರೆ. ಈ ಶಾಸನಗಳ ಕಾಲ ಕ್ರಿ.ಶ. 1571; ಪ್ರಾಯಶಃ ಈ ತೆರನಾದ ಮನಸ್ತಾಪ ವಂಶದೊಳಗೆ ಹೊಗೆಯಾಡಿದ್ದೆ ಚೌಟರಾಜ್ಯ ಎರಡು ಹೋಳಾದದ್ದಕ್ಕೆ ಕಾರಣವಿರಬಹುದು. ಉಲ್ಲಾಳ ಸಿಡಿದೆದ್ದ ಭಾಗಕ್ಕೆ ಕೇಂದ್ರವಾಯಿತು.

ಚೌಟ ರಾಜ್ಯವನ್ನಾಳಿದವರಲ್ಲಿ ಹೆಸರಿಸಬಹುದಾದವರೆಂದರೆ ರಾಣಿ ಅಬ್ಬಕ್ಕದೇವಿ. ಈಕೆ ಆಳಿದ್ದು ಉಲ್ಲಾಳದಿಂದ. ಬಂಗವಾಡಿಯ ರಾಜ ವೀರನರಸಿಂಹ ಲಕ್ಷ್ಮಪ್ಪರಸ ಬಂಗ ಈಕೆಯ ಪತಿ. ಈಕೆ ಆಳು ತ್ತಿದ್ದ ಕಾಲ ಹೊಸ ರಾಜಕೀಯ ಪರಿಸ್ಥಿತಿಗೆ ಎಡೆ ಮಾಡಿತ್ತು. ಕೆಳದಿ ಅರಸರ ಆಗಮನಕ್ಕೆ ಕಾರಣವಾಯಿತು.

ಕೆಳದಿ ಅರಸರ ಆಗಮನದಿಂದ ಈ ಜಿಲ್ಲೆಯ ಜೈನ ಅರಸೊತ್ತಿಗೆಗಳ ಸ್ವಾತಂತ್ರ್ಯಾಪಹ ವಾಯಿತು. ಚೌಟರ ಗತಿಯೂ ಇದೇ ಆಯಿತು. ಹಲವಾರು ಕಷ್ಟ ನಷ್ಟಗಳಿಗೆ ಇವರು ಗುರಿಯಾದ ಮುಂದೆ ಕ್ರಿ.ಶ. 1763ರಲ್ಲಿ ಕೆಳದಿಯನ್ನು ಹೈದರಾಲಿ ವಶಪಡಿಸಿಕೊಂಡ. ಇದರಿಂದ ಇಡೀ ದ ಕನ್ನಡಭಾಗವು ಅವನ ವಶವಾಯಿತು. ಚೌಟರಸರಿಗೆ ಹೊಸ ಕಷ್ಟ ಕೋಟಲೆಗಳು ಪ್ರಾರಂಭವಾದ ಹೈದರಾಲಿಯಿಂದ ನೇಮಿಸಲ್ಪಟ್ಟ ಶೇಖ್‌ಆಲಿ ಈ ಭಾಗದ ಆಡಳಿತ ನಡೆಸಿದ. ಈತ ನಡೆಸಿದ ದರೊ ಸುಲಿಗೆಗಳಿಂದ ಬೇಸತ್ತ ಚಂದ್ರಶೇಖರ ಚಿಕ್ಕರಾಯ ಚೌಟನು ಟೀಪುವಿಗೆ ತನ್ನ ನಿವೇದನೆ ಮಾಡಿಕೊ ಟೀಪು ಆಗ ಮಂಗಳೂರಲ್ಲಿ ಆಂಗ್ಲರೊಡನೆ ಯುದ್ಧ ಮಾಡಿ ಜಯ ಸಾಧಿಸಿದ್ದ. ಟೀಪುವು ಚೌಟ ರಾಜ ವಾರ್ಷಿಕ 455 ವರಹ ಆದಾಯದ ನೆಲವನ್ನು ಬಿಟ್ಟುಕೊಟ್ಟ. 1799ರಲ್ಲಿ ಟೀಪು ಮರಣಾನಂ ಆಂಗ್ಲರು ಇಲ್ಲಿ ನೆಲೆಯೂರಿದಾಗ ಈ ಜೀವನಾಂಶ ಇನ್ನೂ ಕಡಿಮೆಯಾಯಿತು.

ಮೂಡಬಿದುರೆ:

ಮೂಡಬಿದುರೆ ರಾಜಧಾನಿ ಪುತ್ತಿಗೆಯ ಸಮೀಪವಿದ್ದ ಜೈನ ಕ್ಷೇತ್ರ. ಚೌಟರ ಸೀಮೆಯಲ್ಲಿ ಪ್ರಮುಖ ನಗರ ಹಾಗು ಧಾರ್ಮಿಕ ಕೇಂದ್ರ. ಆದರೆ ಚೌಟರಿಗೆ ಮಾತ್ರ ಈ ನಗರದ ಮೇಲೆ ಯ ಅಧಿಕಾರವೂ ಇರಲಿಲ್ಲ. ಕಾರಣ ಇದು ವಿಜಯನಗರ ಕಾಲದಲ್ಲಿ ಮಂಗಳೂರು ರಾಜ್ಯಕ್ಕೆ ಸೇರಿ ಅದರ ಪ್ರಮುಖ ಆಡಳಿತ ವಿಭಾಗ ಕೇಂದ್ರವಾಗಿತ್ತು. ಮಂಜಣ್ಣ, ಗಣಪಣ್ಣ ಮತ್ತು ತಿಮ್ಮ ಇವರುಗಳು ಇಲ್ಲಿ ಸಾರ್ವಭೌಮರ ಅಧಿಕಾರಿಗಳಾಗಿದ್ದರು ಎಂದು ಶಾಸನಗಳಿಂದ ತಿಳಿದು ಬರುತ್ತ ಹಾಗಾಗಿ ಇಲ್ಲಿ ಸಾರ್ವಭೌಮ ರಕ್ಷಣೆ; ಪ್ರಮುಖ ವ್ಯಾಪಾರಕೇಂದ್ರವಾಗಿದ್ದ ಈ ನಗರಕ್ಕೆ ಸ್ಥಳೀ ರಾಜರುಗಳ ಕಾದಾಟದಿಂದ ಮುಕ್ತಿ. ಈ ನಗರಕ್ಕೆ ಧಾರ್ಮಿಕ ಕಾರ್ಯಗಳಿಗಾಗಿ ಬಂದು ಹೋಗ ಎಲ್ಲರಿಗೂ ಅನುಮತಿ ಇತ್ತು. ಹೊಸ ಬಸದಿಗಳ ನಿರ್ಮಾಣ ನಡೆಯಿತು. ಬಿಳಿಗಿ, ನಗಿರೆಯಂತ ದೂರದ ರಾಜ್ಯಗಳಿಂದಲೂ ಅಲ್ಲಿಯ ರಾಜರು ಒಂದು ಧರ್ಮಕಾರ್ಯಗಳನ್ನು ಮಾಡಿದ ಹಲ ನಿದರ್ಶನಗಳಿವೆ. ಇದಕ್ಕಿರುವ ಶಾಸನ ಮಾಹಿತಿಗಳೂ ಹಲವು

ಚೌಟ ರಾಜರಿಗೆ ಈ ನಗರದಲ್ಲಿದ್ದ ಮಿತ ಅವಕಾಶಗಳಿಂದ ಅವರ ಕಾರ್ಯಗಳೂ ಮಿತವಾದ ಕೇವಲ ಮಿತವಾದ ಸಂಖ್ಯೆಯಲ್ಲೆ ಇವರ ಶಾಸನಗಳು (ಏಳು ಮಾತ್ರ) ಇಲ್ಲಿ ದೊರೆಯುತ್ತವೆ. ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ಸಾಧ್ಯವಾದಷ್ಟು ಧರ್ಮ ಕಾರ್ಯಗಳನ್ನು ಚೌಟರು ಮಾ ದ್ದಾರೆ. ವಿಕ್ರುಚೌಟನು ಮೂಡಬಿದುರೆ ಗುರುಗಳ ಬಸದಿಯ ಚಂಡೋಗ್ರ ಪಾರ್ಶ್ವದೇವರ ಅ ನಾರ್ಥವಾಗಿ ಹಲವು ದಾನಗಳನ್ನು ಮಾಡಿರುತ್ತಾನೆ ಅಲ್ಲದೆ ಈ ಬಸದಿಯ ಸೌಂದರ್ಯ ನ್ನುಳಿಸಿಕೊಳ್ಳುವ ಸಲುವಾಗಿ ಈ ಬಸದಿಯ ಆವರಣದಲ್ಲಿ ಬೇರಾವುದೆ ಬಸದಿ (ಗುಡಿ) ಕಟ್ಟಬಾರ ಎಂಬ ಕಟ್ಟಳೆಯನ್ನು ಮಾಡಿದ. ಇವನು ಈ ಕಟ್ಟಳೆ ಮಾಡಿದುದು ಕ್ರಿ.ಶ. 1389. ಚೌಟರಾಜ ಶಾ ಯನು ಮುನಿ ಕ್ರಿಯಾಶಕ್ತಿ ದೇವನಿಗೆ ಅಪರಿಮಿತ ಹೊನ್ನಿನ ಕಾಣಿಕೆ ಇತ್ತಿದ್ದಾನೆ. ಜೋಗಿವೊಡೆ ಚೌಟನು ಕ್ರಿ.ಶ. 1433ರಲ್ಲಿ ಜುಗಾದಿಕುಂಡಲ ಎಂಬ ಜೋಗಿ ಪುರುಷನಿಗೆ ಭೂಮಿ ದಾನ ಮಾಡಿದ ಪೊಳಲದೇವಿ (ರಾಜರಾಜೇಶ್ವರಿ)ಯ ಪೂಜಾ ಕಾರ್ಯಗಳಿಗಾಗಿ ಮಂಜಣ್ಣ ಶೇಖರ ಮತ್ತು ಅ ಸೋದರಿಯರಿಗೆ ಅಲ್ಲಪಶೇಖರ ಚೌಟನು ಕ್ರಿ.ಶ. 1465ರಲ್ಲಿ ಭೂಮಿ ದಾನ ಮಾಡಿದ. ಈ ಧ ಕಾರ್ಯದಲ್ಲಿ ರಾಜನ ಸೋದರರಾದ ದೇವರು ಶೇಖರ, ಭೀಮಣ್ಣ ಮತ್ತು ಬೊಮ್ಮಣ್ಣರೂ ಪಾಲ್ಗೊ ದ್ದರು. ಸೋದರಿಯರಾದ ಲೋಕಾದೇವಿ ಮತ್ತು ಅಬ್ಬಕದೇವಿಯರು ತಮ್ಮೊಡಹುಟ್ಟ ಪದುಮಲ ದೇವಿಯ ಪುಣ್ಯಾರ್ಥವಾಗಿ ಮೂಡಬಿದುರೆ ಹೊಸಬಸದಿಯಲ್ಲಿ ಆಹಾರ ದಾನಕ ಭೂಮಿ ದಾನ ಮಾಡಿದರು.

ರಾಜ್ಯದಲ್ಲಿ ಹಾಗೂ ನೆರೆಕರೆಯಲ್ಲಿ ಶಾಂತಿ ಸೌಹಾರ್ದ ಕಾಪಾಡುವುದೂ ಒಂದು ಮುಖ್ಯ ಕೆಲ ಅಷ್ಟೆ ಅಲ್ಲ ಕೊಡುಗೆ ಸಹ. ಇಂತಹ ಒಂದು ಸತ್ ಕಾರ್ಯವನ್ನು ಇತ್ತೀಚೆ ಬೆಳಕಿಗೆ ಬಂದ ಒಂ

ಆ ಅಜ್ಞಾತ ರಾಷ್ಟ್ರ ಬಂಧುಗಳಿಗೆ ಈಗ ನಾವು ಮಾಡಬಹುದಾದ ಒಂದೇ ಒಂದು ಕೆಲಸವೆಂದರೆ-ತ್ರಿಕರಣ ಶುದ್ಧಿಯಿಂದ ನಮ್ಮ ನಮನಗಳನ್ನು ಅರ್ಪಿಸುವುದು, ಅವರು ಹಚ್ಚಿದ ರಾಷ್ಟ್ರೀಯತೆಯ ಜ್ಯೋತಿಯನ್ನು ಉಜ್ವಲವನ್ನಾಗಿಸುವುದು.

ಮುಂದೆ 1937ರಲ್ಲಿ ಚುನಾವಣಾ ಪ್ರಚಾರಕ್ಕಾಗಿ ಪಂಡಿತ ಜವಾಹರಲಾಲ ನೆಹರು ಅವರು ಕಾರ್ಕಳಕ್ಕೆ ಭೇಟಿ ನೀಡಿದ್ದರು. ಭಾರತಮಾತೆಯ ಸುಪುತ್ರನೊಬ್ಬನ ಭೇಟಿ ಕಾರ್ಕಳಕ್ಕೆ ಅವಿಸ್ಮರಣೀಯ' ನೆಹರು ಅವರನ್ನು ತೆರದ ಜೀಪಿನಲ್ಲಿ ಕುಳ್ಳಿರಿಸಿ ಊರಿನಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ಸ್ವರಾಜ್ಯ ಮೈದಾನಿನಲ್ಲಿ ಮುಕ್ತಾಯಗೊಂಡಿತು. ಈ ಮೈದಾನದಲ್ಲಿ ನೆಹರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆ ಸಭೆಯಲ್ಲಿದ್ದ ಅನೇಕರು ಈಗಿಲ್ಲದಿರಬಹುದು, ಆದರೆ ಆ ಸನ್ನಿವೇಶದ ಮೂಕಸಾಕ್ಷಿಯಾದ ಧೂಪದ ಮರವೊಂದು ಈಗಲೂ ಮೈದಾನಿನ ಮೂಲೆಯೊಂದರಲ್ಲಿದೆ.

1939ರ ಅಂತ್ಯದ ವೇಳೆಗೆ ದ್ವಿತೀಯ ಮಹಾಯುದ್ಧ ಪ್ರಾರಂಭವಾಯಿತು. ಆಂಗ್ಲ ಭಾರತವೂ ಯುದ್ಧದಲ್ಲಿ ಭಾಗವಹಿಸಿತು. ಗಾಂಧೀಜಿ ವೈಯ್ಯಕ್ತಿಕ ಸತ್ಯಾಗ್ರಹಕ್ಕೆ ಕರೆಯಿತ್ತರು. ಕಾರ್ಕಳದ ಸತ್ಯಾಗ್ರಹಿ ಸಿಪಾಯಿಗಳು ಇದಕ್ಕೆ ಸಜ್ಜಾದರು. ಸರದಿಯಂತೆ ಸತ್ಯಾಗ್ರಹ ನಡೆಸಬೇಕಾದವರ ಹೆಸರಿನ ಪಟ್ಟಿಯನ್ನು ಗಾಂಧೀಜಿ ಅಂತಿಮವಾಗಿ ಸಿದ್ಧಪಡಿಸಿ ಕಳುಹಿಸಿದರು.

ಈ ಚಳವಳಿಯ ಅಂಗವಾಗಿ ಗಾಂಧೀಜಿ ಸಿದ್ಧಪಡಿಸಿದ ವಿಶಿಷ್ಟ ಘೋಷಣೆಯೊಂದಿಗೆ ಸತ್ಯಾಗ್ರಹಿಗಳು ತಮ್ಮ ಬಂಧನವಾಗುವವರೆಗೂ ಊರಿಂದೂರಿಗೆ ಸಂಚರಿಸಬೇಕು.

ಕಾರ್ಯಕ್ರಮ ಸುಗಮವಾಗಿ ನೆರವೇರಲು ಕಾರ್ಕಳ ಮತ್ತು ಮೂಡಬಿದುರೆಗಳಲ್ಲಿ ಭರದಿಂದ ಸಿದ್ಧತೆಗಳು ನಡೆದವು. ಇದಕ್ಕಾಗಿ ಪ್ರಚಾರ ಕಾರ್ಯವೂ ನಡೆದಿತ್ತು.

ವೈಯಕ್ತಿಕ ಸತ್ಯಾಗ್ರಹಕ್ಕಾಗಿ ಗೊತ್ತುಪಡಿಸಿದ ದಿನ ಹಾಗು ಸಮಯಕ್ಕೆ ಸರಿಯಾಗಿ ತಾಲ್ಲೂಕಿನಾದ್ಯಂತ ಸತ್ಯಾಗ್ರಹಿಗಳು ಗಾಂಧೀಜಿಯವರು ಕೊಟ್ಟ ಘೋಷಣಾ ಮಂತ್ರ ಪಠಣದೊಂದಿಗೆ ತಮ್ಮ ಕಾರ್ಯಕ್ರಮ ಪ್ರಾರಂಭಿಸಿದರು. ಶ್ರೀಯುತರಾದ ಎಂ. ಡಿ. ಅಧಿಕಾರಿ, ಶ್ರೀಮತಿ ಕಮಲಾ ಅಧಿಕಾರಿ, ಕೆ. ವೆಂಕಟೇಶ ಪ್ರಭು, ಡಾ। ಕೆ. ಜಿ. ಕಾಮತ್, ಸೋಮನಾಥ ಗೋಖಲೆ, ಇತ್ಯಾದಿ ಉತ್ಸಾಹಿ ನಾಯಕ ಸತ್ಯಾಗ್ರಹಿಗಳು ಇದರಲ್ಲಿ ಪಾಲ್ಗೊಂಡಿದ್ದರು. ಹೆಚ್ಚಿನವರು ತಾವು ಘೋಷಣೆ ಮಾಡಿದ ಸ್ಥಳಗಳಲ್ಲೆ ಬಂಧಿಸಲ್ಪಟ್ಟರೆ ಇಬ್ಬರು ಮಾತ್ರ ಬೇರೆ ಸ್ಥಳದಲ್ಲಿ ಬಂಧಿಸಲ್ಪಟ್ಟರು. ಅವರುಗಳೆಂದರೆ ಶ್ರೀ ಸೋಮನಾಥ ಗೋಖಲೆ ಮತ್ತು ಶ್ರೀ ನೀಲಕಂಠ ಫಾಟಕ್. ಬಜಗೋಳಿಯಲ್ಲಿ ಪ್ರಾರಂಭವಾದ ಗೋಖಲೆಯವರ ಯುದ್ಧವಿರೋಧಿ ಪ್ರಚಾರಕಾರ್ಯ ಮುಂದೆ ಗುರುವಾಯನಕೆರೆ ಉಪ್ಪಿನಂಗಡಿಗಳ ಮುಖಾಂತರ ಕರಾವಳಿಗೆ ಸಾಗಿತು. ಅಲ್ಲಿಂದ ಮುಂದೆ ಭಟ್ಕಳಕ್ಕೆ. ಇಲ್ಲಿ ಯುದ್ಧ ವಿರೋಧಿ ಘೋಷಣೆ ಮಾಡಿದ್ದಕ್ಕಾಗಿ ಬಂಧಿಸಲ್ಪಟ್ಟರು. ವಕೀಲ ಪದ್ಮನಾಭ ಕಾಮತರೊಂದಿಗೆ ಇವರೂ ಸೇರಿ ಕಾರ್ಕಳ ನ್ಯಾಯಾಲಯದಲ್ಲಿ ಪಿಕೆಟಿಂಗ್ ನಡೆಸಿದ್ದರು. ಆಗ ನ್ಯಾಯಾಧೀಶರಿಗೆ ಗಾಂಧಿಟೊಪ್ಪಿಯನ್ನು ಹಾಕಿ ಆ ದಿವಸ ಕಛೇರಿಗೆ ರಜೆ ಕೊಡುವಂತೆ ಮಾಡಿದ್ದರು. ಕಾರ್ಕಳದ ಸ್ವರಾಜ್ಯ ಮೈದಾನಿನಲ್ಲಿ ಪ್ರಚಾರ ಕಾರ್ಯ ಪ್ರಾರಂಭಿಸಿದ ಫಾಟಕರು ಬಂಧಿಸಲ್ಪಟ್ಟಿದ್ದು ಭಟ್ಕಳದಲ್ಲೆ.

ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಜೈಲುಶಿಕ್ಷೆಯ ಅನಂತರ ಬಿಡುಗಡೆಯಾದಾಗ ಆ ಸತ್ಯಾಗ್ರಹಿಗಳು ಮತ್ತೆ ಸತ್ಯಾಗ್ರಹ ಮಾಡಬೇಕು ಎನ್ನುವುದು ಗಾಂಧೀಜಿಯವರ ಕರೆಯಾಗಿತ್ತು. ಇದರಂತೆ ಶ್ರೀ ಎಂ. ಡಿ. ಅಧಿಕಾರಿಗಳು ಸತ್ಯಾಗ್ರಹ ಮಾಡಿ ಸೆರೆವಾಸ ಅನುಭವಿಸಿದರು. ರಾಜಾಜಿಯವರ ಬಂಧನವಾದಾಗ ಇಡೀ ಕಾರ್ಕಳ ಹರತಾಳ ಆಚರಿಸಿತು.

"ಮಾಡು ಇಲ್ಲವೆ ಮಡಿ"

1942ರ ಆಗೆಸ್ಟ್ ತಿಂಗಳಿನಲ್ಲಿ ಗಾಂಧೀಜಿಯವರು ಬ್ರಿಟಿಷರ ವಿರುದ್ಧ ಪೂ
ಚಳವಳಿ ಪ್ರಾರಂಭಿಸಿದರು. "ಕ್ವಿಟ್‌ಇಂಡಿಯಾ" ಬ್ರಿಟಿಷರೆ "ಭಾರತ ಬಿಟ್ಟು ತೊಲಗಿರಿ" ಎಂಬ
ಮಾಡಿದರು. ಇದು ನಾಡಿನಾದ್ಯಂತ ಎಲ್ಲರ ಎದೆಗಳಲ್ಲೂ ಮಾರ್ದನಿಗೊಂಡಿತು. "ಈ
ಎಲ್ಲ ಕರ್ನಾಟಕಸ್ಥರೂ ಪೂರ್ಣ ಭಾಗವಹಿಸುವರೆಂದು ನನ್ನ ಭರವಸೆ ಇದೆ" ಎಂಬುದಾ
ಕರ್ನಾಟಕಕ್ಕೆ ಒಂದು ಸಂದೇಶವನ್ನು ಗಾಂಧೀಜಿ ಆಗಸ್ಟ್ 8ರಂದು ನೀಡಿದರು.

"ಕ್ವಿಟ್ ಇಂಡಿಯಾ" ಚಳವಳಿ ಜಿಲ್ಲೆಯಲ್ಲಿ ಬೇಕೆ, ಬೇಡವೆ ಎನ್ನುವವರ ನಡುವೆಯೆ
9ರಂದು ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಎಂ. ಡಿ. ಅಧಿಕಾರಿಗಳು ಆವೇಷಪೂರಿ
ಮಾಡಿದರು. ಲಾಠಿಪೆಟ್ಟಿನಿಂದಾದ ರಕ್ತದ ಓಕುಳಿಯ ನಡುವೆ ಇವರ ಬಂಧನವಾಯಿತ
ಪ್ರತಿಭಟನಾರ್ಥ ಕಾರ್ಕಳದಲ್ಲಿ ಆಗಸ್ಟ್ 10ರಂದು ಹರತಾಳ ಆಚರಿಸಲಾಯಿತು; ಶಾಲೆಗಳಲ್ಲಿ
ಗಳು ಮುಷ್ಕರ ಆಚರಿಸಿದರು.

ಜಿಲ್ಲೆಯ ಇತರೆಡೆಗಳಂತೆ ಕಾರ್ಕಳದಲ್ಲೂ ಹಳೆಯ ಕಾರ್ಯಕರ್ತರು "ಚಲೆಜಾವ್"
ವಿರೋಧ ವ್ಯಕ್ತಪಡಿಸಿದರು. ಆದರೆ ಶ್ರೀಯುತರುಗಳಾದ ವೆಂಕಟೇಶಪ್ರಭು, ಕೇಶವ ಶೆಣ
ಸುಬ್ರಾಯ ನಾರಾಯಣ ಮಲ್ಯ ಈ ಮೂರು ಮಂದಿ ಕಾರ್ಯಕರ್ತರ ತಂಡ ಆ ವೇಳೆಗೆ
ನಡೆಸಿ ಲಾಠಿಪೆಟ್ಟಿಗೆ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ಎಂ. ಡಿ. ಅಧಿಕಾರಿಯವರನ್ನು ಕಾಣಲು ಮಂ
ಹೋಯಿತು. (1942 ಸೆಪ್ಟೆಂಬರ್ 26. ಆಗ ಅಧಿಕಾರಿಯವರು ಮಂಗಳೂರಿನ ರಾಮಕೃಷ್ಣ
ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು) "ಅಕ್ಟೋಬರ್ 9ಕ್ಕೆ ನಿಷೇಧಾಜ್ಞೆ ಮುರಿದು
ಮಾಡಲು ಅಧಿಕಾರಿಗಳು ಆದೇಶ ನೀಡಿದರು. ಈ ಆದೇಶದೊಂದಿಗೆ ತಂಡ ವಾಪಸ್ಸಾಯಿ
ಕಾರ್ಯಕರ್ತರೂ ಕಾರ್ಕಳದ "ಸ್ವರಾಜ್ಯ ಭವನ"ದಲ್ಲಿ ಸಭೆ ಸೇರಿದರು. ಕೆ. ಸದಾಶಿವರಾಯ
ಬಿದ್ದ ಮನೆ ಸತ್ಯಾಗ್ರಹಿಗಳ ಸ್ವರಾಜ್ಯ ಭವನವಾಗಿತ್ತು. ಸಭೆಯಲ್ಲಿ ಸತ್ಯಾಗ್ರಹ ನಡೆಸುವ
ಕೈಗೊಳ್ಳಲಾಯಿತು. ಕಾರ್ಕಳದ ಮಟ್ಟಿಗೆ ಇದೊಂದು ಚಾರಿತ್ರಿಕ ನಿರ್ಧಾರ. 'ಮಾಡು ಇಲ್ಲ
ಎಂಬ ಆದೇಶ ಹೊತ್ತ ಕೊನೆಯ ಹೋರಾಟ ಇದು. ನಿರಾಯುಧರಾದ ಸತ್ಯಾಗ್ರಹಿಗಳು
ತ್ಯಾಗ, ಬಲಿದಾನಗಳಿಗೆ ಸಿದ್ಧರಾಗಿರಬೇಕಾದ ಸಮಯ. ಕಾರ್ಕಳದ ಜನತೆ ಸದಾ ನೆನಪಿನಲ್ಲಿ
ಆತ್ಮಾರ್ಪಣೆಯ ನಿರ್ಧಾರ.

ಅಕ್ಟೋಬರ್ 9, 1942. ಕಾರ್ಕಳದ ಇತಿಹಾಸದಲ್ಲಿ ಅವಿಸ್ಮರಣೀಯ ದಿನ. 'ಬ್ರಿಟಿಷ
ಬಿಟ್ಟು ತೊಲಗಿರಿ' ಎಂಬ ಗಾಂಧಿವಾಣಿ ಅಂದು ಕಾರ್ಕಳದಲ್ಲೂ ಮೊಳಗಿತು. ಹಿರಿಯ ಗ
ಕೆ. ವೆಂಕಟೇಶ ಪ್ರಭುಗಳ ನಾಯಕತ್ವದಲ್ಲಿ ಸತ್ಯಾಗ್ರಹಿಗಳ ತಂಡ ಅಂದು ಬೆಳಿಗ್ಗೆ ಅನ
ದೇವಾಲಯದಿಂದ ಮೆರವಣಿಗೆ ಹೊರಟಿತು. ಆಗ 144ನೆ ಕಲಂ ಜಾರಿಯಲ್ಲಿತ್ತು. ನಿಷೇಧಾಜ್ಞೆ
ಸಿದ ಕಾರಣ ಮೆರವಣಿಗೆಯ ಮೇಲೆ ಲಾಠಿಚಾರ್ಜ್ ಆಯಿತು. 40ಜನ ಸಶಸ್ತ್ರ ಪೋಲಿ
ಯೊಂದಿಗೆ ಅಧಿಕ ಸಂಖ್ಯೆಯಲ್ಲಿದ್ದ ಪೋಲೀಸರು ಕೇವಲ ಬೆರಳೆಣಿಕೆಯಷ್ಟಿದ್ದ ಸತ್ಯಾಗ್ರಹಿಗ
ಲಾಠಿ ಪ್ರಹಾರ ನಡೆಸಿದರು. "ಭಾರತ ಮಾತಾಕೀ ಜೈ" ಎಂಬ ಘೋಷಣೆ ಮಾಡುತ್ತ ಸತ್ಯಾ
ನೆಲಕ್ಕುಳಿದರು. ರಕ್ತದೋಕುಳಿ ನಡೆಸಿದ ಈ ಬೀಭತ್ಸ ಕೃತ್ಯಕ್ಕೆ ಆದೇಶ ನೀಡಿದವರು ವಲಯ
ಅಧಿಕಾರಿ (Circle Inspector) ಅಣ್ಣಪ್ಪಯ್ಯ. ಇವರೂ ಕಾರ್ಕಳದವರೆ!

ತಲೆಗೆ ಭಾರಿ ಪೆಟ್ಟುಬಿದ್ದು ರಕ್ತ ಚಿಮ್ಮಿದಾಗ ಸತ್ಯಾಗ್ರಹಿಗಳು ಒಬ್ಬೊಬ್ಬರಾಗಿ ನೆಲ
ಸ್ಮೃತಿತಪ್ಪಿ ಬಿದ್ದ ಇವರ ಮೇಲೆ ಪೋಲೀಸರ ಪ್ರಹಾರ ನಡೆದೇ ಇತ್ತು. ಸತ್ಯಾಗ್ರಹಿಗಳಿಗೆ
ಉಪವಾಸ ಮಾಡಹೋದ ಯುವ ಸತ್ಯಾಗ್ರಹಿ ಸುಬ್ರಾಯ ನಾರಾಯಣ ಮಲ್ಯ ಸಹ
ಲಾಠಿ ಪ್ರಹಾರಕ್ಕೆ ಗುರಿಯಾದರು.

ಆಗಸ್ಟ್ 9ರಂದು ಮಂಗಳೂರಿನಲ್ಲಿ ಎಂ. ಡಿ. ಅಧಿಕಾರಿಗಳು ಪೋಲೀಸರ ಲಾಠಿಗೆ ತಲೆಯೊಡ್ಡಿದರೆ ಎರಡು ತಿಂಗಳ ನಂತರ ಅದೇ ದಿನ ದಂದು ಕಾರ್ಕಳದಲ್ಲಿ ಪೋಲೀಸ್ ಕಾರ್ಯಾಚರಣೆಗೆ ತುತ್ತಾದವರು. ಶ್ರೀಯುತರುಗಳಾದ ಕೆ. ವೆಂಕಟೇಶ ಪ್ರಭು, ಸಿ. ಪದ್ಮನಾಭ ಕಾಮತ್. ಕೆ. ವಾಮನ ಪೈ, ಗೋಪಾಲಕೃಷ್ಣ ಣೆ, ಸೂಡ ಕೃಷ್ಣ ಪ್ರಭು, ತಾರಾನಾಥ ಕಾಮತ್, ರಂಗನಾಥ ಪ್ರಭು, ಸಿ. ಕೃಷ್ಣ ಕಾಮತ್, ಕೆ. ಗಣಪತಿ ಟ್, ಸದಾನಂದ ಜೋಶಿ, ಮಾಧವ ಪುರಾಣಿಕ್ ಮತ್ತು ಆನಂದ ಶೆಟ್ಟಿ. ನಾಯಕರ ಅನುಮತಿ ಇಲ್ಲದೆ ಲಾಠಿ ಚಾರ್ಜ್ ಸಮಯಕ್ಕೆ ಸತ್ಯಾಗ್ರಹಿಗಳ ಮೆರವಣಿಗೆಯನ್ನು ಸೇರಿಕೊಂಡ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿ ಆನಂದ ಶೆಟ್ಟಿ. ಸತ್ಯಾಗ್ರಹಿಗಳನ್ನು ವೈದ್ಯಕೀಯ ಚಿಕಿತ್ಸೆಯ ನಂತರ ಶಿಕ್ಷೆಗೆ ಗುರಿಪಡಿಸಿ, ಬಳ್ಳಾರಿಯ ಅಲ್ಲಿಪುರಂ ಜೈಲಿನಲ್ಲಿ ಇಡಲಾಯಿತು.

ಹುತಾತ್ಮ ರಂಗನಾಥ

ಪೋಲೀಸರ ಲಾಠಿ ಸತ್ಯಾಗ್ರಹಿಗಳಲ್ಲೊಬ್ಬರಾದ ರಂಗನಾಥ ಪ್ರಭುಗಳ (ರಂಗಣ್ಣ) ಜೀವಕ್ಕೆ ಮುಳುವಾಯಿತು. ಜೈಲಿನಲ್ಲಿರುವಾಗಲೇ ಜಾಂಡಿಸ್ ರೋಗಕ್ಕೆ ಇವರು ತುತ್ತಾದರು. ಸರಿಯಾದ ಚಿಕಿತ್ಸೆ ದೊರೆಯದಿದ್ದ ಕಾರಣ ಪ್ರಭುಗಳು ಜೈಲಿನಲ್ಲೇ ತೀರಿಕೊಂಡರು. ಕಾರ್ಕಳ ಹಾಗೂ ಜಿಲ್ಲೆಯ ಇತರೆಡೆಗಳಿಂದ ಬಂದಿದ್ದ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿನ ಸತ್ಯಾಗ್ರಹಿಗಳು ಅಸಹಾಯಕತೆಯಿಂದ ಜೈಲಿನಲ್ಲಿ ಮೂಕಪ್ರೇಕ್ಷಕರಾಗಿ ಅಶ್ರುತರ್ಪಣವಿತ್ತರು. ಹೀಗೆ "ಸ್ವಾತಂತ್ರ್ಯ ವೇದಿಕೆಯಲ್ಲಿ ಆತ್ಮಾರ್ಪಣೆ ಮಾಡಿದರೂ ರಂಗಣ್ಣ ಯಾನೆ ರಂಗನಾಥ ಪ್ರಭು" ದೇಶಕ್ಕಾಗಿ ದೇಹವಿತ್ತ ನಮ್ಮ ಊರ ಹುತಾತ್ಮ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಘೋಷವಾಕ್ಯ ಪ್ರಾಯಶಃ ಪ್ರಭುಗಳ ಜೀವನ ಮಂತ್ರವಾಗಿದ್ದಿರಬೇಕು. ಭಾರತ ಮಾತೆಯ ಮಡಿಲನ್ನು ಸೇರಿದ ಹಲವು ರತ್ನಗಳಲ್ಲಿ ಇವರೂ ಒಂದಾದರು.

ದುರ್ಗದ ನೀಲಕಂಠ ಫಾಟಕರು ಕ್ವಿಟ್ ಇಂಡಿಯಾ ಚಳವಳಿಯ ಕರಪತ್ರಗಳನ್ನು ಹಂಚುವ ಕಾರ್ಯದಲ್ಲಿ ಮಗ್ನರಾದರು. ಹಲವಾರು ಸತ್ಯಾಗ್ರಹಿ ಮಿತ್ರರು ಇವರ ನೆರವಿಗಿದ್ದರು. ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಫಾಟಕರು ಕಾರ್ಕಳದಲ್ಲಿ ಬಂಧಿಸಲ್ಪಟ್ಟರು. ಕೆಲದಿನಗಳ ಸೆರೆವಾಸದ ನಂತರ ವಿಚಾರಣೆ ಇಲ್ಲದೆ ಬಿಡುಗಡೆ ಹೊಂದಿದರು.

ಕ್ವಿಟ್ ಇಂಡಿಯಾ ಚಳವಳಿಯು ಪ್ರಬಲ ಶಾಂತಿಯುತ ಸತ್ಯಾಗ್ರಹವಷ್ಟೇ ಅಲ್ಲದೆ ಕ್ರಾಂತಿಕಾರಿ ಚಟುವಟಿಕೆಗಳಿಗೂ ದಾರಿಮಾಡಿಕೊಟ್ಟಿತು. ದೇಶದೆಲ್ಲೆಡೆಯಂತೆ ಕಾರ್ಕಳದಲ್ಲೂ ವಿಧ್ವಂಸಕ ಕೃತ್ಯಗಳು ಜರಗುತ್ತಿದ್ದವು. ಕಾರ್ಕಳ–ಮಂಗಳೂರು ಮಾರ್ಗದ ತಂತಿ ಸಂಪರ್ಕವನ್ನು ಕಡಿಯಲಾಗಿತ್ತು. ಬಜಗೋಳಿ ಸೇತುವೆಯನ್ನು ಹಾನಿಗೊಳಿಸಲಾಗಿತ್ತು. ಟಪ್ಪಾಲು ಪೆಟ್ಟಿಗೆಗಳನ್ನು ಧ್ವಂಸಮಾಡುವ ಹಾಗೂ ಮೈಲಿ ಕಲ್ಲುಗಳನ್ನು ಕಿತ್ತೊಗೆಯುವ ಕೆಲಸಗಳೂ ನಡೆಯುತ್ತಿದ್ದವು. ಕೆ. ಪದ್ಮನಾಭ ಕಾಮತ್ ದುರ್ಗ ನೀಲಕಂಠ ಫಾಟಕ್ ಮತ್ತು ಮುದ್ರಾಡಿಯ ಕೃಷ್ಣಯ್ಯ ಶೆಟ್ಟಿ ಇವರು ಭೂಗತ ಚಟುವಟಿಕೆಗಳಲ್ಲಿ ಸಕ್ರಿಯ ಪಾಲುದಾರರು.

ಮೂಡಬಿದುರೆ ಭಾಗದಲ್ಲಿ ನಡೆಯುತ್ತಿದ್ದ ವಿಧ್ವಂಸಕ ಕೃತ್ಯಗಳಲ್ಲಿ ದೇವದಾಸ ಪ್ರಭುಗಳ ಪಾಲು ಹಿರಿದಾದುದು. ಜನಾರ್ದನ ಪ್ರಭು, ಅಚ್ಯುತ ಶೆಣೈ, ಶಶಿಧರ ರಾವ್, ಗೋಪಾಲ ಪೈ, ವಾಸುದೇವ ಪೈ ಇವರೆಲ್ಲ ಅಲ್ಲಿನ ಇತರ ಕಾರ್ಯಕರ್ತರು.

ಭೂಗತ ಕಾರ್ಯಾಚರಣೆ ಕಾರ್ಕಳದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಭೂಗತರ ಜೀವಕ್ಕೆ ಇಲ್ಲಿ ಅಪಾಯವಿರಲಿಲ್ಲ. ಈ ದಿಸೆಯಲ್ಲಿ ಪ್ರಕೃತಿಯ ಕೊಡುಗೆ ಅಪಾರ. ಹಾಗಾಗಿ ಊರವರಲ್ಲದೆ ಪರವೂರ ಭೂಗತ ಕಾರ್ಯಕರ್ತರೂ ಇಲ್ಲಿ ಕೆಲಕಾಲ ತಂಗಿದ್ದ ಉದಾಹರಣೆಗಳುಂಟು. ಕೇರಳದ ನಾರಾಯಣ ಕುರುಪ್, ಬೆಜವಾಡ (ಆಂಧ್ರ)ದ ವೆಂಕಟರಾಮಯ್ಯ, ಮಂಗಳೂರಿನ ವಿದ್ಯಾರ್ಥಿ ನಾಯಕ

ಗೋಪಾಲಕೃಷ್ಣ ಭಂಡಾರ್ಕರ್ ಹೀಗೆ ಬಂದವರಲ್ಲಿ ಕೆಲವರು. ಭಂಡಾರ್ಕರ್ ಕಾರ್ಕ ಮುಂಬೈ ಪ್ರಾಂತದ ದೇವಲಾಲಿಗೆ ಹೋಗಿ ಅಲ್ಲಿಯ ಮಿಲಿಟರಿ ಕ್ಯಾಂಪ್‌ನಲ್ಲಿ ರಾಷ್ಟ ಸಿದರು.

ಹೆಸರಾಂತ ಸ್ವಾತಂತ್ರ್ಯ ಹೋರಾಟಗಾರರಾದ ಆರ್. ಆರ್. ದಿವಾಕರ್ ಮತ್ತು ಅಂಬಲಿಯವರು ಭೂಗತರಾಗಿ ಕಾರ್ಕಳಕ್ಕೆ (1943ರಲ್ಲಿ) ಬಂದಿದ್ದರು. ಫೋಟೋ ಇವರಿಗೆ ವೇಷಹಾಕಿ ಜಟಕಾದಲ್ಲಿ ಆರ್ಯ ಸಮಾಜದ ಆಫೀಸಿಗೆ ಕರೆದುಕೊಂಡು ಹೋ ಇಲ್ಲಿಂದ ಮುಂದೆ ಅವರುಗಳು ಮಂಗಳೂರಿಗೆ ತೆರಳಿದರು. ಆ ಸಮಯದಲ್ಲಿ ಇವರುಗ ದರ್ಶನಕ್ಕಾಗಿ ನಿಯೋಜಿಸಲ್ಪಟ್ಟಿದ್ದ ಉತ್ಸಾಹಿ ಯುವಕ ಸುಬ್ರಾಯ ನಾರಾಯಣ ಮಲ್ಯ

ಒಟ್ಟಿನಲ್ಲಿ ಮಹಾತ್ಮ ಗಾಂಧೀಜಿಯವರು ರಾಷ್ಟ್ರೀಯತೆಯ ಭಾವಗಂಗೆಯ ಸ್ವಾತಂತ್ರ್ಯ ಸಮರದ ಕಹಳೆ ಊದಿದಾಗ ಕಾರ್ಕಳದ ಬೆಟ್ಟ, ಗುಡ್ಡ, ಹಳ್ಳ-ಕೊಳ್ಳಗಳು ಪ್ರ ರಾಷ್ಟ್ರೀಯತೆಯ ಧ್ವನಿಗಳಂತಹ ನದಿ, ತೊರೆಗಳು ಇಲ್ಲಿ ಹರಿದವು. ಕೆ. ವೆಂಕಟೇಶ ಪ್ರ ಎಂ. ಡಿ. ಅಧಿಕಾರಿಗಳಂತಹ ಉಜ್ವಲ ರಾಷ್ಟ್ರಾಭಿಮಾನಿ ಸ್ವಾತಂತ್ರ್ಯ ಹೋರಾಟದ ಈ ನೆಲ ಸೃಷ್ಟಿಸಿತು. ಕೆಲವರು ಕರ್ನಾಟಕ ಏಕೀಕರಣ ಕಾಲದವರೆಗ ಹೋರಾಟ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಹೋದರು. ತಮಗಿ ಭವಿಷ್ಯವನ್ನು ಕಡೆಗಾಣಿಸಿ ಸ್ವಾತಂತ್ರ್ಯ ಸಮರಾಗ್ನಿಯಲ್ಲಿ ತಮ್ಮನ್ನು ತಾವು ಅ ತ್ಯಾಗಮಯಿಗಳು ಇವರು. ಇವರ ದಿವ್ಯ ತ್ಯಾಗಮಯ ಜೀವನ ಸರ್ವಕಾಲಕ್ಕೂ ದಾರಿದಿ ಯತೆಯ ಭಾವ ಕ್ಷಣಕ್ಷಣಕ್ಕೂ ಕುಗ್ಗುತ್ತಿರುವ ಈ ಕಾಲಕ್ಕಂತೂ ಈ ದೀಪ ಅತ್ಯಾವಶ್ಯಕ.

*　　*　　*

ಗ್ರಂಥ ಋಣ

1. ಡಾ। ಸೂರ್ಯನಾಥ ಕಾಮತ್

— "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು"

2. ಕೆ. ನರಸಿಂಹ ಪ್ರಭು

— "ನಮ್ಮ ಪೂಜ್ಯ ತಂದೆ ಕೆ. ವೆಂಕಟೇಶ ಪ್ರಭುಗಳು"

II. ಸಂಸ್ಕೃತಿ

ಸಂಸ್ಕೃತಿ ಬೆಳೆಯಬೇಕಾದರೆ ಅದಕ್ಕೆ ತಕ್ಕ ಪರಿಸರಬೇಕು. ಅರಾಜಕತೆ, ಅಶಾಂತಿಯಿದ್ದಲ್ಲಿ ಸಂಸ್ಕೃತಿ ಬೆಳೆಯುವುದಿಲ್ಲ. ಪ್ರಖ್ಯಾತ ಇತಿಹಾಸಕಾರ ವಿಲ್‌ಡ್ಯೂರಾಂಡ್‌ನ ಪ್ರಕಾರ ಯಾವಾಗ ಅರಾಜಕತೆ, ಅಶಾಂತಿ ಕೊನೆಗಾಣುತ್ತದೋ ಆಗ ಸಂಸ್ಕೃತಿ ಪ್ರಾರಂಭವಾಗುತ್ತದೆ. ಕಾರ್ಕಳ ಹಾಗೂ ಅದರ ಪರಿಸರದಲ್ಲಿ ಬೆಳೆದ ಸಂಸ್ಕೃತಿಯೂ ಹಾಗೆಯೇ. ಜಿಲ್ಲೆಯ ಇತರೆಡೆಗಳಲ್ಲಿ ಬೆಳೆದ ಸಂಸ್ಕೃತಿಗಿಂತ ಭಿನ್ನವಾಗಿಲ್ಲದಿದ್ದರೂ ಪ್ರಕೃತಿಯ ಮಡಿಲಲ್ಲಿ ಪುಟಗೊಂಡ ಇದು ನೈಜಸ್ವರೂಪವನ್ನು ಹೊಂದಿದೆ. ದೀರ್ಘಕಾಲ ರಾಜಕೀಯ ಕ್ಷೋಭೆ ತರುವಂತಹ ಪರಕೀಯ ಧಾಳಿಗಾಗಲೀ, ದಾಸ್ಯಕ್ಕಾಗಲಿ ಸಿಲುಕದೆ ಗಂಗಾಮೂಲದ ತುಂಗಾ ಜಲದಷ್ಟೇ ಶುಭ್ರವಾಯಿತು ಈ ನೆಲ. ಇಲ್ಲಿ ಚಿಗುರೊಡೆದ ಸಂಸ್ಕೃತಿ ಸಹ ಅಷ್ಟೇ ಶುಭ್ರ.

ಸುಮಾರು ಒಂದು ಸಾವಿರಕ್ಕೂ ಹೆಚ್ಚು ವರ್ಷಗಳ ಕಾಲದ ದೀರ್ಘ ರಾಜಕೀಯ ಹಿನ್ನೆಲೆ ಶಾಂತ ವಾತಾವರಣವನ್ನು ಸೃಷ್ಟಿಸಿತು. ಆಳುಪರು, ಶಾಂತಾರರು, ಅಜಿಲರು, ಚೌಟರು, ತೋಳಹರು, ಕಳಸ ಕಾರ್ಕಳದರಸರು, ವಿಜಯನಗರ ಸಾಮ್ರಾಜ್ಯದ ಅಧಿಕಾರಿ ಸಾಮಂತವರ್ಗದವರು – ಎಲ್ಲರೂ ಇಲ್ಲಿಯ ಸಂಸ್ಕೃತಿ ಬೆಳವಣಿಗೆಗೆ ತಂತಮ್ಮ ಕಾಣಿಕೆಗಳನ್ನು ಅರ್ಪಿಸಿದ್ದಾರೆ. ಆಳ್ವಿಕೆಯ ಕಾಲದುದ್ದಕ್ಕೂ ಧರ್ಮಾಂಧತೆಗೆ ಬದಲು ಧರ್ಮಭೀರುತನವನ್ನು ಪ್ರಕಟಿಸಿದ್ದಾರೆ. ಪ್ರೀತಿ, ಸಹಬಾಳ್ವೆಗೆ ಸೋಪಾನ ಹಾಕಿದ್ದಾರೆ. ತನ್ಮೂಲಕ ಕೀರ್ತಿಶಿಖರ ಏರಿದ್ದಾರೆ.

ಕಾರ್ಕಳ ಭಾಗದಲ್ಲಿ ಬೆಳೆದ ಸಂಸ್ಕೃತಿಯು ಇಲ್ಲಿನ ಸಮಾಜ, ಧರ್ಮ ಹಾಗೂ ಕಲಾಮಾಧ್ಯಮ ಗಳಲ್ಲಿ ಅಭಿವ್ಯಕ್ತಗೊಂಡಿದೆ. ಈ ಮಾಧ್ಯಮಗಳ ತ್ರಿವೇಣೀ ಸಂಗಮವೇ ಕಾರ್ಕಳದ ಕೊಡುಗೆ.

ಕಾಲೋಚಿತವಾಗಿ ಜನಜೀವನ, ಸಾಮಾಜಿಕ ವ್ಯವಸ್ಥೆಗಳಲ್ಲಿ ನಡೆಯುವ ಪರಿವರ್ತನೆಗಳು ಕಾರ್ಕಳದಲ್ಲೂ ಆಗಿವೆ. ಕಾಲಾಂತರದಲ್ಲಿ ಕಾರ್ಕಳ ಸಮಾಜವು ಜೈನ ಮತ್ತು ಜೈನೇತರ ಎಂಬ ಎರಡು ಪ್ರಮುಖ ಭಾಗಗಳನ್ನು ಹೊಂದಿತು. ಆಳುವವರನ್ನು ಅನುಸರಿಸುವ ವಿಧಾನ ಬೆಳೆಯಿತು. ನಾನಾ ಕಾರಣಗಳಿಂದಾಗಿ ಆಳುವ ಹಾಗೂ ಅಧಿಕಾರಿ ವರ್ಗದಲ್ಲಿ ವೈವಾಹಿಕ ಸಂಬಂಧಗಳೇರ್ಪಟ್ಟವು. ಮಧ್ಯ ಯುಗದಲ್ಲಿ ಜೈನರಾಜರ ಪ್ರಭಾವವೇ ಇದ್ದುದರಿಂದ ಜೈನ–ಜೈನೇತರ ಸಂಬಂಧಗಳು ಬೆಳೆದವು. ಶ್ರೀಮಂತ ವರ್ಗದಲ್ಲಿ ತಮ್ಮ ಅಂತಸ್ತನ್ನು ಉಳಿಸಿಕೊಳ್ಳುವ ಸಲುವಾಗಿ ಈ ರೀತಿಯ ಸಂಬಂಧಗಳು ಏರ್ಪಟ್ಟುವು. ಸಾಮಾನ್ಯ ವರ್ಗ ಇದನ್ನು ಸಂಪೂರ್ಣ ಅನುಸರಿಸದಿದ್ದರೂ ಅನುಮೋದಿಸಿತು. ಈ ತೆರನಾದ ಸಂಬಂಧ ಹೆಚ್ಚಾಗಿ ಜೈನ ಮತ್ತು ಬಂಟರಲ್ಲಿ. ಇದರಿಂದ ಕೊಟ್ಟು ತಂದ ಮನೆಗಳೆರಡರಲ್ಲೂ ಆಚಾರ, ವ್ಯವಹಾರಗಳ, ಕಟ್ಟುಸಂಪ್ರದಾಯಗಳ ಸಂಕರವಾಯಿತು. ಇದರ ಕುರುಹುಗಳನ್ನೂ ಸಂಪ್ರದಾಯದ ಅನುಸರಣೆಯನ್ನೂ ಈಗಲೂ ನಾವು ಕೆಲವು ಹಿರಿಯ ಮನೆಗಳಲ್ಲಿ ಕಾಣುತ್ತೇವೆ.

ಗೋತ್ರಕ್ಕೆ ಸಮಾನವಾದ ಬಳಿಗಳು ಜೈನ ಹಾಗೂ ಬಂಟರಲ್ಲಿ ಬೆಳೆದುವು. ಬಳಿಯ ಮೂಲ ಸಾಮಾನ್ಯವಾಗಿ ಹುಟ್ಟಿನಿಂದ. ಆದರೆ ವೃತ್ತಿ ಮತ್ತು ವೈವಾಹಿಕ ಸಂಬಂಧಗಳಿಂದಲೂ ಬಳಿಗಳು ಹುಟ್ಟಿ ದವುಗಳ ಸಂಖ್ಯೆ ಹೆಚ್ಚಾಯಿತು. ಒಂದೇ ತೆರನಾದ ಬಳಿಗಳು ಜೈನ ಹಾಗೂ ಬಂಟರಲ್ಲಿರುವುದನ್ನು

ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಬಹುತೇಕ ಬಳಿಗಳು ಈಗಲೂ
ಬಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿತ್ತು. ಆದರೆ ವ್ಯಾಪಾರ, ವಾಣಿಜ್ಯ ವ್ಯವ
ತರುವಂತಹವಾಗಿತ್ತು. ಉದ್ಯೋಗದ ಅವಕಾಶಗಳು ವಿಪುಲವಾಗಿದ್ದವು. ವೃತ್ತಿಯ
ಇರಲಿಲ್ಲ. ಆದರೆ ರಾಜ್ಯ ವಿಸ್ತಾರವಾಗಿದ್ದುದರಿಂದ ಎಲ್ಲ ರೀತಿಯ ವೃತ್ತಿ, ಕಸುಬು,
ಇದ್ದವು. ಜನಬಳಕೆಯ ಸಾಮಾನುಗಳು ಮತ್ತು ಆಹಾರ ಪದಾರ್ಥಗಳ ಉತ್ಪಾದನ
ತೆಯ ಮಟ್ಟ ಮುಟ್ಟಿತ್ತು. ಇದು ರಾಜ್ಯವನ್ನು ಆರ್ಥಿಕವಾಗಿ ಮುನ್ನಡೆಸಿತು. ಈ ಆ
ಕಳಸ–ಕಾರ್ಕಳದ ಅರಸರನ್ನು ಶಕ್ತಿಶಾಲಿಗಳನ್ನಾಗಿ ಮಾಡಿದುದು.

ಕಾರ್ಕಳ, ಕಳಸ, ಕೆರವಾಸೆ, ಪುತ್ತಿಗೆ, ಮೂಡಬಿದುರೆ, ಮುದ್ರಾಡಿ ಮತ್ತು
ನಗರಗಳಾಗಿ ಬೆಳೆದವು. ಇಲ್ಲಿನ ಸಮಾಜವು ವೈವಿಧ್ಯಮಯವಾಯಿತು. ಕ್ರಿ.ಶ.
ಶಾಸನವೊಂದು ಮೂಡಬಿದುರೆ ನಗರದ ಸುಂದರ ವರ್ಣನೆಯನ್ನು ಕೊಡುತ್ತದೆ.

ಪುರಮೊಪ್ಪಿಪ್ಪುದು ವಂಶವೆಂಬ ಪೆಸರಿಂ ಬಾಹ್ಯಪ್ರದೇಶಂಗಳೊಳ್
ವರಶಾಲೇಯದಿನಿಕ್ಕು ಶಾಕಟದಿನಾರಾಮಂಗಳಿಂ ಸುತ್ತಿದಾ ।
ಪರಿಖಾಂತಃ ಪರಿಧಿ ಪ್ರತೋಳಿಗಳಿನುದ್ಯತ್ಕೇತನ ವ್ರಾತದಿಂ
ದುರು ಜೈನಾಲಯ ರಮ್ಯ ಹರ್ಮ್ಯ ಜಯದಿಂ ಪುಣ್ಯಾಂಗನಾಸಂಗದಿಂ
ಘನ ವಕ್ಷೋರುಹಹಾರಭಾರ ವಿಚಲನ್ಮಧ್ಯಂ ಮನಃಪ್ರೀತ
ರೊಂದನುರಾಗಕ್ಕೆಡೆಯಾಗೆ ಸಂಚರಿಪ ನಾರೀವೃದದಿಂ ಸಾರಕಾ ।
ವ್ಯನವಾರ್ತ್ತಾಮೃತ ಸೇವೆಯಿಂ ತಣಿವ ಕಾವ್ಯಪ್ರೌಢರಿಂ ರತ್ನಕಾಂ-
ಚನ ಚೀನಾಂಬರ ವಿಕ್ರಯಕ್ರಯಿಕರಿಂ ಚೆಲ್ವಾದುದೆತ್ತಪುರಂ ॥

ಮತ್ತೊಂದು ಶಾಸನವು ಈ ನಗರವನ್ನು "ತುಳು ದೇಶಕ್ಕೆ ವಿಶಿಷ್ಟ ಮಪ್ಪ ನ
ನಾಮಂ ಪುರಂ" ಎಂದು ವರ್ಣಿಸಿದೆ. ಇಲ್ಲಿಯ ಮಹಾಜನರು ಹೇಗಿದ್ದರೆಂದರೆ —

ಪರಪುರುಷಾರ್ತ್ಥಗಳುದಾರ ವಿನೋದರುಂ ದಾನಶೀಲರುಂ
ಗುರುಜನ ಭಕ್ತರಂ ಕವಿಜನಸ್ತುತರೂರ್ಜ್ಜಿತಕೀರ್ತ್ತಿಕಾಂತರುಂ ।
ಪರಮದಯಾಪರರ್ಪ್ಪರಹಿತಾ ಚರಣರ್ಜ್ಜಿನಮಾರ್ಗ
ದೀಪಕರ್ದ್ದರೆಯೊಳದೇನ ಬಣ್ಣಿಪೆನು ವೇಣುಪುರಸ್ಥ ಮಹಾಜನಂಗಳ

ಕವಿ ಚೆನ್ನರಚಂದ್ರಮನು ಕಾರ್ಕಳ ನಗರದ ಸುಂದರ ವರ್ಣನೆಯನ್ನು ಕೊ
ಪ್ರಕಾರ ಇದು ಎಂತಹ ನಗರ! ಎಲ್ಲೆಲ್ಲೂ ರಾಜಬೀದಿಗಳು. ಅದಕ್ಕೊಪ್ಪುವ ಸ
ಪಾಂಡ್ಯನಗರಿ ಎಂದು ಶೋಭಿಸುವ ಬೆಟ್ಟದಂಗಡಿ, ಜೈನ ಗೇಹಗಳ ಕೇಂದ್ರವಾದ ಹಿ
ಮಾಂಡಲೀಕರ, ದಂಡನಾಯಕರ, ಚಿನಿವಾರರ, ಮಣೆಗಾರರ, ಪುಂಡರೀಕರ, ಕಂಚು
ಈ ನಗರ ಶೋಭಿಸುತ್ತಿತ್ತು. ಆ ಕಂಚುಗಾರರ ಕೇರಿಯಾದರೂ ಹೇಗಿತ್ತೆಂದರೆ —

ಅಂಬರದೊಳಗಾಧಾರವಿಲ್ಲೆಂದು ಕು ।
ಟುಂಬ ಸಹಿತ ಚಂದ್ರರೆಲ್ಲ ॥
ಇಂಬಾದ ಕಂಚುಗಾರರ ಕೇರಿಯೊಳಗ ಬೀ ।
ಡಂ ಬಿಡಿಸಿದಂತೊಪ್ಪುತಿಹವು ॥

ಇಂತಹ ನಗರದಲ್ಲಿ ಗಣಿಕೆಯರ ಕೇರಿಯೂ ಇರುವುದಲ್ಲವೆ! ಇನ್ನೂ ಆ ಸುತ್ತಾಡು
ಬೆಲ್ಲಕ್ಕೆ ಮುತ್ತುವ ನೊಣಗಳಂತೆ ವಿಟರನ್ನು ಸುತ್ತುವ ಸೂಳೆಯರು. ಇವರ

...ಣ್ಣಗಳ ಸಂಗವಿಲ್ಲದೆ ನರರಿಗೆ ಕಲೆಯು ಜಾಣ್ಮೆಗಳಿಲ್ಲವೆಂದು ಛಲವ ಪುಟ್ಟಿಸಿ ರಾಜ ವಿಟರನು ..." ಕಲೆಗಾತಿಯರು. ಇವರಲ್ಲದೆ ಪರಿಮಳದ ಹೂಮಾಲೆ ಕಟ್ಟುವ ಹೂವಾಡಗಿತ್ತಿಯರು. ...ಸಹ ವಯ್ಯಾರಿಗಳು.

...ಈ ನಗರದ ಮಧ್ಯೆ ರಾಜನರಮನೆ. ಬಣ್ಣದ ಚಾವಡಿ, ನಾಟಕ ಶಾಲೆ, ಭೋಜನ ಶಾಲೆ, ಆಯುಧಾ ...ಂಹಾಸನ ಮಂಟಪ, ದಿವಾಣಸಗ್ಗ, ರಾಣೀವಾಸ ಇವುಗಳಿಂದ ಆ ರಾಜಮಂದಿರ ಶೋಭಿಸುತ್ತಿತ್ತು.

...ಂತಹ ಚೆಲ್ವಾದ ನಗರ ಚಂದ್ರಮನಿಗೆ ದೇವನಗರಿಯಂತೆ ಕಂಡಿದ್ದರೆ ಆಶ್ಚರ್ಯವಿಲ್ಲ. ಆತ ...ನ್ನನೆ –

...ನಾಕಿನ್ನು ಬಹುಮಾತು ನಾಕಲೋಕವೆ ಬಂದು ।
ಶ್ರೀ ಕಾರಕಳದಾಕೃತಿಯು ॥
...ಾಕಂಡು ಧರಿಸಿತೊ ಯೆಂಬಂತೆ ಲೋಕಕ ।
ನೇರ ವಿಸ್ಮಯುವ ಪುಟ್ಟಿಪುದು ॥

...ಾರ್ಕಳದ ಈ ಚಿತ್ರವನ್ನು ಕೊಡುವಲ್ಲಿ ಚಂದ್ರಮಕವಿ ತುಂಬಾ ಯಶಸ್ವಿಯಾಗಿದ್ದಾನೆ. ...ಖ ಕೇಂದ್ರವಾಗಿ ಮೂಡಬಿದುರೆ ಸಹ ಹೀಗೆಯೇ ಇದ್ದಿರಬಹುದು. ಆದರೆ ಕೇರಿ ಕೇರಿಗಳ, ...ುರ ವರ್ಣನೆ ಶಿಷ್ಟಾಚಾರಕ್ಕೆ ವಿರುದ್ಧವಾದುದೆಂಬ ಭಾವನೆ ಪ್ರಾಯಶಃ ಕವಿಗಳಲ್ಲಿ ಮೂಡಿ ಅದರ ...ೆ ಮಾಡದೆ ಇರಬಹುದು. ಚಂದ್ರಮ ಎಲ್ಲ ಶಿಷ್ಟಾಚಾರಗಳಿಗೆ ಒಳಗಾಗಿದ್ದರೂ ಸಮಾಜದ ...ಂದು ಮುಖವನ್ನು ವಿವರಿಸದಿದ್ದರೆ ಅಪಚಾರವೆಸಗಿದಂತೆ ಎಂಬ ಭಾವನೆಯಿಂದ ನಗರದ ಎಲ್ಲ ...ಕೇರಿಗಳನ್ನು ವರ್ಣಿಸುತ್ತಾನೆ. ಈ ರೀತಿಯ ನಿಷ್ಠೆ ಎಷ್ಟು ಜನ ಕವಿಗಳಲ್ಲಿರಲು ಸಾಧ್ಯ?

...ಕವಿ, ಗಮಕಿ, ವಾದಿ, ವಾಗ್ಮಿಗಳು ಈ ನಗರದಲ್ಲಿದ್ದರು. ಕವಿ ಹಾಗು ಸಾಹಿತ್ಯಕ್ಕೆ ಪ್ರೋತ್ಸಾಹವಿತ್ತು. ...ತೆ ವಿದ್ಯಾ ಪ್ರಸಾರಕ್ಕೂ ಜನ ಮನಸ್ಸು ಹರಿಸಿರಬೇಕು. ದೇವಸ್ಥಾನ, ಮಠ, ಗುರುಮನೆಗಳೇ ...ಳಾಗಿದ್ದಿರಬೇಕು. ದುರದೃಷ್ಟವಶಾತ್ ಇವುಗಳ ವಿವರಣಾತ್ಮಕ ವರ್ಣನೆ ಎಲ್ಲೂ ದೊರೆಯು... . ಮೂಡಬಿದುರೆ, ಕಾರ್ಕಳ ಹಾಗು ಜೈನ ಮಠಗಳು ವಿದ್ಯಾ ಪ್ರಸಾರದ ಕೇಂದ್ರಗಳಾಗಿದ್ದವು. ... ದಾನಕ್ಕಾಗಿ ಮೂಡಬಿದುರೆ ಮತ್ತು ಕಾರ್ಕಳಗಳಲ್ಲಿ, ಹೊನ್ನು ದಾನ ಮಾಡಿದ ಎರಡು ಘಟನೆ ... ಬಿಟ್ಟರೆ ಬೇರಾವ ವಿವರವೂ ದೊರಕುವುದಿಲ್ಲ. ವಿದ್ಯಾಭ್ಯಾಸಗಳನ್ನು ಬಿಟ್ಟರೆ ಬೇರಾವ ವಿವರವೂ ...ಕುವುದಿಲ್ಲ. ವಿದ್ಯಾಭ್ಯಾಸಕ್ಕಿದ್ದ ಕುಂದು ಕೊರತೆ ಏನೇ ಇದ್ದರೂ ಕಾರ್ಕಳ ಮತ್ತು ಮೂಡಬಿದುರೆ ... ಊರು. ವೃತ್ತ ವಿಲಾಸ, ಕಲ್ಯಾಣಕೀರ್ತಿ, ಯಶಃಕೀರ್ತಿ, ಬಾಹುಬಲಿ, ವರ್ಧಮಾನ, ರತ್ನಾಕರ ...ಣ್ಣ, ಚಂದ್ರಮ, ಶಾಂತಿಕೀರ್ತಿಗಳಂತಹ ಕವಿ ಪುಂಗವರನ್ನು ಸೃಷ್ಟಿಸಿತು ಕಾರ್ಕಳದ ನಾಡು.

... ಮೇಲೆ ಹೇಳಿದವರೆಲ್ಲಾ ಜೈನ ಕವಿಗಳಾದರೆ ಪಟ್ಟಾಭಿರಾಮನೆಂಬ ಬ್ರಾಹ್ಮಣ ಕವಿ ಜೈನ ಮುನಿಗಳ ...ನುಸಾರ ಮೂಡಬಿದುರೆಯಲ್ಲಿ ಕಾವ್ಯ ರಚಿಸಿದ್ದ.

... ಇವರುಗಳಲ್ಲದೆ ಅಜ್ಞಾತ ಕವಿಗಳನೇಕರಿದ್ದರು. ಮೂಡಬಿದುರೆ, ಕಾರ್ಕಳ, ಚಾರ, ವರಂಗ ...ದಿ ಊರುಗಳಲ್ಲಿ ದೊರೆತಿರುವ ಕಾವ್ಯ ಸದೃಶ ಶಾಸನಗಳ ಕರ್ತೃಗಳೂ ಅಜ್ಞಾತರಾಗಿಯೇ ಇದ್ದಾರೆ, ...ಭೈರವರಾಜನ ಶಾಸನವೊಂದು ಮೂಡಬಿದುರೆಯ ಹೊಸ ಬಸ್ತಿಯಲ್ಲಿದೆ. ಕಾವ್ಯಮಯವಾಗಿರುವ ...ಾಸನದ ಕರ್ತೃ ಆದಿಯಪ್ಪ ಎಂಬುದು ಇತ್ತೀಚಿನ ಸಂಶೋಧನೆಯಿಂದ ತಿಳಿದು ಬಂದಿದೆ. ಇದೇ ...ಟಿಲ್ಲಿ ಮೂಡಬಿದುರೆಯ ಮತ್ತೊಂದು ಶಾಸನವನ್ನು ಸಾಳ್ವ ಕವಿ ರಚಿಸಿದ್ದಾನೆಂದು ತಿಳಿದು ...ೆ. ಈ ಇಬ್ಬರು ಕವಿಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿಲ್ಲವಿದ್ದರೂ ಇತರ ಆಧಾರಗಳ ...ಸುದಿಂದ ಈ ನಿರ್ಧಾರಕ್ಕೆ ಬರಲಾಗಿದೆ.

ಧರ್ಮ :

ಸಮಾಜದ ಒಂದು ಅವಿಭಾಜ್ಯ ಅಂಗ ಧರ್ಮ. ಅಂತರಂಗ ಬಹಿರಂಗಗಳೆರಡರಲ್ಲೂ ಗೊಳ್ಳುವ ಪ್ರವೃತ್ತಿ ಇದು. ವ್ಯವಸ್ಥಿತ ಸಮಾಜದಲ್ಲಿ ಧರ್ಮ ಹಸನಾಗಿ ಬೆಳೆಯುತ್ತದೆ. ಸೀಮೆಯಲ್ಲಿ ಸುರಾಜ್ಯ ಸ್ಥಾಪನೆಯಾಗಿದ್ದುದರಿಂದ ಧರ್ಮದ ಬೆಳವಣಿಗೆಗೆ ಯಾವ ಕಾಲದಲ್ಲಿ ಬರಲಿಲ್ಲ.

ಆಳುಪರ ಕಾಲದಲ್ಲಿ ಶೈವ ಧರ್ಮ ಇಲ್ಲಿ ನೆಲೆಯೂರಿತು. ಶಿವ ದೇವಾಲಯಗಳ ನಿರ್ಮಾ ಇದು ಅಭಿವ್ಯಕ್ತಗೊಂಡಿತು. ಕಾಂತಾವರ, ನಂದಳಿಕೆ ಮತ್ತು ಪೆರ್ವಾಜೆಗಳಲ್ಲಿ ಶಿವ ದೇವಾ ನಿರ್ಮಾಣವಾಯಿತು. ಕ್ರಮೇಣ ಶಿವಾಲಯಗಳ ಸಂಖ್ಯೆ ಹೆಚ್ಚಿತು. ಶಕ್ತಿ ಆರಾಧನೆಯೂ ಇಲ್ಲಿ ವಾಗಿತ್ತೆನ್ನುವುದು ಬೆಳ್ಮಣ್ಣು ದುರ್ಗಾಪರಮೇಶ್ವರಿ ದೇವಾಲಯದಿಂದ ವ್ಯಕ್ತವಾಗುತ್ತದೆ. ಅತ್ಯಂತ ಪ್ರಾಚೀನ ಹಾಗು ಆಳುಪರಾಜರ ಏಕೈಕ ತಾಮ್ರ ಶಾಸನ ದೊರೆತಿರುವುದು ಈ ದೇವಾಲ ಇದೊಂದು ಹೆಮ್ಮೆಯ ಸಂಗತಿ.

ಕ್ರಿ.ಶ. 8ನೆಯ ಶತಮಾನದ ಮಧ್ಯ ಭಾಗಕ್ಕೆ ಸೇರುವ 2ನೆಯ ಆಳುವರಸನ ಈ ಶಾ ದೇವಿಯನ್ನು **"ಅತಿನುತೆ ವಿನ್ಧ್ಯ ವಾಸಿನಿ ಮಹಾಮುನಿಸೇವಿತೆ"** ಎಂದು ಸ್ತುತಿಸಲಾಗಿದೆ.

ಮೂಡುಬಿದುರೆಯ ಪ್ರಾಂತದಲ್ಲೂ ಗೌರಿ ದೇವಾಲಯವು ಧರ್ಮ ಕಾರ್ಯ ಪ್ರಕಟ ವಾಗಿ ಹುಟ್ಟಿಕೊಂಡಿತು.

10 – 11ನೆಯ ಶತಮಾನಗಳಲ್ಲಿ ವೇಣುಗೋಪಾಲ, ವಿಷ್ಣುಮೂರ್ತಿ ಹಾಗೂ ಜ ದೇವಾಲಯಗಳ ನಿರ್ಮಾಣ ರಾಜ್ಯದ ಬಹುಭಾಗಗಳಲ್ಲಿ ಆಯಿತು.

ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿ ಜನ ಧಾರ್ಮಿಕ ಆಚಾರ, ವಿಚಾರಗಳಲ್ಲಿ ರ ಅನುಸರಿಸುತ್ತಿದ್ದರು. ಇದೇನೂ ಕಡ್ಡಾಯವಾಗಿರಲಿಲ್ಲ. ಆದರೂ ಸ್ವಪ್ರೇರಣೆಯ ಚಾಲು ಇ ರಾಜರುಗಳು ಇದರ ದುರ್ಲಾಭ ಪಡೆಯಲಿಲ್ಲ. ಅಷ್ಟೆ ಅಲ್ಲ, ಧರ್ಮದ ಹೆಸರಿನಲ್ಲಿ ಸಂಘ ಒಂದೇ ಒಂದು ಕುರುಹೂ ಇತಿಹಾಸದಲ್ಲಿ ದೊರಕುವುದಿಲ್ಲ. ಜನರ ಧಾರ್ಮಿಕ ಸ್ವಾತಂತ್ರ್ಯವನ್ನೂ ಕಟ್ಟು ನಿಟ್ಟಾಗಿ ಪಾಲಿಸಿದ್ದರು. ಇದರಿಂದ ಧಾರ್ಮಿಕ ಆಚರಣೆಗಳು ಬೆಳೆದವೇ ಹೊರತು ವಾಗಲಿಲ್ಲ.

ಆಳುಪರ ನಂತರ ಕಾರ್ಕಳದ ವಿಸ್ತಾರ ಭಾಗವನ್ನು ಜೈನ ರಾಜರುಗಳು ಆಳಿದರು. ಇವ ದಲ್ಲಿ ಜೈನ ಮತ್ತು ಹಿಂದೂ ಧರ್ಮಗಳು ಒಟ್ಟಾಗಿಯೇ ಬೆಳೆದವು. ಬಸದಿ ದೇವಾಲಯಗ ಸಂಖ್ಯೆಯಲ್ಲಿ ವೃದ್ಧಿಗೊಂಡವು. ರಾಜರು ಹಾಗು ಅವರ ಸಾಮಂತರು ಎರಡಕ್ಕೂ ದಾನ ಗಳನ್ನು ಮಾಡಿದರು. ಮಿಗಿಲಾಗಿ ತಮ್ಮ ಮನೆದೇವರಾದ ತೀರ್ಥಂಕರರನ್ನಷ್ಟೆ ಅಲ್ಲದೆ ಊರ ದೇ ತಮ್ಮ ಆರಾಧ್ಯ ಮೂರ್ತಿಗಳನ್ನಾಗಿ ಮಾಡಿಕೊಂಡರು. ಚೌಟರಿಗೆ ಪುತ್ತಿಗೆಯ ಸೋಮನಾ ಸರ್ವಸ್ವವಾದ. ಕಳಸ-ಕಾರ್ಕಳದ ಅರಸರಿಗೆ ಕಳಸದ ಕಳಸೇಶ್ವರ, ಕೆರವಾಸೆ, ಮಿಯಾರು, ಪೆರು ಮಹಾಲಿಂಗೇಶ್ವರ ಆರಾಧ್ಯ ದೇವರಾದರು. ಮಾಳ. ಅಜೆಕಾರು, ಹೆರ್ಮುಂಡೆಗಳಲ್ಲಿನ ಜನ ಓರಿಯುಂಗಡಿ, ಕಾಬೆಟ್ಟುಗಳ ವೇಣುಗೋಪಾಲ ಸಹ ಇವರಿಂದ ಪೂಜೆಗೊಳಗಾಗಿ ದಾನ ಗಳನ್ನು ಪಡೆದಿವೆ. ಅದಕ್ಕೆ ಶಾಸನಾಧಾರಗಳು ಇರುವುದನ್ನು ಕಾಣಬಹುದು. ಕಾಂತಾವರದ ಕಾಂ ಇವರಿಗೆ ಅಷ್ಟೇ ಪವಿತ್ರವಾದುದು. ಲೋಕನಾಥ ದೇವರಸನ ಶಾಸನವೊಂದರಲ್ಲಿ ರಾಜನನ್ನು **"ಶ್ರೀ ಶೇಶ್ವರ ದೇವರ ದಿವ್ಯಪದ್ಮಾರಾಧಕರುಮಪ್ಪ ಲೋಕನಾಥ ದೇವರಸರು"** ಎಂದು ನಂದಳಿಕೆಯ ದೈವಗಳೂ ಅಷ್ಟೆ. ಜೈನ ಜೈನೇತರರೆಲ್ಲರನ್ನೂ ಒಂದೇ ನೆಲೆಗಟ್ಟಿನಲ್ಲಿ ಸೇರಿಸಿತ್ತು.

ಅರಸರ ಈ ತೆರನಾದ ಧಾರ್ಮಿಕ ಭಾವನೆ ದಕ್ಷಿಣ ಕನ್ನಡಕ್ಕೆ ವಿಶಿಷ್ಟವಾದುದು. ಮಲೆನಾಡಿನ ರರ ತವರು ಮನೆ.

ಳದ ಅರಸರ ಉದಾರ ನೀತಿಗೆ ಮತ್ತೊಂದು ಉದಾಹರಣೆ ಕೊಡಬಹುದು. ಪೋರ್ಚು ಗಮನದಿಂದ ಗೋವ ಹಾಗು ಕೊಂಕಣದ ಭಾಗಗಳು ಅಪಾರ ತೊಂದರೆಗೊಳಗಾದವು. ಪೋರ್ಚುಗೀಸರು ನಡೆಸಿದ ಕ್ರೂರ ಮತಾಂತರಕ್ಕೆ ಹೇಸಿ ಜನರು ಈ ಭಾಗದಿಂದ ಧರ್ಮ ಬೇರೆಡೆಗೆ ತೆರಳಿದರು. ಹೀಗೆ ಆಶ್ರಯ ಆರಸಿ ಬಂದ ಕೊಂಕಣಸ್ಥ ಜನರಿಗೆ (ಗೌಡಸಾರಸ್ವತರಿಗೆ) ರಾಜ ಆಶ್ರಯ, ರಕ್ಷಣೆಗಳನ್ನೊದಗಿಸಿದ. ಅವರುಗಳು ದೇವಾಲಯ ಮತ್ತು ಮನೆಗಳನ್ನು ಳ್ಳಲು ಸ್ಥಳದ ಸಹಾಯ ಸಹಕಾರಗಳನ್ನು ನೀಡಿದ. ಅಷ್ಟೆ ಅಲ್ಲದೆ ಬಂದವರ ಮೂಲ ಗವಾದ ವ್ಯಾಪಾರವನ್ನು ತನ್ನ ರಾಜ್ಯದೆಲ್ಲೆಡೆ ಯಾವ ಅಡ್ಡಿ ಆತಂಕಗಳಿಲ್ಲದೆ ನಡೆಸಿಕೊಂಡು ಅನುಕೂಲತೆ ಮಾಡಿಕೊಟ್ಟ. ರಾಜಧಾನಿಗಳಾದ ಕಳಸ ಮತ್ತು ಕಾರ್ಕಳಗಳಲ್ಲಿ ಇವರಿಗೆ ಳಗಳನ್ನು ಕೊಟ್ಟದ್ದೆ ಅಲ್ಲದೆ ಗೌರವದ ಸ್ಥಾನಮಾನಗಳನ್ನು ನೀಡಿದ. ಇದರಿಂದಾಗಿ ಗೌಡ ಬ್ರಾಹ್ಮಣ ಸಮಾಜ ಕಾರ್ಕಳ ರಾಜ್ಯದೆಲ್ಲೆಡೆ ಹರಡಿತು. ತಮ್ಮ ಆರಾಧ್ಯ ದೇವ ಶ್ರೀನಿವಾಸ ರಣ)ನ ದೇವಾಲಯಗಳನ್ನು ಕಳಸ ಮತ್ತು ಕಾರ್ಕಳ ರಾಜಧಾನಿಗಳಲ್ಲಿ ಈ ಸಮಾಜ ತು. ಕಸುಬಾದ ವ್ಯಾಪಾರದೊಂದಿಗೆ ಧಾರ್ಮಿಕ ಮನೋಭಾವವನ್ನು ಬೆಳೆಸಿಕೊಂಡ ಈ ಜನ ಏಳಿಗೆಗೆ ತಮ್ಮ ದೇಣಿಗೆಯನ್ನು ನೀಡಿದರು. ಆ ಕಾರ್ಯ ಈಗಲೂ ಮುಂದುವರಿದಿರುವು ವು ಕಾಣಬಹುದು.

ನ ಧರ್ಮ ಕದಂಬರ ಕಾಲಕ್ಕೆ ಇಲ್ಲಿ ಪ್ರಚಲಿತವಾಗಿತ್ತು. ಆಳುಪರ ಸಖ್ಯದಿಂದ ಅದು ವಿಶೇಷ ವೃದ್ಧಿಗೊಂಡಿತು. ಆಳುಪ ಮತ್ತು ಜೈನ ಶಾಂತಾರ ಅರಸು ಮನೆತನಗಳ ನಡುವಿನ ರಾಜ ಾಗು ವೈವಾಹಿಕ ಸಂಬಂಧ ಜೈನ ಧರ್ಮವನ್ನು ಮತ್ತಷ್ಟು ಸದೃಢಗೊಳಿಸಿತು. ಹೊಂಬುಚ್ಚ ರಾಂಗಗಳಲ್ಲಿರುವ ಶಾಸನಗಳು ಇದಕ್ಕೆ ಸಾಕಷ್ಟು ಪುರಾವೆ ನೀಡುತ್ತವೆ. ಶಾಂತರ ರಾಜ ಆಳುಪ ಕುಲಶೇಖರನ ನಂತರ ಈ ಭಾಗವನ್ನು ಆಳಿ ರಾಜ್ಯಕ್ಕೆ ರಕ್ಷಣೆವೊದಗಿಸಿದ. ಸಹ ತಮ್ಮ ಧರ್ಮ ರಕ್ಷಣಾ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಿದ್ದರು. ಕುಲಶೇಖರನ ಕಳ ಮಹಾದೇವಿಯು ವರಾಂಗ ನೇಮೀಶ್ವರ ಬಸದಿಯ ಬಳಿ ಒಂದು ಸುಂದರ ತಟಾಕವನ್ನು ಳು. ಅಲ್ಲದೆ ಬಸದಿಯ ಜೀರ್ಣೋದ್ಧಾರ ಕಾರ್ಯದಲ್ಲಿ ಪಾಲ್ಗೊಂಡಳು.

ರ್ಟಕದ ಅತ್ಯಂತ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳಲ್ಲಿ ವರಾಂಗವೂ ಒಂದು. ಶಾಸನದಲ್ಲಿ "ಶ್ರೀಮತ್ಪವಿತ್ರ ಮಕಳಂಕ ಮನಂತ ಕಲ್ಪಂ ಸ್ವಾಯಂ ಭುವಂ ಸಕಳ ಮಂಗಳ ಮಾದಿತೀರ್ಥಂ" ಕರೆಯಲಾಗಿದೆ. "ಸ್ವಾಯಂ ಭುವಂ" ಎನ್ನುವುದು ಇದರ ಅತ್ಯಂತ ಪ್ರಾಚೀನತೆಯನ್ನು ದ ವಿಶೇಷಣ ಅಷ್ಟೆ. ಅದರಿಂದಾಗಿಯೆ ಇದನ್ನು 'ಆದಿತೀರ್ಥ' ಎಂದು ಕರೆದದ್ದು. ಅಲೆವೂರು ಕುರುಳಿಕುಂದಗಳೂ ಸಹ ಇಷ್ಟೆ ಪ್ರಖ್ಯಾತವೂ, ಪವಿತ್ರವೂ ಆದ ಜೈನ ಕ್ಷೇತ್ರಗಳಾಗಿದ್ದವು. ರರ ಸಂಬಂಧ "ಕೋಟಿ ಕೂಟದ ಸಂಬಂಧ" ಎಂದು ಶಾಸನ ವರ್ಣಿಸುತ್ತದೆ.

ರಾಂಗ ಪವಿತ್ರ ಜೈನ ಕ್ಷೇತ್ರವಾಗಿದ್ದುದು ಅಲ್ಲಿದ್ದ ಪ್ರಾಚೀನತಮ ಜೈನ ಮಠದಿಂದ. ಜಗತ್ಪ್ರಸಿದ್ಧ ಘ ಕೊಂಡಕುಂದಾನ್ವಯ, ಕಾಣೂರ್ಗಣ, ಮೇಷ ಪಾಷಾಣ ಗಚ್ಛಕ್ಕೆ ಸೇರಿದ ಮುನಿ ಇಲ್ಲಿತ್ತು. ಇಡೀ ಕರ್ನಾಟಕಕ್ಕೇ ಮೇಷ ಪಾಷಾಣಗಚ್ಛ ಅಪರೂಪದ್ದಾಗಿದ್ದು ವರಾಂಗದಲ್ಲಿ ದಕ್ಕೆ ಮಾಹಿತಿ ದೊರೆಯುತ್ತದೆ. ಅಷ್ಟೆ ಅಲ್ಲ, ಇಡೀ ದಕ್ಷಿಣ ಭಾರತದಲ್ಲಿಈ ಗಚ್ಛಕ್ಕೆ ದೊರೆಯುವ ರಡೇ ಉದಾಹರಣೆಗಳಲ್ಲಿ ಇದೂ ಒಂದು.

ರಾಂಗದಂತೆ ಕಾರ್ಕಳ ಮತ್ತು ಮೂಡಬಿದುರೆಗಳಲ್ಲೂ ಜೈನ ಮಠಗಳು ಅನಂತರ ಹುಟ್ಟಿ . ಕಾರ್ಕಳ ಮಠವು ಲಲಿತ ಕೀರ್ತಿಮುನಿ ಪರಂಪರೆಯದ್ದಾದರೆ ಚಾರುಕೀರ್ತಿ ಮುನಿ ಪರಂ ದುಳ ಮೂಡಬಿದುರೆಯದು.

ಮುನಿ ಜನರ ಪ್ರಭಾವ ರಾಜರ ಹಾಗೂ ಧರ್ಮ ಬಾಂಧವರ ಮೇಲೆ ಅಪಾರವಾಗಿತ್ತು
ನಿರ್ಮಾಣ, ಗೊಮ್ಮಟ ಸ್ಥಾಪನೆ ಇತ್ಯಾದಿ ಧರ್ಮ ಕಾರ್ಯಗಳು ಇವರ ಅನುಮತದಿಂದ
ಮೂಡಬಿದುರೆಯು ದೂರ ದೂರದ ನಾಡಿನಿಂದ ಜನರನ್ನು ಆಕರ್ಷಿಸುತ್ತಿತ್ತು. ನಗಿರೆಯ
ಇಲ್ಲಿ ಕಟ್ಟಿದ ಹೊಸ ಬಸದಿಗೆ ಅಪಾರವಾದ ದಾನ ಧರ್ಮಗಳನ್ನು ಮಾಡಿದರು. ಈ ಧರ್ಮ
ಮಾಡುವಲ್ಲಿ ತಮ್ಮದೇ ಆದ ಶಿಷ್ಟಾಚಾರಗಳನ್ನು ಈ ಎರಡೂ ಕೇಂದ್ರಗಳು ಬೆಳೆಸಿಕೊಂಡವು

ಸಾಮಾನ್ಯ ವರ್ಗದ ಜನ ಧಾರ್ಮಿಕ ಪ್ರವೃತ್ತಿಯನ್ನು ಬೆಳೆಸಿಕೊಂಡು ಮುನಿ ಜನ
ಪಾತ್ರರಾದರು. ಉತ್ತಮ ಸೆಟ್ಟಿ ಎಂಬ ಜೈನ ಶ್ರೇಷ್ಠಿಯು ಮುನಿಗಳ ಉಪದೇಶದಿಂದ ಸಲ್ಲೇ
ಕೈಗೊಂಡು ಸಮಾಧಿ ಮರಣ ಹೊಂದಿದನು. ಈತನ ನಿಷಿಧಿಗೆ ಕಲ್ಲು ಮೂಡುಬಿದುರೆ
ಯಲ್ಲಿದೆ. ಮುಂದೆ ಚಂದ್ರಕೀರ್ತಿ ಎಂಬ ನಿರ್ವಾಣದ ಮುನಿ ಸನ್ಯಸನ ವಿಧಿಯಿಂದ ಸ್ವರ್ಗ
ಈಗ ನಾಯಿ ಬಸದಿ ಎಂದು ಕರೆಸಿಕೊಳ್ಳುವ ಕಲ್ಲ ಮಂಟಪವೇ ಈ ಮುನಿಗಳ ನಿಷಿಧಿಗೆ ಮಂಟ

ಮುನಿಗಳ ಪ್ರಭಾವ ಹೇಳುವಾಗ ಮೂಡಬಿದುರೆ ಸೇನಗಣದ ಸಮಂತ ಭದ್ರ ಮುನಿ
ಒಂದು ಮಾತು ಅವಶ್ಯಕ. ಮೂಡಬಿದುರೆಯ ಎರಡು ಕೇರಿಯ ಜನ ದೀಪಾವಳಿ ಹಬ್ಬದ ಸವ
ಮೋಜಿಗಾಗಿ ಹೊಡೆದಾಡಿ ರಕ್ತಸ್ರಾವ ಮಾಡುವ ಕ್ರಮ ಬೆಳೆದಿತ್ತು. ಜಿನಧರ್ಮಕ್ಕೆ ವಿರ
ಈ ಕ್ರಮವನ್ನು ತಪ್ಪಿಸಲು ಮುನಿ ತನ್ನ ಪರಿವಾರ ಸಮೇತ ಉಪವಾಸ ಮಾಡಿ ಜನರ
ವರ್ತಿಸಿದರು. ಅನಂತರ ಜನ ಬಸದಿಯಲ್ಲಿ ಲಕ್ಷ ದೀಪೋತ್ಸವ ಮಾಡುವ ಮೂಲಕ ಹಬ್ಬ
ವುದಾಗಿ ಪ್ರತಿಜ್ಞೆ ಕೈಗೊಂಡರು. ಈ ವಿಚಾರ ಇಲ್ಲಿನ ಶಾಸನವೊಂದರಿಂದ ತಿಳಿದು ಬರುತ್ತದೆ.

ಜೈನರು ಜೈನೇತರರೊಡನೆ ಬೆರೆಯುವಾಗ ಧಾರ್ಮಿಕ ವಿಚಾರದಲ್ಲಿ ಹೊಸ ಅನುಭವಗಳು
ದೇವಸ್ಥಾನಗಳಲ್ಲಿನ ಪೂಜಾಕ್ರಮ, ವಿಧಿ, ಉತ್ಸವಾದಿಗಳ ಪ್ರಭಾವ ಬಸದಿಗಳ ಪೂಜಾ
ಮೇಲೆ ಆಯಿತು. ವೈಭವದ ಉತ್ಸವ ರಥೋತ್ಸವಾದಿಗಳ ಆಚರಣೆಗೆ ಜೈನ ಸಮಾಜ ಮುಂದ
ದೇವಸ್ಥಾನಗಳಲ್ಲಿ ನಡೆಯುವ ಉತ್ಸವಾದಿ ರಥೋತ್ಸವಗಳಲ್ಲಿ ಜೈನ ಸಮುದಾಯ ಪಾಲ
ರೂಢಿ ಬೆಳೆಯಿತು. ಅಷ್ಟೆ ಅಲ್ಲ ಊರ, ಗ್ರಾಮದ ಪ್ರಮುಖ ದೇವಾಲಯಗಳು ಆಗು ಹೆ
ಮೇಲ್ವಿಚಾರ ಜವಾಬ್ದಾರಿ ಜೈನ ರಾಜರ, ಬಲ್ಲಾಳುಗಳ ಮೇಲಿತ್ತು. ದೇವಸ್ಥಾನಗಳಲ್ಲಿ ನ
ಪ್ರತಿಯೊಂದೂ ಕಾರ್ಯಕ್ರಮ ಪ್ರಾರಂಭವಾಗ ಬೇಕಾದರೆ ಇವರ ಹಾಜರಿ ಅತ್ಯಾವಶ್ಯಕವ
ಈ ಒಂದು ಸಂಪ್ರದಾಯವೇ ಬೆಳೆದು ಬಂತು. ಇದು ಸರ್ವಧರ್ಮ ಸಮನ್ವಯವನ್ನು
ವುದಾಗಿದೆ. ಅಲ್ಲದೆ ಇಲ್ಲಿ ಬೆಳೆದು ಬಂದ ಸಂಸ್ಕೃತಿಯ ಒಂದು ವಿಶೇಷ ಇದು.

ಸಮನ್ವಯತೆಯ ತಳಹದಿಯ ಮೇಲೆ ಜೈನ ಮತ್ತು ಜೈನೇತರರು ಒಂದುಗೂಡುವ
ಮುಖ್ಯ ಧಾರ್ಮಿಕ ಕಾರ್ಯಕ್ರಮವೆಂದರೆ ಭೂತದಕೋಲ. ಜೈನರಲ್ಲಿ ಭೂತ ಪೂಜೆಯು
ವಿಶೇಷವೇ ಸರಿ. ಈ ಪದ್ಧತಿ ದಕ್ಷಿಣ ಕನ್ನಡಕ್ಕೆ ಮಾತ್ರ ಸೀಮಿತವಾದದ್ದು.

ಭೂತಗಳೆಲ್ಲಾ ಘಟ್ಟದ ಮೇಲಿಂದ ಬಂದದ್ದು ಎಂಬ ಒಂದು ನಂಬಿಕೆ ಈ ಜಿಲ್ಲೆಯಲ್ಲಿದೆ.
ಅರಸರು ಘಟ್ಟದ ಮೇಲೆ ಹಾಗೂ ಕೆಳಗೆ ಆಳಿದವರು. ಭೂತ-ಕೋಲಕ್ಕೆ ಇವರ ಕೊಡುಗೆ ಮಹತ್ತ
ಬಹುದು. ಮೇಲಿನ ನಂಬಿಕೆಯ ಆಧಾರದ ಮೇಲೆ ಈ ಅನುಮಾನ ಸಹಜವಾಗಿಯೇ ಮೂಡು

ಕೆಳದಿ ಅರಸರ ಆಗಮನದಿಂದ ವೀರಶೈವ ಮತ ಇಲ್ಲಿಗೆ ಕಾಲಿರಿಸಿತು. ಜಂಗಮ ಮಠ
ವೀರಭದ್ರ ದೇವಸ್ಥಾನಗಳು ಅಲ್ಲಲ್ಲಿ ಹುಟ್ಟಿಕೊಂಡವು. ಕಾರ್ಕಳ ಮತ್ತು ಎಣ್ಣೆ ಹೊಳೆಗಳಲ್ಲಿನ
ಮಠಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಬಹುದು. ಇವಕ್ಕೆ ಹಲವಾರು ಕಡೆಗಳಲ್ಲಿ ದತ್ತಿ
ಗಳಿದ್ದವು ಕೆಲವು ಗದ್ದೆಗಳಿಗೆ ಮಠದಕಣಿ ಎಂಬ ಹೆಸರಿರುವುದನ್ನು ಈಗಲೂ ಕಾಣಬಹುದು.
ಕುಂಟಲಪಾಡಿಯಲ್ಲಿ ಮಠದ ಕೆರೆಯೊಂದಿದೆ. ಇದೊಂದು ವಿಶಾಲವಾದ, ಕೃಷಿ ಕಾರ್ಯ
ಕಟ್ಟಲ್ಪಟ್ಟ ಕೆರೆಯಾಗಿದ್ದು ಒಂದೆ ಇದರ ಸುತ್ತಲಿರುವ ಎಲ್ಲ ಜಮೀನು ಕಾರ್ಕಳದ ಜಂಗಮ

ಆದರ ಕುರುಹಾಗಿ ಕೆರೆಯ ಬಳಿ ಇರುವ ಒಂದು ಚಿಕ್ಕ ಬಸವಣ್ಣನ ದೇವಾಲಯವನ್ನು ನೋಡಬಹುದು. ನಾದುರಸ್ಥಿಯಲ್ಲಿರುವ ಈ ದೇವಾಲಯದ ವಿಗ್ರಹ ಚೆನ್ನಾಗಿದೆ.

ೀರಶೈವ ಮಠಗಳು ಇಲ್ಲಿನ ಜನಜೀವನದ ಮೇಲೆ ಯಾವುದೇ ಪ್ರಭಾವ ಬೀರಿದಂತೆ ಕಾಣುವು ೞದಿಯು ಅಧಿಕಾರದ ದರ್ಪ ಇರುವವರೆಗೆ ಈ ಮಠಗಳೂ ದರ್ಪ ತೋರಿರಬಹುದು. ಆದರೆ ಪತನಾನಂತರ ಈ ಮಠಗಳು ನೆಪ ಮಾತ್ರಕ್ಕೆ ಉಳಿದುಕೊಂಡವು. ಕೂಡಿಟ್ಟ ಕುಡಿಕೆಯ ತೆ ಮಠದ ಆಸ್ತಿ ಕರಗುತ್ತಾ ಹೋಯಿತು. ಈಗ ಇವುಗಳು ಪಳೆಯುಳಿಕೆಗಳಂತಾಗಿವೆ. ಹಾಗಾಗಿ ನ ಸಂಸ್ಕೃತಿಗೆ ವೀರ ಶೈವ ಧರ್ಮದ ಕೊಡುಗೆ ಏನು ಮತ್ತು ಎಷ್ಟು ಎಂಬುದನ್ನು ಹೇಳಲು ಲ್ಲ.

ಇಸ್ಲಾಂ ಧರ್ಮ ಕರಾವಳಿ ಭಾಗದಲ್ಲಿ ಇತ್ತೆನ್ನುವುದು ವಿಜಯನಗರ ಶಾಸನಗಳಿಂದ ತಿಳಿದು ದೆ. ಆದರೆ ಕಾರ್ಕಳದ ಮೇಲೆ ಇದರ ಪ್ರಭಾವ ವಿದ್ದುದು ಕಂಡು ಬರುವುದಿಲ್ಲ. ಪ್ರಾಯಶಃ ಲಿಯ ಆಗಮನದೊಂದಿಗೆ ಈ ಧರ್ಮ ಇಲ್ಲಿ ನೆಲೆಯೂರಿತು.

ಇದರಂತೆ ಕ್ರೈಸ್ತ ಧರ್ಮವೂ ಮಲೆನಾಡಿನ ಈ ಭಾಗಕ್ಕೆ ತಡವಾಗಿ ಆಗಮಿಸಿತು. 19ನೆಯ ನದಿಂದ ಎಂದರೆ ಬ್ರಿಟಿಷರ ಅಧಿಕಾರ ಇಲ್ಲಿ ಸ್ಥಾಪಿತವಾದಂದಿನಿಂದ ಈ ಧರ್ಮದ ಕಾರ್ಯವು ುಗೊಂಡಿತು. ಈಗ ತಾಲ್ಲೂಕಿನ ಎಲ್ಲೆಡೆ ಇದರ ಪ್ರಭಾವವನ್ನು ಕಾಣಬಹುದು.

, ಉತ್ಸವಗಳು:

ಸಾರ್ವಜನಿಕ ಉತ್ಸವ, ಜಾತ್ರೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು. ಇದರಲ್ಲಿ ವಿಶಿಷ್ಟತೆ ೇಕಾದರೆ ಅವುಗಳ ಆಚರಣೆಯನ್ನು ನೋಡಬೇಕು. ಪ್ರಾಚೀನ ಕಾಲದಿಂದಲೂ ಭವ್ಯ ಇತಿಹಾಸ ರೆಯನ್ನು ಬೆಳೆಸಿಕೊಂಡ ಕಾರ್ಕಳದ ವಿವಿಧ ಭಾಗಗಳಲ್ಲಿ ಸಾಂಸ್ಕೃತಿಕ ಪರಂಪರೆಯ ಜಾತ್ರೆ ಾದಿಗಳನ್ನು ಕಾಣಬಹುದು. ನವರಾತ್ರಿ ಮತ್ತು ಕಾರ್ತಿಕದ ಉತ್ಸವಗಳು ಸಾಮಾನ್ಯವಾಗಿ ಸಲ್ಪಡುವುವು. ಹೂವಿನ ಪೂಜೆ ಈಗ ದೇವಾಲಯಗಳಲ್ಲಿ ವಿಶೇಷವಾಗಿ ಆಚರಿಸಲ್ಪಡುವ ಉತ್ಸವ. ಆಧುನಿಕತೆಯ ಮೆರಗು. ಆದರೆ ರಥೋತ್ಸವಗಳು ಮಾತ್ರ ಪರಂಪರಾಗತ ರೀತಿಯಲ್ಲೆ ಸಾಧ್ಯ ಷ್ಟು ಮುಂದುವರೆದಿವೆ.

ಕಾರ್ಕಳದ ದೀಪೋತ್ಸವ, ಕಾರ್ಕಳ ಮತ್ತು ಮಾರ್ಪಾಡಿಯ ಮಾರಿಜಾತ್ರೆ, ಸೂಡ ಮತ್ತು ನಲೆಯ ಸುಬ್ರಹ್ಮಣ್ಯ ರಥೋತ್ಸವ, ಕಾಂತಾವರ, ಪುತ್ತಿಗೆ, ಹೆಬ್ರಿ, ಇರುವೈಲು ಇತ್ಯಾದಿ ಸ್ಥಳಗಳ ಗಳನ್ನು ಇಲ್ಲಿ ಹೆಸರಿಸಬಹುದು. ಅದರಂತೆ ಮುಡಾರಿನ ಕೊಡಮಂತಾಯ, ಬಜಗೋಳಿಯ ಬರಿ, ಬಡಗ ಮಿಜಾರಿನ ಬೈದರ್ಕಳ ನೇಮ, ಬೆಳುವಾಯಿಯ ಬೈದರ್ಕಳ ಕೋಲ, ನಂದಳಿಕೆಯ ಳ ನೇಮ ಸಹ ತಮ್ಮದೇ ಆದ ಪ್ರಾಮುಖ್ಯವನ್ನು ಪಡೆದಿವೆ. ಕಾರ್ಕಳ ಗೊಮ್ಮಟ ಬೆಟ್ಟದ ನೆಲ್ಲಿಕಾರು ತೀರ್ಥಂಕರ ರಥೋತ್ಸವಗಳೂ ಮುಖ್ಯವಾದವು. ಅತ್ತೂರು ಸಂತಲಾರೆನ್ಸರ ವದ ಖ್ಯಾತಿ ನೆರೆಯೂರುಗಳಿಗೂ ಹಬ್ಬಿದೆ. ಮತ ಬೇಧವಿಲ್ಲದೆ ಜನ ಇಲ್ಲಿಗೆ ಒಂದು ಹರಕೆ ಒಪ್ಪಿಸು . ಇದೇ ರೀತಿಯಲ್ಲಿ ಹೆಸರಿಸಬಹುದಾದ ಮುಸ್ಲಿಂ ಉತ್ಸವವೆಂದರೆ ಮೂಡಬಿದಿರೆಯಲ್ಲಿ ರುವ ಉರುಸ್.

III. ಕಲೆ

ರಾಜಕೀಯ ಮತ್ತು ಧಾರ್ಮಿಕ ವಿಚಾರಗಳಂತೆಯೆ ತನ್ನ ಕಲಾ ಪ್ರೌಢಿಮೆಗೂ ಕಾರ್ಕಳ ಹ
ಜಿಲ್ಲೆಯ ಹೆಸರಾಂತ ಕಲಾ ಕೃತಿಗಳು ಇರುವುದು ಇಲ್ಲೆ. ಹಾಗಾಗಿ ಕರ್ನಾಟಕದ ಕಲಾ ಇತಿ
ಕಾರ್ಕಳಕ್ಕೊಂದು ವಿಶಿಷ್ಟ ಸ್ಥಾನ.

ಪ್ರಾಚೀನ ಕಾಲದಿಂದಲೇ ಇಲ್ಲಿ ಗುಡಿ ಗೋಪುರಗಳ, ಬಸದಿಗಳ ನಿರ್ಮಾಣ ಕಾರ್ಯ
ವಾಯಿತು. ಕಾಂತಾವರದ ಕಾಂತೇಶ್ವರ, ಬೆಳ್ಮಣ್ಣು ದುರ್ಗಾ ಪರಮೇಶ್ವರಿ ದೇವಾಲಯಗಳ
8ನೆಯ ಶತಮಾನದ ವೇಳೆಗೆ ಇದ್ದವು ಪೆರುವಾಜೆ, ದರೆಗುಡ್ಡೆ, ಕೆರವಾಸೆ, ಮಿಯಾರು ಇತ್ಯಾದಿ
ಮಹಾಲಿಂಗೇಶ್ವರ ದೇವಾಲಯಗಳು 8ನೆಯ ಶತಮಾನದ ಉತ್ತರಾರ್ಧಕ್ಕೆ ಹುಟ್ಟಿಕೊಂಡವು
ಹೇಳಬಹುದು. ಹೆಚ್ಚಿನ ಕಡೆಗಳಲ್ಲಿ ಹಲವಾರು ಮಾರ್ಪಾಟು ಮತ್ತು ರಿಪೇರಿ ಕೆಲಸಗಳನು
ಲಾಗಿದೆ. ಇದರಿಂದಾಗಿ ದೇವಾಲಯಗಳಿಗೆ ಹೊಸ ಸ್ವರೂಪ. ಇದು ಎಷ್ಟೇ ಚೆನ್ನಾಗಿದ್ದರೂ ಆಲಂ
ವಿರೂಪಗೊಳಿಸಿದೆ ಎಂದೇ ಹೇಳಬೇಕು. ಇವು ದೇವಾಲಯದ ನಿಜವಾದ ಕಾಲ ಗಣನೆ
ಇದ್ದಿರಬಹುದಾದ ಕುರುಹುಗಳೆಲ್ಲವನ್ನು ಮುಚ್ಚಿದೆ ಇಲ್ಲವೆ ಅಳಿಸಿ ಹಾಕಿದೆ. ಶಾಸ
ಗಳು ಇಲ್ಲದೆ ಇರುವಾಗ ಕಾಲಮಾನವನ್ನು ಮಾಡುವ ಮುಖ್ಯ ಸಾಧನ ವಾಸ್ತು ಮತ್ತು ಶಿಲ್ಪ.
ಮೂಲ ವಿಗ್ರಹ ಅಥವಾ ವಿಗ್ರಹಗಳು ಭಿನ್ನವಾದಾಗ ಪೂಜಾ ಯೋಗ್ಯವಲ್ಲವೆಂದು ಅ
ಜಲವಾಸಕ್ಕೆ ರವಾನಿಸುವುದು ಬೆಳೆದು ಬಂದ ಸಂಪ್ರದಾಯ. ಹೀಗೆ ವಿಗ್ರಹಗಳನ್ನು ಕೆರೆಗೊ,
ಹಾಕಿದಾಗ ಅವು ಹಿಂತಿರುಗಿ ಬರಲಾರದ ಸ್ಥಳಗಳಿಗೆ ಹೋದಂತೆ. ಏಕೆಂದರೆ ಅದೆಷ್ಟೊ ಕೆರೆ,
ಶತಮಾನದ ಅಂತರದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಮೂಢ ನಂಬಿಕೆ ಮತ್ತು
ದಾಯಗಳೆಡೆಯಲ್ಲಿ ಕಲೆ ಸಿಕ್ಕಿ ನುಚ್ಚು ನೂರಾಗಿದೆ. ಕಲಾ ಪ್ರಪಂಚಕ್ಕೆ ಇದರಿಂದ ತುಂಬಲಾ
ಎನ್ನುವುದು ಇತ್ತೀಚಿನ ದಿನಗಳಲ್ಲಿ ಜನ ಅರಿಯುತ್ತಿರುವ ಸತ್ಯ.

ಶಿವಪುರದ ಉದಾಹರಣೆಯನ್ನು ನಾವು ಇಲ್ಲಿ ಗಮನಿಸಬಹುದು. ಇಲ್ಲಿನ ಶಂಕರ ದೇ
ಹಲವಾರು ಬಾರಿ ಜೀರ್ಣೋದ್ಧಾರಗೊಂಡಿದೆ. ಕ್ರಿ. ಶ. 1410ಕ್ಕೆ ಸೇರಿದ (ಚಕ್ರವರ್ತಿ 1ನೆ
ರಾಯನ ಕಾಲದ್ದ) ಶಾಸನವೊಂದು ಈ ದೇವಾಲಯ ಜೀರ್ಣೋದ್ಧಾರವಾದ ವಿಚಾರ ತಿ
ಹಾಗಾಗಿ ಈ ದೇವಾಲಯಕ್ಕೆ ವಿಜಯನಗರ ಕಾಲದ ಚೌಕಟ್ಟು. ಈ ಶಾಸನವೇ ಇಲ್ಲದಿ
ಇದರ ಪ್ರಾಚೀನತೆಯ ಅರಿವೇ ಆಗುತ್ತಿರಲಿಲ್ಲ. ಕ್ರಿ.ಶ. 1410 ರಲ್ಲಿ ಪುನರ್ ನಿರ್ಮಾ
ಈ ದೇವಾಲಯ ಅದಕ್ಕೆ ಕೆಲವು ಶತಮಾನಗಳ ಹಿಂದೆಯೇ ಹುಟ್ಟಿಕೊಂಡಿರಬೇಕು. ಇಲ್ಲಿ
ಗೃಹವನ್ನು ಅವಲೋಕಿಸಿದಾಗ ಸುದೈವಕ್ಕೆ ನಮಗೊಂದು ಕುರುಹು ದೊರೆಯುತ್ತದೆ. ಇಲ್ಲಿನ ಶಿ
ಪಾಣಿಪೀಠ 10 – 11 ನೆಯ ಶತಮಾನದ ಕುರುಹನ್ನು ಹೊಂದಿದೆ. ಸುಂದರವಾದ ಈ ಪೀಠ ಪ್ರಾ
ಅದಕ್ಕೂ ಹಿಂದೆ ಇದ್ದಿರಬಹುದಾದ ಸಾಧಾರಣ ಪೀಠಕ್ಕೆ ಬದಲಾಗಿ ಪ್ರತಿಷ್ಠೆಗೊಂಡಿದ್ದಿರಲೂಬ

ಶಿವಪುರದ ಶಂಕರ ದೇವಾಲಯದಂತೆಯೇ ಕಾಂತಾವರದ ಕಾಂತೇಶ್ವರ ದೇವಾಲಯವೂ ಹ
ಬಾರಿ ಜೀರ್ಣೋದ್ಧಾರಗೊಂಡಿದೆ. ಈಸ್ಟ್ ಇಂಡಿಯಾ ಕಂಪೆನಿಯವರ ಅಪ್ಪಣೆ ಪ್ರಕಾರ ರೇ
ಸಾಹೇಬನ ಅಧಿಕಾರದಲ್ಲಿ ಕಾಂತಾವರದ ಶ್ರೀ ಕಾಂತೇಶ್ವರ ದೇವಾಲಯವನ್ನು ಲಿಂಗ ರೂಪ

ಪರ್ಯಂತ ಜೀರ್ಣೋದ್ಧಾರ ಮಾಡಲಾಯಿತು ಎಂದು ಕ್ರಿ.ಶ. 1809ಕ್ಕೆ ಸೇರಿದ ಒಂದು ತಿಳಿಸುತ್ತದೆ. ಇಲ್ಲೂ ಸಹ ಇದ್ದಿರಬಹುದಾದ ಪ್ರಾಚೀನ ಕುರುಹುಗಳೆಲ್ಲ ನಾಶವಾಗಿದೆ.

ತೇಶ್ವರದಂತೆಯೆ ಕಡಂದಲೆಯು ಸುಬ್ರಹ್ಮಣ್ಯ ದೇವಾಲಯವೂ ಪ್ರಾಚೀನವಾದುದು. ಸಿರಿ ಯೊಗ್ಗವರ್ಮರಸು ಈ ದೇವನಿಗೆ ಪರಿಪಾಳಿ ಎಂಬ ಕ್ಷೇತ್ರವನ್ನು ದಾನವಾಗಿ ಕೊಟ್ಟ. ಈ ಕ್ರಿ.ಶ. 9ನೆಯ ಶತಮಾನದ ಮೊದಲ ಭಾಗಕ್ಕೆ ಸೇರಿದ ಇಲ್ಲಿನ ಶಾಸನವೊಂದರಿಂದ ಗೊತ್ತಾಗು

ಈ ದೇವಾಲಯದ ಗೋಡೆಗಳು ತೀರ ಸರಳ ಮತ್ತು ಸಾಮಾನ್ಯ. ಅಲ್ಲದೆ ಹೆಚ್ಚಿನವು ಶಿಲಾ ವೂ ಅಲ್ಲ. ಹಾಗಾಗಿ ಆಗಿಂದಾಗ್ಗೆ ರಿಪೇರಿಗೆ ಒಳಗಾಗುತ್ತಿದ್ದವು. ಪೆರುವಾಜೆಯ ಮಹಾದೇವ ಸ್ಥಾನ ಶಿಲಾಮಯವಾಗಿದ್ದು ಗರ್ಭ ಗೃಹ ಮತ್ತು ಸುಖನಾಸಿಗಳನ್ನು ಹೊಂದಿದೆ. ಇಲ್ಲಿನ ತೀರ್ಥ ಪ ಪ್ರತ್ಯೇಕವಾಗಿದ್ದು ನಂತರದ ಸೇರ್ಪಡೆಯಾಗಿದೆ. ಗರ್ಭ ಗುಡಿಯ ಮೇಲೆ ಚಿಕ್ಕ ಗೋಪುರ

ಕ್ರಿ.ಶ. 10–12 ನೆಯ ಶತಕದ ವೇಳೆಗೆ ಇನ್ನೂ ಹಲವಾರು ದೇವಾಲಯಗಳು ನಿರ್ಮಾಣ ಡವು. ಇವುಗಳಲ್ಲಿ ಹೆಸರಿಸಬಹುದಾದವುಗಳೆಂದರೆ ಮಾಳ, ಹೆರ್ಮುಂಡೆ ಮತ್ತು ಅಜೆಕಾರಿನ ಮೂರ್ತಿ (ಜನಾರ್ದನ): ಬೋಳಿಪಾಡಿ (ಕಾಬೆಟ್ಟು) ಮತ್ತು ಹಿರಿಯಂಗಡಿಯ ವೇಣುಗೋಪಾಲ; ಂದೂರು ಮತ್ತು ಮುಂಡಕೂರಿನ ಮಹಿಷಮರ್ದಿನಿ; ಬೋಳದ ಮೃತ್ಯುಂಜಯ, ಪುತ್ತಿಗೆಯ ಮನಾಥ, ತೆಲ್ಲಾರಿನ ಜಲದುರ್ಗ, ಕೆಮ್ಮಣ್ಣು (ನಿಟ್ಟೆ) ದುರ್ಗಾಪರಮೇಶ್ವರಿ ಇತ್ಯಾದಿ.

ಕ್ರಿ.ಶ. 8ನೆಯ ಶತಮಾನಕ್ಕೆ ಸೇರಿದ ಬೆಳ್ಮಣ್ಣು ತಾಮ್ರ ಶಾಸನದಲ್ಲಿ ಬೋಳದ ನಂದನರನ್ನು ಸಲಾಗಿದೆ. ಪ್ರಮುಖ ಆಡಳಿತಾಧಿಕಾರಿ ಹೊಣೆ ಹೊತ್ತಿದ್ದ ಇವರ ಈ ಕಾಲಕ್ಕೆ ಬೋಳದ ತ್ಯುಂಜಯ ದೇವಾಲಯದ ನಿರ್ಮಾಣವಾಗಿರಬಹುದೇ ಎಂಬ ಅನುಮಾನ ಬರುತ್ತದೆ. ಆದರೆ ದೇವಾಲಯದಲ್ಲಿ ಆ ಕಾಲದ ಕುರುಹುಗಳು ದುರ್ಲಭ.

ವಾಸ್ತು (architecture) ದೃಷ್ಟಿಯಿಂದ ನೋಡಿದರೆ ದೇವಾಲಯಗಳೆಲ್ಲವೂ ಸಾಧಾರಣ ವು. ಆದರೆ ಇಲ್ಲಿ ಪೂಜೆಗೊಳ್ಳುತ್ತಿರುವ ಪ್ರತಿಷ್ಠಿತ ಮೂರ್ತಿಗಳು ಈ ಕೊರತೆಯನ್ನು ತುಂಬುತ್ತವೆ. ಕಲಾ ದೃಷ್ಟಿಯಿಂದ ತಮ್ಮ ನೆಲೆಯಲ್ಲಿ ಇವೆಲ್ಲವೂ ಸುಂದರ ಹಾಗು ವೈಶಿಷ್ಟ್ಯಪೂರ್ಣವಾದವು. ಾಲಯಗಳ ಕಾಲ ಮತ್ತು ಸೌಂದರ್ಯಗಳನ್ನಳೆಯಲು ಇರುವ ಮುಖ್ಯ ಜೀವಾಳಗಳೆ ಇವು. ್ಕಂದೂರು ಮಹಿಷಮರ್ಧಿನಿ ದೇವಾಲಯದಲ್ಲಿ ಪೂಜೆಗೊಳ್ಳುತ್ತಿರುವ ಮಹಿಷಮರ್ದಿನಿಯ ವಿಗ್ರಹವು ಚಿಕ್ಕದಿದ್ದರೂ ಸುಂದರವಾಗಿದೆ. ಕುಳಿತ ಭಂಗಿಯಲ್ಲಿರುವ ತೆಳ್ಳಗಿನ ಜಲದುರ್ಗೆ ಹರಡಿದ ರಾಶಿ, ಕರ್ಣ ಕುಂಡಲಿ, ವಿವಿಧ ಕಂಠಿಹಾರಗಳನ್ನೊಳಗೊಂಡು ಒಂದು ವಿಶಿಷ್ಟ ಮಾದರಿಯ ಹವಾಗಿದೆ.

ಇವೆಲ್ಲಕ್ಕು ಮಿಗಿಲಾಗಿರುವ ವಿಗ್ರಹಗಳೆಂದರೆ ಜೋಳಪಾಡಿ (ಕಾಬೆಟ್ಟು) ಮತ್ತು ಹಿರಿಯಂಗಡಿ ರ್ಲೆಯ) ಯ ವೇಣುಗೋಪಾಲ ಮೂರ್ತಿಗಳು. ಜೋಳಿಪಾಡಿಯ ವೇಣುಗೋಪಾಲ ಹಿರಿ ಂಗಡಿಯದಕ್ಕಿಂತ ಪ್ರಾಚೀನ. ತ್ರಿಭಂಗಿಯಲ್ಲಿ ವೇಣು ಹಿಡಿದು ನಿಂತಿರುವ ಗೋಪಾಲ ಹಿತ ಮಿತ ದ ಅಭರಣ, ವಸ್ತ್ರಗಳಿಂದ ಕೂಡಿದೆ. ಪ್ರಭಾವಳಿಯಲ್ಲಿ ದಶಾವತಾರಗಳ ಕೆತ್ತನೆಯಿದೆ. ಶಿಲ್ಪಿ ತನ್ನ ರತೆಯನ್ನು ತೋರಿಸಬಹುದಾದ ಅತಿ ಸೂಕ್ಷ್ಮ ಕೆತ್ತನೆ ಇದು. ಶತಮಾನಗಳಿಂದ ಪೂಜೆಗೊಳ್ಳು ುವ ಈ ವಿಗ್ರಹದ ಮೇಲೆ ಪಂಚಾಮೃತದ ಪ್ರಭಾವ ಬಹಳವಾಗಿದೆ.

ಹಿರಿಯಂಗಡಿ (ಪರ್ಪಲೆ)ಯ ವೇಣುಗೋಪಾಲ ದೇವಾಲಯವು ಗೋಪುರ, ಮಹಾದ್ವಾರ, ರ್ಘ ಮಂಟಪ ಮತ್ತು ಸುತ್ತಲೂ ಪೌಳಿಯನ್ನು ಹೊಂದಿತ್ತು. ಇದರ ಮಧ್ಯ ಭಾಗದಲ್ಲಿ ಚಿಕ್ಕದಾದ

ಒಂದು ಗರ್ಭ ಗುಡಿ. ಈಗ ಗರ್ಭ ಗುಡಿ ಮಾತ್ರ ಉಳಿದಿದೆ. ಆದರೆ ವಿಗ್ರಹ ಅಲ್ಲಲ್ಲಿ. ಕಾರಣಾ
ಕೇಳುವವರಿಲ್ಲದೆ ಹಾಳು ಬಿದ್ದ ಈ ಗುಡಿಯಲ್ಲಿನ ವಿಗ್ರಹವನ್ನು ಸುಮಾರು 60 ವರ್ಷ
ರಾಮಕೃಷ್ಣ ಸಭಾಭವನಕ್ಕೆ ತಂದು ರಕ್ಷಿಸಲಾಯಿತು. ಆನಂತರ ಆ ಭವನ ಕೃಷ್ಣ ಮಂದಿರವೆಂ
ಪಡೆಯಿತು. ಶ್ರೀ ಭುವನೇಂದ್ರ ಕಾಲೇಜಿನ ಬಳಿಯ ವನ ಭೋಜನದಲ್ಲಿ ಈ ಮಂದಿರ ಇದೆ.

ಕಪ್ಪು ಶಿಲೆಯಲ್ಲಿ ಕಡೆಯಲ್ಪಟ್ಟಿರುವ ವೇಣುಗೋಪಾಲ ವಿಗ್ರಹ ಸುಂದರವಾಗಿದ
ನಾಟ್ಯ ಭಂಗಿ, ನಾಟ್ಯ ರಭಸಕ್ಕೆ ಹಾರಿರುವ ಪೀತಾಂಬರ, ಆಭರಣಗಳ ಅಲಂಕಾರ, ಎಡ
ಶಂಖ ಚಕ್ರ, ಕಿರೀಟ ದೋಪಾದಿಯಲ್ಲಿರುವ ವೃಕ್ಷ. ಈ ಎಲ್ಲವೂ ಶಿಲ್ಪಿಯ ಚತುರತೆಯ
ಹೇಳುವಂತಿದೆ. ಇದರ ಪ್ರಭಾವಳಿಯಲ್ಲಿ ದಶಾವತಾರಗಳ ಕೆತ್ತನೆ ಅತಿ ಸೂಕ್ಷ್ಮವಾಗಿದೆ.
ಅತ್ಯಾಕರ್ಷವಾದ ಹೊಯ್ಸಳ ಶಿಲ್ಪ.

9 – 10 ನೆಯ ಶತಮಾನಕ್ಕೆ ಸೇರುವ ಮೂಡುಬಿದುರೆ ಗೌರಿ ದೇವಾಲಯದ
ಮರ್ದಿನಿ ವಿಗ್ರಹ ಗಮನಾರ್ಹವಾದುದು. ಸುಮಾರು 3 ಅಡಿ ಎತ್ತರವಾಗಿರುವ ಈ ವಿಗ್ರಹ
ಮಹಿಷಮರ್ಧಿನಿ ವಿಗ್ರಹಗಳಲ್ಲಿ ಅತಿ ದೊಡ್ಡದಾಗಿದೆ ಎಂದು ಡಾ. ಗುರುರಾಜ ಭಟ್ಟರು ಅ
ಪಡುತ್ತಾರೆ. ದಪ್ಪ ಪುಷ್ಟ ದೇಹವನ್ನು ಹೊಂದಿದ್ದೂ ಮಿತವಾದ ವಸ್ತ್ರಾಲಂಕಾರದಿಂದ ಕ
ಈ ದೇವಿ. ಚತುರ್ಭುಜ, ಕೆದರಿದ ಜಡೆ ಮತ್ತು ಹಾರುತ್ತಿರುವ ಕರ್ಣಕುಂಡಲಗಳಿಂದ ಕ
ಈಕೆ ರುದ್ರ ಭಯಂಕರಿ. ತನ್ನ ಬಲಿಷ್ಠ ಬಾಹುಗಳಲ್ಲಿ ಬಲದಲ್ಲಿ ಹಿಡಿದ ಭಾರಿ ತ್ರಿಶೂಲದಿಂದ
ತಲೆಯನ್ನು ಇರಿಯುತ್ತಾ, ಎಡದಲ್ಲಿ ಬಾಲವನ್ನು ಹಿಡಿದೆತ್ತಿ ಬಲಗಾಲಿನಿಂದ ಮಹಿಷನನ್ನು
ನಿಂತಿರುವ ದೇವಿಯ ಶಿಲ್ಪವನ್ನು ಕಡೆಯುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ.

ಕೆಲ್ಲ ಪುತ್ತಿಗೆಯ ವಿಠ್ಠಲ (ಶಿವ) ದೇವಾಲಯದ ಬಳಿ ಇರುವ ಗಣೇಶ ವಿಗ್ರಹ ಪ
ನಮ್ಮ ತಾಲ್ಲೂಕಿನ ಅತ್ಯಂತ ಪ್ರಾಚೀನ ಗಣೇಶ ವಿಗ್ರಹ. ತಾಣ (ಹೆಬ್ರಿ)ದ ಅರ್ಧನಾರೀಶ್ವರ ಕಾಂ
ಕಾಂತೇಶ್ವರ ದೇವಸ್ಥಾನಗಳಲ್ಲಿ ಗಣೇಶನ ಕೆಲವು ಅಪೂರ್ವ ವಿಗ್ರಹಗಳಿವೆ. ವಿನಾಯಕನಿಗೇ
ದೇವಸ್ಥಾನವಿರುವುದು ಕಾರ್ಕಳದ ವಿನಾಯಕ ಬೆಟ್ಟವಿನಲ್ಲಿ. ಕರಿ ಕಲ್ಲಿನಲ್ಲಿ ಕಡೆದಿರುವ
ವಿನಾಯಕನ ವಿಗ್ರಹ ತುಂಬಾ ಸುಂದರವಾಗಿದೆ.

ಕಾರ್ಕಳದ ಅನಂತಶಯನ:

ಭೈರರಸರ ಕಾಲದ ಒಂದು ಪ್ರಮುಖ ಕೊಡುಗೆ ಕಾರ್ಕಳದ ಅನಂತಶಯನ. ಊರಿನ
ಭಾಗದಲ್ಲಿ ಚತುರ್ಮುಖ ಬಸದಿಗೆ ಸಮೀಪವಾಗಿ ಈ ದೇವಾಲಯವಿದೆ. ವ್ಯೂಹ ಶೈಲಿಯಲ್ಲಿ
ಕಟ್ಟಲಾಗಿದೆ. ವಿಶಾಲವಾದ ಅಂಗಣದಲ್ಲಿ ಕಟ್ಟಿದ್ದರೂ ದೇವಸ್ಥಾನ ಮಾತ್ರ ಚಿಕ್ಕದಾಗಿದೆ.
ಸುಖನಾಸಿ ಮತ್ತು ಗರ್ಭ ಗೃಹ ಇವು ಇಲ್ಲಿನ ಮುಖ್ಯ ಅಂಗಗಳು. ನವರಂಗವು ಸಾಧಾರಣ
ನಾಲ್ಕು ಬೃಹತ್ ಶಿಲಾ ಸ್ತಂಭಗಳನ್ನು ಹೊಂದಿದೆ. ತೀರ ಜೀರ್ಣಾವಸ್ಥೆಯಲ್ಲಿರುವ, ಆದರೆ ಬಹಳ
ವಾಗಿರುವ ಮರದ ಬಾಗಿಲುವಾಡ ನವರಂಗ ಸುಖನಾಸಿಗಳ ನಡುವೆ ಇದೆ.

ಸುಖನಾಸಿ ಅತ್ಯಂತ ಕಿರಿದಾಗಿದೆ. ಇಲ್ಲೊಂದು ಕಿರಿದಾದ ಪ್ರದಕ್ಷಿಣಾ ಪಥ. ಇಲ್ಲಿ ಉತ್ತರ,
ಮತ್ತು ದಕ್ಷಿಣ ಭಾಗಗಳಲ್ಲಿನ ಗೂಡುಗಳಲ್ಲಿ ಕ್ರಮವಾಗಿ ದಾಮೋದರ, ಸಂಕರ್ಷಣ ಮತ್ತು ಅ
ವಿಗ್ರಹಗಳಿವೆ. ಇಳಿಜಾರಿನ ಸೋಪಾನದಂತೆ ಇರಿಸಲ್ಪಟ್ಟ ಕಗ್ಗಲ್ಲ ಮಾಡು. ತಾಮ್ರದ ತಗಡ
ಶಿಖರದ ಮಾಡನ್ನು ಮುಚ್ಚಲಾಗಿದೆ. ಈ ಮಾಡಿನ ಅಡಿಯಲ್ಲಿ ಅಷ್ಟ ದಿಕ್ಪಾಲರ ಮರದ ಕ
ಫಲಕಗಳಿವೆ.

ಪ್ರವೇಶ ದ್ವಾರವು ಪಶ್ಚಿಮಕ್ಕೆ. ಇಲ್ಲಿ ಸಭಾಗೃಹದ ದ್ವಾರವು ಶಿಲಾ ನಿರ್ಮಿತ. ಇದರ ದ

ಜಲಕ್ಷ್ಮಿ ಮತ್ತು ಎಡ ಬಲಗಳಲ್ಲಿ ಜಯ ವಿಜಯರ ಉಬ್ಬು ಶಿಲ್ಪಗಳಿವೆ. ಇಡೀ ಬಾಗಿಲುವಾಡವು ಕ್ಯ ಶಿಲ್ಪದ ಅನುಕರಣದಂತಿದೆ.

ರ್ಭ ಗೃಹದಲ್ಲಿ ಬೃಹತ್ ಶಿಲಾ ಫಲಕ (Bas-relief) ಎಂದೇ ಹೇಳಬಹುದಾದ ಅತ್ಯಂತ ವಾದ ಅನಂತಶಯನಮೂರ್ತಿ. ಮೂರು ಸುರುಳಿ ಸುತ್ತಿರುವ ಏಳು ಹೆಡೆಯ ಆದಿಶೇಷನ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಮಹಾ ವಿಷ್ಣುವು ಮಲಗಿದ್ದಾನೆ. ಪಾದ ಭಾಗದಲ್ಲಿ ವಿ, ಭೂದೇವಿಯರಿದ್ದಾರೆ. ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮ ಕುಳಿತಿದ್ದಾನೆ. ಸುಮಾರು ಡಿ ಉದ್ದ, 8 ಅಡಿ ಎತ್ತರ ಇರುವ ಈ ಬೃಹತ್ ವಿಗ್ರಹ ಒಂದೇ ಶಿಲೆಯಿಂದ ಕಡೆಯಲ್ಪಟ್ಟಿದು.

ಆದಿಶೇಷನ ಹೆಡೆ ಹಾಗು ಕಣ್ಣುಗಳು ಭಯ ಹುಟ್ಟಿಸುವಂತಿದೆ. ಅದರಡಿಯಲ್ಲಿ ಮಲಗಿರುವ ರ್ಹ ಅಷ್ಟೇ ಸೌಮ್ಯ ಮತ್ತು ಮಂದಸ್ಮಿತವಾಗಿದ್ದು ಭಕ್ತಿ ಮೂಡಿಸುತ್ತದೆ. ಮಹಾವಿಷ್ಣುವಿನ ಕಿರೀಟ, ಹಾಗೆಯೇ ಬ್ರಹ್ಮ, ಶ್ರೀದೇವಿ ಮತ್ತು ಭೂದೇವಿಯರು ಧರಿಸಿರುವ ಕಿರೀಟಗಳೂ ರವಾಗಿವೆ. ನಾಭಿಯಿಂದ ಹೊರಟ ಕಮಲದ ದಂಟು ನೈಜತೆಯ ಮಟ್ಟ ಮುಟ್ಟಿದೆ. ಇಡೀ ಕಲ್ಪನೆ ಹಾಗು ಕೆತ್ತನೆ ಅಸಾಧಾರಣ ಮಟ್ಟದ್ದು. ಇದರ ಶಿಲ್ಪಿ ಅಜ್ಞಾತನಾಗಿದ್ದರೂ ಅಮರ ದ್ದಾನೆ.

ಬಸದಿಗಾಗಿ ಕಟ್ಟಿದ ಈ ಕಟ್ಟಡ ದೇವಾಲಯವಾಯಿತು ಎನ್ನುವ ಒಂದು ನಂಬಿಕೆ ಇದೆ. ಇದು ರ ರಹಿತ.

ಟರಮಣ ದೇವಸ್ಥಾನ:

ಳದ ಇನ್ನೊಂದು ಪ್ರಮುಖ ದೇವಾಲಯ ವೆಂಕಟರಮಣ ದೇವಾಲಯ. ಕ್ರಿ.ಶ. 17 – 18 ನೆಯ ದಲ್ಲಿ ಅಸ್ತಿತ್ವಕ್ಕೆ ಬಂದ ಈ ದೇವಾಲಯ ಅತ್ಯಂತ ಶ್ರೀಮಂತವಾಗಿದೆ. ವರ್ಷದುದ್ದಕ್ಕೂ ಪೂಜಾದಿ ವಗಳಿದ್ದು ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ.

ಬೃಹತ್ ಪ್ರವೇಶ ದ್ವಾರ ಮತ್ತು ಗೋಪುರವನ್ನು ಹೊಂದಿದ ಚಂದ್ರ ಶಿಲೆ ಹೊರ ಅಂಗಣದಲ್ಲಿ. ದ್ವಾರ, ಎಡಬಲಗಳಲ್ಲಿ ಜಗತಿ, ಪ್ರದಕ್ಷಿಣಾ ಪಥ, ಸರಸ್ವತಿ ಮತ್ತು ಗಣೇಶನ ಗುಡಿಗಳನ್ನು ಂದಿದ ಒಳ ಅಂಗಣ. ಇದರ ಮಧ್ಯೆ ಮುಖ್ಯ ದೇವಾಲಯ. ಗರ್ಭ ಗೃಹ ಮತ್ತು ಸುಖನಾಸಿ ರ ಮುಖ್ಯ ಅಂಗಗಳು. ದ್ವಾರದ ಇಕ್ಕೆಲಗಳಲ್ಲ ಜಯ ವಿಜಯರು.

ಇಲ್ಲಿಯ ಪ್ರಮುಖ ಆಕರ್ಷಣೆ ನೆಲ್ಲಿಕಾರು ಶಿಲೆಯಿಂದ ಕಡೆಯಲ್ಪಟ್ಟ ನಾಲ್ಕು ಕಂಬಗಳ ಒಂದು ದರ ಮಂಟಪ. ಇದು ಸುಖನಾಸಿ ಮತ್ತು ಮುಖ ಮಂಟಪವನ್ನು ಸಂಪರ್ಕಿಸುತ್ತದೆ. ರಾಷ್ಟ್ರ ಸ್ತಿ ವಿಜೇತ ಶಿಲ್ಪಿ ರಂಜಾಳ ಗೋಪಾಲ ಶೆಣೈ ಅವರ ಹಿರಿ ಹೆಮ್ಮೆಯ ಕಾಣಿಕೆ.ಈ ನಾಲ್ಕು ಕಂಬಗಳು , ಫಲ, ಪುಷ್ಪ, ಪಕ್ಷಿ ಪ್ರಾಣಿಗಳ ಸೂಕ್ಷ್ಮತರ ವಿನ್ಯಾಸ ಮತ್ತು ಕೆತ್ತನೆ ಅಪೂರ್ವವಾದುದು. ಈ ಭರಾಜಿ ಶಿಲ್ಪಿಯ ಎಲ್ಲ ಕಲಾ ಕಾಣಿಕೆಗಳಿಗೂ ಕಿರೀಟವಿಟ್ಟಂತೆ ಇದೆ. ಆಧುನಿಕ ಕಾಲದಲ್ಲಿ ಪ್ರಾಚೀನ ಯು ಸೆಲೆಯೊಡೆದಿದೆ ಇಲ್ಲಿ. ರಾಷ್ಟ್ರಕ್ಕೆ ಹಾಗು ವಿಶ್ವಕ್ಕೆ ಕಾರ್ಕಳದ ಹೆಮ್ಮೆಯ ಕೊಡುಗೆ ಈ ಶಿಲ್ಪ.

ವೆಂಕಟರಮಣ ದೇವಾಲಯದೆದುರು ವೀರಮಾರುತಿ ದೇವಾಲಯವಿದೆ. ದೇವಾಲಯ ಹೊಸ ಸದಾಗಿ ಇತ್ತೀಚೆಗೆ ಪುನರ್ ನಿರ್ಮಾಣಗೊಂಡಿದೆ. ಇಲ್ಲಿನ ಮಾರುತಿ ವಿಗ್ರಹವು ಅತಿ ಎತ್ತರವಾಗಿದ್ದು ಯಶಃ ವಿಜಯನಗರ ಕಾಲದ್ದಾಗಿದೆ.

ಕಾರ್ಕಳದ ಸೂರ್ಯ ನಾರಾಯಣ ಮಠ ಪೂರ್ಣ ಶಿಲಾಮಯ. ಚಿಕ್ಕದಾದ ಪೌಳಿಯೊಳಗಿನ ಸಣ್ಣ ರಣದಲ್ಲಿ ಕಟ್ಟಲಾಗಿದೆ ಇದನ್ನು. ಚಿಕ್ಕದಾದ ಸುಖನಾಸಿ ಮತ್ತು ಗರ್ಭಗೃಹವನ್ನು ಹೊಂದಿರುವ

ಈ ಆಲಯ ರಚನೆಯಲ್ಲಿ ವಿನಾಯಕಬೆಟ್ಟಿನ ದೇವಸ್ಥಾನವನ್ನು ಹೋಲುತ್ತದೆ. ಇಲ್ಲಿ ಆರಾ ವಿಷ್ಣು. ಈ ಊರಿನ ಕಾಳಿಕಾಂಬ ದೇವಾಲಯದಲ್ಲಿ ಕಾಳಿಕಾಂಬೆಯ ಸುಂದರವಾದ ವಿಗ್ರ

ಜೈನ ವಾಸ್ತು ಶಿಲ್ಪ:

ಕಾರ್ಕಳದ ತಾಲ್ಲೂಕಿಗೆ ಖ್ಯಾತಿ ಮತ್ತು ಹೆಸರನ್ನು ತಂದು ಕೊಟ್ಟಿದ್ದು ಇಲ್ಲಿಯ ಜ ಮತ್ತು ಸಂಸ್ಕೃತಿ. ಈ ಸಂಸ್ಕೃತಿಯ ಪ್ರತೀಕವಾದ ಕಲಾಕೃತಿಗಳು ಕಾರ್ಕಳಕ್ಕೆ ಕಲಾ ಪ್ರಪಂಚ ಉತ್ತಮ ಸ್ಥಾನವನ್ನೊದಗಿಸಿವೆ. ಇಡೀ ಜಿಲ್ಲೆಯ ಜೈನ ಧರ್ಮದ ಕಾಣಿಕೆ ಈ ತಾಲ್ಲೂಕಿನಲ್ಲಿ ಜಿಲ್ಲೆಯ ಎಲ್ಲ ಪವಿತ್ರ ಜೈನ ಕ್ಷೇತ್ರ ಮತ್ತು ಶಿಲ್ಪಕಲಾ ಕೇಂದ್ರಗಳೂ ಈ ತಾಲ್ಲೂಕಿನಲ್ಲಿ. ಪಟ್ಟಾದರೂ ಸಂಸ್ಕೃತಿ ಮತ್ತು ಕಲೆಯ ಸಿರಿಯ ಕೇಂದ್ರವಾದ ವೇಣೂರು ಈಗ ತಾ ಹೊರಗೆ.

ತಾಲ್ಲೂಕಿನಾದ್ಯಂತ ಜೈನ ಬಸದಿಗಳು ಧರ್ಮ ಬೆಳೆದಂತೆ ಬೆಳೆದವು. ಊರಿಗೊಂ ಸಾಮಾನ್ಯವಾಗಿದ್ದರೂ ಕೆಲವೆಡೆ ಹೆಚ್ಚು ಬಸದಿಗಳ ನಿರ್ಮಾಣವಾಯಿತು. ಇದು ಜ ಅವಶ್ಯಕತೆಯ ಆಧಾರದ ಮೇಲೆ ಆಗಿದ್ದರೂ, ಪ್ರತಿಷ್ಠಿತ ಅಧಿಕಾರಿ ಹಾಗು ವಣಿಕರೂ ಬಸದಿ ಮಾಡಿದರು. ಕೆಲವೆಡೆ ಈ ಕಾರ್ಯ ಸ್ಪರ್ಧಾತ್ಮಕ ರೀತಿಯಲ್ಲಿ ನಡೆಯಿತು. ಹಾಗಾಗಿ ಕೆಲವ ಸುಂದರವಾದ ಕಲಾಕೃತಿಗಳ ನಿರ್ಮಾಣಕ್ಕೆ ಇದು ದಾರಿ ಮಾಡಿತು.

ವಾಸ್ತು ರಚನೆ:

ಇಲ್ಲಿನ ಬಸದಿಯ ರಚನೆಯಲ್ಲಿ ಎರಡು ಪ್ರಭೇದಗಳನ್ನು ಕಾಣಬಹುದು – (1) ಆ (2) ಚತುರಸ್ರ. ಇಲ್ಲಿನ ಸುಮಾರು ಎಪ್ಪತ್ತಕ್ಕೂ ಹೆಚ್ಚು ಬಸದಿಗಳಲ್ಲಿ ಮೂರು ಮಾತ್ರ ಉಳಿದವೆಲ್ಲವೂ ಆಯತಾಕಾರದಲ್ಲಿವೆ. ಹೆಚ್ಚಿನವು ಜೀರ್ಣಾವಸ್ಥೆಯಲ್ಲಿದ್ದು ಕೆಲವ ಪುನರುತ್ಥಾನಗೊಳ್ಳುತ್ತಿವೆ.

ಆಯತಾಕಾರದ ಬಸದಿಗಳಲ್ಲಿ ಸಾಮಾನ್ಯವಾಗಿ ನವರಂಗ ಮತ್ತು ಗರ್ಭ ಗೃಹಗಳ ಕಿರಿದಾದ ಪ್ರದಕ್ಷಿಣಾಪಥ ಸಹ ಇರುತ್ತದೆ. ಕೆಲವು ಕಡೆ ನವರಂಗ ಮತ್ತು ಗರ್ಭಗಳ ನಡುವೆ ಇದೆ. ಒಂದು ಮುಖ ಮಂಟಪ ಹಾಗೂ ಅರ್ಧ ಮಂಟಪಗಳಿರುವುದೂ ಉಂಟು. ಮಣ್ಣು, ಮತ್ತು ಕಣಶಿಲೆ ಇಲ್ಲಿ ಬಳಕೆಯಾಗಿರುವ ವಸ್ತುಗಳು. ಹೆಚ್ಚಿನ ಬಸದಿಗಳು ಮಣ್ಣಿನ ಗೋ ಮರಕ್ಕೆ ತಾಮ್ರದ ತಗಡನ್ನು ಹಾಸಿದ ಮಾಡುಗಳನ್ನು ಹೊಂದಿವೆ. ಕೆಲವಕ್ಕೆ ಮುರಕ ಕಾರ್ಯವಾಗಿದೆ. ಮತ್ತೆ ಕೆಲವು ಗೋಡೆ ಭಾಗ ಬಿಟ್ಟು ಉಳಿದೆಲ್ಲ ಭಾಗಗಳಲ್ಲೂ ಶಿಲಾಮ ಇಂತಹ ಕಡೆ ಗೋಡೆಗೆ ಮಣ್ಣು ಇಲ್ಲವೆ ಮುರಕಲ್ಲುಗಳನ್ನು ಬಳಸಲಾಗಿದೆ. ಇಲ್ಲಿ ಮಾಡಿನ ತಡೆಯಲು ಕಲ್ಲಿನ ಕಂಭ ಮತ್ತು ತೊಲೆಗಳನ್ನು ಉಪಯೋಗಿಸಲಾಗಿದೆ. ಇಲ್ಲಿ ಕಟ್ಟಿದ ರಚನೆ ವ ಸುಭದ್ರವೂ ಆಗಿರುವುದನ್ನೂ ನೋಡಬಹುದು. ಸಂಪೂರ್ಣ ಶಿಲಾಮಯವಾದ ಬಸದಿಗ ಅಲ್ಲಿ ನವರಂಗ, ಗರ್ಭ ಗೃಹ ಮತ್ತು ಪ್ರದಕ್ಷಿಣಾ ಪಥಗಳು ಇವೆ. ಶಾಸನಗಳಲ್ಲಿ ಇವುಗಳನ್ನು ನೆಲೆ, ಮೂರನೆ ನೆಲೆ ಎಂದು ಹೆಸರಿಸಲಾಗಿದೆ. ಈ ತೆರನಾದ ನೆಲೆಗಳ ರಚನೆ, ಒಂದೇ ಪ ಮೇಲೆ ಹೆಚ್ಚಿನ ಸ್ಥಳಾವಕಾಶ ಪಡೆದುಕೊಳ್ಳುವುದಿರಬಹುದು. ಬಸದಿಗಳಿಗೆ ಗೋ ನೆಲೆಗಳನ್ನು ಹೆಚ್ಚಿಸುವಾಗ ಮಾಡಿನ ಎತ್ತರ ಹೆಚ್ಚಾಗಿ ಗೋಪುರಗಳಿಗೆ ಆಕಾರ ಮತ್ತು ಸುಂದ ಕೊಡುವ ಅವಕಾಶಗಳು ಹೆಚ್ಚು. ಭೌಗೋಳಿಕ ಹಿನ್ನೆಲೆ ಮತ್ತು ಹವಾಮಾನಕ್ಕನುಗುಣವಾ ವಾಗಿವೆ ಇಲ್ಲಿನ ಮಾಡುಗಳು.

ೆ ಗುಡಿಗೋಪುರಗಳು ಹಾಗು ಬಸದಿಗಳ ನಿರ್ಮಾಣದಲ್ಲಿ ನೇಪಾಳ ಶೈಲಿಯ ಪ್ರಭಾವವಿದೆ ವಿದೇಶೀ ಕಲಾ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯಕ್ಕೆ ಕಾರಣ ುದಲು ನೇಪಾಳದ ದೇವಾಲಯಗಳನ್ನು ನೋಡಿ ಬಂದದ್ದು. ನೇಪಾಳದ ದೇವಾಲಯಗಳಿಗಿಂತ ಾದ ದೇವಾಲಯಗಳು ನಮ್ಮಲ್ಲಿವೆ. ಅವುಗಳ ರಚನಾಶೈಲಿ ಇದೇ ರೀತಿಯದು. ಅಂದ ಮೇಲೆ ಲ್ಲೆ ಹುಟ್ಟಿ ಬೆಳದದ್ದು.

ಯನಗರ ಕಾಲದಲ್ಲಿ ಇಲ್ಲಿನ ಜೈನ ಕಲೆ ಕೀರ್ತಿ ಶಿಖರವನ್ನೇರಿತು. ಆದರೆ ಇದಕ್ಕೂ ಹಿಂದೆ ಹಲವಾರು ಊರುಗಳಲ್ಲಿ ಬಸದಿಗಳಿದ್ದವು. ಅವುಗಳಲ್ಲಿ ಹೆಸರಿಸಬಹುದಾದವುಗಳೆಂದರೆ ನೇಮೀಶ್ವರ, ನಲ್ಲೂರು ಪಾರ್ಶ್ವನಾಥ, ಕಾರ್ಕಳದ ಅಮ್ಮನವರ ಮತ್ತು ಗುರು ಬಸದಿಗಳು ೂಡುಬಿದುರೆಯ ಚಂಡೋಗ್ರ ಪಾರ್ಶ್ವನಾಥ, ಅಮ್ಮನವರ, ಲೆಪ್ಪದ ಮತ್ತು ಸೆಟ್ರ ಬಸದಿಗಳು.

ೂಡಬಿದುರೆಯ ಅಮ್ಮನವರ ಮತ್ತು ಲೆಪ್ಪದ ಬಸದಿಗಳಲ್ಲಿರುವ ಮೃಣ್ಮಯ ಮೂರ್ತಿಗಳು ಇಡೀ ಜಿಲ್ಲೆಯ ಅತ್ಯಂತ ಪ್ರಾಚೀನ ಜೈನ ಮೂರ್ತಿಗಳು. ಇವುಗಳನ್ನು ಪೊಳಲಿ ಮತ್ತು ರಗಳಲ್ಲಿರುವ ಮೃಣ್ಮಯ ದೇವಿ ವಿಗ್ರಹಗಳೊಂದಿಗೆ ಹೋಲಿಸಬಹುದು.

ಕಾರು ಶಿಲೆಯಿಂದ ಕೆತ್ತಲ್ಪಟ್ಟ ಸುಂದರ ಜಿನಬಿಂಬಗಳು ಎಲ್ಲ ಬಸದಿಗಳನ್ನೂ ಅಲಂಕರಿಸಿವೆ. ರ ವಿಗ್ರಹ ಕೆತ್ತನೆಯಲ್ಲಿ ಪಾರ್ಶ್ವನಾಥನ ವಿಗ್ರಹ ಶಿಲ್ಪಗಳ ಕೌಶಲ ಪ್ರಕಟಣೆಗೆ ಹೆಚ್ಚು ಸೂಕ್ತ ಮೂಡಬಿದುರೆ ಗುರುಬಸದಿಯ ಪಾರ್ಶ್ವನಾಥ ವಿಗ್ರಹ ಇದಕ್ಕೊಂದು ಉದಾಹರಣೆ.

ದೃಷ್ಟಿಯಿಂದ ಇಲ್ಲಿ ಹೆಸರಿಸಬಹುದಾದ ಬಸದಿಗಳೆಂದರೆ ಮೂಡಬಿದುರೆಯ ಗುರುಬಸದಿ ೊಸಬಸದಿ ಹಾಗೂ ಕಾರ್ಕಳದ ಚತುರ್ಮುಖ ಬಸದಿ.

ಸದಿ:

ಗ ನಾವು ನೋಡುವ ಗುರುಬಸದಿಯ ಕಟ್ಟಡ ಹೊಯ್ಸಳ ಉತ್ತರಾರ್ಧ ಕಾಲಕ್ಕೆ ಸೇರಿದ್ದಾಗಿದೆ. ದ ವೇದಿಕೆಯ ಮೇಲೆ ಮಹಾದ್ವಾರವಿದ್ದು ಅದು ಮುಖಮಂಟಪವನ್ನೂ ಹೊಂದಿದೆ. ಇಕ್ಕೆಲಗಳಲ್ಲಿ ಎತ್ತರವಾದ ಜಗಲಿ ಇದೆ. ಎಡಭಾಗದಲ್ಲಿ ಮುನಿಗಳಿಗಾಗಿ ಪೀಠವೊಂದಿದೆ. ಾದ ಅಂಗಳದ ಸುತ್ತಲೂ ಪ್ರದಕ್ಷಿಣ ಪಥವಿದೆ. ಎರಡು ನೆಲೆಯಿಂದ ಕೂಡಿದ ಈ ಬಸದಿ ಂದ ನಿರ್ಮಿತವಾಗಿದೆ. ಇದರ ನವರಂಗದಲ್ಲಿ ಎತ್ತರವಾದ, ಸೊಗಸಾದ ಕೆತ್ತನೆಯಿಂದ ಸ್ತಂಭ ರಾಜಿ ಇದೆ. ಇದರ ಬಲಕ್ಕೆ ಸುಂದರ ಕೆತ್ತನೆಯಿಂದ ಕೂಡಿದ ಚವ್ವೀಸ್ ತೀರ್ಥಂಕರರ ಿದೆ.

ನರಂಗ, ಸುಖನಾಸಿಗಳನ್ನೂ ದಾಟಿದರೆ ಗರ್ಭಗೃಹ. ಇಲ್ಲಿ ಸುಮಾರು 8 ಅಡಿ ಎತ್ತರವಾದ ಾದ ಪಾರ್ಶ್ವನಾಥ ವಿಗ್ರಹವಿದೆ. ಹಿಂದೆ ಸುರುಳಿಸುತ್ತಿ ನಿಂತಿರುವ ನಾಗನಿಗೆ ಒಂಬತ್ತು ೆ. ದೂರದಿಂದ ನೋಡಿದರೆ ಬಿಚ್ಚಿದ ಬೆಳ್ಗೊಡೆಯಂತಿರುವ ನಾಗ ತುಂಬಾ ಭಯಹುಟ್ಟಿಸು ೈಜವಾಗಿ ರೂಪಿತವಾಗಿದೆ.

ಾರ್ಶ್ವನಾಥ ಶಿಖಾರಚನೆ ವಿನೂತನವಾಗಿದೆ. ಕವಿಗಳು ನೀಳವಾಗಿ ತಳಭಾಗವು ಹರಿದು ಬಿದ್ದಂತೆ ಕಾಣುತ್ತದೆ. ಈ ರೀತಿಯಾಗಿ ಕಿವಿಯ ರಂಧ್ರಹರಿದು ಜೋತುಬಿದ್ದಿರುವಂತೆ ಕಡೆಯುವ ತ 10–11ನೆಯ ಶತಮಾನದಲ್ಲಿ ಕರ್ನಾಟಕದಲ್ಲಿತ್ತು. ಒಟ್ಟಿನಲ್ಲಿ ಕಲಾ ಲೋಕಕ್ಕೊಂದು ್ ಕಾಣಿಕೆ ಈ ಪಾರ್ಶ್ವನಾಥ.

ಗುರುಬಸದಿಯು ಪವಿತ್ರ ಧವಳಗ್ರಂಥಗಳು ಹಾಗೂ ನವರತ್ನಬಿಂಬಗಳಿಗೆ ಪ್ರಸಿದ್ಧಿ ಪಡೆದಿದೆ

ಪ್ರಾಯಶಃ ಹಿಂದೆ ವಣಿಕಶ್ರೇಷ್ಠಿಗಳ ಮನೆಯಲ್ಲಿ ಪೂಜೆಗೊಳ್ಳುತ್ತಿದ್ದ ಬಿಂಬಗಳು ಈ ನವರ ಗಳು. ಈ ಎಲ್ಲದರ ದರ್ಶನವನ್ನು ಸಿದ್ಧಾಂತ ದರ್ಶನವೆಂದು ಕರೆಯಲಾಗುತ್ತದೆ. ಈಗ ಇದಕ್ಕೆ ವ್ಯವಸ್ಥೆ ಇದೆ.

ಹೊಸ ಬಸದಿ:

ಸಾವಿರ ಕಂಬದ ಬಸದಿ ಎಂದೇ ಹೆಸರಾದ ಹೊಸ ಬಸದಿ ನಿರ್ಮಾಣವಾದುದು ಕ್ರಿ. ಶ. 14 ಹಂತ ಹಂತವಾಗಿ ಕಟ್ಟಲ್ಪಟ್ಟ ಈ ಬಸದಿ ಪೂರ್ಣವಾದುದು 1462ರಲ್ಲಿ. ಇದನ್ನು ಚಕ್ರವರ್ತಿ ಎ ದೇವರಾಯನ ನಿರೂಪದಿಂದ ರಾಜ್ಯಪಾಲ ದೇವರಾಜೊಡೆಯನು ಅಭಿನವ ಚಾರುಕೀರ್ತಿ ದೇವನಿಗೆ ಚೈತ್ಯಾಲಯ ನಿರ್ಮಾಣಕ್ಕಾಗಿ ಕೊಟ್ಟ ಜಾಗದಲ್ಲಿ ನಿರ್ಮಿಸಲಾಯಿತು. ಊರ ಹಲರು, ಚೌಟರು ಮತ್ತು ಬಲ್ಲಾಳುಗಳ ಸಹಾಯದಿಂದ **"ತ್ರಿಭುವನ ಚೂಡಾಮಣಿಯೆಂಬ ಚೈತ್ಯಾಲಯಮಂ ಜಗದಾಶ್ಚರ್ಯ ಮಪ್ಪಂತು"** ಮಾಡಿಸಿದರು.

ಸುಂದರ ಕೆತ್ತನೆಯಿಂದ ಕೂಡಿದ ಮಹಾ ದ್ವಾರವನ್ನು ದಾಟಿ ಒಳನಡೆದರೆ ನಮಗೆದುರಾಗ ಮಾನಸ್ತಂಭ. (ಇದನ್ನು ನಗಿರೆಯ ಭೈರವರಾಯನ ರಾಣಿ ನಾಗಲಾದೇವಿ ಕೊಡಮಾಡಿದಳು.) ಆ ವಿಶಾಲವಾದ ಅಂಗಣ, ಹೊರ ಪ್ರದಕ್ಷಿಣಾ ಪಥ. ಮೂರು ನೆಲೆಯಲ್ಲಿ ನಿರ್ಮಿಸಿರುವ ಈ ಬಸದಿ ಹಲವು ಭಾಗ (ಮಂಟಪ)ಗಳಾಗಿ ವಿಂಗಡಿಸಲಾಗಿದೆ. ಮಹಾದ್ವಾರವನ್ನು ಪ್ರವೇಶದ್ವಾರಮಂಟಪ ಕರೆಯಲಾಗಿದೆ. ಮುಂದೆ ಭೈರಾದೇವಿ ಮಂಟಪ; ಚಿತ್ರಾದೇವಿ ಮಂಟಪ (ಇದನ್ನು ಗದ್ದಿಗೆ ಮ ಎಂದು ಕರೆಯುವುದುಂಟು); ನಮಸ್ಕಾರ ಮಂಟಪ; ತೀರ್ಥಂಕರ ಮಂಟಪ ಮತ್ತು ನಮಸ್ಕಾರ ಮ ಇವರ ಮುಂದಿರುವುದೇ ಗರ್ಭಗೃಹ ಮಂಟಪ. ಸುಮಾರು 8 ಅಡಿ ಎತ್ತರದ ಚಂದ್ರನಾಥನ ಸ (ಕಂಚಿನ) ವಿಗ್ರಹ ಇಲ್ಲಿ ವಿರಾಜಿಸುತ್ತಿದೆ.

ಈ ಚೈತ್ಯಾಲಯದ ನಡು ಮತ್ತು ಮೇಗಣ ನೆಲೆಗಳಲ್ಲಿ ಕ್ರಮವಾಗಿ ಸುಪಾರ್ಶ್ವ ಮತ್ತು ಪ್ರಭಾ ತೀರ್ಥಂಕರರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಮೇಲ್ಛಾವಣಿಗೆ ನಗಿರೆರಾಜ ಒಂದ ಭೈರವನು ತಾಮ್ರದ ತಗಡುಗಳನ್ನು ಹಾಕಿಸಿದನು.

ಭೈರಾದೇವಿ ಮಂಟಪವನ್ನು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಇಲ್ಲಿಯ ಕಂಬ ಬೃಹತ್ತಾಗಿದ್ದು ಚಾಲುಕ್ಯ ಶೈಲಿಯನ್ನು ಹೋಲುವ ಚಿತ್ರ ಚಮತ್ಕಾರಗಳಿಂದ ಕೂಡಿದೆ. ಅರ್ಧ ಗೋ ಕಾರದಲ್ಲಿರುವ ಇಲ್ಲಿಯ ಭುವನೇಶ್ವರಿ ಕಂಬಗಳ ಆಧಾರದ ಮೇಲೆ ರಾರಾಜಿಸುತ್ತಿದೆ. ಜಗ ಸುತ್ತಲೂ ಭಿತ್ತಿಶಿಲ್ಪಗಳಿವೆ. ಆಫ್ರಿಕಾದ ಜಿರಾಫೆ ಮತ್ತು ಚೀನಾದ ಡ್ರಾಗನ್ ಇಲ್ಲಿ ಹೆಸರಿಸಬಹುದಾ ಗಳು. ಸುಂದರವಾಗಿ ಕೆತ್ತಲ್ಪಟ್ಟ ನಾಲ್ಕು ನಾಲ್ಕು ಬೃಹತ್ ಕಂಬಗಳನ್ನು ಮುಂದಿನ ಮಂಟಪ ನೋಡಬಹುದು. ಇಲ್ಲಿನ ಇನ್ನೊಂದು ಆಕರ್ಷಣೆ ಬೆಳಕು-ಗಾಳಿಗಾಗಿ ಇರಿಸಿರುವ ಜಾಲಂಧ್ರ ಇವೆಲ್ಲವುಗಳಿಂದ ಜಿನಾಲಯ ಸರ್ವಾಂಗ ಸುಂದರವಾಯಿತು. ಇಲ್ಲಿನ ಶಾಸನವೊಂದು ಈ ಚೈತ್ಯಾಲ ಸುಂದರ ವರ್ಣನೆಯನ್ನು ಕೊಡುತ್ತದೆ. ಅದರ ಒಂದೆರಡು ಸಾಲುಗಳನ್ನು ಇಲ್ಲಿ ಗಮನಿಸಬಹುದ

ಲಲಿತಸ್ತಂಭ ಕದಂಬಮಂ ಮದನಕಯ್ಯಂ
ಲೋವೆಯಂ ದ್ವಾರ ಚಿತ್ರಲತಾ ಬಂಧ ಮನುಧ್ವ
ಬಿತ್ತಿಯ ನಧಿಷ್ಠಾನಾದಿಯಂ ಬೇರೆಬೇ ।
ರೊಲವಿಂ ಬಣ್ಣಿಸಿ ಪೇಳಲಾ ನರಿಯೆ
ನೊಂದಂ ಬಲ್ಲೆನಾ ಚೈತ್ಯಕೌಶಲಮಂ ಭಾವಿಸಿ
ವಿಶ್ವಕರ್ಮನಣುಗಿಂದಂ ಶೀರ್ಷಮ ತೂಗುವಂ ॥

ಳದ ಚತುರ್ಮುಖ ಬಸದಿ

ಹೊಸ ಬಸದಿಯು ಹತ್ತು ಸಂವತ್ಸರ ಕೆಲಸವಾದರೆ ಚತುರ್ಮುಖ ಬಸದಿಯು ಒಬ್ಬನ ಕೆಲಸ. ಳದ ರಾಜ ಇಮ್ಮಡಿ ಭೈರವರಾಯನು ಇದನ್ನು 1586ರಲ್ಲಿ ನಿರ್ಮಿಸಿದನು. ಇಲ್ಲಿ ಇರುವ ು ಚತುರಸ್ರ ಬಸದಿಗಳಲ್ಲಿ ಇದೂ ಒಂದು. ಇನ್ನುಳಿದವು (1) ಆನೆಕೆರೆ ಕೆಳಬಸದಿ; (2) ಮಾಂಗದ ಸದಿ. ಪ್ರಕೃತಿ ಸೌಂದರ್ಯದ ನಡುವೆ ಇರುವ ಬಂಡೆಕಲ್ಲಿನ ಚಿಕ್ಕ ಬೆಟ್ಟದ ಮೇಲೆ ಇದರ ನಿರ್ಮಾಣ. ರ್ಣ ಕಗ್ಗಲ್ಲಿನಿಂದ ನಿರ್ಮಿತವಾಗಿರುವ ಈ ಬಸದಿಯನ್ನು ಶಾಸನದಲ್ಲಿ **"ಸಕಲ ಜನಾನಂದ ರವಾದ ಸರ್ವತೋ ಭದ್ರ ಚತುರ್ಮುಖ ರತ್ನತ್ರಯ ರೂಪತ್ರಿಭುವನ ತಿಲಕ ಜಿನ ಚೈತ್ಯಾಲಯ"** ಕರೆಯಲಾಗಿದೆ.

ಇದೊಂದು ಚೌಚೌಕವಾದ ಮಂಟಪ. ಎತ್ತರವಾದ ಜಗಲಿಯ ಮೇಲೆ ನಿರ್ಮಾಣಗೊಂಡಿದೆ ಕ್ಕ ದಿಕ್ಕಿನಲ್ಲೂ ನಾಲ್ಕು ಮಹಾದ್ವಾರಗಳನ್ನು ಹೊಂದಿದೆ. ದ್ವಾರಬಂಧಗಳು ಕಲಾತ್ಮಕವಾಗಿ ಗೊಂಡಿವೆ. ಒಳಗೆ ಈ ದ್ವಾರಗಳಿಗೆದುರಾಗಿ ಅರ, ಮಲ್ಲಿ, ಮುನಿ ಸುವ್ರತರ ಸುಂದರ ಶಿಲಾವಿಗ್ರಹ . ಇಲ್ಲಿನ ಬೃಹತ್ ಕಂಬಗಳ ಆಧಾರದ ಮೇಲಿದೆ ಭಾರವಾದ ಕಲ್ಲುಚಪ್ಪಡಿಗಳ ಮಾಡು.

ಜಗತಿಯ ಮೇಲಿನ ಪ್ರದಕ್ಷಿಣಾಪಥದಲ್ಲಿ ಒಮ್ಮೆ ಒಂದು ಸುತ್ತು ಬಂದರೆ ಪ್ರಶಾಂತ ವಾತಾವರಣ ಸುತ್ತಲಿನ ಪ್ರಕೃತಿ ಸೌಂದರ್ಯದ ರಸಾನುಭವ. ಒಳಗೆ ಶಾಂತಿ ಮತ್ತು ಕೈವಲ್ಯಜ್ಞಾನಗಳ ಶಾನುಭವ.

ಜೈನ ಬಸದಿಗಳೆಂದು ಹೇಳಿದ ಕೂಡಲೆ ಅವುಗಳ ಮುಂದಿರುವ ಮಾನಸ್ತಂಭ ನಮ್ಮ ಕಣ್ಣೆದುರಿಗೆ ವುದು. ಜೈನ ಕಲೆಯಲ್ಲಿ ಜಿಲ್ಲೆಗೆ ವಿಶಿಷ್ಟ ಸ್ಥಾನವನ್ನು ತಂದಿವೆ ಈ ಮಾನ್ತಂಭಗಳು. ಕಾರ್ಕಳ, ಡಬಿದುರೆ ಇತ್ಯಾದಿ ಊರುಗಳಲ್ಲಿ ಏಕಶಿಲಾ ಸ್ತಂಭಗಳಾದ ಈ ಮಾನಸ್ತಂಭಗಳನ್ನು ಕಾಣುತ್ತೇವೆ. ಪೂರ್ಣ ರಚನೆ ಹಾಗೂ ಕುಸುರಿ ಕೆಲಸದಲ್ಲಿ ಇವು ಒಂದನ್ನೊಂದು ಮೀರಿಸುವಷ್ಟು ಸುಂದರವಾಗಿವೆ. ಕ್ಷಕರ ನೋಟವನ್ನು ಸೆರೆಹಿಡಿಯುತ್ತವೆ.

ಸಾಮಾನ್ಯವಾಗಿ ಈ ಎಲ್ಲ ಮಾನಸ್ತಂಭಗಳೂ ಮೂರು ನಾಲ್ಕು ಹಂತಗಳಲ್ಲಿ ನಿರ್ಮಿತವಾದ ವಾದ ವೇದಿಕೆಗಳ ಮೇಲೆ ನಿಂತಿವೆ. ಇವುಗಳ ಶಿಖರ ಭಾಗದಲ್ಲಿ ನಾಲ್ಕು ಕಂಬಗಳ ಒಂದು ಸಣ್ಣ ಟಪವಿದ್ದು ಅದರೊಳಗೆ ಒಂದು ಜಿನಮೂರ್ತಿ ಇದೆ. ವರಾಂಗದಲ್ಲಿರುವ ಮಾನಸ್ತಂಭ ತೀರಾ ವಾಗಿದೆ. ಆದರೆ ಇದು ಜಿಲ್ಲೆಯ ಅತ್ಯಂತ ಪ್ರಾಚೀನ ಮಾನಸ್ತಂಭ.

ಹುಬಲಿ ವಿಗ್ರಹ

ಆದರೆ, ಇವೆಲ್ಲಕ್ಕೂ ಮಿಗಿಲಾದ ಕಲಾಮೂರ್ತಿ ಎಂದರೆ ಕಾರ್ಕಳದ ಬಾಹುಬಲಿ ವಿಗ್ರಹ. ರ್ಣಟಕದ ಖ್ಯಾತಿವೆತ್ತ ಬಾಹುಬಲಿ ಪ್ರತಿಮೆಗಳಲ್ಲಿ ಇದು ಎರಡನೆಯದು. ಗೊಮ್ಮಟಬೆಟ್ಟ ಎಂದು ಯಲ್ಪಡುವ ದೊಡ್ಡ ಬೆಟ್ಟದ ಮೇಲೆ ಪಾಂಡ್ಯರಾಜನು ಕ್ರಿ.ಶ. 1432ರಲ್ಲಿ ಇದನ್ನು ಲಲಿತಕೀರ್ತಿ ನಿಗಳ ಉಪದೇಶದ ಮೇರೆಗೆ ಸ್ಥಾಪಿಸಿದನು. ಚದುರಚಂದ್ರಮನು ಇದರ ಪ್ರತಿಷ್ಠಾಪನೆಯ ದರ ವರ್ಣನೆಯನ್ನು ನಮಗೆ ಕೊಡುತ್ತಾನೆ. ನಾಸಾಗ್ರದಲ್ಲಿನ ಸಮದೃಷ್ಟಿ, ಧ್ಯಾನವಿಲಾಸ, ಶಾಂತರಸ ನ್ನು ಸೂಚಿಸುವ ನಗೆಮೊಗ, ಆಜಾನುಬಾಹುಗಳು ಈ ಬಾಹುಬಲಿ ಶಿಲ್ಪ ವೈಶಿಷ್ಟ್ಯಗಳು.

ಇದರ ಮಹಾದ್ವಾರದ ಮುಂದೆ ಒಂದು ಬ್ರಹ್ಮದೇವ ಸ್ತಂಭ. ಇದರ ಮೇಲೆ ತುಂಬ ಕಲಾತ್ಮಕ ಗಿ ಕೆತ್ತಿರುವ ಬ್ರಹ್ಮನ ವಿಗ್ರಹವಿದೆ. ಅದೇ ಪಾಂಡ್ಯರಾಜ. ಇದನ್ನು ಕ್ರಿ.ಶ. 1436ರಲ್ಲಿ ಪ್ರತಿಷ್ಠಾಪಿಸಿದ.

ಗೊಮ್ಮಟಬೆಟ್ಟದಿಂದ ಒಂದು ಸಾರಿ ಸುತ್ತೆಲ್ಲಾ ದೃಷ್ಟಿ ಹಾಯಿಸಿದರೆ ಸ್ವರ್ಗೀಯವಾ ತೃಪ್ತಿ, ಸಂತೋಷ. ಇಲ್ಲಿಯ ಹಸಿರು ವನರಾಜಿ, ಅಮೃತಕಲಶವನ್ನು ಹೊತ್ತಂತಿರುವ ತೆ ಗಳು, ಮೇರುಪರ್ವತದಂತಿರುವ ಸಹ್ಯಾದ್ರಿಶ್ರೇಣಿ, ಕ್ಷೀರಸಾಗರದಂತಿರುವ ರಾಮಸಮು ಅಮ್ಮನವರ ಬಸದಿ, ಚಿಕ್ಕಬೆಟ್ಟದ ಮೇಲಿನ ಚತುರ್ಮುಖ ಬಸದಿ, ಎಲ್ಲವೂ ವರ್ಣನಾತೀ

ಒಟ್ಟಿನಲ್ಲಿ ಕಾರ್ಕಳ ಮತ್ತು ಮೂಡಬಿದುರೆಗಳು (ವೇಣೂರು ಸಹ) ಜೈನ ಕ ಸಂಗ್ರಹಾಲಯಗಳಂತಿವೆ. ಕಗ್ಗಲ್ಲಿನಲ್ಲಿ ಕಾವ್ಯಮೂಡಿಸುವುದು ಸುಲಭ ಸಾಧ್ಯದ ಕೆಲಸ ಇಲ್ಲಿ ಸಾಧ್ಯವಾಗಿದೆ. ಹೀಗಾಗಿ ಕಲೆ ತನ್ನ ಸತ್ವವನ್ನು ಉಳಿಸಿಕೊಂಡಿದೆ.

ದೇಶೀಯ ಹಾಗೂ ವಿದೇಶೀಯ ಕಲಾ ವಿಮರ್ಶಕರು ಇಲ್ಲಿನ ಜೈನ ಕಲೆಯನ್ನು ಪ್ರಶಂಸಿಸಿದ್ದಾರೆ. ಬಾಹುಬಲಿ ಮೂರ್ತಿ, ಮಾನಸ್ತಂಭ ಮತ್ತು ಕೆಲವು ಬಸದಿಗಳಲ್ಲಿನ ಸ್ತಂಭ ಪ್ರಾಚೀನ ಈಜಿಪ್ಟ್‌ನ ಕಲಾಪ್ರಾಕಾರಗಳಿಗೆ ಹೋಲಿಸಿದ್ದಾರೆ. ಇದರಿಂದ ಇವುಗಳ ಮಹ ಹಿರಿದಾಗಿದೆ.

ಲಲಿತ ಕಲೆಗಳು

ಜೈನರಾಜರ ಆಸ್ಥಾನಗಳು ನೃತ್ಯ, ಸಂಗೀತ ಇತ್ಯಾದಿ ಲಲಿತಕಲೆಗಳಿಗೆ ಆಶ್ರಯ ಸ್ಥಾನ ರತ್ನಾಕರವರ್ಣಿ ಮತ್ತು ಚಂದ್ರಮರ ಕಾವ್ಯಗಳು ಇದಕ್ಕೆ ಸೂಕ್ತ ಉದಾಹರಣೆ ಕೊಡುತ್ತವೆ.

ಆದರೆ ಚಿತ್ರಕಲೆ ಅಷ್ಟಾಗಿ ಬೆಳೆಯಲಿಲ್ಲ. ಮೂಡಬಿದುರೆಯಲ್ಲಿ ರಕ್ಷಿಸಲ್ಪಟ್ಟಿರುವ ಧ ಗಳಲ್ಲಿ ಪುರಾತನ ಚಿತ್ರಕಲೆಯನ್ನು ಕಾಣಬಹುದು. ಇವುಗಳ ಕಾಲ ಸುಮಾರು ಕ್ರಿ.ಶ. 12ನೆಯ ಇಲ್ಲಿಯ ಚಿತ್ರಗಳ ವರ್ಣವಿನ್ಯಾಸ ಗಮನಾರ್ಹವಾದುದು.

ಮೂಡಬಿದುರೆ ಜೈನಮಠವೂ ಸಹ ಗೋಡೆಗಳಲ್ಲಿ ತೈಲವರ್ಣದ ಭಿತ್ತಿಚಿತ್ರಗಳನ್ನು ಹ ಗಾಢವರ್ಣಗಳಿಂದ ಕೂಡಿದ್ದ ಈ ಚಿತ್ರಗಳು ತನ್ನ ರೀತಿಯಲ್ಲಿ ವಿಶಿಷ್ಟವಾದವು. ಇವು ಬೇರೆ ಪ್ರಮುಖ ಚಿತ್ರಗಳಿಗೆ ಸರಿಸಮ ನಿಲ್ಲುವಂತಿದ್ದುವು. ಈಗ ಗೋಡೆಗೆ ಆಧುನಿಕ ಬಣ್ಣಗಳ ಲೇಪ ದಾನಿಗಳ ಹೆಸರನ್ನು ಹೊತ್ತ ಫಲಕಗಳಿಂದಾಗಿ ಇವು ಬಹುತೇಕ ನಾಶವಾಗಿವೆ.

ಒಟ್ಟಿನಲ್ಲಿ ಸಾವಿರಾರು ವರ್ಷಗಳ ಭವ್ಯ ಇತಿಹಾಸದ ಹಿನ್ನೆಲೆಯುಲ್ಲಿ ಸಹ್ಯಾದ್ರಿಯ ತಿಳಿ ನೀರು ಹರಿದು ಜೀವನವನ್ನು ಪಾವನಗೊಳಿಸಿ ಧರ್ಮ, ಸಾಹಿತ್ಯ ಹಾಗೂ ಕಲೆಗಳನ್ನು ಶ್ರೀಮಂತ ಪ್ರದೇಶ ಇದು. ಕಲ್ಯಾಣ ಕೀರ್ತಿ, ರತ್ನಾಕರ ವರ್ಣಿ, ಮುದ್ದಣರಂತಹ ಕವಿಗಳು, ವಿಶ್ವವಿಖ್ಯಾ ರಂಜಾಳ ಗೋಪಾಲ ಶೆಣೈಯಂತಹವರನ್ನು ನಾಡಿಗೆ ನೀಡಿದ ಈ ಸ್ಥಳ ಧನ್ಯ. ಸಾಹಿತ್ಯ ಸಂಸ್ಕ ಕಲೆಗಳನ್ನು ಇನ್ನೂ ಮುಂದುವರೆಸಿಕೊಂಡು ಹೋಗುತ್ತಿರುವುದು ಈ ನೆಲದ ವೈಶಿಷ್ಟ್ಯ.

ಗ್ರಂಥಋಣ


1. Dr. B. A. Saletore : **Ancient Karnataka Vol. I.** **History of Tuluva.** Poona 1

2. Dr. K. V. Ramesh : 1. **A History of South Kar** Dharwad, 1970

   2. **ತುಳುನಾಡಿನ ಇತಿಹಾಸ.** ಉಡುಪಿ

ಡಾ. ಕೆ. ವಿ. ರಮೇಶ ಮತ್ತು ಎಂ. ಜೆ. ಶರ್ಮ	—	ತುಳುನಾಡಿನ ಶಾಸನಗಳು. ಸಂಪುಟ ಒಂದು — 1978
Dr. P. Gururaja Bhat	:	**1. Antiquities of South Kanara** Kallianpur — 1969.
	:	**2. Studies in Tuluva History and Culture** Kallianpur — 1975
Dr. P. N. Narasimha Murthy	:	**Jainism on the Kanara Coast.**

ಸಾಹಿತ್ಯ ಸಂಪತ್ತು



ಎಮ್. ರಾಮಚಂದ್ರ, ಎಂ.ಎ.

ಶ್ರೀ ಭುವನೇಂದ್ರ ಕಾಲೇಜಿನ ಕನ್ನಡ ವಿಭಾಗದಲ್ಲಿ 1962 ರಿಂದಲೂ ಸೇವೆ ಸಲ್ಲಿಸಿ, ಪ್ರಕೃತ ರೀಡರ್ ಮತ್ತು ವಿಭಾಗದ ಮುಖ್ಯಸ್ಥರಾಗಿರುವ ಶ್ರೀ ಎಂ. ರಾಮಚಂದ್ರರು 'ಸೇಡಿಯಾಪು ಕೃಷ್ಣ ಭಟ್ಟರು', 'ಒಸಗೆ' ಮತ್ತು 'ಬಾಡದ ಹೂಗಳ' ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಚಂದ್ರ ಖಂಡ' 'ಬಾಸಿಗ' ಮತ್ತು 'ಉಪಹಾರ'ಗಳೆಂಬ ಪುಸ್ತಕಗಳನ್ನು ಸಂಪಾದಿಸಿದ್ದಾರೆ. ನಾನಾ ವಿಷಯಕವಾದ ಅವರ ಲೇಖನಗಳು ವಿವಿಧ ಗ್ರಂಥಗಳಲ್ಲೂ ಪತ್ರಿಕೆಗಳಲ್ಲೂ ಪ್ರಕಟವಾಗಿವೆ. ನಾಡಿನ ನಾಲ್ಕಾರು ಸಾಹಿತ್ಯ – ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ಅವರಿಗೆ ನಿಕಟ ಸಂಬಂಧವಿದೆ.

ಕಾರ್ಕಳದ ಶಿಲಾಗರ್ಭದಲ್ಲಿರುವ ಸಾಹಿತ್ಯ ಸಂಪತ್ತನ್ನು ಎತ್ತಿ ತೋರಿಸುವುದರೊಂದಿಗೆ ಇಲ್ಲಿಯ ಕಲ್ಲು ನೆಲದಲ್ಲಿ ಹುಟ್ಟಿ ಹೂ ಹಣ್ಣುಗಳನ್ನು ನೀಡಿದ, ನೀಡುತ್ತಿರುವ ಅರ್ವಾಚೀನ ಕಾವ್ಯಲತೆಗಳ ಸೊಗಸನ್ನೂ ಸೊಂಪನ್ನು ಮೆಚ್ಚಿ ಆಡುವ ಒಂದು ಪ್ರಯತ್ನ 'ಸಾಹಿತ್ಯ ಸಂಪತ್ತು' ಎಂಬ ಲೇಖನ.

ಸಾಹಿತ್ಯ ಸಂಪತ್ತು

'ಕಲೆಯಿಂದ ಶಿಲೆಯಮೃತ, ಲಲಿತಕಲೆ ಹೃತ್ಸುಕೃತ'- ಇದು ಡಿ. ವಿ. ಜಿ.ಯವರ ಒಂದು ೂಕ್ತಿ. ಬೇಲೂರು ಗುಡಿಯನ್ನು ಕುರಿತು ಅವರು ಆಡಿದ ಮಾತು ಇದು. ಈ ಮಾತು ಅಷ್ಟೇ ಸಮು ತವಾಗಿ ಕಾರ್ಕಳಕ್ಕೂ ಅನ್ವಯಿಸುತ್ತದೆ. ಏಕೆಂದರೆ ಶಿಲಾಮಯವಾದ 'ಕಾರ್ಕಳ'ವೂ ಒಂದು 'ಕಲೆಯ ಲೆ', 'ಬಿಳಿಯ ಕೊಳದ, ಕಾರಕಳದ ನಿಡುಕರೆನಿತೊ ಬಂಧುರಂ' ಎಂದು ಹಾಡಿ ಕೊಂಡಾಡಿದ್ದಾರೆ ೦। ಗೋವಿಂದ ಪೈ. ಶ್ರವಣಬೆಳಗೊಳದಲ್ಲಿರುವಂತೆಯೇ ಭವ್ಯವಾದ ಗೊಮ್ಮಟಬಿಂಬವೊಂದು ರ್ಕಳದಲ್ಲೂ ಇದೆ. ಅದರೊಂದಿಗೆ ಚತುರಸ್ರವಾದ ಚತುರ್ಮುಖಬಸದಿ, ಹಿರಿಯಂಗಡಿಯ ಉನ್ನತ ನಸ್ತಂಭ, ಅನಂತಶಯನನ ಸುಪ್ರಸನ್ನ ಮೂರ್ತಿಗಳೂ ಕಾರ್ಕಳದಲ್ಲಿವೆ. ಈ ಚಿತ್ತಾಕರ್ಷಕ ಶಿಲಾ ತಿಗಳೊಂದಿಗೆ ಗಂಭೀರ ಮನೋಹರ ಪ್ರಕೃತಿ - ಪೂರ್ವದಲ್ಲಿ ಉತ್ತುಂಗ ಸಹ್ಯಗಿರಿ, ಸಮೀಪದಲ್ಲಿ ಶಾಲ ರಾಮಸಮುದ್ರ, ಕಣ್ಣು ಹಾಯಿಸಿದಲ್ಲೆಲ್ಲ ಗಿಡಮರಗಳ ಹಸುರು, ಕಿವಿಗೆ ಹಕ್ಕಿ ಾಡಿನ ಜೇನು. ಇವನ್ನೆಲ್ಲ ಕಂಡು - ಉಂಡು ರಸಿಕ ಹೃದಯ ತಣಿಯುತ್ತದೆ, ಹುಚ್ಚೆದ್ದು ಣಿಯುತ್ತದೆ.

ಪ್ರಕೃತಿಯಿಂದ ಪ್ರೇರಿತವಾಗಿ ಕಲಾಸೃಷ್ಟಿ, ಕಲೆಯಿಂದ ಚೋದಿತವಾಗಿ ಸಾಹಿತ್ಯರಚನೆ, ಪ್ರಕೃತಿ - ಕಲೆ - ಸಾಹಿತ್ಯ ಈ ಮೂರರಿಂದಲೂ ಪ್ರಭಾವಿತವಾಗಿ ಜೀವನದೃಷ್ಟಿ - ಇದೊಂದು ವರ್ತುಲ. ಕಾರ್ಕಳದಲ್ಲಿ ಇದನ್ನು ಕಾಣುತ್ತೇವೆ. ಕಲಾಕಾರನಿಗೆ ಏನು ಬೇಕು, ಕವಿಯ ಆಕರ ಯಾವುದು, ಸರಸ ಜೀವಿ ಏನನ್ನು ಅಪೇಕ್ಷಿಸುತ್ತಾನೆ - ಅವೆಲ್ಲ ಇಲ್ಲಿವೆ. ಕಣ್ಮನಗಳನ್ನು ಸೆಳೆದು ನಿಲ್ಲಿಸುವ ನಿಸರ್ಗ ಸಂಪತ್ತು, ಕಲಾಕೃತಿಗಳು ಮಾತ್ರವೇ ಅಲ್ಲ, ಧನಧಾನ್ಯ ಸಮೃದ್ಧಿಯೂ ಇಲ್ಲಿದೆ. ಕಾಲ ಕಾಲಕ್ಕೆ ಧಾರಾಳವಾಗಿ. ಮಳೆ, ಮಳೆಯಿಂದಾಗಿ ಕಣಜ ತುಂಬ ಹೊನ್ನಿನ ಬೆಳೆ - ಬತ್ತ, ತೆಂಗು, ಅಡಕೆ, ಗೇರು, ಗೆಣಸು, ಹಲಸು, ಅನನಾಸು - ಪೊಲದಲ್ಲಿ ಬಿತ್ತಿದ್ದೇ, ಕಾಡಿನಲ್ಲಿ ಬೆಳೆದದ್ದೇ, ಗಿರಣಿಯಲ್ಲಿ ಕುಟ್ಟಿದ್ದೇ? - ಕವಿ ಕಡೆಂಗೋಡ್ಲು "ಪಸೆಲ್ಲ, ಏನಿರದು, ಹೊಂಬಯಕೆ ಬಟ್ಟಲಿದು! ನಮ್ಮ ಪುಣ್ಯವ ತೂಗಿ ತೊನೆವ ತೊಟ್ಟಿಲಿದು" ಎಂದು ಕನ್ನಡ ನಾಡನ್ನು ಕೊಂಡಾಡಿ ಕೊನೆದರು. ಅಂತಹ ಕರ್ನಾಟಕದ ಒಂದು ಭೂಭಾಗ ನಮ್ಮ ಕಾರ್ಕಳ. ಯಾವುದು ಪೂರ್ಣದಲ್ಲಿ ಸತ್ಯವೋ ಅದು ಅಂಶದಲ್ಲೂ ನಿಜವಷ್ಟೇ?

ಕರ್ + ಕಲ್ಲಿನಿಂದ ಕಾರ್ಗಲ್ - ಕಾರ್ಕಳವೋ ಕಾರ್ + (ಮಳೆ) ಕಳ (ನೆಲೆ) ಎಂಬುದರಿಂದ ಕಾರಕಳವೋ ಎಂಬ ವಾಗ್ಯುದ್ಧ ಶಬ್ದನಿಷ್ಪತ್ತಿಕುತೂಹಲಿಗಳಿಗಿರಲಿ, ನಮಗದು ಬೇಕಿಲ್ಲ. ಕಲ್ಲು ಇರುವುದು ಕಣ್ಣಿಗೆ ಕಾಣುತ್ತಿದೆ, ಮಳೆ ಬೀಳುವುದು ಬೆಳೆಯಿಂದ ತಿಳಿಯುತ್ತದೆ. ಮಳೆಯಿಂದ ಕುಡಿಯುವ ನೀರು, ಹಸುರಿನ ಬೆಳೆಯಾದರೆ ಕಲ್ಲಿನಿಂದೇನು ಎಂದು ಕೇಳುತ್ತೀರಾ? - ಕಲ್ಲು ಕಲೆಗಾಗುತ್ತದೆ ಒರಟು ಬಂಡೆಯ ಅಡಿಯಲ್ಲೋ, ಎಡೆಯಲ್ಲೋ ತಿಳಿನೀರು ಒಸರುತ್ತದೆ; ಕಾಠಿನ್ಯದ ಗರ್ಭವೇ ಮೃದುತ್ವದ ಮೂಲ ಎಂಬ ತತ್ವವನ್ನು ಸಾರುತ್ತದೆ. ಕಾರ್ಕಳಕ್ಕೆ ಇದು ಎರಡೂ ಸರಿಯೇ. ದೃಶ್ಯ ಹೃದ್ಯ (ಅಥವಾ ಶ್ರವ್ಯ) ಎರಡೂ ಇಲ್ಲಿವೆ. ಸಾಹಿತ್ಯದ ಮೂಲಾಂಶವೇ ಅದು. ಶಬ್ದಜಾಲಗಳು ಕಣ್ಣು ಕಿವಿಗಳನ್ನು ಒಲಿಸಿದರೆ ಅರ್ಥ ಸಂಪತ್ತು ಹೃದಯವನ್ನು ರಮಿಸುತ್ತದೆ. ಸುಮಾರು ಆರು ಶತಮಾನ ಗಳಿಂದ ಕಾರ್ಕಳದಲ್ಲಿ ಸಾಹಿತ್ಯಸೃಷ್ಟಿ ನಡೆಯುತ್ತಿದೆ. ಒಮ್ಮೊಮ್ಮೆ ವಿರಳವಾಗಿ, ಒಮ್ಮೊಮ್ಮೆ ಸಾಂದ್ರ

ವಾಗಿ ಆದರೂ ಒಟ್ಟಿನಲ್ಲಿ ಪರಿಣಾಮಕಾರಿಯಾಗಿ ನಡೆಯುತ್ತದೆ. ರಾಜಾಶ್ರಯದಲ್ಲಿ, ಸಂಘ - ಸಂಸ್ ಮೂಲಕ ಅಥವಾ ಎರಡಕ್ಕೂ ದೂರವಾಗಿ ವೈಯಕ್ತಿಕ ನೆಲೆಯಲ್ಲಿ ಸಾಹಿತ್ಯರಚನೆ ಆಗುತ್ತಿದೆ. ಆರು ಶತಕಗಳ ಕಾಲ, ಕಾರ್ಕಳ ತಾಲೂಕಿನಲ್ಲಿ ಸಾಹಿತ್ಯವು ನಡೆದು ಬಂದ ದಾರಿಯ ಕಡೆಗೆ ಒ ಹೊರಳು ನೋಟವನ್ನು ಹಾಯಿಸುವುದು, ಅಲ್ಲಿಯ ಮೈಲುಕಲ್ಲುಗಳನ್ನು ಗುರುತಿಸುವುದು ಲೇಖನದ ಉದ್ದೇಶ.

○ ○ ○

'ವಿಕ್ರಮಾರ್ಜುನ ವಿಜಯ'ವೇ ಮೊದಲಾದ ಒಂಬತ್ತು ಕಾವ್ಯಗ್ರಂಥಗಳನ್ನು ಕನ್ನಡದ ನವ ಗಳೆಂದು ಈ ಜಿಲ್ಲೆಯ ಹಿರಿಯ ಸಾಹಿತಿ ಶ್ರೀ ಸೇಡಿಯಾಪು ಕೃಷ್ಣಭಟ್ಟರು ವರ್ಣಿಸಿದ್ದುಂಟು. ಕನ ಸರಸ್ವತಿಯ ಕಂಠಹಾರದ ಈ ನವಮಣಿಗಳಲ್ಲಿ ಎರಡನ್ನು ಕಡೆದವರು ಈ ಜಿಲ್ಲೆಯವರು, ಆದರಲ ನಮ್ಮ ಕಾರ್ಕಳ ತಾಲೂಕಿನವರು ಎಂಬುದು ನಮಗೆಲ್ಲ ಹೆಮ್ಮೆಯ ಮಾತು. ಅವರೇ ಮೂಡಬಿದಿರ ರತ್ನಾಕರ ವರ್ಣಿ ಮತ್ತು ನಂದಳಿಕೆಯ ಲಕ್ಷ್ಮೀನಾರಾಯಣಪ್ಪ, ಶ್ರೀ ಎಂ. ಗೋವಿಂದ ಪೈಯವ ಒಮ್ಮೆ ಉದ್ಗರಿಸಿದ್ದರು: 'ವಿಶ್ವ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ತುಳುಗನ್ನಡವನ್ನು ಪ್ರತಿನಿಧಿ ವುದಕ್ಕೆ ರತ್ನಾಕರ ಸಿದ್ಧನೂ ಇದ್ದಾನೆ, ನಂದಳಿಕೆ ಲಕ್ಷ್ಮೀನಾರಾಯಣಪ್ಪನೂ ಇದ್ದಾನೆ'! – ಒಂದು ನಾ ನುಡಿಗಳಿಗೆ ಇದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೇನಿದೆ? ಹಳ್ಳ ಕೊಳ್ಳಗಳ ತಗ್ಗಿನ ನೆಲದಲ್ಲಿರು ಈ ಕರೆನಾಡಿಗೆ ಕನ್ನಡದಲ್ಲಿ ಎತ್ತರದ ಸ್ಥಾನ ಮಾನಗಳನ್ನು ಗಳಿಸಿಕೊಟ್ಟಿರುವ ಈ ಇಬ್ಬರಲ್ಲಿ ಒ ರಸಿಕಕವಿ, ಕ್ರಾಂತಿಕಾರಿ; ಮತ್ತೊಬ್ಬ ಕವಿವಲ್ಲಭ ಕ್ರಾಂತದರ್ಶಿ. ರತ್ನಾಕರನ ಸಾಂಗತ್ಯ, ಮುದ್ದಣನ ಗ ಈ ಎರಡೂ ಕನ್ನಡದ ನೆಲದಲ್ಲಿ ಹೊನ್ನಿನ ಬೆಳೆಗಳು.

ರಸಿಕ ಕವಿ ರತ್ನಾಕರ:

ರತ್ನಾಕರವರ್ಣಿ, ರತ್ನಾಕರಸಿದ್ಧ, ರತ್ನಾಕರ ಅಣ್ಣ ಎಂದು ಬಹು ನಾಮಕನಾಗಿರುವ ಕವಿರತ್ನಾಕ ಮೂಡಬಿದಿರೆಯವನೆಂದು ಪ್ರಸಿದ್ಧಿ. 'ಶೃಂಗಾರ ಕವಿ ಹಂಸರಾಜ' ಎಂಬುದು ಅವನ ಮೆಚ್ಚಿನ ಬಿರುದು ಅವನ ಕಾಲವನ್ನು ಕುರಿತು ವಿದ್ವಾಂಸರಲ್ಲಿ ಒಮ್ಮತವಿಲ್ಲವಾದರೂ ತೋರವಟ್ಟಿಗೆ 16ನೆಯ ಶತಮಾನ ಕ್ರಿ.ಶ. 1500ರಲ್ಲಿ ರತ್ನಾಕರ ಹುಟ್ಟಿರಬೇಕೆಂದು ಶ್ರೀ ಗೋವಿಂದ ಪೈಯವರ ಊಹೆ. ಕಾರ್ಕಳ ಮೂಡಬಿದಿರೆಗಳು ಜೈನ ಅರಸರ ಆಳ್ವಿಕೆಗೆ ಒಳಗಾಗಿದ್ದು ರತ್ನಾಕರನು ಕಾರ್ಕಳದ ಇಮ್ಮಡಿ ವೀ ಭೈರರಸನ ಆಶ್ರಿತನಾಗಿದ್ದನೆಂಬುದೂ ಬಹುಜನರ ಅಭಿಪ್ರಾಯ. ಮೂಡಬಿದಿರೆ - ಕಾರ್ಕಳಗಳ ನಡು ಓಡಾಡುತ್ತಿದ್ದ ರತ್ನಾಕರ ಕಾಲಾಂತರದಲ್ಲಿ, ಕಾರಣಾಂತರಗಳಿಂದ - ಅರಗುವರಿಗೆ ಕಣ್ಣಿರಿಸಿ, ಅವಳೊ ವಿ ಆಡಿದ ಪ್ರಣಯಲೀಲೆ ಮತ್ತು ಜೈನಧರ್ಮದ ಮೂಲ ತತ್ವಗಳಿಗೆ ವಿರುದ್ಧವಾದ 'ಭರತೇಶ ವೈಭವ' ಕಥಾವಿನ್ಯಾಸ ಈ ಎರಡು ಮುಖ್ಯ ಕಾರಣಗಳಿಂದ - ಅರಮನೆ, ಗುರುಮಠ ಮತ್ತು ಸಮಾಜಗಳಿಂ ಬಹಿಷ್ಕೃತನಾಗಿ, ಊರುಬಿಟ್ಟು ಘಟ್ಟಕ್ಕೆ ಓಡಿಹೋಗಿರಬೇಕೆಂಬುದೂ ಸಾಮಾನ್ಯವಾದ ನಂಬಿ ಮಾತ್ರವಲ್ಲ, ಮನಃಕ್ಷತಗೊಂಡಿದ್ದ ರತ್ನಾಕರ ಜೈನ ಮತವನ್ನು ತ್ಯಜಿಸಿ, ಲಿಂಗದೀಕ್ಷೆಯನು ಪಡೆದನೆಂಬ ಹೇಳಿಕೆಯೂ ಇದೆ. ಆದರೆ ಮತ್ತೆ ತಪ್ಪಿನ ಅರಿವಾಗಿ, ಕಣ್ಣೀರಿನಲ್ಲಿ ತೀರ್ಥಸ್ನಾನ ಮಾ ಪರಿಶುದ್ಧಮನಸ್ಕನಾದ ರತ್ನಾಕರ ಮಾತೃಧರ್ಮಕ್ಕೇ ಪರಾವರ್ತನಗೊಂಡನೆಂಬ ಐತಿಹ್ಯವೂ ಇದ ಪೂರ್ವ ವಯಸ್ಸಿನಲ್ಲಿ ಮೂಡಬಿದಿರೆಯ ಚಾರುಕೀರ್ತಿ, ಅಪರ ವಯಸ್ಸಿನಲ್ಲಿ ಹುಮಚದ ದೇವೇಂದ ಕೀರ್ತಿಗಳಿಂದಲೂ ದೀಕ್ಷೆ, ತಾರುಣ್ಯದ ಕೊಬ್ಬಿನಲ್ಲಿ ಸಿದ್ಧ ವಿದ್ಯಾಪ್ರಾಪ್ತಿಗಾಗಿ ನಾಥಪಂಥದಲ್ಲೂ ಆಸಕ್ತಿ ಪರಂಪರಾಗತ ಶ್ರದ್ಧಾ ವಿರೋಧಿಯಾದ ಕಾವ್ಯ ರಚನೆ, ರಾಜಪುತ್ರೀ ಪ್ರಣಯ ಕುತೂಹಲ, ದೇ ತ್ಯಾಗ, ಪಶ್ಚಾತ್ತಾಪ - ಹೀಗೆ ರತ್ನಾಕರನ ಜೀವನಚಕ್ರ ಹಳ್ಳ ತಿಟ್ಟುಗಳಲ್ಲಿ ಹರಿದು, ಸಮತಲದ ಬಂದು ನಿಲ್ಲುವ ಹೊತ್ತಿಗೆ ಅವನೊಬ್ಬ ನಿಜವಾದ 'ಯೋಗಸಿದ್ಧ'ನೇ ಆಗಿರಬೇಕು. ಪ್ರಾಯಃ ಕನ್ನಡ ಯಾವನೇ ಕವಿಯ ಜೀವನ ಚರಿತದಲ್ಲೂ ಇಲ್ಲದ ಒಂದು ವರ್ಣರಂಜಕತೆ, 'ರೊಮ್ಯಾಂಟಿಕ್' ಎನ

ತನ್ನು ನಾವು ರತ್ನಾಕರನಲ್ಲಿ ಕಾಣುತ್ತೇವೆ. ಈ ನೆಲೆಯಲ್ಲಿ ಅವನು ಸಂಸ್ಕೃತದ ಪ್ರಚಂಡ ಕವಿ ಜಗನ್ನಾಥ ಂಡಿತನಿಗೆ ಸರಿದೊರೆಯಾಗಿದ್ದಾನೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

'ಭರತೇಶ ವೈಭವ' ರತ್ನಾಕರನ ಕೃತಿರತ್ನ. ಅದನ್ನು 'ಭರತೇಶ ಸಂಗತಿ', 'ಅಣ್ಣಾಳ ಚರಿತೆ' ಂದೂ ಕರೆಯುವುದುಂಟು. ಕೇವಲ ಜಾನಪದ ಜೀವನ ಚಿತ್ರಣಕ್ಕೆ ಮಾತ್ರ ಮೀಸಲಾಗಿದ ಶುದ್ಧ ನ್ನಡ ಛಂದಸ್ಸು ಸಾಂಗತ್ಯದಲ್ಲಿ ಒಂದು ಮಹಾಕಾವ್ಯವನ್ನು ರಚಿಸಿದ ಕೀರ್ತಿ - ಶ್ರೇಯಸ್ಸುಗಳೆರಡೂ ತ್ನಾಕರನಿಗೆ ಸಲ್ಲುತ್ತವೆ. ಜಿನಸೇನಾಚಾರ್ಯರ ಸಂಸ್ಕೃತ 'ಮಹಾಪುರಾಣ'ದಲ್ಲೂ ಕನ್ನಡದ ಪಂಪ ನಿಯ 'ಆದಿಪುರಾಣ'ದಲ್ಲೂ ವರ್ಣಿತರಾದ ಆದಿಜಿನತನಯರಲ್ಲಿ ರಾಜ್ಯಲೋಭದಿಂದ ಸೋದರರನ್ನೇ ದನಕ್ಕೆ ಕರೆದು, ಕಿರಿಯನಾದ ಬಾಹುಬಲಿಯಿಂದ ಪರಾಭವವನ್ನು ಹೊಂದಿದ ಹಿರಿಯಣ್ಣ ಭರತನಿಗೆ ೂದಲಿನ ಎರಡು ಕಾವ್ಯಗಳಲ್ಲಿ ಇಲ್ಲದ ಪ್ರಾಧಾನ್ಯವನ್ನು ನೀಡಿ ಅವನನ್ನು ಓರ್ವ ಭೋಗ, ಯೋಗ ಮನ್ವಯ ಸಾಧಕನಾಗಿ ರೂಪಿಸಿದ್ದಾನೆ ರತ್ನಾಕರವರ್ಣಿ. ಪ್ರಥಮ ತೀರ್ಥಂಕರನ ಜ್ಯೇಷ್ಠಪುತ್ರನೂ ಪ್ರಥಮ ಚಕ್ರವರ್ತಿಯೂ ಆಗಿರುವ ಭರತನನ್ನು ಅಂತರಂಗದಲ್ಲೂ ಅಂತಸ್ಸತ್ವದಲ್ಲೂ ಒಬ್ಬ ಕೇವಲಿ ಯೆಂದೇ ಚಿತ್ರಿಸುವುದು ರತ್ನಾಕರನ ಉದ್ದೇಶ. ಅದಕ್ಕಾಗಿ ತೀರ್ಥಂಕರ ಚರಿತಕ್ಕೆ ಸಹಜವಾದ ಗರ್ಭಾವ ರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನ, ನಿರ್ವಾಣಗಳೆಂಬ ಪಂಚ ಮಹಾ ಕಲ್ಯಾಣ ಳನ್ನೇ ಹೋಲುವಂತೆ ತನ್ನ ಕಾವ್ಯದ ಭೋಗ ವಿಜಯ, ದಿಗ್ವಿಜಯ, ಯೋಗ ವಿಜಯ, ಮೋಕ್ಷ ಜಯ, ಅರ್ಕ ಕೀರ್ತಿ ವಿಜಯಗಳೆಂಬ ಐದು ಕಲ್ಯಾಣಗಳಲ್ಲಿ ಭರತ ಚಕ್ರಿಯ ಜೀವನವನ್ನು ಉದಾತ್ತೀ ರಿಸಿದ್ದಾನೆ. ಸಾಲದುದಕ್ಕೆ ಯೋಗೇಶ್ವರ ಶ್ರೀ ಕೃಷ್ಣನ ಲೀಲಾಮೂರ್ತಿಯೂ ರತ್ನಾಕರನ ಕಣ್ಣಿಗೆ ಟ್ಟಿ ಭರತನನ್ನು ಶ್ರೀಕೃಷ್ಣನೊಂದಿಗೆ ಸಮೀಪಕರಿಸಲೂ ಪ್ರಯತ್ನಿಸಿದ್ದಾನೆ. ವಿಸ್ತಾರವಾದ ರಾಜ ಭೆಯಲ್ಲಿ, ಸಹಸ್ರ ಸಂಖ್ಯೆಯ ಕಾಂತಾಸಮೂಹದಲ್ಲಿ, ಅಂತರಂಗದ ಏಕಾಂತದಲ್ಲಿ ಭರತನು ಏಕಕಾಲ ಬ್ಬ ಪ್ರಜಾರಂಜಕನಾಗಿ, ಭೋಗ ರಸಿಕನಾಗಿ, ಆತ್ಮಸಾಧಕನಾಗಿ ಹೇಗೆ ವ್ಯವಹರಿಸುತ್ತಿದ್ದನೆಂಬುದನ್ನು ರತ್ನಾಕರ ವಿವರವಾಗಿ, ವಿಸ್ತಾರವಾಗಿ ನಿರೂಪಿಸಿದ್ದಾನೆ.

ಭರತೇಶ ವೈಭವವು ಎಂಬತ್ತು ಸಂಧಿ, ಒಂಬತ್ತು ಸಾವಿರದೊಂಬೈನೂರ ಅರವತ್ತೊಂಬತ್ತು ಪದ್ಯ ಗಳ ದೀರ್ಘ ಕಾವ್ಯ. ಭರತನ ಯೋಗಭೋಗ ಸಮನ್ವಯ ಜೀವನವೇ ತನ್ನ ಕಾವ್ಯ ವಸ್ತು, 'ಆಗಮವಳ ವಟ್ಟ ಶೃಂಗಾರ! ಅಧ್ಯಾತ್ಮವೆ ನಿಚಿತ ಪ್ರಯೋಜನವೆನಗೆ' ಎಂದು ಮುಂತಾಗಿ ರತ್ನಾಕರ ತನ್ನ ಉದ್ದೇಶವನ್ನು ಆಗಾಗ ಜ್ಞಾಪಿಸಿಕೊಂಡರೂ ಪರಿಣಾಮದಲ್ಲಿ ಭರತನ ಯೋಗಾಸಕ್ತಿಗಿಂತ ಭೋಗರತಿಯೇ ಎದ್ದು ಕಾಣುತ್ತದೆ. 'ಭೋಗಯೋಗ ಸಮನ್ವಯ' ವೆಂಬ ರತ್ನಾಕರನ ನೂತನ ದೃಷ್ಟಿಯೇ ದೋಷಗ್ರಸ್ತ ವಿವಾದಾಸ್ಪದ. ಏಕೆಂದರೆ ಅದು ಜೈನಮತದ ಮೂಲತತ್ವಕ್ಕೆ ವಿರುದ್ಧವಾದದ್ದು. ಶರೀರ ಸುಖನಿಮಗ್ನ ವಾಗಿದ್ದು, ಅದರ ಅಸಾರತೆ, ಭಯಂಕರತೆಗಳನ್ನು ಮನಗಂಡು ಸಂಸಾರತ್ಯಾಗ, ತಪಶ್ಚರ್ಯೆ ಮುಂತಾದುವು ಗಳಿಂದ ಕೈವಲ್ಯ ಸುಖದತ್ತ ಕೈಚಾಚುವ ಭವ್ಯ ಜೀವರುಗಳ ವರ್ಣನೆಯೇ ಜೈನ ಪುರಾಣಗಳ ಪ್ರಧಾನ ಲಕ್ಷ್ಯ. ಭೋಗಯೋಗ ಸಮನ್ವಯವೆಂಬುದು ಆ ದೃಷ್ಟಿಯಿಂದ ಕತ್ತಲೆ ಬೆಳಕುಗಳನ್ನು ಜತೆಯಾಗಿ ಹಿಡಿದು ಕಟ್ಟುವ ಹುಚ್ಚು ಕೆಲಸವಾಗಿ ತೋರುತ್ತದೆ. ರತ್ನಾಕರನು ಮಾಡಿದ ಭರತನ ಯೋಗಭೋಗ ಚಿತ್ರಣ ಮಧುಚಷಕದ ಮೇಲೆ ಸ್ವಸ್ತಿಕದ ಚಿಹ್ನವನ್ನು ಬರೆ'ದಂತೆ ಆಗಿದೆ! ಕವಿಯ ಈ ವಿನೂತನ ಉಪಕ್ರಮವು ತತ್ಕಾಲದಲ್ಲಿ ಖಂಡನೀಯ ವೆನಿಸಿದ್ದು ಮಾತ್ರವಲ್ಲ, ಅರ್ವಾಚೀನ ವಿಮರ್ಶನ ದೃಷ್ಟಿಗೂ ಸಮಂಜಸವಾಗಿ ಕಂಡಿಲ್ಲ. ಮಹಾಪುರಾಣ, ಆದಿಪುರಾಣಗಳ ಬಾಹುಬಲಿಯ ಘನವ್ಯಕ್ತಿತ್ವವೂ ರತ್ನಾಕರನ ಕಾವ್ಯದ ಮೂಷೆಯಲ್ಲಿ ಸ್ವಲ್ಪ ಕರಗಿ,ಮಸುಕಾಗಿ ಬಿಟ್ಟಿದೆ. ಭರತನ ಉದಾತ್ತೀಕರಣವೇ ಮುಖ್ಯವಾಗಿರುವ ರತ್ನಾ ಕರನು ಔಚಿತ್ಯಭಂಗವಾದುದನ್ನೂ ಲಕ್ಷಿಸಿದಂತಿಲ್ಲ. ಈ ಎರಡು ಅಂಶಗಳನ್ನು ಬಿಟ್ಟರೆ, ಮಿಕ್ಕಂತೆ ಒಟ್ಟು ಕಾವ್ಯವು ಸುಲಲಿತ ಛಂದಸ್ಸು, ಸರಸಪದ್ಯ, ಸುಂದರ ಭಾಷಾ ಶೈಲಿಗಳಿಂದ ಅತ್ಯಂತ ಚೇತೋಹಾರಿ ಯಾಗಿವೆ: ರತ್ನಾಕರನ –

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗ
ರಯ್ಯಾ ಮಂಚಿದೆಯೆನೆ ತೆಲುಗ।

ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು
ಮೈಯ್ಯುಬ್ಬಿ ಕೇಳ ಬೇಕಣ್ಣ॥

ಎಂಬ ಅಗ್ಗಳಿಕೆಗೂ ಹಾರೈಕೆಗೂ ತಕ್ಕುದಾಗಿ, 'ಹೌದು!', ಹೌದು! ಎನ್ನುವಂತಿದೆ.

ರತ್ನಾಕರ ವರ್ಣಿ ಶತಕತ್ರಯದ ಕರ್ತೃವೂ ಹೌದು. ಅಪರಾಜಿತ ಶತಕ, ತ್ರಿಲೋಕ ಶತಕ, ಕರಾಧೀಶ್ವರ ಶತಕಗಳೆಂಬ ಈ ಕಾವ್ಯ ತ್ರಿವೇಣಿ ಪ್ರಾಯಃ ರತ್ನಾಕರನ ಅಪರ ವಯಸ್ಸಿನ ರಚನೆಗಳಿ ತಾರುಣ್ಯದ ಬಿಸುಪು ತಣಿದು, ಹಸಿತನ ಮಾಗಿ, ಮನಸ್ಸು ಹದವಾಗಿ ಬಾಳು ಒಂದು ಗಟ್ಟಿಯಾ ಯನ್ನೂ ನಿಜವಾದ ಬೆಲೆಯನ್ನೂ ಕಂಡು ಕೊಂಡಾಗ ಆ ಶತಕಗಳು ಹೊರ ಹೊಮ್ಮಿ ಆ ಮೂರರಲ್ಲಿ ರತ್ನಾಕರಾಧೀಶ್ವರ ಶತಕವಂತೂ ಕವಿಯ ಸಂಸಾರವಿಮುಖತೆ, ಪಶ್ಚಾತ್ತಾಪ ಮೋಕ್ಷ ಕಾಮನೆಗಳಿಗೆ ಹಿಡಿದ ರನ್ನಗನ್ನಡಿಯಾಗಿದೆ. ಈ ಮೊದಲು ಉಲ್ಲೇಖಿತವಾದ ಸಂಸ್ಕ ವರ್ಯ ಜಗನ್ನಾಥ ಪಂಡಿತನು ತನ್ನ ಉಚ್ಛೃಂಖಲ ಜೀವನದಿಂದ ಸಮಾಜ ಬಹಿಷ್ಕೃತನಾಗಿ, ಪಶ್ಚಾ ದಗ್ಧನಾಗಿ, ಪರಿಶುದ್ಧ ಮಾನಸನಾಗಿ ಅಂತ್ಯಕಾಲದಲ್ಲಿ ರಚಿಸಿದ 'ಗಂಗಾಲಹರಿ'ಯ ಹಲವು ಶ್ಲೋ ಭಾವಭಾರವೇ ರತ್ನಾಕರನ ಕನ್ನಡ ವೃತ್ತಗಳಲ್ಲೂ ತುಂಬಿ, ಇಳಿದು ಬಂದಂತೆ ಕಾಣುತ್ತದೆ. ಎಂದ ಕರನು ಜಗನ್ನಾಥನನ್ನು ಅನುಕರಿಸಿದ್ದಾನೆ. ಎಂದು ಅರ್ಥವಲ್ಲ. ಕೃತಿರಚನೆಯ ಕಾಲಕ್ಕೆ ಇಬ್ಬರ ವ ಧರ್ಮವೂ ಒಂದೇ ಬಗೆಯದಾಗಿತ್ತು ಎಂಬುದೇ ತಾತ್ಪರ್ಯ. ಶತಕತ್ರಯದಂತೆಯೇ ರತ್ನಾಕರವ ಹೆಸರಲ್ಲಿ 'ಶೋಭನಸಂಧಿ'ಯೆಂಬ ಕೃತಿಯೂ ಧರ್ಮವಿಚಾರ ಪ್ರತಿಪಾದಕವಾದ 'ಅಣ್ಣನ ಹಾಡು ರಚನೆಯೂ ಪ್ರಚಲಿತವಾಗಿದೆ. ಇವುಗಳ ನಿಜವಾದ ಕರ್ತೃ ರತ್ನಾಕರನೇ ಎಂಬುದನ್ನು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ರತ್ನಾಕರ ವರ್ಣಿಯ ಪೂರ್ವದಲ್ಲೂ, ಅನಂತರವೂ ಅನೇಕ ಜನ ಜೈನ ವಿದ್ವತ್ಕವಿಗಳು ಮೂಡಬಿದಿರೆಗಳಲ್ಲಿ ಆಗಿಹೋದುದರ ಉಲ್ಲೇಖ ಶಾಸನಾದಿಗಳಲ್ಲಿ ಕಂಡು ಬರುತ್ತವೆ. ಕೆಲವರ ಗ್ರಂಥ ಉಪಲಬ್ಧವಾಗಿವೆ. ಅಂತಹವರಲ್ಲಿ ರತ್ನಾಕರವರ್ಣಿಗೆ ಪೂರ್ವಿಕನಾಗಿರುವ ಕಲ್ಯಾಣಕೀರ್ತಿಯು ನಾಗಿದ್ದಾನೆ. ಈತನ ಹುಟ್ಟೂರು ಯಾವುದೆಂದುಬು ಖಚಿತವಾಗಿ ತಿಳಿದಿಲ್ಲವಾದರೂ ಕಾಯ ಕಾವ್ಯಕ್ಷೇತ್ರಗಳು ಕಾರ್ಕಳವೇ. ಕಾರ್ಕಳ ಜೈನಮಠದ ಸ್ವಸ್ತಿ ಶ್ರೀ ಲಲಿತಕೀರ್ತಿ ಭಟ್ಟಾರಕರ ನಾಗಿದ್ದ ಕಲ್ಯಾಣಕೀರ್ತಿಯಕಾಲ ಕ್ರಿ.ಶ. ಹದಿನೆರಡನೆಯ ಶತಮಾನ. ಆತ ಭೈರರಸರಿಗೆ ರಾಜಗುರು ನೆಂದೂ ಗುರು ಲಲಿತಕೀರ್ತಿಗಳ ಅನಂತರ ಕಾರ್ಕಳ ಮುನಿಸಂಘದ ಆಚಾರ್ಯನಾಗಿದ್ದನೆಂದೂ ಕಲ್ಯಾಣಕೀರ್ತಿಯು ಕನ್ನಡದಲ್ಲಿ ಎಂಟು ಸಂಸ್ಕೃತದಲ್ಲಿ ಎರಡು ಹೀಗೆ ಹತ್ತು ಕೃತಿಗಳನ್ನು ರಚಿಸಿ ಅವುಗಳೆಂದರೆ ಜ್ಞಾನಚಂದ್ರಾಭ್ಯುದಯ, ಕಾಮನಕಥೆ, ಅನುಪ್ರೇಕ್ಷೆ, ಜಿನಸ್ತುತಿ, ತತ್ವಭೇ ಫಣಿಕುಮಾರಚರಿತೆ, ಚಿನ್ಮಯಚಿಂತಾಮಣಿ, ಅಘಾಂತಕಾಷ್ಟಕ ಮತ್ತು ಜಿನಯಜ್ಞಫಲೋ ಯಶೋಧರಚರಿತೆ. ಜಿನಯಜ್ಞ ಫಲೋದಯವು ಕವಿಯ ಜೀವಿತಕಾಲದ ಮೇಲೂ ಬೆ ಚೆಲ್ಲುತ್ತದೆ. ಕಲ್ಯಾಣ ಕೀರ್ತಿಯ ವರ್ಚಸ್ಸು ಅವನ ಅನಂತರದ ಹಲವು ಜೈನ ಕವಿಗಳ ಮೇಲೆ ವಾಗಿ ಬಿದ್ದಿದೆ ಎಂದು ಸಂಶೋಧನ ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಭೈರರಸರು ಕಲಾಪ್ರೇಮಿಗಳಾಗಿದ್ದರು ಎಂಬುದಕ್ಕೆ ಕಾರ್ಕಳದ ಮೂಡಬಿದಿರೆಗಳ ಶಿಲ್ಪಕ ನಿದರ್ಶನಗಳಾಗಿರುವಂತೆಯೇ ಅವರು ಕವಿಜನವತ್ಸಲರೂ ಆಗಿದ್ದು ಲಲಿತಕೀರ್ತಿ, ನಾಗಚಂದ್ರ, ಕೀರ್ತಿ, ಬಾಹುಬಲಿ, ವರ್ಧಮಾನ, ಶಾಂತಿಕೀರ್ತಿಯೇ ಮೊದಲಾದವರು ಅವರ ಆಶ್ರಿತರಾಗಿದ್ದ ಹೇಳಿಕೆಯೂ ಇದೆ. ಅವರಲ್ಲಿ ಯಾರು ಯಾರು ಯಾವ ಯಾವ ಕೃತಿ ರಚಿಸಿದರು ಎಂಬುದಕ್ಕೆ ಕನ್ನ ಚರಿತ್ರೆಗಳಲ್ಲಿ ಸಾಕಷ್ಟು ಪ್ರಮಾಣಗಳು ಸಿಗುತ್ತಿಲ್ಲ. ಪಾಂಡ್ಯಕ್ಷಪತಿ ಅಥವಾ ಪಾಂಡ್ಯಕ್ಷಾಪತಿ ಪಾಂಡ್ಯಪ್ಪ ಒಡೆಯರ ಸಂಸ್ಕೃತ ನಾಮವಿರಬಹುದೇನೊ?) ಯು 'ಭವ್ಯಾನಂದ ಶಾಸ್ತ್ರ'ವೆಂಬ ಸು ಗ್ರಂಥವನ್ನೂ, ವೀರಪಾಂಡ್ಯನು 'ಕ್ರಿಯಾ ನಿಘಂಟು'ವನ್ನೂ ರಚಿಸಿದ್ದರೆಂಬ ಪ್ರಸ್ತಾವವಿದೆ. ಭೈ ಆಸ್ಥಾನಿಕರಲ್ಲಿ 'ಬಾಹುಬಲಿ' ಎಂಬ ಕವಿಯು ಕ್ರಿ. ಶ. 1593ರ ಸುಮಾರಿಗೆ ಜೀವಿಸಿದ್ದನೆಂದು

...ಂದಿದೆ. ಇವನು ಮೂಲತಃ ಶೃಂಗೇರಿಯುವನಾಗಿದ್ದು ಕೆರವಾಸೆಯ ಡಾವಣಿ ಭೈರವರಾಜನ ಪ್ರೇರಣೆ ...ಯಿಂದ ಕಾವ್ಯ ರಚಿಸಿದನೆಂದು ಹೇಳಲಾಗಿದೆ. ಬಾಹುಬಲಿಯ ಕೃತಿ 'ನಾಗಕುಮಾರಚರಿತೆ'. ಇದು ...ಸಾಂಗತ್ಯದಲ್ಲಿದ್ದು, ನೀತಿ ಪ್ರತಿಪಾದಕವಾಗಿದೆ. ರಚನೆ ಸುಲಲಿತವಾಗಿದೆ.

ಕಾವ್ಯಕ್ಷೇತ್ರದಲ್ಲಿ ಹೆಚ್ಚು ಕೇಳಿಬಾರದ ಹೆಸರುಗಳಲ್ಲಿ ಒಂದು ನೇಮಣ್ಣ ಕವಿಯದು. ಇವನು ...ಹದಿನಾರನೆಯ ಶತಮಾನದವನು (ಕ್ರಿ. ಶ. 1559) ಉತ್ತರ ಕರ್ನಾಟಕದ ಉಗಾರ (ಬೆಳಗಾವಿ ...ಜಿಲ್ಲೆ)ದ ಪ್ರಸ್ತಾವ ನೇಮಣ್ಣನ ಕೃತಿಯಲ್ಲಿದ್ದರೂ ಅವನು ಮೂಲತಃ ತುಳುನಾಡವನೇ, ಅದರಲ್ಲೂ ...ಮೂಡಬಿದಿರೆಯಲ್ಲಿ ಆತ ದೀಕ್ಷಿತನಾದನೆಂಬುದು ಕವಿಚರಿತಕಾರರ ಅಭಿಪ್ರಾಯ. ನೇಮಿಯಣ್ಣನು ...ಜ್ಞಾನಭಾಸ್ಕರಚರಿತೆ' ಯನ್ನು ಮೂಡಬಿದಿರೆಯಲ್ಲೂ 'ಸುವಿಚಾರ ಚರಿತೆ'ಯನ್ನು ಕಾರ್ಕಳದಲ್ಲೂ ...ರಚಿಸಿದನೆಂಬ ಪ್ರತೀತಿಯಿದೆ. ರತ್ನಾಕರ ವರ್ಣಿಯ ವರ್ಚಸ್ಸಿಗೆ ನೇಮಣ್ಣ ಒಳಗಾಗಿದ್ದಾನೆಂಬುದಕ್ಕೆ ಅವನ ಎರಡು ಕೃತಿಗಳೂ ಸಾಂಗತ್ಯದಲ್ಲಿರುವುದೇ ಸಮರ್ಥನೆ. ಆದರೆ ಕಾವ್ಯವಸ್ತು ಮಾತ್ರ ಸಂಸಾರದ ಅಸಾರತೆಯನ್ನೂ ಕೈವಲ್ಯದ ಸಾರವತ್ತತೆಯನ್ನೂ ಪ್ರತಿಪಾದಿಸುವುದಾಗಿದೆ.

ಉಲ್ಲೇಖಿಸಬೇಕಾದ ಇನ್ನೊಬ್ಬ ಕವಿಯೆಂದರೆ ಚದುರಚಂದ್ರಮ, ಕಾಲ ಸುಮಾರು ಕ್ರಿ. ಶ.1646. ಇವನ ಹುಟ್ಟೂರು ಯಾವುದೆಂಬುದು ಸ್ಪಷ್ಟವಾಗಿಲ್ಲವಾದರೂ ಕಾವ್ಯ ಮಾತ್ರ ಕಾರ್ಕಳದ ಗೋಮ್ಮಟ ...ನನ್ನು ಕುರಿತದ್ದು – ಅದರ ಹೆಸರು 'ಮದನಾರಿ ಗುಮ್ಮಟಸ್ವಾಮಿಯ ಚರಿತೆ'. ಚಂದ್ರಮನು ಇಮ್ಮಡಿ ಭೈರವರಾಯನ ಆಶ್ರಯ-ಪ್ರೋತ್ಸಾಹಗಳಿಂದ ಕಾವ್ಯ ರಚಿಸಿದುದರಿಂದ ಅವನು ಭೈರವರಾಯನ ಆಶ್ರಿತನಾಗಿದ್ದನೆಂದು ಊಹಿಸಬಹುದು. ಕಾಲದೇಶಾದಿ ವಿಚಾರಗಳೇನೇ ಇದ್ದರೂ, ಅವನ ಕೃತಿ ಮಾತ್ರ ಕಾರ್ಕಳ ಗೊಮ್ಮಟ ಬಿಂಬ ನಿರ್ಮಾಣ, ಪ್ರತಿಷ್ಠಾಪನ, ಸಹಸ್ರಕಲಶ ಸ್ನಪನಗಳ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿ ಇತಿಹಾಸಕಾರರಿಗೆ ಒಂದು ಅಮೂಲ್ಯ ಆಸ್ತಿಯಾಗಿದೆ. ಚದುರ ಚಂದ್ರಮನ ಕಾವ್ಯ ಕಾರ್ಕಳ ಗೊಮ್ಮಟ ಸ್ವಾಮಿಯ ವಾಗ್ರೂಪದ ಒಂದು ಸುಂದರ ಪ್ರತಿಚಿತ್ರ. (Photograph) ಎಂದು ಖಂಡಿತವಾಗಿಯೂ ಹೇಳಬಹುದು.

ಮುದ್ದಿನ ಮುದ್ದಣ:

ಹದಿನಾರನೆಯ ಶತಕದ ರತ್ನಾಕರನಿಗೆ ನಾತಿಪೂರ್ವದಲ್ಲೂ ಅನಂತರವೂ ಈ ಮೇಲೆ ಹೇಳಿದಂತೆ ...ಜ್ಞಾತಾಜ್ಞಾತ ಕವಿಗಳನೇಕರು ಗ್ರಂಥರಚನೆ ಮಾಡಿರಬಹುದು. ಆದರೆ ರತ್ನಾಕರನಂತೆ ತಮ್ಮ ಹಜ್ಜೆ ...ಗುರುತುಗಳನ್ನು ಕಾರ್ಕಳದ ನೆಲದಲ್ಲಿ ಗಟ್ಟಿಯಾಗಿ ಪಡಿಮೂಡಿಸಿದ ಕವಿವರೇಣ್ಯರು ಹತ್ತೊಂಬತ್ತನೆಯ ಶತಕದವರೆಗೆ ಯಾರೂ ಆಗಿ ಹೋದದ್ದಿಲ್ಲ. ಸಹ್ಯಾದ್ರಿಪರ್ವತ ಪಂಕ್ತಿಯಲ್ಲಿ ನಮಗೆ ಹತ್ತಿರವಾಗಿ, ಎತ್ತರವಾಗಿ ಕಾಣುವ ಶೃಂಗವೆಂದರೆ ಕುದುರೆಮುಖವೊಂದೇ. ಕಾರ್ಕಳದ ಸಾಹಿತ್ಯ ಸಹ್ಯಗಿರಿಯಲ್ಲಿ ರತ್ನಾಕರನ ಮಾನವಾದರೂ ಅದೇ.ಆಗಿದೆ. ಅವನ ದಾಖಲೆಯನ್ನು ಸರಿಗಟ್ಟಬಲ್ಲ ಕವಿ ಚಂದ್ರಮನೊಬ್ಬನ ...ಗಮನಕ್ಕಾಗಿ ಸಹೃದಯ ಚಕೋರಕಗಳು ಇನ್ನೂರೈವತ್ತು ವರ್ಷಗ ಕಾಲ ಕಾಯಬೇಕಾಯಿತು. ಆದರೆ ಈ ಸುದೀರ್ಘ ತಪಸ್ಸು ವ್ಯರ್ಥವಾಗಲಿಲ್ಲ. ಹೊಸಗನ್ನಡ ನವೋದಯದ ಮುಂಗೋಳಿ ಕನ್ನಡ ಕಾವ್ಯಾರಾಮದ ಕೋಗಿಲೆ, ಕಬ್ಬಿಗರ ಬಲ್ಲಹ. ಮುದ್ದು ಕವಿ ಮುದ್ದಣನ ಆಗಮನ ಆಗಿಯೇ ಬಿಯಿತು! 1869 (70)ರಲ್ಲಿ, ಜನಿಸಿ, 1901ರಲ್ಲಿ ಕೇವಲ ಮೂವತ್ತೆರಡರ ಅಲ್ಪಾಯುಷ್ಯದಲ್ಲಿ ಈ ...ಮು ಕಣ್ಮರೆಯಾದರೂ ಕನ್ನಡ ಸಾಹಿತ್ಯದಲ್ಲಿ ಅವನೊಂಗು ರಸಘಟ್ಟ. ಮರೆಯಾದರೂ ಮರೆಯಲಾಗದ ...ಸುಹನೀಯ!

ನಂದಳಿಕೆ ಲಕ್ಷ್ಮೀನಾರಾಯಣಯ್ಯ ಅಥವಾ ಮುದ್ದಣ ಹೊಸಗನ್ನಡ ಗದ್ಯ ಸಾಹಿತ್ಯದ ಪ್ರವರ್ತಕ; ...'ಪದ್ಯ ವಧ್ಯಂ, ಗದ್ಯ ಹೃದ್ಯಂ' ಎಂಬ ಮಂತ್ರದ ದ್ರಷ್ಟಾರ, 'ಕನ್ನಡಂ ಕತ್ತುರಿಯಲ್ತೆ' ಎಂದು ಉಚ್ಚ ಕಂಠದಿಂದ ಉದ್ಘೋಷಿಸಿದ ವೀರ ಕನ್ನಡಿಗ; ಕಡು ಬಡತನದ ಕಾವಲಿಯಲ್ಲಿ ಸುಟ್ಟು ಹಪ್ಪಳವಾದರೂ

ಅಳುನುಂಗಿ ನಕ್ಕ ಸ್ಥಿತಪ್ರಜ್ಞ; 'ಭವತಿ ಭಿಕ್ಷಾಂ ದೇಹಿ'ಯೆಂಬ 'ಪೆರ್ಮೆಯ ಸಪ್ತಾಕ್ಷರೀ' ಮ ನಾದ ಕವಿಪುಂಗವ; ವ್ಯಾಯಾಮ ಶಿಕ್ಷಕನಾದರೂ ಕ್ಷಯರೋಗಗ್ರಸ್ತನಾಗಿ ಅಕಾಲ ಮೃತ್ಯು ಚಿರಂಜೀವಿ – 'ನಡು ಹಗಲಲ್ಲೇ ರಾಹುಗ್ರಸ್ತನಾದ ಕವಿ ಭಾಸ್ಕರ' ನಮ್ಮ ಮುದ್ದಣ!

ಮುದ್ದಣನ ಕೃತಿಗಳ ಐದು – ಮೂರು ಕಾವ್ಯಗ್ರಂಥಗಳು, ಎರಡು ಯಕ್ಷಗಾನ ಪ್ರಸ ಕಾವ್ಯಗ್ರಂಥಗಳಲ್ಲಿ ಮೂರಕ್ಕೂ ರಾಮಾಯಣವೇ ಆಧಾರ. ಅದ್ಭುತ ರಾಮಾಯಣ, ಶ್ರೀ ಪಟ್ಟಾಭಿಷೇಕ, ಶ್ರೀ ರಾಮಾಶ್ವಮೇಧ, ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯಗಳೆಂ ಕೃತಿಗಳಲ್ಲಿ ಶ್ರೀ ರಾಮಾಶ್ವಮೇಧವೇ ಮಧ್ಯಮಣಿ, 'ಮುದ್ದಣನ ಕೀರ್ತಿಯ ಕಾಮಧೇನು' ಪಾರಮ್ಯವನ್ನು ವರ್ಣಿಸುವ ಅದ್ಭುತ ರಾಮಾಯಣ ಒಂದು ಚಿಕ್ಕ ಗದ್ಯ ಕಾವ್ಯ. ಗದ್ಯ ಸಾಗಿಯೇ ಇದ್ದರೂ ಶ್ರೀ ರಾಮಾಶ್ವಮೇಧದ ವೈಭವ, ಓಜಸ್ಸುಗಳು ಅದರಲಿಲ್ಲ. 'ಶ್ರೀ ರಾಮ ಷೇಕ'ವು ಷಟ್ಪದೀ ಕಾವ್ಯ. ಅದು 'ರಾಮ ನಾಮಾಮೃತದ ಬಿಂದಿಗೆ'ಯೆಂಬುದು ಕವಿಯ ಅದೂ ಗಾತ್ರದಲ್ಲಿ ಸಣ್ಣದೇ – ಕೇವಲ ಆರು ಆಶ್ವಾಸಗಳು ಮಾತ್ರ. ಮನಸ್ಸನ್ನು ಸೆಳೆಯುವ ಪಂಕ್ತಿಗಳು ಅಲ್ಲಲ್ಲಿ ಕಂಗೊಳಿಸುತ್ತಿವೆಯಾದರೂ ಮುದ್ದಣನ ಕಾವ್ಯಶಕ್ತಿಯ, ಸ್ಫೋಪ ಶಿಖರವೆಂದರೆ 'ಶ್ರೀ ರಾಮಾಶ್ವಮೇಧ'ವೇ ಸರಿ. ಮುದ್ದಣನಿಗಿಂತ ಸುಮಾರು ಐವತ್ತು ವರ್ಷ ಕೆಂಪು ನಾರಾಯಣನ ಗದ್ಯಕಥೆ 'ಮುದ್ರಾಮಂಜೂಷ'ವು ರಚಿತವಾಗಿತ್ತು. ಮುದ್ದಣನ ಕೃತಿಯೂ ಗದ್ಯವೇ. ಆದರೆ ಎರಡರಲ್ಲೂ ಕಾಣದ ಒಂದು ನವೀನತೆ ಶ್ರೀ ರಾಮಾಶ್ವಮೇ ಸೀತಾ ಪರಿತ್ಯಾಗದ ಕರುಣ ಕಥೆಯ ಹೃತ್‌ಸ್ಪರ್ಶೀ ಚಿತ್ರಕ್ಕೆ ನವನವೀನವೂ ಚೇತೋಹಾರಿಯ ರುವ ಸತಿ - ಪತಿ ಸಂಭಾಷಣ ರೂಪದ 'ಸುವರ್ಣದ ಚೌಕಟ್ಟ'ನ್ನು ಬಿಗಿದು ಕನ್ನಡದಲ್ಲೇ ಅದ ಅಸದೃಶ ಕಾವ್ಯವೆನಿಸುವ ಕೈಚಳಕವನ್ನು ಮುದ್ದಣ ಮೆರೆದಿದ್ದಾನೆ. 'ಕರ್ಮಣಿ ಸರದಲ್ಲಿ ಚೆಂಬವ ಕೋದಂತೆ' ಕನ್ನಡ - ಸಂಸ್ಕೃತಗಳ ಹೃದ್ಯ ಮಿಶ್ರಣ, ನಾಟಕೀಯವಾದ ಕಥಾ ನಿರೂಪಣ, ಸ್ತುತಿಯೇ ಮುಂತಾದ ಪ್ರಾಚೀನ ಪದ್ಧತಿಯ ಪೂರ್ಣ ನಿರಾಕರಣ ಇವೆಲ್ಲ ಕಾವ್ಯದ ವಿ ಮತ್ತು ವಿಶೇಷತೆ. ಕಾವ್ಯಾರಂಭದ ವರ್ಷಾಕಾಲದ ಮನೋಜ್ಞ ವರ್ಣನೆಯಾಗಲಿ, ಕಾವ್ಯಾ ನರನೇ ನರೋತ್ತಮವಾಗುವನೆಂಬ ಚಿಕಿತ್ಸ ದೃಷ್ಟಿಯ ಕಂದಪದ್ಯವಾಗಲಿ, ಸೀತಾ ಪರಿತ್ಯಾ ಮುಳ್ಳಿನ ಹಾವುಗೆಯನ್ನು ಮೆಟ್ಟಿರುವ ಶ್ರೀ ರಾಮನ ಹೃದಯ ವಿಶ್ಲೇಷಣಕ್ಕೆ ಕವಿ ಹಿಡಿ ಪಟ್ಟಿಕವಾಗಲಿ ಒಂದಕ್ಕಿಂತ ಒಂದು ಸಾರತರವಾಗಿವೆ, ಸ್ಮರಣೀಯವಾಗಿವೆ. 'ಈ ನುಡಿಗಬ್ಬಂ ಮುಂತಿಲ್ಲ, ಪಿಂತಿಲ್ಲ'ವೆಂಬ ಮನೋರಮೆಯ ಮಾತಿಗೆ ಕಾವ್ಯರಸಿಕ ದನಿಗೂಡಿಸಿದ್ದಾರೆ.

ಎರಡು ಯಕ್ಷಗಾನ ಪ್ರಸಂಗಗಳಲ್ಲಿ, ಆ ಪರಂಪರೆಯ ಹಿರಿಯ ತಲೆ, ದಕ್ಷಿಣ ಕನ್ನಡದವನ ಪಾರ್ತಿಸುಬ್ಬನನ್ನು ಮುದ್ದಣ ಸರಿಗಟ್ಟಲಾರ. ಆದರೂ 'ರತ್ನಾವತೀ ಕಲ್ಯಾಣ'ದಲ್ಲಿ ಕಾವ ಅಧಿಕವೆಂದೂ, 'ಕುಮಾರವಿಜಯ'ವು ಹೆಚ್ಚು ಪ್ರದರ್ಶನ ಯೋಗ್ಯವೆಂದೂ ಯಕ್ಷಗಾನ ವಿದ ಅಭಿಪ್ರಾಯ. ಮುದ್ದಣನಿಗೆ ಯಕ್ಷಗಾನದಲ್ಲಿ ತೀವ್ರವಾದ ಆಸಕ್ತಿ ಎಂಬುದಕ್ಕೆ ಈ ಪ್ರಸಂ ಶ್ರೀ ರಾಮ ಪಟ್ಟಾಭಿಷೇಕ, ಶ್ರೀ ರಾಮಾಶ್ವಮೇಧಗಳಲ್ಲಿರುವ ಪ್ರಾಸ ಪ್ರಾಚುರ್ಯವೂ ಸ ಗಳಾಗಿವೆ.

ಮುದ್ದಣನ ಕಾಲ - ದೇಶ - ಕರ್ತೃತ್ವವನ್ನು ಕುರಿತು ಒಂದು ಕಾಲದಲ್ಲಿ ಸುದೀರ್ಘ ನಡೆದಿತ್ತು. ಅದಕ್ಕೆ ಮುಖ್ಯ ಕಾರಣ, ಅದ್ಭುತ ರಾಮಾಯಣವನ್ನು 'ಓರ್ವ ಕನ್ನಡಿಗಂ' ಶ್ರೀ ಪಟ್ಟಾಭಿಷೇಕವನ್ನು 'ಚಾವಡಿ ರಂಗಭಟ್ಟನಾತ್ಮಜೆ' ಮಹಾಲಕ್ಷ್ಮಿ, ಶ್ರೀ ರಾಮಾಶ್ವಮೇ 'ಮುದ್ದಣ' ಎಂಬ ಗುಪ್ತನಾಮಗಳಿಂದ ಪ್ರಕಟಿಸಿದುದೇ ಆಗಿದೆ. ಆದರೆ ಅವನ ಗುರುಗಳು, ಸಮಕಾಲೀನರು ನೀಡಿದ ವಿವಿಧ ಸಾಕ್ಷ್ಯಾಧಾರಗಳಿಂದ ಲಕ್ಷ್ಮೀನಾರಾಯಣಯ್ಯನ ಕೃತಿ - ದೇಶಗಳೆಲ್ಲ ಈಗ ವಿಶ್ವಸನೀಯವಾಗಿ ಸ್ಥಾಪಿತವಾಗಿವೆ. ಮುದ್ದಣ ಹೊಸಗನ್ನಡ ಗದ್ಯಕಾವ್ಯಕ್ಕೆ

ೇರಕನಲ್ಲ, ನವ ವಿಮರ್ಶೆಗೂ ಮೂಲ ಪುರುಷನೆಂಬುದು ವಿಚಿತ್ರವಾದರೂ ಸತ್ಯವಾಗಿದೆ. ಅವನ ೇ ರಾಮಾಶ್ವಮೇಧ'ವನ್ನು ಕುರಿತು ಈ ಶತಮಾನದ ಎರಡನೆಯ ದಶಕದಲ್ಲಿ ನಡೆದ ವಿಚಾರ ಂಥನವೇ 'ಮುದ್ದಣ' ಎಂಬ ನವನೀತ ಸದೃಶ ಕೃತಿಗೆ ಕಾರಣವಾಯಿತು. 1926ರಲ್ಲಿ ಪ್ರಕಟವಾದ ಗ್ರಂಥ 'ನವ ವಿಮರ್ಶೆಯ ರಾಜಮಾರ್ಗವನ್ನು' ಕನ್ನಡಿಗರಿಗೆ ತೆರೆಯಿತು.

ಮುದ್ದಣನ ಅನಂತರ ಹೊಸಗನ್ನಡದ ಕಳದಲ್ಲಿ ಸುಗ್ಗಿಯ ಬೆಳೆ. ಕಾರ್ಕಳದ ನೆಲದಲ್ಲೂ ೇಕ ಜನ ಉತ್ಸಾಹದಿಂದ ಉಳುಮೆ ಮಾಡಿ, ಬಗೆಬಗೆಯ ಪೈರು ಪಸಲುಗಳನ್ನು ಪಡೆದಿದ್ದಾರೆ. 947ರ ಕಾಸರಗೋಡು ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರಕಟವಾದ 'ತೆಂಕನಾಡು' ಮತ್ತು 971ರ ದಕ್ಷಿಣಕನ್ನಡ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನಾವಸರದಲ್ಲಿ ಹೊರಡಿಸಲಾದ 'ದಿಬ್ಬಣ' ಂಬ ಸ್ಮರಣ ಸಂಚಿಕೆಗಳನ್ನು ನೋಡಿದಾಗ, ಕಾರ್ಕಳ ತಾಲೂಕಿನ ಸುಮಾರು ಐವತ್ತಕ್ಕೂ ಮಿಕ್ಕ ರೆಹಗಾರರ ಹೆಸರು ಕಣ್ಣಿಗೆ ಬಿದ್ದಿವೆ. ಅವರಲ್ಲಿ ಘನ ವಿದ್ವಾಂಸರಿದ್ದಾರೆ, ಸಂಶೋಧನ ಕುತೂಹಲಿ ಿದ್ದಾರೆ; ಕಥೆ, ಕಾದಂಬರೀಕಾರರಿದ್ದಾರೆ, ಪ್ರಬಂಧ ರಚಕರಿದ್ದಾರೆ. ಮಕ್ಕಳಿಗಾಗಿ ಚುಟುಕು, ಕಿರುಗತೆ ನ್ನೇ ನೆಚ್ಚಿ ಮೆಚ್ಚಿ ಬರೆಯುವವರಿದ್ದಾರೆ; ಪತ್ರಕರ್ತರಿದ್ದಾರೆ; ಬರೆದು ಬಿಟ್ಟವರೂ ಬಿಡದೆ ಬರೆಯು ಧುವವರೂ ಇದ್ದಾರೆ. ಎಲ್ಲ ಹೆಸರುಗಳನ್ನೂ ಪಟ್ಟಿ ಮಾಡುವುದು ಪ್ರಯಾಸಕರ. ಉಮಿಯನ್ನು ದಂತೆ ಅದರಿಂದ ಹೆಚ್ಚಿನ ಪ್ರಯೋಜನವೂ ಇಲ್ಲ. ಹಾಗೆಯೇ ಪ್ರತ್ಯೇಕ ಕೃತಿ ವಿಮರ್ಶೆ ಮಾಡುವುದಕ್ಕೆ ು ಅವಕಾಶವೂ ಅಲ್ಲ. ಆದರೂ, ಎಂತೆಂತಹವರು ಏನೇನು ಉಳುಮೆ ನಡೆಸಿದ್ದಾರೆ ಎಂಬುದನ್ನು ರ್ದೇಶಿಸುವುದಕ್ಕಾಗಿ ಸ್ಥಾಲೀ ಪುಲಾಕ ನ್ಯಾಯದಂತೆ ಕೆಲವು ಕೃತಿಕಾರರನ್ನೂ ಕೃತಿ ಪ್ರಕಾರಗಳನ್ನೂ ಲ್ಲೇಖಿಸಿದ್ದೇನೆ. ಮಿಕ್ಕವರು ನಗಣ್ಯರು ಎಂಬ ಭಾವನೆ ಸರ್ವಥಾ ಸಲ್ಲದು. ನನ್ನ ಲೇಖನ - ಶಕ್ತಿಯ ತಿ ಅದು ಎಂಬುದನ್ನಷ್ಟೇ ವಿಜ್ಞಾಪಿಸುತ್ತಿದ್ದೇನೆ. ಕನ್ನಡ ತಾಯ ಕಣಜದಲ್ಲಿ ಬಗೆಬಗೆಯ ಕಾಳುಗಳು ರಿವೆ; ಅವಳ ಮುಡಿಯ ದಂಡೆಯಲ್ಲಿ ಬಗೆಬಗೆಯ ಹೂಗಳು ಕಟ್ಟು ಪಡೆದಿವೆ. ಪ್ರತ್ಯೇಕ ವಸ್ತು - ವ - ರಸಗಳು ಕರಗಿ ಒಂದಾದಾಗಲೇ ಸಮಷ್ಟಿ ಮತ್ತು ಸೌಂದರ್ಯ. ಸಾಹಿತ್ಯ ಸಂಸ್ಕೃತಿಯ ಲ್ಯಮಾಪನ - ಮೌಲ್ಯ ನಿರ್ಣಯ ಸಮಷ್ಟಿಯಿಂದಲ್ಲದೆ ವ್ಯಷ್ಟಿಯಿಂದಲ್ಲ.

ೈನ ಲೇಖಕರು:

ಕಾರ್ಕಳ - ಮೂಡಬಿದಿರೆಗಳು ಶಿಲ್ಪ ಸೌಂದರ್ಯಕ್ಕೆ, ಧರ್ಮ ಪ್ರಭಾವನೆಗೆ ಪ್ರಸಿದ್ಧವಾದ ಪಟ್ಟಣ ು. ಮೂಡಬಿದಿರೆಯಂತೂ 'ಜೈನಕಾಶಿ'ಯೆಂದೇ ದರ್ಶನೀಯವಾಗಿದೆ. ಅಲ್ಲಿಯ 'ಗುರು ಬಸದಿ' ಲ್ಲಿರುವ '(ಶ್ರೀ ಪಾರ್ಶ್ವನಾಥಸ್ವಾಮಿ ಚೈತ್ಯಾಲಯ) ಧವಳ - ಜಯಧವಳ - ಮಹಾಧವಳ ಗ್ರಂಥ ು ಆಸ್ತಿಕ ಜನರಿಗೆ ಅತ್ಯಂತ ಪೂಜನೀಯವಾಗಿವೆ. ಈ ಧರ್ಮಗ್ರಂಥಗಳೂ, ಜಿನಮಂದಿರಗಳೂ ಖಕರಿಗೆ ಪ್ರೇರಕ ಶಕ್ತಿಗಳೂ ಆಗಿವೆ. ಕಾರ್ಕಳದ ಚತುರ್ಮುಖ ಬಸದಿ, ಗೊಮ್ಮಟಬಿಂಬ, ಮಾನ ಂಭಗಳಾದರೂ ಹಾಗೆಯೇ. ಫಲವಾಗಿ ನೂರಾರು ಮಂದಿ ಅರ್ವಾಚೀನ ಜೈನ ಮಹನೀಯರು ರ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ಅದು ಸಹಜವೂ ಆಗಿದೆ. ನಮ್ಮ ದೇಶದಲ್ಲಿ ನಾವು ಮುಖ್ಯ ಗಿ ಕಾಣುವುದು ಮತೀಯ ಸಂಸ್ಕೃತಿಯನ್ನು. ಆದೊಂದು ಕಾಮನಬಿಲ್ಲು; ಕವಿವರ್ಯ ಠಾಕೂರರು ತಿಸಿದ ಭಾರತ ಭಾಗ್ಯವಿದಾತನು ಧರಿಸಿರುವ 'ಪ್ರೇಮಹಾರ'. ಈ ಕಾಮನಬಿಲ್ಲಿನ ಯಾವ ಬಣ್ಣವೂ, ಪ್ರೇಮಹಾರದ ಯಾವ ರತ್ನವೂ ಊನಕಾಂತಿಯದಲ್ಲ. ಆ ಸಮುದಾಯ ಶೋಭೆಯನ್ನು ಅರಿತು ತೆಯುವುದೇ ನಿಜವಾದ ಭಾರತೀಯತ್ವ. ಕಾರ್ಕಳ, ಮೂಡಬಿದಿರೆಗಳ ಮಾತೇ ಏಕೆ – ಅಖಿಲ ಕರ್ನಾ ಕದ ಸುದೀರ್ಘ ಸಾಹಿತ್ಯೇತಿಹಾಸದಲ್ಲೂ ಜೈನ ವಾಙ್ಮಯಕ್ಕೆ ಉನ್ನತ ಸ್ಥಾನಮಾನವಿದೆ ಎಂಬುದನ್ನು ಾರೂ ಅಲ್ಲಗಳೆಯಲಾರರು.

ಈ ಶತಕದ ನಾಲ್ಕೈದು ದಶಕಗಳಲ್ಲಿ ಕಾರ್ಕಳ, ಮೂಡಬಿದಿರೆಗಳ ಹತ್ತಾರು ಮಂದಿ ಜೈನಮತ ರ್ಮ, ಕವಿ-ಕಾವ್ಯ-ಶಿಲ್ಪಗಳನ್ನು ಕುರಿತು ಬರೆದಿದ್ದಾರೆ. ಅವರಂತೂ ಸರಿಯೆ. ಶ್ರವಣ

ಬೆಳ್ಗೊಳ – ಹುಮಚ ಮುಂತಾದ ಜೈನಪೀಠಗಳ ಯತಿಶ್ರೇಷ್ಠರಲ್ಲೂ ಎಷ್ಟೋ ಮಂದಿ ಪ
ಈ ಊರವರೇ ಎಂಬುದು ಹೆಮ್ಮೆಯ ಮಾತು. ಅವರು ಯತಿಗಳಷ್ಟೇ ಅಲ್ಲ, ವಿದ್ವಾ
ಸಾಹಿತ್ಯ ವಿಶಾರದರೂ ಆಗಿದ್ದರೆಂಬುದು ಇನ್ನೊಂದು ಹೆಚ್ಚುಗಾರಿಕೆ. ಅಂತಹವರಲ್ಲಿ ಸ್ವಗಿ
ಸಾಗರ ವರ್ಣಿಯವರು ಒಬ್ಬರು. ಕಾರ್ಕಳ ತಾಲೂಕಿನ ಆಯಕಳದಲ್ಲಿ ಜನಿಸಿದ ಇ
ಬೆಳ್ಗೊಳದ ಭಟ್ಟಾರಕರಾಗಿ ಸಮಾಜದಲ್ಲಿ ಪರಮಪೂಜ್ಯರೂ ಪ್ರಾತಃಸ್ಮರಣೀಯರೂ
ಹುಮಚ ಮಠದ ಶ್ರೀ ಅರ್ಹದ್ದಾಸ ಪಾರ್ಶ್ವಕೀರ್ತಿ ಮಹಾರಾಜರೂ ನ್ಯಾಯ-ಕಾವ
ಇವರ ಜನ್ಮಸ್ಥಳ ಕಾರ್ಕಳದ ಕೆರವಾಸೆ. ಪ್ರಕೃತ ಶ್ರವಣ ಬೆಳ್ಗೊಳದ ಪೀಠಾಧಿಪತಿಯಾಗಿರುವ
ಕೀರ್ತಿ ಭಟ್ಟಾರಕರು ಮೂಲತಃ ವರಾಂಗದವರು, ವಿದ್ವಾಂಸರೆಂದು ಸಂಮಾನ್ಯರು. ಅವರು
ವಾಣಿ'ಯೆಂಬ ಪತ್ರಿಕೆಯ ಸಂಪಾದಕರೂ ಆಗಿದ್ದಾರೆ. ಮೂಡಬಿದಿರೆ ಶ್ರೀಮಠದ ಶ್ರೀ
ಪಂಡಿತಾಚಾರ್ಯರು ಅನೇಕ ಭಾಷಾವಿದರು, ನ್ಯಾಯ-ಕಾವ್ಯ-ವ್ಯಾಕರಣ ವಿದ್ವಾಂಸರು.
ಶ್ರೀ ಲಲಿತಕೀರ್ತಿ ಭಟ್ಟಾರಕರು ಸಂಸ್ಕೃತ ಸಾಹಿತ್ಯ ವಿಶಾರದರು. ಹೀಗೆ ಈ ಸಂತ ಸಾಹಿ
ಕಾಣುವಾಗ ಕವಿ ವಿನಾಯಕರು 'ಭೂಪತಿಯು ಕವಿಯಾಗಿ, ಕವಿ ಚಮೂಪತಿಯಾಗಿ' ಎಂದು
ದನ್ನೇ' ಯತಿಯು ವಾಕ್ಪತಿಯಾಗಿ ಮೆರೆದ ನಾಡು' ಎಂದು ಕೊಂಚ ತಿದ್ದಿ ಹಾಡಬಹುದೆಂದು ತ

ಸಾಹಿತ್ಯಾಸಕ್ತರಾದ ಜೈನ ಯತಿಗಳದೇ ಒಂದು ಪಂಥವಾದರೆ ಭವ್ಯರಾದ ಜೈನ ಲ
ಇನ್ನೊಂದುವರ್ಗ.ಅಂತಹವರಲ್ಲಿ ಶ್ರೀ ಎ.ಶಾಂತಿರಾಜ ಶಾಸ್ತ್ರಿಗಳು ಬಹುವಿಖ್ಯಾತರು
ನೇಮಿಸಾಗರ ವರ್ಣಿಯವರು ಶಿಷ್ಯರಾದ ಇವರು ನ್ಯಾಯ-ಕಾವ್ಯ-ತರ್ಕಗಳಲ್ಲೂ ಪ್ರಾಕೃತ
ಗಳಲ್ಲೂ ಕನ್ನಡ-ಇಂಗ್ಲಿಷುಗಳಲ್ಲೂ ಸಮರ್ಥರೆನಿಸಿದವರು. ಮೈಸೂರು ಅರಮನೆಯ
ವಿದ್ವಾನ್ ಎಂಬ ಸಂಮಾನವನ್ನು ಪಡೆದವರು. ಅವರಂತೆಯೇ ದಿ। ಎ. ಸುಬ್ಬಯ್ಯ ಶಾಸ್ತ್ರಿಗಳ
ಇನ್ನೊಬ್ಬ ಹಿರಿಯ ವಿದ್ವಾಂಸರು. ಕನ್ನಡ, ಹಿಂದಿ, ಸಂಸ್ಕೃತ, ಪ್ರಾಕೃತ, ಪಾಲಿಯೇ ಮುಂತಾ
ಭಾಷಾ ಪಂಡಿತರಾಗಿದ್ದ ಶಾಸ್ತ್ರಿಗಳು ತಮ್ಮ ವೈದುಷ್ಯಕ್ಕಾಗಿ ನ್ಯಾಯತೀರ್ಥ, ಕಾವ್ಯತೀರ್ಥ,
ಶಾಸ್ತ್ರಿ, ಸ್ಯಾದ್ವಾದ ವಿದ್ಯಾವಾರಿಧಿಯೇ ಮುಂತಾದ ಉಪಾಧಿಗಳಿಂದ ಭೂಷಿತರಾದವರು.
ಬಹು ಭಾಗವನ್ನು ಸಂಚರಿಸಿ, ಹಲವಾರು ವಿದ್ವತ್‌ಪೀಠಗಳನ್ನು ಏರಿ ಮೆರೆದವರು.
ಹದಿನೈದು ಗ್ರಂಥಗಳನ್ನು ಅವರು ರಚಿಸಿದ್ದಾರೆ. ಅವುಗಳಲ್ಲಿ ನೀತಿವಾಕ್ಯಾಮೃತ, ಭದ್ರಬಾ
ಸಮಯಸಾರ, ಇಷ್ಟೋಪದೇಶ, ತತ್ವಾರ್ಥ ಸೂತ್ರ ಮುಂತಾದವು ಘನಗ್ರಂಥಗಳು.
ಸಿ. ಎಫ್. ಆ್ಯಂಡ್ರೂಸರ ಜೀವನ ಚರಿತ್ರ ಸಂಗ್ರಹವನ್ನೂ, 'ಭಾರತಕೇಸರಿ ಲೋಕಮಾನ್ಯ ತಿ
ಸ್ವತಂತ್ರ ಕೃತಿಯನ್ನೂ ಶಾಸ್ತ್ರಿಯವರು ಮಾಡಿದ್ದಾರೆ. ಶಾಸ್ತ್ರಿಯವರ ಅನೇಕ ಮುಖವೂ ಅ
ಆದ ಪಾಂಡಿತ್ಯವನ್ನು ಮೆಚ್ಚಿದ ಶ್ರೀ ಜಯಚಾಮರಾಜ ಒಡೆಯರರು ಅವರನ್ನು ಆಸ್ಥಾನ
ಎಂದು ಪುರಸ್ಕರಿಸಿದುದು ಯಥೋಚಿತವೇ ಆಗಿದೆ.

ಕಾರ್ಕಳ-ಮೂಡಬಿದಿರೆಗಳ ಜೈನ ವಿದ್ವಾಂಸರ ಪಟ್ಟಿ ತುಂಬ ದೊಡ್ಡದು. ಶ್ರೀ ಎಂ. ಲೋ
ಶಾಸ್ತ್ರಿ. ಶ್ರೀ ವರ್ಧಮಾನ ಶಾಸ್ತ್ರಿ. ಶ್ರೀ ಚಂದ್ರರಾಜ ಶಾಸ್ತ್ರಿ, ಶ್ರೀ ಎಂ. ಜಗತ್ಪಾಲಯ್ಯ, ಶ್ರೀ
ಎಸ್. ಜೈನಿ. ಜೈನಮಹಿಳೆ' ಶ್ರೀ ಧರ್ಮ ಪಾಲ ಇಂದ್ರ ಇವರೇ ಮುಂತಾದವರು ತಮ್ಮ
ದಿಂದಲೂ ಗ್ರಂಥ ರಚನೆಗಳಿಂದಲೂ ಸ್ಮರಣೀಯರು. ಈ ಪಂಡಿತ ಪರಂಪರೆಯಲ್ಲಿ ಇತ್ತೀಚೆಗೆ ನಿ
ಶ್ರೀ ಕೆ. ಭುಜಬಲಿ ಶಾಸ್ತ್ರಿಗಳ ಸ್ಥಾನಮಾನ ಎತ್ತರದ್ದು. ಅವರು ಸುಮಾರು ಇಪ್ಪತ್ತೈದರಷ್ಟು
ಬರೆದಿದ್ದಾರೆ. ಕನ್ನಡದಲ್ಲಿ ಮಾತ್ರವಲ್ಲದೆ ಸಂಸ್ಕೃತದಲ್ಲೂ ಅವರು ವಿದ್ವಾಂಸರಾಗಿದ್ದು, 'ನೀತಿಮಂಜರಿ
ಕೃತಿಯನ್ನೂ ರಚಿಸಿದ್ದಾರೆ. ಬಿಹಾರದ ಆರಾ' ಎಂಬಲ್ಲಿ ಅವರು ಅನೇಕ ವರ್ಷ ಗ್ರಂಥಪಾ
ಆಗಿದ್ದರು. ಧರ್ಮಸ್ಥಳದ ಸಿದ್ಧವನ ಗುರುಕುಲದಲ್ಲಿ ಸೇವೆಸಲ್ಲಿಸುತ್ತಿರುವ ಶ್ರೀ ಶಿರ್ತಾಡಿ
ಶಾಸ್ತ್ರಿಗಳು ತಮ್ಮ ಪಾಂಡಿತ್ಯಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದಿದ್ದಾರೆ. ಮೂಡಬಿದಿರೆಯ
ಕುಮಾರ ಶಾಸ್ತ್ರಿಗಳು ಬಹುಭಾಷಾವಿದರಲ್ಲದೆ ವೀರವಾಣಿ ಜೈನಸಿದ್ಧಾಂತ ಭವನದ ಸಂಚಾ
ರಮಾಮಣಿ ಶೋಧ ಸಂಸ್ಥಾನದ ಸಂಶೋಧನಾ ಸಂಪಾದಕರೂ ಆಗಿರುವರು. ದಿ। ಉಗ್ರಾಣ

ುರು ಪರಿಷ್ಕರಿಸಿ ಸಂಪಾದಿಸಿದ 'ಭರತೇಶ ವೈಭವ'ವನ್ನು ಪ್ರಕಟಿಸಿ ಶ್ರೇಯೋಭಾಜನರಾದ ಹಳೆಯೂರು ಪದ್ಮರಾಜ ಆರಿಗ ಜೈನಿಯರು ಅನೇಕ ವರ್ಷ ಕಾರ್ಕಳದಲ್ಲಿ ವಕಾಲತ್ತು ನಡೆಸಿದವರು.

ಸ ಕಾಲ:

ಮುದ್ದಣನು ತೆರೆದ ನವೀನ ಮಾರ್ಗದಲ್ಲಿ ನಡೆದು ತಮ್ಮ ಹೆಸರನ್ನು ಕನ್ನಡಿಗರ ನಲ್ಲಿ ಹಸುರಾಗಿ ಉಳಿಸಿ ಹೋದವರಲ್ಲಿ ದಿ। ಮುಂಡ್ಕೂರು ನರಸಿಂಹ ಕಾಮತ್ ಅಥವಾ ಎನ್. ಕಾಮತರು ಒಬ್ಬರು. ಕಿರುಕತೆ, ಕಿರುನಾಟಕ, ಕಿರುಗವಿತೆಗಳಿಂದ ಪ್ರಸಿದ್ಧರಾಗಿರುವ ಕಾಮತರು ನ್ನಡ-ಹೊಸಗನ್ನಡ ಸಾಹಿತ್ಯಗಳೊಂದಿಗೆ ಬಂಗಾಳಿಯನ್ನೂ ಚೆನ್ನಾಗಿ ಬಲ್ಲವರಾಗಿದ್ದರು. ಮಂಗ ನ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಕಾಮತರು ಶಾಲಾ ವರ್ಧಂತಿಗಳಿಗಾಗಿ ಹತ್ತಾರು ೀಯ ನಾಟಕಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ತುಕಾರಾಮ, ತೆನ್ನಾಲಿರಾಮ. ಮೌರ್ಯ ಾಸನ, ಸದ್ರಿಸುಬ್ಬ – ಇವು ಕೆಲವು. ಕಾಮತರ 'ಅಂದಿನ ಆವೂರು' ಎಂಬ ಪುಸ್ತಕವು ಹೃದ್ಯವಾದ ಕಥಾಗುಚ್ಛ ಅಥವಾ ಚಿತ್ರಸಂಕಲಿಕೆ. ಅವರ 'ಗದಾಯುದ್ಧದ ಕಥೆ' ಸಂಗ್ರಹವಾಗಿದ್ದರೂ ರನ್ನನ ತ್ನದ ಬಹು ಸಮರ್ಥವಾದ ಒಂದು ಗದ್ಯ ರೂಪಾಂತರ. ಕೊಂಕಣಿ ಮನೆಮಾತಿನ ಎಂ. ಎನ್. ತರು, 'ತುಳುನಾಡ ರಾಣಿ' ಎಂಬ ಕವಿತೆಯಲ್ಲಿ ಈ ನಾಡವರಿಗೇ ಸಹಜವಾದ ಅನೇಕ ಭಾಷಾ ಲ್ಯವನ್ನು ತೋರಿದ್ದಾರೆ. 'ನೇಗಿಲೇ, ಸೌಖ್ಯ ಸಂಪದದ ಹೆಬ್ಬಾಗಿಲೇ' ಎಂಬುದು ಅವರ ಇನ್ನೊಂದು ್ರಯ ಕವಿತೆ. ಕವಿ ಗುರುದೇವ ಠಾಕೂರರ 'Where the mind is' ಎಂಬುದನ್ನು ಅವರು 'ಎಲ್ಲಿ ಳುಕಿರದೊ' ಎಂದು ಸತ್ವಪೂರ್ಣವಾಗಿ ಅನುವಾದಿಸಿದ್ದಾರೆ. ಸ್ವತಂತ್ರ, ಅನುವಾದ, ಸಂಗ್ರಹ ಎಂದು ತಾಗಿ ಸುಮಾರು ನಲ್ವತ್ತು ಪುಸ್ತಕಗಳನ್ನು ಅವರು ಬರೆದಿದ್ದಾರೆ. ೧೮೮೪ರಲ್ಲಿ ಜನಿಸಿದ ತರು, ಬಹು ಕಷ್ಟನಷ್ಟಗಳಲ್ಲಿ ಜೀವನಯಾಪನೆ ಮಾಡಿ ೧೯೪೦ರಲ್ಲಿ ಸ್ವರ್ಗಸ್ಥರಾದರು. ಅವರ ಾಲೀನರೂ, ಸಮೀಪವರ್ತಿಯೂ ಆಗಿದ್ದ ಶ್ರೀ ಎಂ. ಗೋವಿಂದ ಪೈಯವರು ಕಾಮತರನ್ನು ಬೇಸಗೆಯ ಹೂ' ಎಂದು ಕರೆದದ್ದು ಅರ್ಥವತ್ತಾಗಿದೆ.

ಹೊಸಕಾಲದ ಲೇಖಕರಲ್ಲಿ ಹಿರಿಯತಲೆ ಎನ್ನಬಹುದಾದವರು ಪ್ರಕೃತ ಕಾರ್ಕಳದಲ್ಲಿ ಅಷ್ಟಾಗಿ ತ್ತಿಲ್ಲ. ಕಾರ್ಕಳದಲ್ಲಿ ಶ್ರೀಮದ್ಭುವನೇಂದ್ರ ಸಂಸ್ಕೃತ ಮಹಾ ಪಾಠ ಶಾಲೆನಡೆಯುತ್ತಿದ್ದಾಗ ೀನಿವಾಸ ಉಡುಪರೇ ಮುಂತಾದ ಪಂಡಿತಶ್ರೇಷ್ಠರು ಅಲ್ಲಿದ್ದರು. ಈಗ ಸಂಸ್ಕೃತ ಕಾಲೇಜ್ ಇಲ್ಲ, ದ್ವಾಂಸರೂ ಕಣ್ಮರೆಯಾಗಿದ್ದಾರೆ. ಈಗ ಹೊಸಬರು, ಅದರಲ್ಲೂ ಎಳೆಯರದೇ ಮೇಲುಗೈ ಭಾಸವಾಗುತ್ತಿದೆ. ಎಡೆ-ಎಡೆಯಲ್ಲಿ ಮಧ್ಯವಯಸ್ಸಿನ ವಿದ್ವತ್ಕವಿಗಳೂ ಕೆಲವರಿದ್ದಾರೆ. ಗಾನ ಅರ್ಥಧಾರಿಯಾಗಿ ಪ್ರಸಿದ್ಧರಾಗಿರುವ ವಿದ್ವಾನ್ ಕಾಂತ ರೈಯವರು ಪ್ರೌಢಶಾಲಾ ವ್ಯಾಕರಣ ಲ್ಲದೆ ಯಶೋಧರ ಚರಿತ್ರೆ ಎಂಬ ಯಕ್ಷಗಾನ ಪ್ರಸಂಗವನ್ನೂ ಬರೆದಿದ್ದಾರೆ. ಅಹಲ್ಯೋದ್ಧಾರ, ನಧ್ವನಿ ಮುಂತಾದ ಕೃತಿರಚಯಿತರು 'ಅಂಬಾತನಯ' ಮುದ್ರಾಡಿ ಅಥವಾ ಶ್ರೀ ಕೇಶವ ಶೆಟ್ಟಿ ರು. ಗ್ರಾಮಾಂತರವಾಸಿಯಾದರೂ ನವಶಕ್ತಿ ಪ್ರಕಾಶನದ ಮೂಲಕ ಅನೇಕ ಪುಸ್ತಕಗಳನ್ನು ಿಸಿರುವ ಶ್ರೀ ಕೆ. ಜೆ. ಶೆಟ್ಟಿ ಕಡಂದಲೆ. ಕನ್ನಡ ಮತ್ತು ತುಳುವಿನಲ್ಲಿ ಏಕಪ್ರಕಾರವಾಗಿ ನಾಟಕಗಳನ್ನು ುರುವ ಶ್ರೀ ಕೆಮ್ತೂರು ದೊಡ್ಡಣ್ಣ ಶೆಟ್ಟಿ ಉಲ್ಲೇಖನೀಯರು. ಕಾರ್ಕಳದ ಖಜಾನೆಯ ಅಧಿಕಾರಿ ಗಿದ್ದ ದಿ। ಸುಬ್ಬರಾಯರು 'ಶ್ರೀ ಜ್ಞಾನೇಶ್ವರ ಚರಿತೆ' ಮತ್ತು 'ಕನ್ನಡ ತುಳಸೀ ದಾಸ ರಾಮಾಯಣ' ್ನ ಷಟ್ಪದಿಯಲ್ಲಿ ಬರೆದು. ಹಳೆಯ ವಸ್ತುಬಂಧಗಳನ್ನು ಒಪ್ಪಿ ಮೆಚ್ಚುವವರಿಗೆ ಕೈತುತ್ತುಗಳನ್ನು ದ್ದಾರೆ.

ಕಾರ್ಕಳದ ಲೇಖಕರಲ್ಲಿ ಎದ್ದು ಕಾಣುವ ಹೆಸರು ಡಾ। ನಾ. ಮೊಗಸಾಲೆಯವರದು. 'ಆಶಾಂಕುರ' ಕಥಾ ಸಂಕಲನದ ಮೂಲಕ ಸಾಹಿತ್ಯಕೃಷಿಗೆ ಅಂಕುರಾರ್ಪಣ ಮಾಡಿದ ಮೊಗಸಾಲೆಯವರು ಬಗೆಬಗೆಯ ಬೆಳೆಗಳನ್ನು ತೆಗೆದು, ತನ್ನದೇ ಸ್ಥಾನವನ್ನು ಪಡೆದಿದ್ದಾರೆ. ಸಣ್ಣಕತೆ, ಕಾದಂಬರಿ, ನಾಟಕವೇ ಮೊದಲಾದ ಎಲ್ಲ ಪ್ರಕಾರಗಳಲ್ಲೂ ಅವರ ಲೇಖನಿ ಹರಿದಾಡುತ್ತಿದೆ. ಅವರು

ಬರೆದ ಎಂಟು ಕಾದಂಬರಿಗಳಲ್ಲಿ 'ನನ್ನದಲ್ಲದ್ದು' ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಬಹು ವಾಗಿದೆ. ಅವರ ಮೂರು ಕವನಸಂಗ್ರಹಗಳು ಪ್ರಕಟವಾಗಿವೆ. ಕನ್ನಡ ಪತ್ರಿಕೆಗಳ 'ಧಾರಾ ವಿಭಾಗದಲ್ಲಿ ಆಗಾಗ ಕಾಣುವ ಹೆಸರುಗಳಲ್ಲಿ ಡಾ। ಮೊಗಸಾಲೆಯವರದೂ ಒಂದು.

'ರಸಿಕ ಪುತ್ತಿಗೆ' ಎಂದು ಸಾಹಿತ್ಯಲೋಕದಲ್ಲಿ ಪರಿಚಿತರಾಗಿರುವ ಪುತ್ತಿಗೆ ಸುಬ್ರಹ್ಮಣ್ಯ ಅ ರದು ವಿಪುಲವೂ ವೈವಿಧ್ಯಪೂರ್ಣವೂ ಆಗಿರುವ ಸಾಹಿತ್ಯಸೃಷ್ಟಿ. ಕನ್ನಡದಲ್ಲಿ ಕೃತಿರಚನೆ ಮಾ ಅಲ್ಲದೇ ಕನ್ನಡದಿಂದ ಹಿಂದಿಗೆ. ಹಿಂದಿಯಿಂದ ಕನ್ನಡಕ್ಕೆ ಕೆಲವು ಪುಸ್ತಕಗಳನ್ನು ಅನುವಾದ ಮಾಡಿ ಹಿಂದಿಯಲ್ಲೇ ಸ್ವತಂತ್ರವಾಗಿ ಬರೆದಿದ್ದಾರೆ. ಶಿಶುಸಾಹಿತ್ಯ, ಜಾನಪದ, ಜೀವನ ಚರಿತ್ರೆ, ಪ್ರ ಪ್ರಬಂಧ, ಸ್ಥಳ ಪರಿಚಯ, ಪತ್ತೇದಾರಿ, ನಂಬಿಕೆ-ನಡವಳಿಕೆಗಳೇ ಮೊದಲಾಗಿ ಐವತ್ತಕ್ಕೂ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ದೈನಿಕ, ಸಾಪ್ತಾಹಿಕ, ಮಾಸಿಕ ಪತ್ರಿಕೆಗಳಲ್ಲಿ ರಸಿಕ ಪುತ್ತಿಗೆಯ ಹೆಸರು ಆಗಾಗ ಮಿಂಚುತ್ತಲೇ ಇರುತ್ತದೆ.

ಸಾಹಿತ್ಯದ ಯಾವುದಾದರೂ ಒಂದು ವಿಶಿಷ್ಟ ಪ್ರಕಾರವನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವ ಸ್ವೀಕರಿಸಿ ಅದರಲ್ಲೇ ಶ್ರಮಿಸಿ, ತೃಪ್ತಿಯನ್ನು ಕಾಣುವವರೂ ಕೆಲವರಿರುತ್ತಾರೆ. ಅಂತಹವ ಶ್ರೀ ಪಳಕಳ ಸೀತಾರಾಮ ಭಟ್ಟರು ಒಬ್ಬರು. ಕನ್ನಡದಲ್ಲಿ ಶಿಶು ಸಾಹಿತ್ಯದ ಅತ್ಯುತ್ತಮ ಕೃಷಿ ಪಂಜೆ, ಹೊಯಿಸಳ, ರಾಜರತ್ನಂ ಮುಂತಾದವರ ಶ್ರೀಮಂತ ಪರಂಪರೆಯನ್ನು ಅವರು ಯ ಬೆಳಸಿಕೊಂಡು ಬರುತ್ತಿದ್ದಾರೆ. ಮಕ್ಕಳ ಕತೆ, ಕವಿತೆ, ನಾಟಕ – ಹೀಗೆ ನಾಲ್ಕು ದಶಕಗಳಿಂದ ಸುಮಾ ನಲ್ವತ್ತಾರರಷ್ಟು ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವಕ್ಕೆ ಸರಕಾರದ, ಸಾಹಿ ಸಂಸ್ಥೆಗಳ ಪಾರಿತೋಷಕಗಳೂ ಪ್ರಾಪ್ತವಾಗಿವೆ. ಮನೆಯಲ್ಲಿ ಮಕ್ಕಳಿರುವವರು, ಮಕ್ಕಳಲ್ಲಿ ಪ್ರಿ ಉಳ್ಳವರು ಅಂತಹ ಪುಸ್ತಕಗಳನ್ನು ಕೊಂಡು ಓದಬೇಕು, ಮಕ್ಕಳಿಂದ ಓದಿಸಬೇಕು ಮತ್ತು ಅದು ಇನ ಹುಲುಸಾಗಿ ಬೆಳೆಯುವುದಕ್ಕೆ ನೆರವಾಗಬೇಕು. ಏಕೆಂದರೆ ಕನ್ನಡ ಸಾಹಿತ್ಯವಾಹಿನಿಯ ಇತರ ವೇಣಿ ಮೊರೆಮೊರೆದು ಹರಿಯುತ್ತಿದ್ದರೆ ಶಿಶುಸಾಹಿತ್ಯ ಮಾತ್ರ ಹನಿಹನಿಯಾಗಿ ತೊಟ್ಟಿಕ್ಕುತ್ತಿದೆ.

ಭರವಸೆಯನ್ನು ಹುಟ್ಟಿಸುತ್ತಿರುವ ಉದಿತ, ಉದಯೋನ್ಮುಖ ಲೇಖಕರೂ ಕೆಲವರಿದ್ದಾ ಎನ್. ಕೆ. ಚೆನ್ನಕೇಶವ, ಮುದ್ದು ಮೂಡುಬೆಳ್ಳೆ, ಜಯರಾಮ ಕಾರಂತ. ನಂದಳಿಕೆ ಬಾಲಚಂದ್ರರಾ ಶ್ರೀನಿವಾಸ ಕಾರ್ಕಳ, ಇರ್ಶಾದ್ ಮೂಡಬಿದಿರೆ, ಶ್ರೀಮತಿ ಯಶವಂತ ಸುವರ್ಣ, ಮಾಯಾ ಪ್ರ ಆರ್. ಮಾಲತಿ ಪೈ ಅಂತಹ ಕೆಲವರು. ಆರ್. ರಾಮಚಂದ್ರ ಪೈಯವರ, ಕಡೆಂಗೋಡ್ಲು ಕಾವ್ಯ ಪ್ರಶ ವಿಜೇತ ಕೃತಿ 'ಕನಸುಗಳೇ ಬನ್ನಿ' ಎಂಬುದು ಇತ್ತೀಚೆಗೆ ಮುದ್ರಿತವಾಗಿದೆ. ಕರೆನಾಡಿನ ಜನಪ್ರಿಯ ಯಾಗಿರುವ ಯಕ್ಷಗಾನ, ಜಾನಪದ ಕ್ರೀಡೆಗಳಾಗಿರುವ ಕಂಬಳ-ಕೋಳಿ ಅಂಕಗಳ ಬಗೆಗೂ ಬರೆ ರಿದ್ದಾರೆ. ಎಂ. ಪ್ರಭಾಕರ ಜೋಶಿ, ಕೆ. ಎಂ. ರಾಘವನ್ ನಂಬ್ಯಾರ್, ಬೋಳ ಚಿತ್ತರಂಜನದಾ ಗುಣಪಾಲ ಕಡಂಬ, ಬಿಪಿನ್‌ಚಂದ್ರಪಾಲ್ – ಇವರು ಆ ಕ್ಷೇತ್ರಗಳಲ್ಲಿ ಥಕ್ಕನೇ ಕಣ್ಣಿಗೆ ಕಾಣು ಹೆಸರುಗಳು.

ಪಠ್ಯಪುಸ್ತಕ ರಚನೆ ಈ ಜಿಲ್ಲೆಯವರ ಒಂದು ವಿಶೇಷ ಸಿದ್ಧಿ. ಕಾರ್ಕಳವೂ ಈ ನಿಟ್ಟಿನಲ್ಲಿ ಹಿಂದ ದಿಲ್ಲ. ಎಳೆಯವರಲ್ಲಿ ವಾಚನಾಸಕ್ತಿ, ಸಾಹಿತ್ಯಾಭಿರುಚಿ ಕುದುರುವುದೇ ಆಕರ್ಷಕ ಪಠ್ಯಗಳಿ ದಿ। ಕೆ. ಶ್ರೀನಿವಾಸ ಕಿಣಿ, ರೆಂಜಾಳ ಹರಿ ಶೆಣೈ, ಆತ್ಮಾರಾಮ ಶೆಣೈ, ಕೆ. ವಾಸುದೇವ ಕಿಣಿ – ಇವರೆಲ್ಲರ ಪಠ್ಯಪುಸ್ತಕಗಳಿಂದಲೇ ಸ್ಮರಣೀಯರು, ಶ್ರೀನಿವಾಸ ಕಿಣಿಯವರು ಕನ್ನಡ-ಇಂಗ್ಲಿಷ್, ಚರಿತ್ರೆ-ಭೂಗೋ ಳವೇ ಮುಂತಾದ ಅರುವತ್ತಕ್ಕೂ ಹೆಚ್ಚು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. 1930–4 ದಶಕಗಳಲ್ಲಿ ಜಿಲ್ಲೆಯ ಎಲ್ಲ ಶಾಲೆಗಳಲ್ಲೂ ಅವರ ಪುಸ್ತಕಗಳೇ ಪಠ್ಯಗಳಾಗಿದ್ದುವು. ಮ್ಯಾಕ್ಮಿಲನ್ ಬಾಸೆಲ್ ಮಿಶನ್‌ನಂತಹ ಪ್ರತಿಷ್ಠಿತ ಸಂಸ್ಥೆಗಳು ಆ ಪುಸ್ತಕಗಳನ್ನು ಪ್ರಕಟಿಸುತ್ತಿದ್ದು ಡಾ। ಶಿವರಾಮ ಕಾರಂತ. ದಿ। ಎಂ. ಎನ್. ಕಾಮತ್, ಉಗ್ರಾಣ ಮಂಗೇಶ ರಾ ಮುಂತಾದವರ ಸಹಯೋಗವೂ ಕಿಣಿಯವರಿಗಿತ್ತು. ಅವರು ಇಂಗ್ಲಿಷಿನಲ್ಲಿ ಸಂಕಲಿಸಿರು Rhymse and Riddles, Story Poems, — ಮಕ್ಕಳೂ, ಹೆತ್ತವರೂ ಬ

ವಾಗಿಯೇ ಓದಿ ಚಪ್ಪರಿಸಬಹುದಾದ ಪುಸ್ತಕಗಳು. ಆಕ್ಸ್‌ಫರ್ಡ್ ಪ್ರೆಸ್ ಮುಖೇನ ಪ್ರಕಟವಾಗಿರುವ ಣಿಯುವರ Indian History ಮತ್ತು Pictorial Atlas of Indian History ಂದಿಗೂ ಸಂಗ್ರಾಹ್ಯನೆನಿಸಿ, ದೇಶ-ವಿದೇಶಗಳಲ್ಲಿ ವಿಖ್ಯಾತವಾಗಿರುವ ಎರಡು ಪುಸ್ತಕಗಳಾಗಿವೆ.

ಒಂದು ಕಾಲದಲ್ಲಿ ಎಲ್ಲರಂತೆ ಕನ್ನಡಿಗರಿಗೂ ಇಂಗ್ಲಿಷಿನಲ್ಲಿ ಬರೆಯುವುದು ಪ್ರಿಯವಾದ ವಿಷಯ ಾಗಿತ್ತು. ಕಾರ್ಕಳದಲ್ಲಿ ಅಂತಹವರ ಸಂಖ್ಯೆ ಸಣ್ಣದು. ಪಠ್ಯಗ್ರಂಥಕರ್ತ ಶ್ರೀನಿವಾಸ ಕಿಣಿಯುವರನ್ನು ಗಲೇ ಉಲ್ಲೇಖಿಸಿದ್ದಾಗಿದೆ. ಡಾ। ಜಾನ್ ಅಲ್ಫಾನ್ಸೋ ಕಾರ್ಕಳ ಇವರು ಒಮ್ಮೆ ಕನ್ನಡದಲ್ಲೇ ರೆಯುತ್ತಿದ್ದವರು, ಈಗ ವಿದೇಶವಾಸಿಯಾಗಿರುವುದರಿಂದ ಇಂಗ್ಲಿಷ್ ಅವರ ಮಾಧ್ಯಮವಾಗಿದೆ. ಾನಂದ ಕಾರ್ಕಳ ಅವರ ಆಂಗ್ಲ ಕವಿತೆಗಳು Caravan ಮುಂತಾದ ಪತ್ರಿಕೆಗಳಲ್ಲಿ ಆಗಾಗ ಪ್ರಕಟ ಾಗುತ್ತಿವೆ.

ಕಾರ್ಕಳ ತಾಲೂಕಿನ ಸಾಹಿತ್ಯಕಾರರ ಒಂದು ಹ್ರಸ್ವಪರಿಚಯ ಮಾಡಿದ್ದಾಯಿತು. ಸಾಹಿತ್ಯ ೇಷಣೆ, ಪ್ರಚಾರ ಮಾಡುತ್ತಿರುವ ನಾಲ್ಕಾರು ಸಂಘ-ಸಂಸ್ಥೆಗಳೂ ಕಾರ್ಕಳದಲ್ಲಿವೆ. ಅವುಗಳಲ್ಲಿ ಮುಂದೆ ಪಳಕ್ಕನೆ ಹೊಳೆಯುವ ಹೆಸರೆಂದರೆ ಮೂಡಬಿದಿರೆಯ 'ಸರಸ್ವತೀ ಸೇವಾ ಸಂಘ'. ತ್ಸಾಹಿಗಳ ಪ್ರಯತ್ನ, ಉದಾರಿಗಳ ಪ್ರೋತ್ಸಾಹದ ಫಲವಾಗಿ ಸುಮಾರು ಮೂರು ದಶಕಗಳ ಹಿಂದೆ ್ಥಾಪಿತವಾದ ಈ ಸಂಘ ದಸರಾ ಸಾಹಿತ್ಯೋತ್ಸವಗಳ ಮೂಲಕ ಮೂಡಬಿದರೆಯಲ್ಲಿ ಒಂದು ೂತನ ಜನಜಾಗೃತಿಯನ್ನೇ ಮಾಡಿದೆ. ಅಖಿಲ ಕರ್ನಾಟಕದ ಖ್ಯಾತನಾಮ ಸಾಹಿತಿಗಳೆಲ್ಲ ಮೂಡ ಿರೆಯ ಉತ್ಸವಗಳಲ್ಲಿ ಸಂತೋಷದಿಂದ ಭಾಗವಹಿಸಿದ್ದಾರೆ. ಕೇವಲ ಸಾಹಿತ್ಯೋಪನ್ಯಾಸಗಳನ್ನು ುವುದಕ್ಕೇ ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನ ಜಮಾಯಿಸುತ್ತಿರುವುದು ವಿರಳವಾದ ್ಯವೆಂದೇ ಹೇಳಬೇಕು.

ಗ್ರಾಮೀಣ ಪ್ರದೇಶಗಳಲ್ಲೂ ಸಾಹಿತ್ಯದ ಸರುಗಂಪು ಹೇಗೆ ಸೂಸುತ್ತಿದೆ ಎಂಬುದಕ್ಕೆ ಕಾಂತಾವರದ ನಡ ಸಂಘವೊಂದು ಸುಂದರ ನಿದರ್ಶನ. ಒಂದು ದಶಕದ ಹಿಂದೆ ಮೈಯ್ದೋರಿದ ಈ ಸಂಘ ಈಗಾಗಲೇ ಅಸ್ತಿತ್ವವನ್ನು ಜನಮಾನಸದಲ್ಲಿ ಗಟ್ಟಿಯಾಗಿ ಊರಿಬಿಟ್ಟಿದೆ. ನೆರೆಯೂರುಗಳನ್ನೂ ತಬ್ಬಿರುವ ಕಾಂತಾವರ ಕನ್ನಡ ಸಂಘ, ವರ್ಷ ವರ್ಷವೂ ಉದಯೋನ್ಮುಖ ಲೇಖಕರಿಗೆ ಪ್ರೋತ್ಸಾಹಕ ಬಹುಮಾನ ನ್ನು ನೀಡುತ್ತಿದೆ. ಉಪನ್ಯಾಸ ಗೋಷ್ಠಿಗಳನ್ನು ನಡೆಸುತ್ತಿದೆ. ಗ್ರಂಥ ಪ್ರಕಟಣೆಯಲ್ಲೂ ಆಸಕ್ತವಾಗಿದೆ.

ಹೆಬ್ರಿಯ 'ಕರ್ಣಾಟಕ ಸಂಘ'ವು ಹತ್ತಾರು ವರ್ಷಗಳಿಂದ ತನ್ನದೇ ನೆಲೆಯಲ್ಲಿ ಸಾಹಿತ್ಯ ಪ್ರಚಾರ ್ನು ಮಾಡುತ್ತಿದೆ. ಇತ್ತೀಚೆಗೆ ಒಂದು ಸಾಹಿತ್ಯ ಸಮ್ಮೇಳನವನ್ನೂ ಆಯೋಜಿಸಿದೆ. ನಂದಳಿಕೆಯ ಕ್ಷತ್ರಮಂಡಳಿಯು ಅಲ್ಲಿಯ ಉತ್ಸಾಹಿಗಳ ಮೂಲಕ ಕನ್ನಡದ ಕೈಂಕರ್ಯ ಮಾಡುತ್ತ ಕವಿ ಮುದ್ದಣನ ರನ್ನು ಚಿರಸ್ಥಾಯಿಗೊಳಿಸುವುದಕ್ಕೆ ನಾಲ್ಕಾರು ಯೋಜನೆಗಳನ್ನು ಹಾಕಿಕೊಂಡಿದೆ.

ಮೂಡಬಿದಿರೆಯ 'ವರ್ಧಮಾನ ಪ್ರಶಸ್ತಿಪೀಠ'ವು ಜ್ಞಾನಪೀಠದ ಮಾದರಿಯಲ್ಲಿ, ಆದರೆ ದೇ ಮಿತಿಯಲ್ಲಿ ಸಾಹಿತ್ಯವನ್ನು ಪೋಷಿಸುತ್ತಿರುವ ಸಂಸ್ಥೆಯಾಗಿದೆ. ಧರ್ಮಸ್ಥಳದ ಶ್ರೀ ವೀರೇಂದ್ರ ಡೆಯವರ ನೇತೃತ್ವದಲ್ಲಿ 1978ರಲ್ಲಿ ಆರಂಭವಾಗಿರುವ ಈ ಪೀಠ ಪ್ರತಿವರ್ಷವೂ ಕನ್ನಡದ ಸು ಸತ್ಕೃತಿಗಳಿಗೆ ಬಹುಮಾನ ನೀಡುತ್ತಿದೆ. ಈ ವರೆಗೆ ಅಂತಹ ಎಂಟು ಪುಸ್ತಕಗಳಿಗೆ ಪ್ರಶಸ್ತಿಗಳು ಿವೆ. ಪ್ರಶಸ್ತಿ ವಿಜೇತರಲ್ಲಿ ಕಂಬಾರ, ಅಡಿಗ, ಪಾವೆಂಆ ರಂತಹ ಲೇಖಕರು, ಮಾಸ್ತಿಯುವರಂತಹ ಮರು, ವೈಕುಂಠರಾಜು, ಡಿ. ವಿಜಯ, ಎಂ. ಎಸ್. ಕೆ. ಪ್ರಭು, ಸುಬ್ರಾಯ ಚೊಕ್ಕಾಡಿಯುವರಂತಹ ಣರೂ ಸೇರಿದ್ದಾರೆ.

ತಾಲೂಕಿನ ಅನೇಕ ಶಾಲೆ ಕಾಲೇಜುಗಳಲ್ಲೂ ಸಾಹಿತ್ಯ ಅಥವಾ ಕನ್ನಡ ಸಂಘಗಳು ಯಥಾಶಕ್ತಿ ಿತ್ಯ ವ್ಯವಸಾಯ ಮಾಡುತ್ತಿವೆ. ಕೆಲವೊಮ್ಮೆ ವರ್ಷಾವಧಿಯ ಉದ್ಘಾಟನೆ, ವರ್ಷಾಂತ್ಯದ ಸಮಾ ರೋಪಗಳು ಮಾತ್ರ ಇಂತಹ ಸಂಘಗಳ ಸಾಧನೆಯಾದರೂ ಅಪವಾದಗಳೂ ಇಲ್ಲವೆಂದಲ್ಲ.

ಭುವನೇಂದ್ರ ಕಾಲೇಜಿನ ಸಾಹಿತ್ಯ ಸಂಘ, ಇಪ್ಪತ್ತೈದು ವರ್ಷಗಳಿಂದ ವರ್ಷಪೂರ್ತಿ ವಿ
ಕ್ರಮಗಳನ್ನು ಆಯೋಜಿಸಿ ಯಶಸ್ವಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಬೇ
ಹಳ್ಳಿಯ ಒಂದು ಹಿರಿಯ ಪ್ರಾಥಮಿಕ ಶಾಲೆ ನಾಡಹಬ್ಬದ ನಿಮಿತ್ತವಾಗಿ ಎಷ್ಟು
ಸಾಹಿತ್ಯಸೇವೆ ಮಾಡುತ್ತಿದೆ ಎಂಬುದನ್ನು ಪರಿಭಾವಿಸಿದರೆ ಆಶ್ಚರ್ಯವಾಗುತ್ತದೆ; ಅಷ್ಟೇ

ಜಿಲ್ಲಾ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ 1971ರಲ್ಲಿ ಕಾರ್ಕಳದಲ್ಲಿ ಜರಗಿದ ಪ್ರ
ಸಾಹಿತ್ಯ ಸಮ್ಮೇಳನವು ಜಿಲ್ಲೆಯ ಸಾಹಿತ್ಯೇತಿಹಾಸದಲ್ಲಿ ಒಂದು ಪ್ರಮುಖ ಘಟ್ಟ.
ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಎರಡು ದಿನ ನಡೆದ ಆ ಸಮ್ಮೇಳನವನ್ನು ಜನ ಇಂದಿ
ತ್ತಿದ್ದಾರೆ. ಸಮ್ಮೇಳನದ ಅಂಗವಾಗಿ 'ದಿಬ್ಬಣ'ವೆಂಬ ಸ್ಮರಣ ಸಂಚಿಕೆಯನ್ನೂ, ಉತ್ಸವ
ಒಳಗೊಂಡ 'ಬಾಸಿಗ'ವೆಂಬ ಗ್ರಂಥವನ್ನೂ ಪ್ರಕಟಿಸಲಾಗಿದೆ.

ಕಾರ್ಕಳ ತಾಲೂಕಿನಲ್ಲಿ ಪ್ರಕಟನ ಸಂಸ್ಥೆಗಳೂ ಒಂದೆರಡು ಇದ್ದುವು. ಕಾರ್ಕಳದ
ಶೆಣೈ ಎಂಡ್ ಸನ್ಸ್‌ನವರು ಬಹುಸಂಖ್ಯೆಯಲ್ಲಿ ಯಕ್ಷಗಾನ, ಭಜನಾವಳಿ ಮುಂತಾದುವನ್ನು
ಮೂಡಬಿದಿರೆಯ ವಿಶಾಲ ಸಾಹಿತ್ಯಮಾಲೆಯು 1956ರಲ್ಲಿ ಆರಂಭವಾಗಿ ಒಂದೆ
ಸ್ಥಗಿತವಾಯಿತು. ಆದರೆ ಸುಮಾರು ಹದಿನೈದು ಪುಸ್ತಿಕೆಗಳು ಆ ಮಾಲೆಯಲ್ಲಿ ಅ
ಚೆಲ್ಲಿದ್ದುವು. ದಿ। ಗೋವಿಂದ ಪೈಯವರ ಕತೆಗಳನ್ನೂ ಇಂದಿನ ಪ್ರಸಿದ್ಧ ಲೇಖಕರಲ್ಲಿ ಬ
ಚಂದ್ರಶೇಖರ ಕಂಬಾರರ ಪ್ರಥಮ ಕೃತಿಯನ್ನೂ ಪ್ರಕಟಿಸಿದ ಶ್ರೇಯಸ್ಸು ಆ ಮಾ
ಕರ್ನಾಟಕದ ಪ್ರಸಿದ್ಧ ಪ್ರಕಟನ ಹಾಗೂ ವ್ಯಾಪಾರ ಸಂಸ್ಥೆಯಾಗಿರುವ ಸಾಹಿತ್ಯ ಭಂಡಾರ
ಸೋದರರು ಮೂಲತಃ ಕಾರ್ಕಳ ತಾಲೂಕಿನವರೇ. ದಿ। ನಾರಾಯಣ ರಾವ್‌ಕಲ್ಲೆಯವ
ದತ್ತಾತ್ರೇಯ ಗ್ರಂಥಮಾಲೆಯನ್ನು ಕೆಲಕಾಲ ನಡೆಸಿದ್ದರು

ಮೂಡಬಿದಿರೆಯಲ್ಲಿ ಎರಡು ಅಮೂಲ್ಯ ಗ್ರಂಥಭಂಡಾರಗಳಿವೆ: ದಿ। ಲೋಕನಾಥ
ಸ್ಥಾಪಿತವಾದ ಶ್ರೀ ವೀರವಾಣಿ ವಿಲಾಸ ಜೈನಸಿದ್ಧಾಂತ ಭವನ ಮತ್ತು ಸಾಹೂ ಶಾಂತಿಪ್ರಸ
ಪೋಷಿತವಾದ ಜೈನಶೋಧ ಸಂಸ್ಥಾನಗಳು ಜೈನ ತತ್ವಗಳ ಅಮೂಲ್ಯ ಅಂಗಗಳಾಗಿವೆ, ಜಿಜ
ಸಂಶೋಧಕರಿಗೂ ಅತ್ಯುಪಯುಕ್ತವಾಗಿವೆ.

ಪತ್ರಿಕಾ ರಂಗದಲ್ಲೂ ಕಾರ್ಕಳದ ಕೆಲವರು ಕೈಯಾಡಿಸಿದ್ದರು. ಮಿಜಾರ್ ಗೋವರ್ಧ
'ಶಕ್ತಿ', ರೆಂಜಾಳ ಜನಾರ್ದನ ಶೆಣೈಯವರ 'ಕಲಾಚಂದ್ರ' ಮುಂತಾದ ಪತ್ರಿಕೆಗಳು ಜನ
ಪ್ರೇಮ, ರಾಷ್ಟ್ರಭಕ್ತಿಗಳನ್ನು ಉದ್ದೀಪಿಸುವಲ್ಲಿ ಗಣನೀಯ ಪಾತ್ರವಹಿಸಿದ್ದುವು. ಗೋ
ಎಂ. ಎನ್. ಕಾಮತ್ ಮೊದಲಾದ ಗಣ್ಯರ ಲೇಖನಗಳು ಈ ಪತ್ರಿಕೆಗಳಲ್ಲಿ ಪ್ರಕಟ
ಕಲ್ಲೆ ನಾರಾಯಣ ರಾಯರಂತಹ ಹಿರಿಯರು ಪತ್ರಕರ್ತರಾಗಿ ಅಖಿಲ ಕರ್ನಾಟಕದಲ್ಲ
ರೆನಿಸಿದ್ದರು. ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ವಿಕ್ರಮದ ಸಂಪಾದಕ ಸುಬ್ರಾಯ
ಮಲ್ಯರು ಕಾರ್ಕಳದವರು. ಶಿವಪುರದ ಎಸ್. ಎಲ್. ನಾರಾಯಣ ಭಟ್ಟರು ಉಡುಪಿಯ
ಪತ್ರಿಕೆಯ ಸಂಪಾದಕರಾಗಿದ್ದರು. ಕಾರ್ಕಳದ ಎನ್.ಡಿ.ಯಾದವರು ಸಮವಸರಣ, ಅನಿಯ
ಈಗಲೂ ಪ್ರಕಟಿಸುತ್ತಿದ್ದಾರೆ. ವಾಚಕವರ್ಗದ ಅಭಿರುಚಿ, ಆಧುನಿಕ ಯಂತ್ರೋ
ದುಬಾರಿ ಬೆಲೆ, ಕೊಂಡು ಓದುವ ಜನರ ಮಿತಸಂಖ್ಯೆಯೇ ಮೊದಲಾದ ಕಾರಣಗಳಿಂದಾಗಿ
ಒಂದು ಪತ್ರಿಕೆಯನ್ನು ಆರಂಭಿಸುವುದು, ಆರಂಭಿಸಿದರೂ ಫಲಪ್ರದವಾಗಿ ಮುಂದು
ಪ್ರಯಾಸದ ಕಾರ್ಯ. ಹಾಗಾಗಿ ಕಾರ್ಕಳದ ಪತ್ರಿಕಾ ಕ್ಷೇತ್ರ ಅಷ್ಟೊಂದು ಹುಲುಸಾಗಿಲ್ಲ
ದಶಕಗಳಲ್ಲಿ ಜಿಲ್ಲೆದಿಸಲೂ ಬೇಕಿಲ್ಲ. ಎಲ್ಲ ಬೆಳೆಗಳೂ ಎಲ್ಲ ಹೊಲಗಳಲ್ಲೂ ಬೆಳೆಯುವುದಿಲ್ಲ.
ಬಾಸೆಲ್ ಮಿಶನ್‌ನ ಬಾಕಿಮಾರಿನಲ್ಲಿ ಬತ್ತ, ಜೋಳ, ಗೋಧಿ, ರಾಗಿ ಎಲ್ಲವೂ ಬೆಳೆಯಬೇಕೆಂದು
ಡಾ। ಶಿವರಾಮ ಕಾರಂತ ಬೆಳೆಯಬಹುದಾದದ್ದನ್ನು ಚೆನ್ನಾಗಿ ಬೆಳೆಸುವುದೂ, ಬೆಳೆದದ್ದನ್ನು ಉಂಡು ಸ
ಮುಂತಾದವರ ಸಹಯೋಗದುಕು. ಕಲೆ-ಇತಿಹಾಸಗಳ ದೃಷ್ಟಿಯಿಂದ ಕಾರ್ಕಳದ ಹೆಸರು ಹೆಗ್ಗಳಿಕೆ
Rhymse and Riddದಲ್ಲೂ ಕಾರ್ಕಳ ಹಿಂದಿಲ್ಲ. ರತ್ನಾಕರ-ಮುದ್ದಣರಂತಹ ಕವಿಪುಂಗವರ
ಕಾರ್ಕಳ ಎಂಬುದಕ್ಕಿಂತ ಹೆಚ್ಚಿನ ಹಿಗ್ಗು ನಮಗಿನ್ನೇನು ಬೇಕು?

ಜನಪದ ಜೀವನ



ಡಾ। ಎಲ್. ಜಿ. ಭಟ್ಟ, ಎಂ.ಎ; ಬಿ.ಎಡ್; ಪಿಎಚ್.ಡಿ.

ಡಾ॥ ಲಕ್ಷ್ಮಣ ಗಣೇಶ ಭಟ್ಟರು 1968 ರಿಂದ ಶ್ರೀ ಭುವನೇಂದ್ರ ಕಾಲೇ ಹಾಸ ವಿಭಾಗದಲ್ಲಿ ಉಪನ್ಯಾಸಕರಾಗಿದ್ದಾರೆ. ಉತ್ತರ ಕನ್ನಡದ ಜನಪದ ಬ ಸಾಹಿತ್ಯಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿರುವ ಭಟ್ಟರು ಅದೇ ವಿಷ ಕುರಿತಾದ ಮಹಾ ಪ್ರಬಂಧಕ್ಕಾಗಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಡಾ ಪದವಿಯನ್ನು ಪಡೆದಿದ್ದಾರೆ. ಹಾಲಕ್ಕಿ ಪಾಯಸ, ಜನಪದಜೀವನಚಕ್ರ ಒಕ್ಕಲಿಗರು, ಹಾಲಕ್ಕಿ ಸುಗ್ಗಿ ಮುಂತಾದ ಪುಸ್ತಕ – ಪುಸ್ತಿಕೆಗಳು ಮುದ್ರಿ ಯಲ್ಲದೆ, 'ಬಾಳಮ್ಮ ತುಳಸಿ ತಾಯಾಗಿ' ಎಂಬ ಕಾದಂಬರಿಯು 'ಸುಧಾ' ಸಾಪ್ತಾ ಧಾರಾವಾಹಿಯಾಗಿ ಪ್ರಕಟವಾಗಿದೆ. ಪತ್ರಿಕೆಗಳಲ್ಲಿ ಅನೇಕ ಸಂಶೋಧನ – ವಿ ಪ್ರಬಂಧಗಳೂ ಪ್ರಕಾಶಿತವಾಗಿವೆ.

'ಜನಪದ ಜೀವನ' ವೆಂಬ ಲೇಖನದಲ್ಲಿ ಕಾರ್ಕಳ ತಾಲೂಕಿನ ಸ ಜೀವನದ ಸ್ವರೂಪ – ವೈಲಕ್ಷಣ್ಯ, ರಾಣೆಯರೆಂಬ ವಿಶಿಷ್ಟ ಜನವರ್ಗದ ಪ ಯಕ್ಷಗಾನ ಮಂಡಲಿಗಳು ಮತ್ತು ಕಲಾಕಾರರ ವಿವರ, ಕಂಬಳ - ಕೋಳಿ ಮುಂತಾದ ಜಾನಪದ ವಿನೋದಗಳ ವಿವರವನ್ನು ನೀಡಲಾಗಿದೆ.

ವಿಭಾಗ – ೧

ಕಾರ್ಕಳದ ರಾಣೆ ಜನರು

ಕಾರ್ಕಳದ ಪೇಟೆಯಲ್ಲಿ ರಾಣೆ ಜನರ ವಾಸಸ್ಥಾನವಿದೆ. ಇಲ್ಲಿ ಅವರ ಸುಮಾರು 39 ಮನೆಗಳಿವೆ. ಜನಸಂಖ್ಯೆ ಸುಮಾರು 250 ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಅವರು ಇಂದು ವ ಸ್ಥಳವನ್ನು 'ಮಂಜನಕೇರಿ' ಎಂದು ಕರೆಯುವುದು ರೂಢಿಯಲ್ಲಿತ್ತು. ಪ್ರಾಯಶಃ 'ಮಂಜ' ಇವರ ಮುಖ್ಯಸ್ಥನಿಂದ ಈ ಹೆಸರು ಬಂದಿರಬಹುದು. ಕಾರ್ಕಳದ ಈಗಿನ ಸರಕಾರಿ ಆಸ್ಪತ್ರೆ ಸ್ಥಳದಲ್ಲಿ ಹಿಂದೆ ಇವರು ವಾಸವಾಗಿದ್ದರಂತೆ. ಆ ಸ್ಥಳಕ್ಕೆ 'ಕೋಟೆಕೇರಿ' ಎಂದು ಕಾರ್ಕಳದಲ್ಲಿ ವಾಗಿದೆ.

ಲ

ರಾಣೆಯವರ ಮೂಲದ ಬಗ್ಗೆ ಖಚಿತವಾಗಿ ಹೇಳುವ ಆಧಾರಗಳು ಈ ವರೆಗೆ ಲಭ್ಯವಾಗಿಲ್ಲ. ಕನ್ನಡದಲ್ಲಿ ರಾಣೆಯವರು ಮುಖ್ಯವಾಗಿ ಆರು ಪ್ರದೇಶಗಳಲ್ಲಿ ವಾಸವಾಗಿರುವುದು ತಿಳಿದು ೆ. ಅವುಗಳೆಂದರೆ: (1) ಕಾರ್ಕಳ, (2) ಬೈಲೂರು, (3) ಮೂಡಬಿದಿರೆ, (4) ಕಾಪು, (5) ಕಾಂತಾ ಮತ್ತು (6) ಕಿನ್ನಿಗೋಳಿ.

ರಾಣೆ ಬೆನ್ನೂರಿನಿಂದ ಬಂದವರು: ರಾಣೆ ಜನರು ಮೂಲದಲ್ಲಿ ರಾಣೆಬೆನ್ನೂರಿನವರಾಗಿದ್ದರಂತೆ. ಸುಲ್ತಾನನ ಸೈನ್ಯದಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದರಂತೆ. ಅವನ ಸೈನ್ಯ ಈ ಪ್ರದೇಶಕ್ಕೆ ಬಂದಾಗ, ರುವರೂ ಬಂದರು ಎಂಬ ಒಂದು ಹೇಳಿಕೆಯಿದೆ. ರಾಣೆಬೆನ್ನೂರಿನಿಂದ ಬಂದವರಾದುದರಿಂದ ೆ ರಾಣೆಯವರು ಎಂಬ ಹೆಸರು ಈ ಪ್ರದೇಶದಲ್ಲಿ ಬಂದಿತೆಂದು ಕೆಲವರ ಅಭಿಪ್ರಾಯ!

ಮೈಸೂರು ಪ್ರಾಂತದವರು: ರಾಣೆಯರು ಮೈಸೂರು ಅಥವಾ ಶ್ರೀರಂಗಪಟ್ಟಣದ ಪ್ರದೇಶಗಳಲ್ಲಿ ುತ್ತಿದ್ದರು. ಇವರು ಕ್ಷತ್ರಿಯರಾಗಿದ್ದರು. ಟಿಪ್ಪು ಸುಲ್ತಾನನ ಸೈನ್ಯದಲ್ಲಿ ಸೇವೆಸಲ್ಲಿಸುತ್ತಿದ್ದರು. ಸೈನ್ಯ ದಕ್ಷಿಣ ಕನ್ನಡ ಪ್ರದೇಶಗಳಿಗೆ ಬಂದಾಗ ಬಂದ ಈ ಜನರು ಕಾರಣಾಂತರಗಳಿಂದ ಇಲ್ಲಿಯೇ ಕಾಯಿತು. ಇವರು ರಣಾಂಗಣದಲ್ಲಿ ವೀರರಾಗಿ ಯುದ್ಧ ಮಾಡುತ್ತಿದ್ದರು. ಆದ್ದರಿಂದ ನ್ನು 'ರಣವೀರರು' ಎಂದು ಕರೆಯುತ್ತಿದ್ದರು. ಮುಂದೆ 'ರಣವೀರರು' ಎನ್ನುವುದೇ 'ರಾಣೆಯರು' ಯಿತು – ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ.

ಉಚ್ಚಂಗಿಯವರಾಗಿರಬಹುದೆ? – ರಾಣೆ ಜನರ ಮನೆಯ ಭಾಷೆ ಕನ್ನಡ. ತುಳುನಾಡಿಗೆ ಹೊರಗಿನಿಂದ ಬಂದವರೆಂಬುದು ಇದರಿಂದ ತಿಳಿಯುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಕ ಜೀವನವು ಸಮಾಜದ ಬೆನ್ನೆಲುಬು. ಇವರು ಮಾರಿಯಮ್ಮನನ್ನು ಪೂಜಿಸುತ್ತಾರೆ. ಈ ಅಮ್ಮ ವರು 'ಉಚ್ಚಂಗಿ ಅಮ್ಮ' ಎಂದೇ ಹೇಳುತ್ತಾರೆ. ಉಚ್ಚಂಗಿ ಅಮ್ಮ ಇವರ ಕುಲದೇವತೆ. ಆದ್ದರಿಂದ ಮೂಲದಲ್ಲಿ ಉಚ್ಚಂಗಿಯವರಾಗಿದ್ದಿರಲೂಬಹುದು ಎಂದು ಹೇಳಬಹುದು.

ಯ ಮುಖ್ಯಸ್ಥರು

ಸಮಾಜದ ಆಗುಹೋಗುಗಳನ್ನು ವಿಚಾರಿಸಿಕೊಳ್ಳಲು, ಇವರ ಜಾತಿಯವರೇ ಆದ ಕೆಲವು

ಮುಖ್ಯಸ್ಥರಿದ್ದಾರೆ. ಈ ವರೆಗೆ ಎರಡು ರಾಣೆ ಕುಟುಂಬಗಳ ಮಧ್ಯೆ ನಡೆದ ಯಾ
ಅವರು ನ್ಯಾಯಾಲಯಕ್ಕೆ ಹೋಗಿದ್ದು ಇಲ್ಲವಂತೆ. ಜಾತಿಯ ಮುಖ್ಯಸ್ಥರೇ ನ್ಯಾ
ವಿಚಾರಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ನೀಡುವುದೂ ಇದೆ. ಇವರ ಮುಖಂಡರಲ್ಲಿ

(1) ಜಾತಿಗೌಡ,

(2) ವತ್ತಿನಗೌಡ.

(3) ವತ್ತಿನ ಯಜಮಾನ,

(4) ಬಿರಾಣಿ.

ಈ ಮುಖ್ಯಸ್ಥರಿಗೆ ಅವರದೇ ಆದ ಅಧಿಕಾರ ಮತ್ತು ಕರ್ತವ್ಯಗಳು ಇರುತ್ತ

ಜಾತಿಯ ಕೂಟ:: ಉಚ್ಚಂಗಿ ದೇವಸ್ಥಾನದಲ್ಲಿ ಇವರ ಜಾತಿಯ ಸಭೆ ಕೂಡುತ್ತ
ಎಂದು ಹೇಳುತ್ತಾರೆ. ಜಾತಿಯ ಎಲ್ಲ ಪ್ರಾಯಬದ್ಧ ಪುರುಷರು ಕೂಟದ ಸದಸ್ಯರು.
ಜನರು ಇಂದು ಕೂಡ ಇವರ ಕೂಟದಲ್ಲಿ ಸೇರುತ್ತಾರೆ.

ಸಭೆಯಲ್ಲಿ ಗೌಡನಿಗೆ ಕೂಡ್ರಲು ಒಂದು ಮಂಚವಿದೆ. ಈ ಮಂಚದ ಮೇಲ
ವತ್ತಿನ ಗೌಡನು ಕುಳಿತುಕೊಳ್ಳುತ್ತಾನೆ. ಇತರ ಸದಸ್ಯರೆಲ್ಲ ಗೌಡ ಮತ್ತು ವತ್ತಿನ ಗೌಡ
ನೆಲದ ಮೇಲೆ ಕುಳಿತುಕೊಳ್ಳುತ್ತಾರೆ.

ಈ ಸಭೆಯಲ್ಲಿ ಎಲ್ಲ ಸದಸ್ಯರೂ ಒಬ್ಬರಿಗೊಬ್ಬರು ಸಮಾನರು. ಚರ್ಚೆ
ಯಾವುದೇ ಸದಸ್ಯರು ತಮಗೆ ಸರಿಕಂಡಂತೆ ಮಾತನಾಡಲು ಸ್ವತಂತ್ರರು.

ಸಾಮಾನ್ಯವಾಗಿ ಜಾತಿಯ ಸಭೆಯು ದೀಪಾವಳಿ ಪಾಡ್ಯದ ದಿನ, ಸಾಂತಮ
ವರ್ಷಾಂತ್ಯ ಪೂಜೆಯ ದಿನ (ಮೇ ತಿಂಗಳಿನಲ್ಲಿ) ಕೂಡುತ್ತದೆ. ಈ ಮಧ್ಯೆ ಅಗತ್ಯ
ದಿನ ಸಭೆ ಸೇರಬಹುದು.

ಜಾತಿಯ ಹುಡುಗನು ಮೊಟ್ಟಮೊದಲು ಸಭೆಗೆ ಬರುವಾಗ, ಆತನು 'ನಾನ
ಜಾತಿಯ ಕೂಟಕ್ಕೆ ಸೇರುವೆನು' ಎಂದು ಮೊದಲೇ ತಿಳಿಸಬೇಕು. ಸಭೆಯು ನಿಗದಿಪಡಿ
ತೆತ್ತು ಸದಸ್ಯತ್ವವನ್ನು ಪಡೆದುಕೊಳ್ಳಬೇಕು. ಹಿಂದಿನ ಕಾಲದಲ್ಲಿ ಹೊಸ ಸದಸ್ಯನು ಒ
ನಾಲ್ಕಾಣೆಯನ್ನು ನೀಡುವ ಸಂಪ್ರದಾಯವಿತ್ತು. ಈಗ 25ರಿಂದ 50 ರೂಪಾಯಿ
ಬೇಕಾಗುವುದು. ಅನಂತರ ಜಾತಿಯ ವತಿಯಿಂದ ಕೂಡಿದ ಜನರು ಸಭೆಗೆ ಒಂದ
ನೀಡುವ ರೂಢಿಯೂ ಇದೆ. ಅಂದಿನಿಂದ ಅವನು ಇತರ ಸದಸ್ಯರಿಗೆ ಸಮಾನನಾಗಿ
ನಾಗುವನು.

ಯಾವುದೇ ವಿಷಯದ ಚರ್ಚೆಯ ವೇಳೆಯಲ್ಲಿ ಈ ಸಭೆ ಬಹುಮತದ ಅಭಿಪ್ರಾಯ
ವುದು.

ಸಭೆಯಲ್ಲಿ ಚರ್ಚಿಸುವ ವಿಷಯಗಳಲ್ಲಿ ಕೆಲವು ಹೀಗಿವೆ:

1) ಜಾತಿಗೆ ಸಂಬಂಧಿಸಿದ ಧಾರ್ಮಿಕ ಕಾರ್ಯಗಳನ್ನು ಕಾಲಕಾಲಕ್ಕೆ ಸರಿಯ ಹೋಗುವುದು;

2) ಜಾತಿಯ ಸ್ತ್ರೀಯೊಬ್ಬಳು ಅನ್ಯಜಾತಿಯ ಪುರುಷರೊಡನೆ ಅನೈತಿಕ ರುವುದು

3) ಇಂಥ ಅನೈತಿಕ ಸಂಬಂಧದಿಂದ ಮಕ್ಕಳಾಗುವುದು,

4) ಜಾತಿಯ ಎರಡು ಕುಟುಂಬಗಳ ಮಧ್ಯೆ ನಡೆಯುವ ಮದುವೆಯನ್ನು ನಡೆಸುವುದು.
5) ಜಾತಿಯ ಕಾನೂನು – ಸಂಪ್ರದಾಯಗಳನ್ನು ಯಾವುದೇ ವ್ಯಕ್ತಿ ಮುರಿಯುವುದು.

ತಪ್ಪು ಮಾಡಿದವರಿಗೆ ಶಿಕ್ಷೆ ನೀಡುತ್ತಾರೆ. ಸಾಮಾನ್ಯವಾಗಿ ದಂಡವನ್ನು ಮಾಡುವುದು ರೂಢಿ. ರೂಪಾಯಿಗಳ ವರೆಗೂ ದಂಡ ಮಾಡಿದ ಉದಾಹರಣೆ ಇದೆಯಂತೆ. ಸುಮಾರು ಒಂದೂವರೆ ಳ ಹಿಂದೆ ಬಹಿಷ್ಕಾರ ನೀಡುವ ಪದ್ಧತಿಯೂ ಇತ್ತು. ಬಹಿಷ್ಕಾರ ಹೊಂದಿದವರಿಗೆ ಜಾತಿಯವರು , ನೀರು, ಬೆಂಕಿಗಳನ್ನು ಕೊಡುತ್ತಿರಲಿಲ್ಲ. ಅವರಿಗೆ ಯಾವುದೇ ರೀತಿಯ ಸಹಾಯ-ಸಹಕಾರಗಳು ರುವರಿಂದ ಸಿಗುತ್ತಿರಲಿಲ್ಲ. ಈಗ ಬಹಿಷ್ಕಾರ ನೀಡುವ ರೂಢಿ ಇಲ್ಲವೆಂದು ತಿಳಿದುಬಂದಿದೆ.

ಜಾತಿಯ ಮುಖಂಡನಾದ ಗೌಡನೇ ತಪ್ಪು ಮಾಡಿದರೆ, ಅವನಿಗೂ ಸಭೆಯು ದಂಡವನ್ನು ುತ್ತಿತ್ತು. ಹೀಗೆ ಇವರ ಜಾತಿಯ ಸಭೆ ಸಮಾಜದಲ್ಲಿ ಮುಖ್ಯ ಸ್ಥಾನವನ್ನೂ ಗುರುತರವಾದ ಬ್ದಾರಿಗಳನ್ನೂ ಹೊಂದಿದೆ.

ಜಾತಿ ಗೌಡ: ಈತನೇ ಜಾತಿಯ ಮುಖ್ಯಸ್ಥ. ಇವನಿಗೆ 'ಗುರಿಕಾರ' ಎಂದೂ ಹೇಳುತ್ತಾ. ರನ ಪಟ್ಟ ವಂಶಪಾರಂಪರ್ಯವಾದುದು. ಒಬ್ಬ ಗುರಿಕಾರನಿಗೆ ಮಕ್ಕಳಿಲ್ಲದಿದ್ದರೆ, ಅಥವಾ ಮಗನು ಈ ಸ್ಥಾನಕ್ಕೆ ಅಯೋಗ್ಯನಾಗಿದ್ದರೆ, ಸಭೆಯು ಇನ್ನೊಬ್ಬನನ್ನು ಗುರಿಕಾರನನ್ನಾಗಿ ಸುತ್ತದೆ. ಆದರೆ ಅವನೂ ಈ ಗುರಿಕಾರನ ವಂಶದವನೇ ಆಗಿರಬೇಕು. ಯಾವುದೇ ವಿಷಯದ ಯಲ್ಲಿ ಗುರಿಕಾರನು ಅಂತಿಮ ನಿರ್ಣಯವನ್ನು ಸಾರಬೇಕು. ಆದರೆ ಅವನು ತಾನೇ ತಾನಾಗಿ, ಯಶನಂತೆ ವರ್ತಿಸಲಾರ. ಅವನು ಮತ್ತಿನ ಗೌಡನ ಮತ್ತು ಸಭಾ ಸದಸ್ಯರ ಸಲಹೆಗಳನ್ನು ಕೇಳಬೇಕು.

ಮತ್ತಿನ ಗೌಡ: ಹೆಸರೇಸೂಚಿಸುವಂತೆ ಈತನು ಗೌಡನ ಮತ್ತಿನವನು. ಜಾತಿಯ ಸಭೆ ನಡೆಯು ದ ಈತನು ಗೌಡನ ಸಂಗಡವೇ ಇರಬೇಕು. ಈತನು ಬುದ್ಧಿವಂತನೂ ವ್ಯವಹಾರದಲ್ಲಿ ನುರಿತವನು ವನೆಂದು ನಂಬಿಕೆಯಿರುವುದು. ಇವನ ಸ್ಥಾನವೂ ವಂಶಪಾರಂಪರ್ಯವಾದುದು. ಗೌಡನಿಗೆ ಸಲಹೆಗಳನ್ನು ನೀಡುವುದು ಇವನ ಕರ್ತವ್ಯ. ಈತನು ಸಭೆಗೂ ಗುರಿಕಾರನಿಗೂ ಮಧ್ಯೆ ಸೇತುವೆ ೆ ಇರುತ್ತಾನೆ. ಯಾವುದೇ ಕೆಲಸ-ಕಾರ್ಯಗಳ ಜಯಾಪಜಯಗಳು ಈತನ ವ್ಯಕ್ತಿತ್ವವನ್ನು ಅವ ಸಿವೆ.

ಬಿರಾಣಿ: ಈತನು 'ಕೋಲಕಾರ'ನಿದ್ದ ಹಾಗೆ. ಸಭೆ ಕೂಡುವಾಗ ಜಾತಿಯ ಎಲ್ಲ ಮನೆಗಳಿಗೂ ಗಿ ಸುದ್ದಿ ಮುಟ್ಟಿಸುತ್ತಾನೆ. ಅಂತೆಯೇ ಸಭೆ ನಡೆಯುವಾಗ ಜಾತಿಯವನೊಬ್ಬನನ್ನು ತುರ್ತಾಗಿ ಕರೆಸುವುದಿದ್ದರೆ ಆ ವ್ಯಕಿ ಈತನು ಸಭೆಯ ಹುಕುಂ ತಿಳಿಸುತ್ತಾನೆ. ಮತ್ತು ಅವನನ್ನು ಸಭೆಗೆ ತರುತ್ತಾನೆ. ಹೀಗೆ ಅಧಿಕಾರಿಗಳ ಆದೇಶಗಳನ್ನು ಜಾತಿ ಸಂಬಂಧಿತರಿಗೆ ತಿಳಿಸುವುದು ಇವನ ಬ್ದಾರಿ. ಅಂತೆಯೇ ಉಚ್ಚಂಗಿ ದೇವಾಲಯದಲ್ಲಿ ಪೂಜೆಗಳ ಸಮಯದಲ್ಲಿ ಪೂಜಾ ಸಾಮಗ್ರಿ ನ್ನು ಒದಗಿಸುವುದೂ ಇವನ ಜವಾಬ್ದಾರಿ.

ಈ ಎಲ್ಲ ಅಧಿಕಾರಿಗಳಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಕೆಲವು ವಿಶಿಷ್ಟ ಅಧಿಕಾರ ತ್ತು ಕರ್ತವ್ಯಗಳು ಇವೆ. ಅವುಗಳನ್ನು ಆಯಾ ಸಂದರ್ಭಗಳಿಗೆ ಸರಿಯಾಗಿ ಹೇಳಲಾಗಿದೆ.

ಮಾಜಿಕ ಜೀವನ:

ಬಳಿ ಅಥವಾ ಕುಲ: ಇವರ ಸಮಾಜದಲ್ಲಿ ಮುಖ್ಯವಾಗಿ ಐದು ಕುಲಗಳಿಗೆ ಸಂಬಂಧಿಸಿದ ಜನರು ವರು. ಆ ಬಳಿಗಳು ಹೀಗಿವೆ:

1) ಪೂಜಾರಿ ಬಳಿ

2) ಗೌಡನ ಬಳಿ
3) ಪಾತ್ರಿಯ ಬಳಿ
4) ವತ್ತಿನ ಗೌಡನ ಬಳಿ
5) ಬಿರಾಣಿ ಬಳಿ.

ಇಲ್ಲಿ ಇವರ ವಂಶಪದ್ಧತಿ, ಆಡಳಿತಾತ್ಮಕ ಮತ್ತು ಧಾರ್ಮಿಕ ಪದ್ಧತಿಗಳಲ್ಲಿ ಸಾ ಕಂಡುಬರುತ್ತದೆ.

ವಿವಾಹ ಪದ್ಧತಿ: ಇವರಲ್ಲಿ ಬಳಿಯೊಳಗಿನ (ಎಂದರೆ ಬರಿ ಅಥವಾ ಗೋತ್ರ) ಒಂದು ಕುಲದ ಹೆಣ್ಣು ಇನ್ನೊಂದು ಕುಲದ ಗಂಡನ್ನು ಮದುವೆಯಾಗಬಹುದು.

ಹಿಂದಿನ ಕಾಲದಲ್ಲಿ ರಾಣೆಯರಲ್ಲಿ ಐದು-ಎಂಟು ದಿನಗಳ ಮದುವೆ ಕಾರ್ಯಕ್ರ ಯಲ್ಲಿದ್ದವು. ಆದರೆ ಈಗ ಎರಡೇ ದಿನಗಳಲ್ಲಿ ಇವರ ವಿವಾಹ ವಿಧಿಗಳು ಮುಗಿಯುತ್ತ

ಭಾರತದ ಅನೇಕ ಗುಡ್ಡಗಾಡು ಪಂಗಡಗಳಲ್ಲಿ ಇರುವಂತೆ, ರಾಣೆಯರಲ್ಲಿಯೂ ಹೆಣ್ಣಿನವರಿಗೆ ತುಂಬಾ ಮಹತ್ವವಿದೆ. ಹುಡುಗನ ಮತ್ತು ಹುಡುಗಿಯ ಮನೆಯ ಹಿರಿ ಗಾಗಿ ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುವರು. ಅನಂತರ ಗಂಡಿನ ಕಡೆಯವರು ನೊಡನೆ ಹೆಣ್ಣಿನ ಕಡೆಯ ಗುರಿಕಾರನ ಮನೆಗೆ ಬರುತ್ತಾರೆ. ಅವನು ದೇವಾಲಯ ಸಭೆಯನ್ನು ಕೂಡಿಸುತ್ತಾನೆ. ಈ ಸಭೆಯಲ್ಲಿ ಗಂಡು-ಹೆಣ್ಣು ನಿಕ್ಕಿಯಾಗುತ್ತದೆ. ಗಂಡಿ ಸಭೆಯಲ್ಲಿ ಒಂದು ಉಂಗುರವನ್ನು ಹೆಣ್ಣಿನ ಕಡೆಯವರಿಗೆ ನೀಡಬೇಕು. ಹೀಗೆ ಜಾತಿ ಸಮಕ್ಷಮದಲ್ಲಿ ಮದುವೆ ನಿಕ್ಕಿ ಆದಮೇಲೆ ಸಾಮಾನ್ಯವಾಗಿ ಮುರಿಯುವುದಿಲ್ಲ ತಕರಾರುಗಳು ಉಂಟಾದಲ್ಲಿ ಎರಡೂ ಕಡೆಯ ಗುರಿಕಾರರು ಮುಂದಾಗಿ ಸಂಧಾನ ಮ

ವಧುದಕ್ಷಿಣೆ: ಸಾಮಾನ್ಯವಾಗಿ ಈ ವರ್ಗದಲ್ಲಿ ಹುಡುಗಿಗೆ ವಧುದಕ್ಷಿಣೆ ನೀಡಿ ಮ ಕೊಂಡು ಬರುವ ಪದ್ಧತಿ ಇದೆ. ಇಂದು ವಧುದಕ್ಷಿಣೆ ನೂರು ರೂಪಾಯಿಗಳಿಂದ ಸಾವಿರ ವರೆಗೂ ಇದೆಯಂತೆ.

ಜವಳಿ: ಮದುವೆಗೆ ಸಂಬಂಧಿಸಿದ ಜವಳಿಗಳನ್ನು ತರುವುದು ಹುಡುಗನ ಜವಾ ಕಡೆಯವರೇ ದಾರೆ ಸೀರೆ, ಮುಸುಗಲು ಸೀರೆ, ಹೆಣ್ಣಿನ ತಾಯಿಗೆ ಸೀರೆ, ಮುಂತಾದವುಗಳ ಅಲ್ಲದೆ ಆಭರಣಗಳಾದ ಕರಿಮಣಿ, ಕಾಲುಂಗುರ, ಕೈಉಂಗುರ, ಬೆಂಡೋಲೆ, ಮೂಗಿನ ಗಂಡಿನವರೇ ತರುತ್ತಾರೆ.

ಮುಖಕ್ಷೌರ: ಗಂಡಿನ ಮನೆಯಲ್ಲಿ ದಿಬ್ಬಣ ಹೊರಡುವ ಮುನ್ನ ವರನ ಮುಖ ತ್ತಾರೆ. ಅನಂತರ ಆತನು ಸ್ನಾನಮಾಡುತ್ತಾನೆ. ಮುಖ ಕ್ಷೌರ ಮಾಡಿದವನಿಗೆ ಒಂದು ಮೂರು ಹಾಸೆ (ಪಾವು) ಬೆಣ್ತಿಗೆ ಅಕ್ಕಿ, ಒಂದು ರೂಪಾಯಿ, ಒಂದು ಕವಳಿಗೆ ವೀಳ್ಯದೆಲೆ, ಇಟ್ಟು ನೀಡುತ್ತಾರೆ. ಇದು ಅವನ ಮರ್ಯಾದೆ. ಮದುಮಗನ ಜೊತೆ ಇತರ ಅನೇ ಪ್ರಚಲಿತವಿರುವ ಪದ್ಧತಿಯಂತೆ, ಇನ್ನೊಬ್ಬನು ಮುಖಕ್ಷೌರ ಮಾಡಿಕೊಳ್ಳುವ ಪದ್ಧತಿ ಇಲ್ಲ. ಮುಖಕ್ಷೌರ ಮಾಡುವವರು ಇವರ ಜಾತಿಯವರೇ ಆಗಿರುತ್ತಾರೆ.

ದಿಬ್ಬಣ: ಮದುವೆಯ ಮುಹೂರ್ತವನ್ನು ಸಾಮಾನ್ಯವಾಗಿ ಬ್ರಾಹ್ಮಣ ಪುರೋ ಕೊಡುತ್ತಾರೆ. ಮದುವೆಯ ದಿನ ಗಂಡಿನ ದಿಬ್ಬಣವು ಹೆಣ್ಣಿನ ಮನೆಗೆ ಬರುತ್ತದೆ. ದು ವಾದರೆ ಮುನ್ನಾ ದಿನವೇ ಗಂಡಿನವರು ಬರುತ್ತಾರೆ. ಆಗ ಅವರ ವಸತಿ ಏರ್ಪಾಡನ್

ತಬೇಕು. ಸಾಮಾನ್ಯವಾಗಿ ದೇವಾಲಯಗಳಲ್ಲಿ ಈ ಏರ್ಪಾಡು ಮಾಡುತ್ತಾರೆ. ಹಿಂದಿನ ಕಾಲದಲ್ಲಿ ವರ್ಗದ ಜನರೇ ವಾಲಗವನ್ನು ತರುತ್ತಿದ್ದರು. ಈಗ ಕ್ರಿಶ್ಚನ್ನರ ಬೇಂಡುವಾಲಗವನ್ನು ತರುತ್ತಾರೆ.

ದಾರೆ ಎರೆಯುವುದು: ಗಂಡಿನಸರ ದಿಬ್ಬಣ ಬರುವ ಸಮಯದಲ್ಲಿ ಹೆಣ್ಣಿನ ಮನೆಯಲ್ಲಿ ಹೆಣ್ಣಿನ ಾರವಾಗುತ್ತದೆ. ಆವಳಿಗೆ ಹೂ ಮುಡಿಸಿ, ಆಭರಣ ತೊಡಿಸಿ, ಬಟ್ಟೆ ಉಡಿಸುತ್ತಾರೆ.

ಹುಡುಗಿಯ ಮನೆಯಲ್ಲಿ ಮಂಟಪದಲ್ಲಿ ದಾರೆ ಎರೆಯುತ್ತಾರೆ. ದೇವರ ಕೋಣೆಯಿಂದ ಟಪಕ್ಕೆ ಹುಡುಗಿಯ ಅಣ್ಣನು ಅವಳನ್ನು ಕರೆದುತರುತ್ತಾನೆ. ಮದುಮಗಳಿಗೆ ಅಣ್ಣನು ಇರದಿದ್ದರೆ ಂಗಲೆಯರು ಅವಳನ್ನು ಕರೆದುತರಬಹುದು.

'ಜಾತಿಬಟ್ಟರಿಗೆ' ಜಾತಿಯವರು ಸ್ನಾನಮಾಡಿಸಿ ಪಟ್ಟೆ ಉಡಿಸಿ ಜನಿವಾರ ಹಾಕುತ್ತಾರೆ. ಈ ಬಟ್ಟರು ಹಾಲಿನ ದಾರೆ ಎರೆಯುತ್ತಾರೆ. ದಾರೆಗಿಂಡಿಯಲ್ಲಿ ಹಾಲು ಹಾಕಿ, ಅದನ್ನು ಒಂದು ಾಣದಲ್ಲಿಡುತ್ತಾರೆ. ಈ ಹರಿವಾಣದಲ್ಲಿ ಅಕ್ಕಿ ತುಂಬಿಸುತ್ತಾರೆ. ಮೂಗು ಇರುವ ತೆಂಗಿನಕ್ಕಾಯನ್ನು ಯ ಮೇಲೆ ಇಡುತ್ತಾರೆ. ಕರಿಮಣಿ, ಕನ್ನಡಿ, ಕುಂಕುಮ, ಕಣ್ಣಕಾಡಿಗೆ, ಸೀರಣಿಗೆ, ಬಾಚಣಿಗೆ, ಕವಳಿಗೆ ವೀಳ್ಯದೆಲೆ, ಐದು ಅಡಕೆಗಳು, ಹೂವು ಮುಂತಾದುವುಗಳನ್ನು ಈ ಹರಿವಾಣದಲ್ಲಿಡು ಹೀಗೆ ದಾರೆಯ ಕಾರ್ಯಕ್ರಮ ಮುಗಿದ ಮೇಲೆ ಮದುವೆಯ ಊಟವಾಗುತ್ತದೆ.

ಮರುಶಾಸ್ತ್ರ: ಮೂರನೆಯ ದಿನ ಗಂಡಿನ ಮನೆಯಿಂದ ಮದುಮಕ್ಕಳು ನೆಂಟರಿಷ್ಟರೊಡಗೂಡಿ ನ ಮನೆಗೆ ಬರುತ್ತಾರೆ. ಇದಕ್ಕೆ 'ಮರುಶಾಸ್ತ್ರ' ಎನ್ನುತ್ತಾರೆ.

ಮದುವೆಯಲ್ಲಿ ಊಟಗಳು: ಒಂದು ಮದುವೆಯಲ್ಲಿ ಈಗ ಕಡಿಮೆಯೆಂದರೂ ಐದು ನೆಂಟರ ಊಟಗಳು ಆಗುತ್ತವೆ. ಅವುಗಳ ಸಂದರ್ಭಗಳು ಈ ರೀತಿ ಇವೆ –

1) ಹುಡುಗಿಯನ್ನು ನೋಡುವಾಗ.
2) ಹುಡುಗನ ಕಡೆಯವರು ಹುಡುಗಿಯ ಮನೆಗೆ ಬಂದು ಮಾತನಾಡುವಾಗ
3) ಮುಹೂರ್ತವಿಡುವಾಗ.
4) ಧಾರೆ ಎರೆದ ಮೇಲೆ.
5) ಮರು ಶಾಸ್ತ್ರದ ದಿನ.

ಧಾರೆ ಎರೆಯುವಾಗ ಹಿಂದಿನ ಕಾಲದಲ್ಲಿ ಶೋಭಾನೆ ಹಾಡುಗಳನ್ನು ಹೇಳುತ್ತಿದ್ದರಂತೆ. ಈಗ ಈ ಹಾಡುಗಳನ್ನು ಯಾರೂ ಹೇಳುವುದಿಲ್ಲ.

ಹಿಂದಿನ ಕಾಲದಲ್ಲಿ ಬಾಲ್ಯವಿವಾಹ ಪದ್ಧತಿ ಈ ವರ್ಗದಲ್ಲಿ ಕೂಡ ರೂಢಿಯಲ್ಲಿತ್ತು. ಆದರೆ ಈ ಪದ್ಧತಿಯಿಲ್ಲ.

ಸಂಸ್ಕಾರ

ಹುಡುಗಿಯು ಋತುಮತಿಯಾದಾಗ ಒಸಗೆ ಸಂಸ್ಕಾರವನ್ನು ಮಾಡುತ್ತಾರೆ. ಆಗ ಅವಳು ಯನ್ನು ಮುಟ್ಟುವುದಿಲ್ಲ. ಸ್ನಾನ ಮಾಡಿದ ಅನಂತರ ಕೇರಿಯವರೆಲ್ಲ ಅವಳನ್ನು ಕರೆದುಕೊಂಡು ಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಸಭೆ ಕೂಡುತ್ತದೆ. ಗಂಗೆ ಪೂಜೆಯಾಗುತ್ತದೆ. ದೇವರ ಪೂಜೆ ಮಾಡಿ ಮಹಿಳೆಯರು ಹುಡುಗಿಗೆ ಆರತಿ ಎತ್ತುತ್ತಾರೆ. ಈ ಕಾರ್ಯಕ್ರಮದಲ್ಲಿ ಗುರಿಕಾರರು ಇರಬೇಕು.

ದೇವದಾಸಿ ಪದ್ಧತಿ

ಕರ್ನಾಟಕದ ಅನೇಕ ವರ್ಗಗಳಲ್ಲಿ ದೇವದಾಸಿ ಪದ್ಧತಿ ರೂಢಿಯಲ್ಲಿತ್ತು. ರಾಣೆಯರಲ್ಲೂ

ಈ ಪದ್ಧತಿ ಅನೇಕ ದಶಕಗಳ ಹಿಂದೆ ರೂಢಿಯಲ್ಲಿತ್ತು. ಸುಮಾರು 25 - 30
ಗುರಿಕಾರ ರಾಮಗೌಡರು ಈ ಪದ್ಧತಿಯನ್ನು ಸಮಾಜದಿಂದ ತೆಗೆದು ಹಾಕಿದ
ಖರ್ಚನ್ನು ಸಹಿಸಲಾಗದ ಅತಿ ಬಡವರು ಈ ಪದ್ಧತಿಗೆ ಶರಣು ಹೋಗುತ್ತಿದ್ದರ
ಬಂದಿದೆ. ಈ ಪದ್ಧತಿಯ ನಿರ್ನಾಮ ರಾಣೆಯರ ಸಾಮಾಜಿಕ ಸುಧಾರಣೆಗಳಲ್ಲಿ ಒಂ
ಹೆಜ್ಜೆಯೆಂದು ಹೇಳಬಹುದು.

ನಾಮಕರಣ – ಹೆಸರುಗಳು

ಹೆರಿಗೆಯಾದ ಹನ್ನೆರಡನೆಯ ದಿನ ಶಿಶುವಿಗೆ ನಾಮಕರಣ ಶಾಸ್ತ್ರವನ್ನು ಮಾಡ
ಭಟ್ಟರು ಪಂಚಾಂಗ ನೋಡಿ ಆ ದಿನದ ಶುಭಗಳಿಗೆಯನ್ನು ಮತ್ತು ಯಾವ ಹ
ಇಡಬೇಕೆಂದು ಹೇಳುತ್ತಾರೆ. ಈ ಕಾರ್ಯಕ್ರಮದಲ್ಲಿ ಗಂಡಸರು ಇರಲೇಬೇಕೆಂ
ತಾಯಿ ಅಥವಾ ಅಜ್ಜಿ ಬಾಲೆಗೆ ಹೆಸರನ್ನು ಇಟ್ಟು ತೊಟ್ಟಿಲಿನಲ್ಲಿ ಇಟ್ಟು ತೂಗಬೆ
ಅಥವಾ ಸೂತಕ 16 ದಿನಗಳವರೆಗೂ ಇರುತ್ತದೆ. 16ನೆಯ ದಿನ ಭಟ್ಟರ ಮನೆಗ
ಅವರ ದೇವಸ್ಥಾನಕ್ಕೆ ಹೋಗಿ. ತೀರ್ಥವನ್ನು ತಂದು ಮನೆಗೆ ಸಿಂಪಡಿಸುತ್ತಾರೆ.
ಕಳೆದಂತಾಯಿತು.

ಗಂಡು ಮಕ್ಕಳಿಗೆ ಹೂವಯ್ಯ, ಅಣ್ಣಪ್ಪ, ಧೂಮ, ನಾಗ, ಶೇಷ, ಕುಪ್ಪ. ಕರ್ರ
ತಿಮ್ಮ, ಮಂಟ ಮುಂತಾದ ಹೆಸರುಗಳನ್ನು ಇಡುತ್ತಿದ್ದರು. ಹೆಣ್ಣು ಮಕ್ಕಳಿಗೆ ನಾಗು
ಹೊನ್ನು, ಗುಳ್ಳ, ಪೈಯ್ಯು, ಪಾಂಕು, ಅಕ್ಕಮ್ಮ, ಪದ್ದು, ಮುಂತಾದ ಹೆಸರುಗಳನ
ಈಗ ಆಧುನಿಕ ಹೆಸರುಗಳನ್ನು ಇಡುತ್ತಾರೆ.

ಊಟ ಉಣಿಸುಗಳು – ಆಭರಣಗಳು

ರಾಣೆಯರು ಮಾಂಸಾಹಾರಿಗಳು, ಮಧ್ಯಾಹ್ನದ ಊಟಕ್ಕೆ ಚಟ್ನಿ, ಮೀನು
ಮುಂತಾದುವುಗಳು ಇರುತ್ತವೆ. ಮಾಂಸದ ಸಾರು ಇವರಿಗೆ ತುಂಬಾ ಇಷ್ಟ. ಮೀನ
ಹಂದಿ, ಕಡ, ಜಿಂಕೆ, ಮೊಲ ಬರ್ಕ ಮುಂತಾದ ಪ್ರಾಣಿಗಳ ಮಾಂಸವನ್ನು ಇವರು
ಎತ್ತು, ಎಮ್ಮೆ, ಕೋಣಗಳ ಮಾಂಸ ಇವರಿಗೆ ನಿಷಿದ್ಧ. ಮಾರಿ ಹಬ್ಬದಲ್ಲಿ ಮೀನು
ತಿನ್ನಲೇಬೇಕೆಂಬ ನಿಯಮ ಇವರಲ್ಲಿದೆ. ಇತರ ಹಬ್ಬಗಳಲ್ಲಿ ಮಾಂಸಾಹಾರ ಇವರಿಗೆ

ರಾಣೆ ಹೆಂಗಸರು ಆಭರಣ ಪ್ರಿಯರು, ಆರ್ಥಿಕ ಸ್ಥಿತಿಯಿಂದಾಗಿ ಚಿನ್ನದ ಆಭರ
ಕಡಿಮೆ, ಬೆಳ್ಳಿಯ ಆಭರಣಗಳು ಹೆಚ್ಚು ರೂಢಿಯಲ್ಲಿವೆ. ಹೆಂಗಸರು ಬೆಂಡೋಲೆ, ಮ
ಕಾಲವಲ್ಲಿ ಕೊಕ್ಕೆಯಾಕಾರದ ದೊಡ್ಡ ಮೂಗುತಿಯನ್ನು ಧರಿಸುತ್ತಿದ್ದರು) ಕಾಜಿನ
ಇವರ ಮುಖ್ಯ ಆಭರಣಗಳು. ಮದುವೆಯಾದ ಹೆಂಗಸರು ಕರಿಮಣಿ, ಕಾಲುಂಗುರಗಳ
'ಬುಗುಡಿ' ಇವರ ಇನ್ನೊಂದು ಮುಖ್ಯ ಆಭರಣ, ವಿಧವೆ ಈ ಆಭರಣಗಳನ್ನೆಲ್ಲ
ಪತಿ ಮರಣ ಹೊಂದಿದರೆ ಶವದ ಎದೆಯ ಮೇಲೆ ಬಳೆಗಳನ್ನು ಇಟ್ಟು ಒಡೆಯಬೇಕೆ
ಗಂಡಸರು ಕಿವಿಗೆ ಮುರು (ಆಮ್ಲೆ ಮುರು ಎಂಬ ಆಭರಣವನ್ನು ಹಿಂದಿನ ಕಾಲದಲ್ಲಿ
ಕೈಗೆ ಉಂಗುರಗಳನ್ನು ಧರಿಸುತ್ತಾರೆ.

ಹಬ್ಬ – ಹುಣ್ಣಿಮೆಗಳು

ರಾಣೆ ಜನರು ಆಚರಿಸುವ ಹಬ್ಬ ಹುಣ್ಣಿಮೆಗಳನ್ನೂ, ಅವುಗಳ ವೈಶಿಷ್ಟ್ಯಗಳನ
ಈ ಕೆಳಗಿನಂತೆ ಹೇಳಬಹುದು.

ಆಟಿ ಅಮಾವಾಸ್ಯೆ: ಆಟಿ ತಿಂಗಳದ ಅಮಾವಾಸ್ಯೆ ಇವರಿಗೆ ಮಹತ್ವವಾದುದು. ಅಂದು ಮದ್ದು ಯುವ ವಿಶೇಷ ಕಾರ್ಯಕ್ರಮವಿದೆ. ಸಾಸಿವೆ, ಬೆಳ್ಳುಳ್ಳಿ, ಓಮ, ಆಟಿಚೆಕ್ಕೆ, ಗೇರುಬೀಜ ಮುಂತಾದವು ್ನ ಕುಟ್ಟಿ ನೀರಿನಲ್ಲಿ ಕುದಿಸಿ ಕುಡಿಯುತ್ತಾರೆ. ಅಂದು ದೇವರ ಪೂಜೆ ದಿನದಂತೆ ನಡೆಯುವುದು. ಷವಾದ ಪೂಜಾ ಕಾರ್ಯಕ್ರಮವಿಲ್ಲ. ಕಜ್ಜಾಯಗಳನ್ನು ಮಾಡುವುದಿಲ್ಲ. ಕೆಸು ಮತ್ತು ಹರಿವೆ ಪ್ಪಿನ ಪದಾರ್ಥಗಳನ್ನು ಊಟಮಾಡಲೇಬೇಕೆಂಬ ನಿಯಮವಿದೆ. ಅಂದು ರಾಣೆಯರ ಎಲ್ಲ ಯಲ್ಲಿಯೂ ಚೆನ್ನೆಮಣೆ ಆಟವನ್ನು ಪ್ರಾರಂಭಿಸುತ್ತಾರೆ.

ನಾಗಪಂಚಮಿ: ಇವರಿಗೆ ನಾಗರಪಂಚಮಿ ಹಬ್ಬ ವಿಶೇಷವಾದುದು. ಕುಟುಂಬದವರು ಅಥವಾ ಬನಕ್ಕೆ ಸಂಬಂಧಿಸಿದವರೆಲ್ಲ ಕೂಡಿ ಈ ಹಬ್ಬವನ್ನು ಆಚರಿಸುತ್ತಾರೆ. ಬ್ರಾಹ್ಮಣ ಅರ್ಚಕರಿಗೆ ಗ್ರಿಗಳನ್ನು ಒದಗಿಸಿ ಅವರಿಂದ ಪೂಜೆಯನ್ನು ಮಾಡಿಸುತ್ತಾರೆ. ಅಂದು ಮೀನು - ಮಾಂಸ ್ಧ. ಮೀನಿನ ಪದಾರ್ಥಗಳನ್ನು ಮಾಡುವ ಪಾತ್ರೆಗಳನ್ನು ಹೊರಗೆ ಎಸೆಯುತ್ತಾರೆ. ನಾಗನಿಗೆ ಸಿದ ತೆಂಗಿನ ಕಾಯಿಯನ್ನು ಹೆರೆದು ಅನ್ನದೊಟ್ಟಿಗೆ ಕಲಸಿ ತಿನ್ನಬೇಕೆಂಬ ನಿಯಮವಿದೆ.

ಕೃಷ್ಣಾಷ್ಟಮಿ: ಅಂದು ಮನೆಯಲ್ಲಿ ಸಿಹಿತಿಂಡಿ ಮಾಡುತ್ತಾರೆ. ಸಾಮಾನ್ಯವಾಗಿ ಮೊದಲನೆಯ ವಿಗೆ 'ಕೃಷ್ಣ'ನೆಂಬ ಹೆಸರನ್ನು ಇಡುವುದು ಈಗ ರೂಢಿಯಲ್ಲಿದೆ. ಅಂದು ಚಂದ್ರ ಕಾಣುವವರೆಗೆ ಮಣೆ ಆಟವನ್ನು ಆಡುತ್ತಾರೆ.

ಚವತಿ: ಚವತಿಯಲ್ಲಿ ಗಣಪತಿ ಮೂರ್ತಿಯನ್ನು ತರುವ ಸಂಪ್ರದಾಯ ಇವರಲ್ಲಿಲ್ಲ. ಅಂದು ಕ್ಕಿ ಪಂಚಖಾದ್ಯಮಾಡಿ ದೇವರಿಗೆ ನೈವೇದ್ಯ ಮಾಡಿ ತಿನ್ನುತ್ತಾರೆ. ಅಂದು ಕೂಡ ಮಾಂಸಹಾರ ್ಧ.

ನವರಾತ್ರಿ: ದೇವಾಲಯದಲ್ಲಿ ದುರ್ಗಾಪೂಜೆ ಮಾಡುತ್ತಾರೆ. ಇವರ ಜಾತಿಯ ಬಟ್ಟರೇ ಂಗಿ ಅಮ್ಮನ ಪೂಜೆ ಮಾಡುವರು. ಸಂಪ್ರದಾಯದಂತೆ, ನವರಾತ್ರಿಯ ಒಂಬತ್ತು ದಿನಗಳಲ್ಲಿ ಂಗಿ ಅಮ್ಮನ ಪೂಜೆಯನ್ನು ಈ ಕೆಳಗೆ ಕಾಣಿಸಿದ ಕುಟುಂಬದವರು ನೆರವೇರಿಸುವರು.

1) ಮೊದಲನೆಯದಿನ ಹತ್ತು ಮಂದಿ ಲೆಕ್ಕದಲ್ಲಿ ಪೂಜೆ. ಕೇರಿಯ ಎಲ್ಲ ಮನೆಯವರೂ ವಂತಿಗೆ ನೀಡುತ್ತಾರೆ.
2) ಎರಡನೆಯ ದಿನ 'ಜಾತಿಬಟ್ಟರ' ವತಿಯಿಂದ ಪೂಜೆ ನಡೆಯುತ್ತದೆ.
3) ಮೂರನೆಯ ದಿನ ಗುರಿಕಾರನು ತನ್ನ ಖರ್ಚಿನಿಂದ ಪೂಜೆಯನ್ನು ನಡೆಸಿಕೊಡಬೇಕು.
4) ವತ್ತಿನ ಗೌಡರ ಪೂಜೆ.
5) ದೇವಸ್ಥಾನಕ್ಕೆ ಇವರ ಪೈಕಿ ಒಬ್ಬರು ಅಧ್ಯಕ್ಷರಿದ್ದಾರೆ. ಅವರ ಲೆಕ್ಕದಲ್ಲಿ ಐದನೆಯ ದಿನದ ಪೂಜೆ.
6) ಆರನೆಯ ದಿನ ಪಾತ್ರಿಗಳ ಖರ್ಚಿನಿಂದ ಪೂಜೆ.
7) 'ಯಜಮಾನ'ನು ನಡೆಸಿಕೊಡುವ ಪೂಜೆ ಏಳನೆಯ ದಿನ ನಡೆಯುತ್ತದೆ.
8) ಎಂಟನೆಯ ದಿನ ಬಿರಾಣಿಯು ತನ್ನ ಖರ್ಚಿನಿಂದ ಪೂಜೆ ನಡೆಸಿಕೊಡುತ್ತಾನೆ.
9) ಎಲ್ಲ ಸಭಾಸದಸ್ಯರ ಲೆಕ್ಕದಲ್ಲಿ ಒಂಬತ್ತನೆಯ ಪೂಜೆ.

ಈ ರೀತಿ ನವರಾತ್ರಿ ಒಂಬತ್ತೂದಿನಗಳು ಉತ್ಸವ ಅದ್ದೂರಿಯಾಗಿ ನಡೆಯುತ್ತದೆ.

ದೀಪಾವಳಿ: ಇವರು ದೀಪಾವಳಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಬಲೀಂದ್ರನನ್ನು ಸಂಪ್ರದಾಯ ಇವರಲ್ಲಿಲ್ಲ. ನರಕ ಚತುರ್ದಶಿಯ ದಿನ ಬೂದೆ ನೀರು ಮೀಯುತ್ತಾರೆ.

ಅಂದು ಮೈ ಕೈಗಳಿಗೆ ತೆಂಗಿನ ಎಣ್ಣೆಯನ್ನು ಬಳಿದುಕೊಳ್ಳಬೇಕು. ಮನೆ ದೇವರ ಪೂಜೆ ಮಾಡುತ್ತಾರೆ. ಬೆಲ್ಲದ ಕಡುಬು, ಹಲಸಿನ ಎಲೆಯಲ್ಲಿ ಕಟ್ಟಿದ ಕಡುಬು ಮುಂತಾದ ಕಜ್ಜಾಯಗಳನ್ನು ಮಾಡುತ್ತಾರೆ.

ಯುಗಾದಿ: ಚಾಂದ್ರಮಾನ ಯುಗಾದಿಯನ್ನು ಇವರು ಆಚರಿಸುತ್ತಾರೆ. ಮದುವೆಯಾದ ವರ್ಷ ನವ ದಂಪತಿಗಳು ಮಾವನ ಮನೆಗೆ ಬರಬೇಕು. ಹೊಸ ಬಟ್ಟೆ ತೊಡುತ್ತಾರೆ.

ಈ ರೀತಿಯಲ್ಲಿ ಇವರು ಅನೇಕ ಹಬ್ಬಹರಿದಿನಗಳನ್ನು ಆಚರಿಸುತ್ತಾರೆ.

ಮೃತರ ಸಂಸ್ಕಾರಗಳು

ರಾಣೆಯರಲ್ಲಿ ಹಿಂದೆ ಮೃತರನ್ನು ಹೂಳುವ ಪದ್ಧತಿ ರೂಢಿಯಲ್ಲಿತ್ತು. ದಾರೆ ಮದುವೆ ಯಾದವರನ್ನು ಸುಡುವ ಪದ್ಧತಿ ಕ್ರಮೇಣ ಜಾರಿಯಲ್ಲಿ ಬಂದಿತು. ಒಂದು ಮನೆಯಲ್ಲಿಯ ಮರಣ ವಾರ್ತೆ ತಿಳಿದೊಡನೆ ಗುರಿಕಾರನು ಬಿರಾಣಿಯ ಮುಖಾಂತರ ಎಲ್ಲ ಮನೆಗಳಿಗೂ ಸುದ್ದಿಯನ್ನು ಕಳಿಸುತ್ತಾನೆ. ಎಲ್ಲ ಮನೆಗಳ ಪುರುಷರು ಮೃತನ ಮನೆಗೆ ಬರುತ್ತಾರೆ.

ಶವವನ್ನು ಅಂಗಣದಲ್ಲಿಟ್ಟು ಮೀಸುತ್ತಾರೆ. ಅನಂತರ ಶವದ ಕೊರಳಿಗೆ ತುಳಸಿಮಣಿ ಸರವನ್ನು ತೊಡಿಸುತ್ತಾರೆ. ಕಚ್ಚೆಹಾಕಿ ಧೋತರ ಉಡಿಸುವ ಪದ್ಧತಿಯೂ ಇದೆ; ಮುಂಡಾಸ ಸುತ್ತುತ್ತಾರೆ. ಶವದ ಬಳಿ ತೆಂಗಿನ ಕಾಯಿಯನ್ನು ಒಡೆಯುತ್ತಾರೆ. ಒಂದು ದೀಪವನ್ನೂ ಇಡುತ್ತಾರೆ. ಶವವನ್ನು ತೆಗೆಯುವ ವರೆಗೆ ಆ ದೀಪ ನಂದಬಾರದೆಂಬ ನಿಯಮವಿದೆ.

ಶವದ ಮೈಮೇಲೆ ನೀರು ಸುರಿಯುವಾಗ ಕೂಡಿದ ಎಲ್ಲರೂ ನೀರು ಸುರಿಯುವುದುಂಟು. ಇದಕ್ಕೆ 'ಕಡ್ನೀರು' ಎಂಬ ಹೆಸರು. ಶವವನ್ನು ಈಡಿನ ಮೇಲೆ ಇಟ್ಟು ಉಡದಾರವನ್ನು ಹುಸಿಯುತ್ತಾರೆ. ಕಿವಿಗೆ ಆಭರಣವಿದ್ದರೆ ಅದನ್ನೂ ಕಳಚುತ್ತಾರೆ.

ಸ್ಮಶಾನಕ್ಕೆ ಹೋದವರು ಶವವನ್ನು ಸುಟ್ಟು ಅಥವಾ ಹುಗಿದು ಪುನಃ ಮೃತನ ಮನೆಗೆ ಬರುವರು. ಆ ಹೊತ್ತಿಗೆ ಹೆಂಗಳೆಯರು ಮನೆಯನ್ನು ಸಾರಿಸಿ ಶುದ್ಧ ಮಾಡುತ್ತಾರೆ. ಬಾಗಿಲಿನಲ್ಲಿ ಒಂದು ದೀಪ ವನ್ನಿಡಬೇಕು. ಸ್ಮಶಾನಕ್ಕೆ ಹೋದವರು ದೀಪವನ್ನು ನೋಡಿ, ಬಂದು ವೀಳ್ಯದೆಲೆ ತಿಂದು ತಮ್ಮ ತಮ್ಮ ಮನೆಗೆ ಹೋಗುತ್ತಾರೆ.

ಮೂರನೆಯ ದಿನ ಸ್ಮಶಾನದಲ್ಲಿ ಬೂದಿಯನ್ನು ಒಟ್ಟುಗೂಡಿಸುತ್ತಾರೆ. ಅಂದು ಮೊದಲನೆಯ ದಿನ ಹೆಣವನ್ನು ಹೊತ್ತವರ ಭುಜಗಳನ್ನು ಮನೆಯವರು ತೊಳೆಯುತ್ತಾರೆ. ಅಂದು ಒಂದು ಸೇರು ಅಕ್ಕಿಯ ಪಿಂಡವನ್ನು ಮಾಡಿ ಸ್ಮಶಾನದಲ್ಲಿಟ್ಟು ಬರುವ ಪದ್ಧತಿಯಿದೆ. ಅಂದು ಮೃತನ ಆತ್ಮ ಮನೆಯಿಂದ ಹೊರಗೆ ಹೋಗುವುದೆಂಬ ನಂಬಿಕೆ ಇವರಲ್ಲಿದೆ. ಇದಕ್ಕೆ 'ಕಾವೆ ಹೋಗುವುದು' ಎಂಬ ಹೆಸರು. ಆ ದಿನ ಮನೆಯವರೆಲ್ಲ ಬೇಗನೇ ಊಟಮಾಡಿ ಮಲಗುತ್ತಾರೆ.

13ನೆಯ ದಿನ ಮೃತನ ಭೋಜ್ಯವನ್ನು ಮಾಡುತ್ತಾರೆ. ಅಂದು ಬ್ರಾಹ್ಮಣ ಬಟ್ಟರು ಇಂಥವನ ಮೈಮೇಲೆ ಮೃತನು ಬರುವನೆಂದು ತಿಳಿಸುತ್ತಾರೆ. ಅಂಥವರು ಬೆಳಗಿನಿಂದ ನಿರಾಹಾರದಲ್ಲಿರಬೇಕು. ಅವರು ಹಿಂಗಾರದ ಅಥವಾ ತೆಂಗಿನ ಗೊನೆ ಹೂಗಳನ್ನು ಹಿಡಿದು ಆವೇಶ ಬಂದು ಬೊಬ್ಬೆ ಹೊಡೆಯು ತ್ತಾರೆ. ಮೃತನು ಪ್ರಾಣಬಿಟ್ಟ ಜಾಗದಲ್ಲಿ ಬೂದಿಯನು ಹರಡುತ್ತಾರೆ. ಒಂದು ಪಾತ್ರೆಯಲ್ಲಿ ನೀರು ಹಾಕಿ ಆ ಬೂದಿಯ ಬಳಿ ಇಡುತ್ತಾರೆ. ಸತ್ತವರ ಆತ್ಮ ಬಂದಲ್ಲಿ ಆ ಬೂದಿಯಲ್ಲಿ ಹೆಜ್ಜೆ ಗುರುತು ಕಾಣುವುದೆಂದು ಇವರ ನಂಬಿಗೆ. ಅಂದು ಮೃತನ ಪ್ರೀತ್ಯರ್ಥ ಮನೆಯಲ್ಲಿ ಎಡೆ ಇಡುತ್ತಾರೆ. ಕೇರಿ ಯವರಿಗೆಲ್ಲ ಊಟ ಹಾಕುತ್ತಾರೆ. ಪ್ರತಿ ವರ್ಷ ಸತ್ತವರ ದಿನವನ್ನು ಆಚರಿಸುವ ಪದ್ಧತಿ ಇವರಲ್ಲಿಲ್ಲ.

ಮನರಂಜನೆಗಳು

ಆಧುನಿಕ ಮನರಂಜನೆಗಳಾದ ಸಿನೇಮ, ಮುಂತಾದವುಗಳ ಬಗೆಗೆ ಇವರಲ್ಲಿ ವಿಶೇಷ ಆಸಕ್ತಿ ಕಂಡುಬರುತ್ತದೆ. ಜನಪದ ಮನರಂಜನೆಗಳು ಈಗ ಇವರಲ್ಲಿ ಕಂಡುಬರುವುದಿಲ್ಲ.

ಕೃಷ್ಣಾಷ್ಟಮಿ, ಗಣೇಶ ಚವತಿ, ನವರಾತ್ರಿಗಳಲ್ಲಿ ಬಗೆಬಗೆಯ ವೇಷಗಳನ್ನು ಹಾಕಿ, ಮುಖವಾಡಗಳನ್ನು ಧರಿಸಿ ಮನೆಮನೆಗೆ ಹೋಗಿ ಕುಣಿದು ಹಣಸಂಗ್ರಹ ಮಾಡುತ್ತಿದ್ದರು. ಹುಲಿ, ಕರಡಿ, ಚಿರತೆ ಮುಂತಾದ ಪ್ರಾಣಿಗಳ ವೇಷಗಳನ್ನು ಹಾಕುತ್ತಿದ್ದರು.

ಕೋಲಾಟವು ಹಿಂದೆ ಇವರ ಮುಖ್ಯ ಮನೋರಂಜನೆಯಾಗಿತ್ತು. ಮೂರು ಬಗೆಯ ಕೋಲುಗಳನ್ನು ಇವರು ಹೊಡೆಯುತ್ತಿದ್ದರಂತೆ. ಜನಪದ ಪದಗಳನ್ನೂ ಹೇಳುತ್ತಿದ್ದರು. ಆದರೆ ಇಂದು ಈ ಕಲೆಗೆ ಪ್ರೋತ್ಸಾಹವಿಲ್ಲ.

ಶಿಕ್ಷಣ

ಶಿಕ್ಷಣದಲ್ಲಿ ಈ ವರ್ಗ ತೀರಾ ಹಿಂದುಳಿದಿದೆ. 12 ವರ್ಷದ ಕೆಳಗಿನ ಅನೇಕ ಬಾಲಕ-ಬಾಲಕಿಯರು ಇನ್ನೂ ಕೂಡ ಪ್ರಾಥಮಿಕ ಶಾಲೆಗೆ ಹೋಗದೆ ಇರುವವರು ಇವರಲ್ಲಿದ್ದಾರೆ. ಇದಕ್ಕೆ ಇವರ ಆರ್ಥಿಕ ಸ್ಥಿತಿ ಕಾರಣವೆಂದು ಈ ವರ್ಗದ ಹಿರಿಯರು ತಿಳಿಸಿದ್ದುಂಟು. ತಂದೆ ತಾಯಿಗಳು ಕೂಲಿ ಕೆಲಸಕ್ಕೆ ಹೊರಗೆ ಹೋಗಬೇಕಾಗುತ್ತದೆ. ಆಗ ಮನೆಯಲ್ಲಿಯ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಈ ಬಾಲಕ-ಬಾಲಕಿಯರು ಮನೆಯಲ್ಲಿ ಇರಬೇಕಾಗುತ್ತದೆ. ಕಾರ್ಕಳದಲ್ಲಿ ವಾಸಿಸುವ ರಾಣೆಯರ ಒಟ್ಟು ಸಂಖ್ಯೆ ಸುಮಾರು 250 ಎಂದು ಹೇಳಬಹುದು. ಅವರಲ್ಲಿ ಸುಮಾರು 77 ಜನರಿಗೆ ಓದು-ಬರಹ ಗೊತ್ತಿಲ್ಲ. ಮಾಧ್ಯಮಿಕ ಶಿಕ್ಷಣ ಪಡೆದವರು ಮತ್ತು ಪಡೆಯುತ್ತಿರುವವರ ಒಟ್ಟು ಸಂಖ್ಯೆ ಕೇವಲ ಹದಿನೆಂಟು; ಕಾಲೇಜು ಶಿಕ್ಷಣವನ್ನು ಮುಗಿಸಿದವರು ಒಬ್ಬರು; ಪಿ.ಯು.ಸಿ. ಓದುತ್ತಿರುವವರು ಒಬ್ಬರು; ತಾಂತ್ರಿಕ ಶಿಕ್ಷಣ ಪಡೆಯುತ್ತಿರುವವರು ಒಬ್ಬರು, ಕಾರ್ಕಳದ ರಾಣೆಯರಲ್ಲಿ ಇರುವುದು ಸಮೀಕ್ಷೆಯಿಂದ ತಿಳಿದುಬಂದಿದೆ. ಇಬ್ಬರು ಅಂಗ್ರೇಜಿ ಮಾಧ್ಯಮದ ವಿದ್ಯಾಸಂಸ್ಥೆಗೆ, ಸುಮಾರು ಎಂಟು ಜನ ಎಳೆಯರು ಬಾಲವಾಡಿಗೆ ಹೋಗುತ್ತಾರೆ. ಪರಿಸರದ ಜನರು ಇವರಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿಹೇಳಿದರೆ, ಆರ್ಥಿಕ ಸ್ಥಿತಿ ಸುಧಾರಿಸಿದರೆ ಇವರಲ್ಲಿ ಶಿಕ್ಷಣದ ಪ್ರಗತಿ ಆಗಬಹುದು.

ಆಧುನಿಕ ಸೌಲಭ್ಯಗಳು

ಇವರ ಕೇರಿಯಲ್ಲಿ ಆಧುನಿಕ ಸೌಲಭ್ಯಗಳಾದ ನೀರಿನ ನಲ್ಲಿಗಳನ್ನು ಕಾಣಬಹುದು. ಪ್ರತಿ ಮನೆಗೂ ನಲ್ಲಿಯ ಸೌಲಭ್ಯವಿಲ್ಲದಿದ್ದರೂ, ಕೇರಿಯ ಮಧ್ಯೆ ಅಲ್ಲಲ್ಲಿ ನಲ್ಲಿಗಳಿವೆ. ಕೇವಲ ಎರಡು ಮೂರು ಮನೆಗಳವರು ಪತ್ರಿಕೆಗಳನ್ನು ಕೊಂಡು ಓದುತ್ತಾರೆ. ಇವರ ಅನೇಕ ಮನೆಗಳು ಸರಕಾರ ಕಟ್ಟಿಸಿಕೊಟ್ಟ ಐದು ಸೆಂಟ್ಸ್ ಜಾಗದ ಮನೆಗಳು. ವಿದ್ಯುತ್ ಸೌಕರ್ಯ ಮೂರು ಮನೆಗಳಿಗೆ ಇದೆ. ಇವರ ನಾಲ್ಕು ಮನೆಗಳಲ್ಲಿ ರೇಡಿಯೋ, ಒಂದು ಮನೆಯಲ್ಲಿ ಟೇಪ್ ರೆಕಾರ್ಡರ್ ಇವೆ.

ಧಾರ್ಮಿಕ ಆಚರಣೆಗಳು

ಕಾರ್ಕಳದ ರಾಣೆ ಜನಾಂಗದವರು ಹಿಂದೂಗಳು. ಕೆಲವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದು ಸಮೀಕ್ಷೆಯಿಂದ ತಿಳಿದುಬಂದಿದೆ. ಆರ್ಥಿಕ ಮುಗ್ಗಟ್ಟೇ ಮತಾಂತರಕ್ಕೆ ಕಾರಣವೆಂದು ಇಲ್ಲಿಯ ಜನರು ತಿಳಿಸಿದ್ದುಂಟು.

ಕೆಲವು ವರ್ಷಗಳ ಹಿಂದೆ ರಾಣೆಯರು ಲಿಂಗಾಯತ ಗುರುಗಳಿಗೆ ನಡೆದುಕೊಳ್ಳುತ್ತಿದ್ದರಂತೆ. ಆದರೆ ಈಗ ಈ ಪದ್ಧತಿಯಿಲ್ಲ.

ಉಚ್ಚಂಗಿ ಅಮ್ಮ: ಉಚ್ಚಂಗಿ ಅಮ್ಮ ಇವರ ಕುಲದೇವತೆ. ಕಾರ್ಕಳ ಪೇಟೆಯಲ್ಲಿ ಇವರ ಉಚ್ಚಂಗಿ ದೇಗುಲವಿದೆ. ಇಲ್ಲಿ ನವರಾತ್ರಿ ಪೂಜೆಗಳೇ ಮೊದಲಾದುವುಗಳು ನಡೆಯುವುದನ್ನು ಹಿಂದೆ ನೋಡಿದ್ದೇವೆ. ಈ ದೇವಾಲಯ ಪೂರ್ತಿಯಾಗಿ ಇವರಿಗೇ ಸಂಬಂಧಿಸಿದ್ದು. ಪೂಜಾ ಕಾರ್ಯಗಳಲ್ಲಿ ಕಾರ್ಕಳದ ಇತರ ವರ್ಗಗಳ ಜನರೂ ಉದಾರ ಸಹಾಯ ನೀಡುವರು.

ಅಕ್ಕ - ತಂಗಿ: ಕಾರ್ಕಳದ ಮುಖ್ಯಪ್ರಾಣ ದೇವಸ್ಥಾನದ ದೇವಿಯು ಅಕ್ಕನೆಂದೂ, ದೇವಿಯ ಎದುರಿಗಿರುವ ಉಚ್ಚಂಗಿ ಗುಡಿಯ ಅಮ್ಮ ತಂಗಿಯೆಂದೂ ಈ ಜನರು ನಂಬಿದ್ದಾರೆ. ರಾಣೆ ಜನರೇ ಉಚ್ಚಂಗಿಯಮ್ಮನನ್ನು ಪೂಜಿಸುತ್ತಾರೆ. ದೇವಿಯ ಮೆರವಣಿಗೆಯ ಸಮಯದಲ್ಲಿ ದೇವಿಗಿಂತಲೂ ಮುಂದೆ ಕುಣಿದಾಡುತ್ತಾ ವಾದನಗಳನ್ನು ಬಾರಿಸುತ್ತಾ ಹೋಗುತ್ತಾರೆ.

ಮಹಾಮಾಯಿ ಸುಮ್ಮಗೆ ಕುಳಿತುಕೊಳ್ಳುವವಳು. ಅವಳು ಪಟ್ಟದ ದೇವತೆ. ಅವಳ ತಂಗಿ ಉಚ್ಚಂಗಿ ಅಮ್ಮ ದೇಶ ಸಂಚಾರಿ. ಅವಳು ಮುನಿದರೆ ಕೋಣಗಳಿಗೆ, ದನ-ಕರುಗಳಿಗೆ 'ಕಾಲುಬಡೆ' ಎಂಬ ರೋಗವು ಬರುವುದು. ಮನುಷ್ಯರಿಗೆ ಸಿಡುಬು-ಮೈಲಿ-ಕೋಟ್ಲೆ-ಕೋರಗಳಂತಹ ರೋಗಗಳು ಬರುವವು ಎಂದೆಲ್ಲ ಈ ಜನರು ನಂಬಿದ್ದಾರೆ.

ತೀರ್ಥ ಯಾತ್ರೆಗಳು: ರಾಣೆ ಜನರು ಧರ್ಮಸ್ಥಳ, ಮಂತ್ರಾಲಯ ಮತ್ತು ತಿರುಪತಿಗಳಿಗೆ ಯಾತ್ರೆಗೆ ಹೋಗುವುದುಂಟು. ಮಕರ ಸಂಕ್ರಮಣದ ದಿನ ಇವರಲ್ಲಿ ಅನೇಕರು 'ಮಾರ್ನಕಟ್ಟೆ' ಅಮ್ಮನ ಮನೆಗೆ ಹೋಗುತ್ತಾರೆ. ಈ ಅಮ್ಮನಿಗೆ ಇವರು ಹರಕೆ ಹೇಳಿಕೊಳ್ಳುತ್ತಾರೆ.

ಆರ್ಥಿಕ ಜೀವನ

ಆರ್ಥಿಕವಾಗಿ ಈ ಜನರು ತೀರಾ ಕೆಳಮಟ್ಟದಲ್ಲಿದ್ದಾರೆ. ಹಿಂದಿನ ಕಾಲದಲ್ಲಿ ಪ್ರಾಯಶಃ ಯುದ್ಧದಲ್ಲಿ ಭಾಗವಹಿಸುವುದು, ಕೋಟೆಗಳ ರಕ್ಷಣೆ ಇವರ ವೃತ್ತಿಯಾಗಿದ್ದಿರಬೇಕು.

ಇಂದು ಇವರ ಮುಖ್ಯ ಉದ್ಯೋಗ ಕೂಲಿಕೆಲಸ. ದಿನಗೂಲಿಯನ್ನು ಅವಲಂಬಿಸಿ ಇದ್ದವರೇ ಹೆಚ್ಚು. ಮರಕಡಿಯುವುದು, ಮಣ್ಣಿನ ಕೆಲಸ, ಕಲ್ಲಿನ ಕೆಲಸಗಳನ್ನೂ ಇವರು ಮಾಡುತ್ತಾರೆ. ಸಂಸಾರವನ್ನು ಸಾಗಿಸಲು ಕೇವಲ ಪುರುಷರಷ್ಟೇ ದುಡಿದರೆ ಇವರಿಗೆ ಸಾಲದು. ರಾಣೆ ಸ್ತ್ರೀಯರು ಕೂಡ ಪುರುಷರಿಗೆ ಸಮಾನವಾಗಿ ದುಡಿಯುತ್ತಾರೆ. ಸ್ತ್ರೀಯರೂ ಮಣ್ಣಿನ ಕೆಲಸ ಮಾಡುತ್ತಾರೆ. ಅನೇಕ ಬಾರಿ ಚಿಕ್ಕಮಕ್ಕಳು ಕೂಡ ಕೂಲಿ ಕೆಲಸಕ್ಕೆ ಹೋಗುತ್ತವೆ.

ಇವರು ಕೈಗೊಂಡ ಇತರ ಉದ್ಯೋಗಗಳಲ್ಲಿ ಹಂದಿ ಸಾಕಣೆ, ಬೀಡಿಕಟ್ಟುವುದು, ಮೀನಿನ ವ್ಯಾಪಾರ, ಕಟ್ಟಿಗೆ ಹೊರೆಗಳನ್ನು ಕಾಡಿನಿಂದ ತರುವುದು ಇವೇ ಮುಂತಾದವುಗಳು ಮುಖ್ಯವಾಗಿವೆ.

ಇವರಲ್ಲಿ ಬ್ಯಾಂಕ್ ವ್ಯವಹಾರ ತೀರಾ ಕಡಿಮೆ. ಐದಾರು ಜನರು ಬ್ಯಾಂಕುಗಳಲ್ಲಿ ಖಾತೆ ಹೊಂದಿದವರಿದ್ದಾರೆ. ಬ್ಯಾಂಕುಗಳಿಂದ ಸಾಲ ತೆಗೆದುಕೊಂಡವರು ಹದಿನಾಲ್ಕು ಮಂದಿ, ಸಹಕಾರಿ ಸಂಸ್ಥೆಯಿಂದ ಒಬ್ಬರು, ಸಾಹುಕಾರರಿಂದ ಇಬ್ಬರು ಸಾಲತೆಗೆದುಕೊಂಡಿದು, ಹೆಚ್ಚಿನವರು ಮನೆಕಟ್ಟಲು ಸಾಲದ ಹಣವನ್ನು ಉಪಯೋಗಿಸಿದ್ದಾರೆ. ಬಹುತೇಕ ಎಲ್ಲ ಕುಟುಂಬಗಳ ಉತ್ಪನ್ನ ವರ್ಷಕ್ಕೆ ಒಂದರಿಂದ ಮೂರು ಸಾವಿರ ರೂಪಾಯಿಗಳ ಮಧ್ಯೆ ಇದೆ.

ಇವರ ಮನೆಗಳು ಹೆಚ್ಚಾಗಿ ಒಂದಕ್ಕೊಂದು ತಾಗಿಕೊಂಡೇ ಇರುವುದು ಕಂಡುಬಂದಿದೆ. ಮಣ್ಣಿನ

..ೋಡೆಗಳ ಮನೆಗಳು ಹೆಚ್ಚಾಗಿವೆ. ಸುಮಾರು ಏಳೆಂಟು ಮನೆಗಳಿಗೆ ಕಲ್ಲಿನ ಗೋಡೆಗಳಿವೆ. ಸುಮಾರು ..ದಿನಾರು ಮನೆಗಳಿಗೆ ಹಂಚುಗಳನ್ನು ಕಾಣಬಹುದು. ಹುಲ್ಲಿನ ಮನೆಗಳೂ ಇವೆ.

..ಾಷೆ – ಸಾಹಿತ್ಯ

ರಾಣೆಯುವರು ತುಳುನಾಡಿನಲ್ಲಿ ವಾಸವಾಗಿದರೂ, ಅವರ ಮನೆಯ ಭಾಷೆ ಕನ್ನಡ. ತುಳು ..ನರೊಡನೆ ತುಳುವಿನಲ್ಲಿ ಮಾತನಾಡುತ್ತಾರೆ. ಇವರಾಡುವ ಗ್ರಾಮ್ಯ ಭಾಷೆ ಅಧ್ಯಯನಕ್ಕೆ ಯೋಗ್ಯ ..ವಾಗಿದೆ.

ಇವರಲ್ಲಿ ಜನಪದ ಸಾಹಿತ್ಯ ಹಿಂದೆ ಇತ್ತಾದರೂ ಈಗ ಇಲ್ಲ. ಕೋಲಾಟದ ಪದಗಳು, ಮದುವೆಯ ..ಾಡುಗಳು, ದೀಪಾವಳಿಯ ಹಾಡುಗಳು ಎಂದು ಮುಂತಾಗಿ ಅನೇಕ ಹಾಡುಗಳು ಹಿಂದೆ ರೂಢಿ ..ಯಲ್ಲಿದ್ದುವು.

ವಿಭಾಗ – ೨

ಯಕ್ಷಗಾನ: ಕಾರ್ಕಳ ಪರಿಸರದಲ್ಲಿ

ಯಕ್ಷಗಾನ ಆರಾಧನೆಯ ಮಾಧ್ಯಮವಾಗಿ ಹುಟ್ಟಿದ ಒಂದು ಜನಪದ ಕಲೆ ಎಂಬುದನ್ನು 'ಯಕ್ಷಗಾನ ಕಲೆ ಮತ್ತು ಪ್ರಯೋಗ' ಎಂಬ ತಮ್ಮ ಪಾಂಡಿತ್ಯಪೂರ್ಣ ಲೇಖನದಲ್ಲಿ ಶ್ರೀ ಪಿ. ವಿ. ಹಾಸ್ಯಗಾರ ಇವರು ಹೇಳಿದ್ದಾರೆ. ಯಕ್ಷಗಾನವನ್ನು 'ಬಯಲಾಟ', 'ದಶಾವತಾರ ಆಟ' ಎಂದು ಮುಂತಾಗಿ ಕರೆಯುವುದೂ ಇದೆ. ಸಂಗೀತ, ಸಾಹಿತ್ಯ ಮತ್ತು ನೃತ್ಯಗಳ ತ್ರಿವೇಣಿ ಸಂಗಮವನ್ನು ಇಲ್ಲಿ ಕಾಣಬಹುದು.

ಯಕ್ಷಗಾನ ಮತ್ತು ತಾಳಮದ್ದಳೆಗಳು ದಕ್ಷಿಣೋತ್ತರ ಕನ್ನಡಗಳಲ್ಲಿ ಜನಪ್ರಿಯವಾದ. ಪಂಡಿತರೂ ಪಾಮರರೂ ನೋಡಿ, ಕೇಳಿ ಸಂತೋಷಪಡುವ ಒಂದು ಜನಪದ ಕಲೆಯಾಗಿದೆ.

ಕಾರ್ಕಳದಲ್ಲಿ ಯಕ್ಷಗಾನ ಕಲೆ ಎಂದು ಕಾಲಿಟ್ಟಿತು ಅಥವಾ ಜನಪ್ರಿಯತೆ ಗಳಿಸಿತು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಅಲ್ಲಲ್ಲಿ ಸಿಕ್ಕ ಕೆಲವು ಆಧಾರಗಳಿಂದ, ಪ್ರಾಯಶಃ ಐನೂರು, ಆರುನೂರು ವರ್ಷಗಳ ಹಿಂದೆಯೇ ಯಕ್ಷಗಾನ ಕಲೆ ಈ ಪ್ರದೇಶದಲ್ಲಿ ಜನರನ್ನು ಆಕರ್ಷಿಸಿದ್ದಿರಬೇಕು ಎಂದು ಹೇಳಬಹುದು. ಈ ಕುರಿತು ಕೆಲವು ಉದಾಹರಣೆಗಳನ್ನು ನೋಡೋಣ.

(1) ಕ್ರಿ.ಶ. ಸುಮಾರು 1500ರಲ್ಲಿ: ಕಾರ್ಕಳ ತಾಲೂಕಿನ ಮೂಡಬಿದಿರೆಯ ಹೆಮ್ಮೆಯ ಕವಿ ರತ್ನಾಕರ ವರ್ಣಿಯ ಕಾಲ ಕ್ರಿ.ಶ. ಸು. 1550 ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಕವಿಯ ಕಾಲದಲ್ಲಿ ಯಕ್ಷಗಾನವು ಈ ಪ್ರದೇಶದಲ್ಲಿ ಜನರ ಪ್ರೀತಿಗೆ ಪಾತ್ರವಾಗಿರಬೇಕು ಎಂಬುದನ್ನು ಅವನ 'ಭರತೇಶ ವೈಭವ' ಎಂಬ ಕೃತಿಯಲ್ಲಿ ಬರುವ ಕೆಲವು ಉದಾಹರಣೆಗಳಿಂದ ಊಹಿಸುವಂತಿದೆ. ಉದಾಹರಣೆಗಾಗಿ —

> ಗಣೆಯರೆಕ್ಕಡಿಗರು ನಾಟ್ಯಶಾಸ್ತ್ರ ಲಕ್ಷಣಿಕರು ಭಾವರಂಜಕರು
> ಗುಣಿಗಳು ಮಂತ್ರಿಗಳರಸನ ಕಂಡು ತಿಂತಿಣಿಯಾಗಿ ಕುಳಿತರೋಜೆಯೊಳು
> ಸಾಳಂಗರಾಗವನ್ನೆತ್ತಿ ಮದ್ದಳೆ ತಾಳಮೇಳ ಶ್ರುತಿಗಳೊಂದುಗೂಡಿ
> ಲೋಲ ನಿರಂಜನ ಸಿದ್ಧನ ಹಾಡಿದರೋಲಾಡೆ ಸುಖದೊಳಾಸ್ಥಾನಾ ॥

ಎಂಬಲ್ಲಿಯೂ, ಉತ್ತರ ನಾಟಕ ಸಂಧಿಯಲ್ಲಿ ಬರುವ 'ಎತ್ತಿದ ತೆರೆಯನು ಕೊರಳು ತನಕ ಮೆಲ್ಲನೊತ್ತಿ ತಗ್ಗಿಸಿ ಕಾಣಿಸಿದರು' ಎಂದು ಮುಂತಾದ ವರ್ಣನೆಗಳಲ್ಲಿಯೂ ಬಂದ ಎಕ್ಕಡಿಗರು, ಮದ್ದಳೆ, ತಾಳ, ಮೇಳ, ಶ್ರುತಿ, ತೆರೆ ಇಳಿಸಿದ್ದು ಇವೆಲ್ಲ ಯಕ್ಷಗಾನ ಪ್ರದರ್ಶನಗಳಲ್ಲಿ ಕಂಡುಬರುವಂಥವು. ಇವನ್ನು ನೋಡಿಯೇ ಕವಿ ಹಾಗೆ ಬರೆದಿರಬೇಕು ಎಂದು ಶ್ರೀ ಪಿ. ವಿ. ಹಾಸ್ಯಗಾರರು ಅಭಿಪ್ರಾಯ ಪಟ್ಟಿದ್ದಾರೆ. 'ಎಕ್ಕಡಿಗ-ಎಕ್ಕಲಗಾಣ ಎಂದು ಯಕ್ಷಗಾನ ಕೂಟದವರನ್ನು, ಭಾಗವತರನ್ನು ನಿರ್ದೇಶಿಸುವ ಪದ್ಯಗಳು ಕನ್ನಡ ಸಾಹಿತ್ಯದಲ್ಲಿ ಸಿಗುತ್ತವೆ' ಎಂದು ಡಾ॥ ಕೆ. ಎಂ. ಕೃಷ್ಣರಾವ್ ಅವರು ತಮ್ಮ 'ಯಕ್ಷಗಾನ ಸಾಹಿತ್ಯ' ಎಂಬ ಹೊತ್ತಿಗೆಯಲ್ಲಿ ಹೇಳಿದ್ದಾರೆ.

(2) ಕ್ರಿ.ಶ. ಸುಮಾರು 1600: ಸುಧನ್ವ ಕಾಳಗ ಎಂಬ ಯಕ್ಷಗಾನ ಕೃತಿಯ ಕರ್ತೃ ಯಾರೆಂದು ತಿಳಿದುಬಂದಿಲ್ಲ. ಅದರ ಅತಿ ಮೊದಲ ತಾಡವಾಲೆಯ ಪ್ರತಿ ಕ್ರಿ.ಶ. 1661ರದ್ದು ದೊರೆಯುತ್ತದೆ. ಈ ಕವಿಯು ತನ್ನ ಪ್ರಸಂಗದಲ್ಲಿ ಕಾಂತಾವರದ ಕಾಂತೇಶ ದೇವರನ್ನೂ (ಕಾರ್ಕಳ ತಾಲೂಕು) ವೇಲಾಪುರಿಯ (ಬೇಲೂರು) ಚೆನ್ನಕೇಶವ ದೇವರನ್ನೂ, ಹೈಡಿಂಬಪುರದ (ಭೀಮನಕಟ್ಟೆ ಅಥವಾ ಭೀಮನ

ಕೋಣೆ) ಸುಬ್ರಹ್ಮಣ್ಯನನ್ನೂ ಸ್ತುತಿಸಿದ್ದಾನೆ, ಎಂದು ಡಾ॥ ಕೆ. ಶಿವರಾಮ ಕಾರಂತರು ತಮ್ಮ 'ಯಕ್ಷಗಾನ' ಎಂಬ ಕೃತಿಯಲ್ಲಿ ಹೇಳಿದ್ದಾರೆ. ಕಾರ್ಕಳದ ಕಾಂತಾವರ ಕಾಂತೇಶ ದೇವನನ್ನು ಕವಿ ಸ್ತುತಿಸಿದ್ದು ಇಲ್ಲಿ ನಾವು ಗಮನಿಸಬೇಕಾದ ಅಂಶ.

(3) ಕಾರ್ಕಳದ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಯಕ್ಷಗಾನ ಮೇಳವೊಂದಿತ್ತು ಎಂಬುದು ಈ ದೇವಾಲಯದ ಹಳೆಯ ಕಡತದ ದಾಖಲೆಯಿಂದ ತಿಳಿದುಬರುತ್ತದೆಯೆಂದೂ, ಈ ಮೇಳವನ್ನು ಭಟ್ಟರೊಬ್ಬರಿಗೆ ನಾಲ್ಕು ವರಹಗಳಿಗೆ ವಹಿಸಿಕೊಟ್ಟ ಉಲ್ಲೇಖ ಈ ಕಡತದಲ್ಲಿ ಇದೆಯೆಂದೂ ಶ್ರೀ ಪಿ. ವಾಮನ ಪ್ರಭು ಅವರು ತಮ್ಮ ಬರಹದಲ್ಲಿ ಹೇಳಿದ್ದಾರೆ.

(4) ಇದೇ ದೇವಸ್ಥಾನದಲ್ಲಿ ವಿನಾಯಕನ ಚವತಿಯ ದಿನ ಪೂಜಿಸಲ್ಪಡುವ ಮರದ (ಈಗ ಬೆಳ್ಳಿಯ ಕವಚವಿದೆ) ಗಣಪತಿ ವಿಗ್ರಹವು ಈ ಮೇಳದ ಕುರುಹಾಗಿ ಉಳಿದಿದೆ. ಇಡೀ ವಿಗ್ರಹವನ್ನು ಸಣ್ಣ ಪೆಟ್ಟಿಗೆಯಲ್ಲಿಟ್ಟು ಹೊತ್ತುಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ಈ ವಿಗ್ರಹದ ರಚನೆಯಿದೆ. ಇದನ್ನು ಬಹುಶಃ ಬಯಲಾಟದಲ್ಲಿ ಗಣಪತಿ ಪೂಜೆಗೆ ಉಪಯೋಗಿಸುತ್ತಿದ್ದಿರಬೇಕು. ಹೋದಕಡೆಗೆಲ್ಲ ಹೊತ್ತುಕೊಂಡು ತೆರಳುವುದಕ್ಕೆ ಅನುಕೂಲವಾಗುವಂತೆ ಈ ವಿಗ್ರಹದ ಅಂಗಾಂಗಗಳನ್ನು ಬೇರೆ ಬೇರೆಯಾಗಿ ರಚಿಸಿರಬೇಕು. ಈಗ ಮೇಳದ ಕುರುಹಾಗಿ ಇಷ್ಟನ್ನಲ್ಲದೆ ಭಗ್ನವಾದ ಮರದ ಕಿರೀಟವೊಂದನ್ನು ಕಾಣಬಹುದು. ಎಂದು ಶ್ರೀ ಪ್ರಭುಗಳು ತಿಳಿಸಿದ್ದಾರೆ.

(5) 'ರತ್ನಾವತಿ ಕಲ್ಯಾಣ' ಮತ್ತು 'ಕುಮಾರ ವಿಜಯ' ಎಂಬ ಎರಡು ಯಕ್ಷಗಾನ ಕೃತಿಗಳು ನಂದಳಿಕೆ ಲಕ್ಷ್ಮೀನಾರಾಯಣನ ಕೃತಿಗಳು. ಇವನ ಕಾಲ ಕ್ರಿ.ಶ. 1870–1901.

ಈ ಮೇಲಿನ ಉದಾಹರಣೆಗಳಿಂದ ಯಕ್ಷಗಾನವು ಕಾರ್ಕಳ ಪರಿಸರದಲ್ಲಿ ಸುಮಾರು ಐನೂರು ವರ್ಷಗಳ ಹಿಂದೆಯೇ ಜನಪ್ರಿಯವಾಗಿತ್ತು ಎಂದು ತಿಳಿದುಬರುತ್ತದೆ.

ಯಕ್ಷಗಾನ ಮೇಳಗಳು

ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ದೇವಾಲಯಗಳಾದ ಧರ್ಮಸ್ಥಳ, ಕಟೀಲು, ಮೂಲ್ಕಿ, ಮಾರ್ಣಕಟ್ಟೆ, ಪೆರ್ಡೂರು, ಹಿರಿಯಡ್ಕ, ಮಂದರ್ತಿ, ಸೌಕೂರು, ಸಾಲಿಗ್ರಾಮ ಇತ್ಯಾದಿ ದೇವಾಲಯಗಳಲ್ಲಿ ಈಗಲೂ ಯಕ್ಷಗಾನ ಮೇಳಗಳಿವೆ. ಕಾರ್ಕಳದಲ್ಲಿ ಹಿಂದೆ ಇದ್ದ ಯಕ್ಷಗಾನ ಮೇಳಗಳನ್ನು ಈ ರೀತಿ ಹೆಸರಿಸಬಹುದು —

(1) ಕಾರ್ಕಳದ ಪ್ರಸಿದ್ಧ ಶ್ರೀ ವೆಂಕಟರಮಣ ದೇವಾಲಯದಲ್ಲಿ ಹಿಂದೆ ಯಕ್ಷಗಾನ ಮೇಳವೊಂದಿತ್ತು ಎಂಬುದನ್ನು ನೋಡಿದ್ದೇವೆ. ಆದರೆ ಈ ಮೇಳ ಎಷ್ಟು ವರ್ಷಗಳ ವರೆಗೆ ಚಾಲ್ತಿಯಲ್ಲಿತ್ತು. ಎಂಬುದಾಗಲೀ, ಈ ಮೇಳದ ಪ್ರಸಿದ್ಧ ಕಲಾವಿದರುಗಳ ಬಗ್ಗೆಯಾಗಲೀ ತಿಳಿಸುವ ದಾಖಲೆಗಳಿಲ್ಲ ಆದರೆ ಗೌಡ ಸಾರಸ್ವತ ಶ್ಯಾನುಭಾಗ ಮನೆತನದ ಒಂದು ಪಂಗಡದವರಿಗೆ 'ಭಾಗವತರು' ಎಂಬ ಉಪನಾಮವೊಂದು ರೂಢಿಯಲ್ಲಿದೆ. ಈ ಮನೆತನದವರ ಹೇಳಿಕೆಯಂತೆ ಅವರ ಪೂರ್ವಜರು ದೇವಸ್ಥಾನ ಮೇಳದಲ್ಲಿ ಭಾಗವತರಾಗಿ ಕಾರ್ಯ ನಿರ್ವಹಿಸುತ್ತಿದ್ದರಂತೆ. ಈ ಕಾರಣದಿಂದಲೇ ಅವರು ಈಗಲೂ ಭಾಗವತರೆಂಬ ಉಪನಾಮದಿಂದ ಕರೆಯಲ್ಪಡುತ್ತಾರೆ ಎಂದು ತಿಳಿದುಬಂದಿದೆ.

(2) **ಶ್ರೀ ಕಾಳಿಕಾಂಬಾ ಪ್ರಸಾದಿತ ಯಕ್ಷಗಾನ ಮಂಡಳಿ:** ಇದು ಸುಮಾರು ನಾಲ್ವತ್ತು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತ್ತು. ಮಂಜಯ್ಯ ಆಚಾರಿ ಎನ್ನುವವರು ಈ ಮೇಳವನ್ನು ಸ್ಥಾಪಿಸಿದ್ದರು.

(3) **ಕುಕ್ಕುಂದೂರು ಮೇಳ:** ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಈ ಮೇಳ ಅಸ್ತಿತ್ವದಲ್ಲಿ ಬಂದಿತ್ತು.

(4) **ನಿಟ್ಟೆ ಮೇಳ:** ಈ ಮೇಳ ಸುಮಾರು ನೂರು ವರ್ಷಗಳ ಹಿಂದೆ ಇತ್ತೆಂದು ಕೆಲವರು ತಿಳಿಸಿದ್ದಾರೆ. ಈ ಮೇಳದ ಕಿರೀಟಗಳೇ ಮೊದಲಾದ ಸಾಮಗ್ರಿಗಳು ಮೊನ್ನೆ ಮೊನ್ನೆಯ ವರೆಗೂ ಇತ್ತೆಂದು ಶ್ರೀ ಶ್ರೀಧರ ಭಟ್ ಅವರು ತಿಳಿಸಿದ್ದಾರೆ.

(5) **ರಂಜಾಳ ಮೇಳ.**

(6) **ಕಾರ್ಕಳ ಮೇಳ.**

(7) **ದುರ್ಗದ ಮೇಳ.**

ಹೀಗೆ ಕಾರ್ಕಳ ತಾಲೂಕಿನಲ್ಲಿ ಅನೇಕ ಮೇಳಗಳು ಹುಟ್ಟಿಕೊಂಡಿದ್ದರೂ, ಅವು ಆರ್ಥಿಕ ಅಡಚಣೆಗಳನ್ನು ಎದುರಿಸಲಾಗದೆ ಮುಗ್ಗರಿಸಿದೆವು. ಇಂದು ಕಾರ್ಕಳದಲ್ಲಿ ವ್ಯವಸಾಯೀ ಯಕ್ಷಗಾನ ಮೇಳವೆಂಬುದು ಇಲ್ಲ.

ಯಕ್ಷಗಾನ ಸಂಘಗಳು

ಯಕ್ಷಗಾನ ಮೇಳಗಳನ್ನು ನಡೆಸುವಲ್ಲಿ ಕಾರ್ಕಳವು ಜಿಲ್ಲೆಯ ಅನೇಕ ಸ್ಥಳಗಳಿಗಿಂತ ಹಿಂದಿರುವುದು ಒಂದು ಕೊರತೆಯೆಂದು ತಿಳಿದರೂ. ಇಲ್ಲಿ ಹುಟ್ಟಿಕೊಂಡ ಯಕ್ಷಗಾನ ಸಂಘಗಳು ಈ ಕೊರತೆಯನ್ನು ನಿವಾರಿಸಿದೆಯೆಂದು ಹೇಳಬಹುದು. ಅನೇಕ ಯಕ್ಷಗಾನ ಸಂಘಗಳು ಕಾರ್ಕಳ ಪೇಟೆಯ ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಇವೆ. ಅವುಗಳಲ್ಲಿ ಶ್ರೀ ವೆಂಕಟರಮಣ ಯಕ್ಷಗಾನ ಮಂಡಳಿ, ಶ್ರೀ ಮುಖ್ಯಪ್ರಾಣ ಮಾರಿಯಮ್ಮ ಯಕ್ಷಗಾನ ಮಂಡಳಿ, ಶ್ರೀ ವಿಶ್ವಕರ್ಮ ಯಕ್ಷಗಾನ ಮಂಡಳಿ, ಶ್ರೀ ವಾಣಿ ಯಕ್ಷಗಾನ ಮಂಡಳಿ ಸಾಣೂರು, ಶ್ರೀ ಮಹಾವೀರ ಯಕ್ಷಗಾನ ಮಂಡಳಿ, ಬಜಗೋಳಿ, ಶ್ರೀ ಲಲಿತಕೀರ್ತಿ ಯಕ್ಷಗಾನ ಮಂಡಳಿ ದಾನಸಾಲೆ, ಇರ್ವತ್ತೂರು ಯಕ್ಷಗಾನ ಮಂಡಳಿ ಇರ್ವತ್ತೂರು. ಶುಂಠಿಗುಡ್ಡೆ ಯಕ್ಷಗಾನ ಮಂಡಳಿ, ದುರ್ಗಾ ಪರಮೇಶ್ವರಿ ಯಕ್ಷಗಾನ ಮಂಡಳಿ ಕುಕ್ಕುಂದೂರು, ಮುಂತಾದವುಗಳಲ್ಲದೆ, ನೀರೆಬೈಲೂರು, ಚಿಕ್ಕಲ್‌ಬೆಟ್ಟು, ಹಿರ್ಗಾನ್, ಮಾಳ, ನಂದಳಿಕೆ, ಮೂಡಬಿದಿರೆ, ಮುಂಡಕೂರು, ಮುರತಂಗಡಿ, ಮುಂತಾದ ಇನ್ನೂ ಅನೇಕ ಸ್ಥಳಗಳಲ್ಲಿ ಉತ್ಸಾಹಿಗಳು ಯಕ್ಷಗಾನ ಮಂಡಳಿಗಳನ್ನು ಸ್ಥಾಪಿಸಿದ್ದಾರೆ. ಕಾರ್ಕಳದ ಪೇಟೆಯಲ್ಲಿರುವ ಕೆಲವು ಯಕ್ಷಗಾನ ಸಂಘಗಳ ಕಿರುಪರಿಚಯುವನ್ನೂ ಇಲ್ಲಿ ಮಾಡಿಕೊಡಲಾಗಿದೆ.

ವೆಂಕಟರಮಣ ಯಕ್ಷಗಾನ ಕಲಾಸಮಿತಿ: ಈ ಸಮಿತಿ 1949ರಲ್ಲಿ ಸ್ಥಾಪಿಸಲ್ಪಟ್ಟಿತು. ಚಾತುರ್ಮಾಸದ ಅವಧಿಯಲ್ಲಿ ಪ್ರಸಿದ್ಧ ಅರ್ಥದಾರಿಗಳನ್ನು ಕರೆಸಿಕೊಂಡು ಕಡಿಮೆಯೆಂದರೂ ಆರೆಂಟು ಕೂಟಗಳನ್ನು ನಡೆಸುತ್ತದೆ. ಅಷ್ಟೇ ಅಲ್ಲದೆ ಪ್ರಸಿದ್ಧ ಕಲಾವಿದರನ್ನೂ ಆಗಾಗ ಕರೆಸಿ ಸನ್ಮಾನಿಸಿ ಪ್ರೋತ್ಸಾಹಿಸುವ ಒಂದು ಸಂಪ್ರದಾಯವನ್ನು ಅನುಸರಿಸುತ್ತದೆ. ಊರಿನ ಕೆಲವು ಆಢ್ಯ ವ್ಯಕ್ತಿಗಳು ಧರ್ಮಾರ್ಥವಾಗಿ ಈ ಕಾರ್ಯಕ್ರಮವನ್ನು ಏರ್ಪಡಿಸುವುದಕ್ಕೆ ನೆರವನ್ನೀಯುತ್ತಾರೆ. ಮೊದಲು ಸಂಘದ ಸದಸ್ಯರೇ ಕೂಡಿಕೊಂಡು ಪ್ರತಿ ಆದಿತ್ಯವಾರ ಸಾಯಂಕಾಲ ಎರಡು-ಮೂರು ಗಂಟೆಗಳ ಕಾಲ ಕೂಟಗಳನ್ನು ನಡೆಸುತ್ತಿದ್ದರು. ವರ್ಷಕ್ಕೊಮ್ಮೆ ಪರವೂರ ಕಲಾವಿದರನ್ನು ಕೂಡಿಸಿ ಒಂದು ಕೂಟವನ್ನು ಜರುಗಿಸುತ್ತಿದ್ದರು. ಈ ರೀತಿಯಲ್ಲಿ ಶ್ರೀ ವೆಂಕಟರಮಣ ಯಕ್ಷಗಾನ ಸಮಿತಿಯು ಯಕ್ಷಗಾನದ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ.

ಶ್ರೀ ಮಹಾಮ್ಮಾಯಿ ಮುಖ್ಯಪ್ರಾಣ ಯಕ್ಷಗಾನ ಸಂಘ (ರಿ): ಇದು ಕಾರ್ಕಳದಲ್ಲಿಯ ಇನ್ನೊಂದು ಮುಖ್ಯವಾದ ಯಕ್ಷಗಾನ ಸಂಘ. ಮೊದಲು ಈ ಸಂಘವು ಶ್ರೀ ಅನಂತ ಪದ್ಮನಾಭ ಯಕ್ಷಗಾನ ಕಲಾಮಂಡಳಿ ಎಂಬ ಹೆಸರಿನಿಂದ ಖ್ಯಾತಿಗೊಂಡಿತ್ತು. 1971ರಲ್ಲಿ ಶ್ರೀ ಕೆ. ಜನಾರ್ದನ ಆಚಾರ್ ಅವರ ನೇತೃತ್ವದಲ್ಲಿ ಈ ಸಂಘವು ಸ್ಥಾಪಿಸಲ್ಪಟ್ಟಿತು. ಇದಕ್ಕಿಂತ 25–30 ವರ್ಷಗಳ ಮೊದಲು, ಕೆಲವು ಉತ್ಸಾಹಿ ಕಲಾವಿದರು ಸೇರಿ ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಯಕ್ಷಗಾನ ಕೂಟಗಳನ್ನು

ನಡೆಸುತ್ತಿದ್ದರು. ಅವರ ಉತ್ಸಾಹ ಜನತೆಯ ಪ್ರೋತ್ಸಾಹ ಈ ಮಂಡಳಿಯ ಸ್ಥಾಪನೆಗೆ ಕಾರಣವಾದವು. ಅಂದಿನಿಂದ ಇಂದಿನ ವರೆಗೂ ಪ್ರತಿ ಆದಿತ್ಯವಾರ ಸಾಯಂಕಾಲ ಮೂರು ತಾಸುಗಳವರೆಗೆ ,ಅಭ್ಯಾಸಿಸಿ ಕಲಾವಿದರಿಂದ ನಿರಂತರವಾಗಿ ಈ ದೇವಸ್ಥಾನದ ವಠಾರದಲ್ಲಿ ಯಕ್ಷಗಾನ ಕೂಟಗಳು ಜರುಗುತ್ತ ಬಂದಿವೆ. ಪ್ರತಿವರ್ಷ ಫೆಬ್ರುವರಿಯಲ್ಲಿ ಬಯಲಾಟ ಕಾರ್ಯಕ್ರಮವನ್ನು ಸ್ಥಳೀಯ ಕಲಾಭಿಮಾನಿಗಳೇ ತಪ್ಪದೇ ನೆರವೇರಿಸಿಕೊಂಡು ಬಂದಿರುವ ಹೆಗ್ಗಳಿಕೆ ಈ ಸಂಘದ್ದಾಗಿದೆ. ಉತ್ಸಾಹಿ ಯುವಕರಿಗೆ ಯಕ್ಷಗಾನ ಕುಣಿತವನ್ನು ಕಲಿಸುವ ವಿಶೇಷ ಏರ್ಪಾಡನ್ನು ಈ ಸಂಘ ಮಾಡಿತು. ತೆಂಕುತಿಟ್ಟಿನ ಶಿಕ್ಷಣವು ಧರ್ಮಸ್ಥಳದ ಕಲಾಮೇಳದ ಕಲಾವಿದ ಶ್ರೀ ಸದಾಶಿವ ಶೆಟ್ಟರಿಂದಲೂ ಬಡಗು ತಿಟ್ಟಿನ ನೃತ್ಯವು ಮಾರಣಕಟ್ಟೆ ಮೇಳದ ಪೆರ್ಡೂರಿನ ಶ್ರೀ ಜಯಂತ ನಾಯ್ಕರಿಂದಲೂ ದೊರೆಯಿತು. ಈ ಯುವಕರಿಗೆ ಹೀಗೆ ಶಾಸ್ತ್ರೀಯವಾದ ಶಿಕ್ಷಣವನ್ನು ಕೊಡಿಸಿದ್ದು ಈ ಸಂಘದ ಕೊಡುಗೆಯೆಂದು ಹೇಳಬಹುದು. ಈ ಸಂಘದ ಸದಸ್ಯ ಕಲಾವಿದರ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಿದೆ.

ಶ್ರೀ ಭುವನೇಂದ್ರ ಕಾಲೇಜಿನ ಯಕ್ಷಗಾನ ಕೇಂದ್ರ: ಈ ಕೇಂದ್ರವು ಪರಂಪರೆಯ ಯಕ್ಷಗಾನವನ್ನು ಆಸಕ್ತ ವಿದ್ಯಾರ್ಥಿ ಮಿತ್ರರಲ್ಲಿ ಬೆಳೆಸಲು ಕೈಗೊಂಡ ಕಾರ್ಯಕ್ರಮಗಳು ಈ ಸಂದರ್ಭದಲ್ಲಿ ಉಲ್ಲೇಖಕ್ಕೆ ಅರ್ಹವಾಗಿವೆ. ಯಕ್ಷಗಾನ ಪ್ರೇಮಿಗಳೂ, ಸ್ವತಃ ಕಲಾವಿದರೂ ಆದ ಕೆಲವು ಪ್ರಾಧ್ಯಾಪಕರು ನುರಿತ ಯಕ್ಷಗಾನ ಕಲಾವಿದರಾದ ಸರ್ವಶ್ರೀ ನಿಡ್ಲೆ ನರಸಿಂಹ ಭಟ್, ಕುಟ್ಯಪ್ಪ, ಕದ್ರಿ ವಿಷ್ಣು, ಸದಾಶಿವ ಶೆಟ್ಟಿ, ಚೆನ್ನಪ್ಪ ಶೆಟ್ಟಿ ಮುಂತಾದವರನ್ನು ಆಮಂತ್ರಿಸಿ ವಿದ್ಯಾರ್ಥಿಗಳಿಗೆ ಶ್ರೇಷ್ಠಮಟ್ಟದ ತರಬೇತಿ ನೀಡಿದ್ದು ಈ ಸಂಸ್ಥೆಯ ಕೊಡುಗೆಯೆಂದೇ ಹೇಳಬಹುದು. ಈ ಕೇಂದ್ರದಲ್ಲಿ ತರಬೇತಿ ಪಡೆದವರು ಸುಳ್ಯ, ಮಿಯಾರು ಮುಂತಾದ ಕಡೆಗಳಲ್ಲಿ ಯಕ್ಷಗಾನ ಆಟವನ್ನು ಆಡಿ ಹೆಸರು ಗಳಿಸಿದ್ದಾರೆ.

ಲಲಿತಕೀರ್ತಿ ಯಕ್ಷಗಾನ ಮಂಡಳಿ: ಕಾರ್ಕಳದ ದಾನಸಾಲೆಯಲ್ಲಿರುವ ಈ ಯಕ್ಷಗಾನ ಮಂಡಳಿಯು ಜೈನಕಥೆಗಳನ್ನು ಆಡುವುದಕ್ಕೆ ಪ್ರಸಿದ್ಧವಾಗಿದೆ. ಕೂಷ್ಮಾಂಡಿನಿ ದೇವಿ ಮಹಾತ್ಮೆ, ಯಶೋಧರ ಚರಿತೆ, ಕಮಠೋಪಸರ್ಗ ವಿಜಯ, ಜ್ವಾಲಾಮಾಲಿನಿ ಕ್ಷೇತ್ರ ಮಹಾತ್ಮೆ, ಹೊಂಬುಚ ಕ್ಷೇತ್ರ ಮಹಾತ್ಮೆ, ತ್ಯಾಗವೀರ ಬಾಹುಬಲಿ ಮುಂತಾದ ಅನೇಕ ಪ್ರಸಂಗಗಳನ್ನು ಇವರು ಯಶಸ್ವಿಯಾಗಿ ಆಡಿದ್ದಾರೆ. ಈ ಸಂಘದವರು ಶ್ರವಣಬೆಳಗೊಳದಲ್ಲಿ ಕೂಷ್ಮಾಂಡಿನಿದೇವಿ ಮಹಾತ್ಮೆಯನ್ನು ಗೋಮಟ ಮಹಾ ಮಸ್ತಾಭಿಷೇಕದ ವೇಳೆ (1980)ಯಲ್ಲಿ ಆಡಿದ್ದಾರೆ. ಅದರಂತೆ ಧರ್ಮಸ್ಥಳ, ಹೊಂಬುಚ್ಚ ಮೊದಲಾದ ಅನೇಕ ಸ್ಥಳಗಳಲ್ಲಿ ಈ ಸಂಘವು ಒಳ್ಳೆಯ ಹೆಸರನ್ನು ಗಳಿಸಿದ್ದು ಶ್ಲಾಘನೀಯ.

ಬಾಲವೃಂದಗಳು: ಕಾರ್ಕಳದಲ್ಲಿ ಯಕ್ಷಗಾನ ಬಾಲಮೇಳದ ಕೊರತೆಯಿದ್ದರೂ ಯಕ್ಷಗಾನ ಬಾಲವೃಂದಗಳು ಆ ಕೊರತೆಯನ್ನು ತುಂಬಿವೆಯೆಂದು ಹೇಳಬಹುದು. ಶ್ರೀ ವೆಂಕಟರಮಣ ಯಕ್ಷಗಾನ ಬಾಲವೃಂದವು ಈ ದಿಸೆಯಲ್ಲಿ ದಾಖಲೆಯನ್ನು ಸ್ಥಾಪಿಸಿದೆ. ಪುಟಾಣಿಗಳ ಯಕ್ಷಗಾನ ಕುಣಿತ ನೋಡಲು ಚೆಂದ; ಈ ವೃಂದದ ಶಿಲ್ಪಿ ಶ್ರೀ ಅಜಿತ್‌ಕುಮಾರ್ ಜೈನರ ಶ್ರಮವನ್ನು ಈ ವೃಂದವು ಸಾರ್ಥಕಗೊಳಿಸಿದೆ. ಸ್ಥಳೀಯ ಎಸ್. ವಿ. ಟಿ. ಯಕ್ಷಗಾನ ಬಾಲವೃಂದವು ಯಕ್ಷಗಾನ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರೇಕ್ಷಕರನ್ನು ರಂಜಿಸಿ, ಬಹುಮಾನವನ್ನು ಗಳಿಸಿದೆ. ಈ ವೃಂದವು ಊರು-ಪರವೂರುಗಳಲ್ಲಿ ಈ ವರೆಗೆ 25-30 ಕ್ಕಿಂತಲೂ ಹೆಚ್ಚು ಯಕ್ಷಗಾನ ಪ್ರದರ್ಶನಗಳನ್ನು ನೀಡಿದೆ. ಬಾಲಕರಿಗೂ ಬಾಲಿಕೆಯರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿವೆ ಈ ವೃಂದ.

ಅದರಂತೆ ನಿಟ್ಟೆಯ ಶ್ರೀ ಶಂಕರ ಅಧ್ಯಂತಾಯ ಮೆಮೋರಿಯಲ್ ಹೈಸ್ಕೂಲಿನಲ್ಲಿಯೂ, ಬೇಲಾಡಿಯ ಹಿರಿಯ ಪ್ರಾಥಮಿಕ ಶಾಲೆ ಕಾಂತಾವರದಲ್ಲಿಯೂ ಯಕ್ಷಗಾನ ಬಾಲಕೇಂದ್ರಗಳಿದ್ದು, ಇವು ಬಾಲಕರಲ್ಲಿ ಯಕ್ಷಗಾನ ಆಸಕ್ತಿಯನ್ನು ಕೆರಳಿಸಿ ಪೋಷಿಸುತ್ತವೆ.

ಕೆಲವು ಕಲಾವಿದರು

ಕಾರ್ಕಳದಲ್ಲಿ ಯಕ್ಷಗಾನ ಕಲಾವಿದರಿಗೇನೂ ಕೊರತೆಯಿಲ್ಲ. ಅನೇಕರು ಅಧ್ಯಾಪನವೇ ಮೊದ

ಲಾದ ವೃತ್ತಿಗಳನ್ನು ಕೈಗೊಂಡಿದ್ದು, ಅವರು ತಮ್ಮ ಬಿಡುವಿನ ವೇಳೆಯನ್ನು ಯಕ್ಷಗಾನ ಕಲೆಗಾಗಿ ಮೀಸಲಾಗಿಟ್ಟು ಪ್ರತಿಫಲಾಪೇಕ್ಷೆಯಿಲ್ಲದೇ ದುಡಿಯುವುದು, ಈ ಕಲೆಗೆ ಅವರು ಸಲ್ಲಿಸುವ ದೊಡ್ಡ ಕೊಡುಗೆಯೆಂದು ಹೇಳಬಹುದು.

ಯಕ್ಷಗಾನದಲ್ಲಿ ವೇಷಧಾರಿಗಳಾಗಿಯೂ ಅರ್ಥಧಾರಿಗಳಾಗಿಯೂ ವೇದಮೂರ್ತಿ ಶ್ರೀ ಶ್ರೀಧರ ಭಟ್ ಮುಡಾರು ಇವರೂ, ಸರ್ವಶ್ರೀ ಕೆ. ಜನಾರ್ದನ ಆಚಾರ್, ಇರ್ವತ್ತೂರಿನ ಶ್ರೀಧರ ಪಾಂಡಿ ಪ್ರಭಾಕರ ಆತಿಕಾರಿ, ಅಜಿತ್‌ಕುಮಾರ್ ಜೈನ್, ಕೆ. ಚಂದ್ರಶೇಖರ ಜೈನ್, ಕೆ.ರಾಮ ಭಟ್ ಮುಂತಾದವರು ಈ ಕ್ಷೇತ್ರಕ್ಕೆ ಯಥಾಶಕ್ತಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ವೇಷಧಾರಿಯಾಗಿ ಮೂಡಬಿದರೆಯ ಶ್ರೀ ವಾಸು, ಕೃಷ್ಣರು ತಮ್ಮ ಅಭಿನಯ ನೃತ್ಯಗಳಿಂದ ದೊಡ್ಡ ಆಸೆಯನ್ನು ಮೂಡಿಸಿದ್ದರು. ಮೂಡಬಿದರೆಯ ಕಿಟ್ಟು ಅವರು ಕೂಡ ಒಳ್ಳೆಯ ಕಲಾವಿದರೆನಿಸಿದ್ದರು. ಮೂಡಬಿದರೆಯ ಮಾಧವ ಶೆಟ್ಟಿಯವರು ಪ್ರಸಿದ್ಧ ವ್ಯವಸಾಯಿ ವೇಷಧಾರಿಗಳು.

ಶ್ರೀ ಉರ್ವನಾರಾಯಣ ವೇಷಗಳನ್ನು ಕಟ್ಟುತ್ತಿದ್ದರು. ಸಣ್ಣ ಮೇಳವನ್ನು ನಡೆಸಿದ ಅನುಭವವೂ ಇವರಿಗಿದೆ. ಯಕ್ಷಗಾನ ನೃತ್ಯವನ್ನು ಕಲಿಸುವವರಲ್ಲಿ ಶ್ರೀ ರತ್ನಾಕರ, ಬಜಗೋಳಿಯ ಶ್ರೀ ಖಾದ್ರಿ ಬ್ಯಾರಿಗಳನ್ನು ಉದಾಹರಿಸಬಹುದು.

ಅರ್ಥಧಾರಿಗಳು

ಅನೇಕ ವೇಷಧಾರಿಗಳು ತಾಳ ಮದ್ದಳೆಯಲ್ಲಿ ಅರ್ಥಧಾರಿಗಳು, ಆದರಂತೆ ಅರ್ಥಧಾರಿಗಳನೇಕರು ವೇಷಗಳನ್ನೂ ಕಟ್ಟುತ್ತಾರೆ.

ಶ್ರೀ ವೆಂಕಟರಮಣ ಯಕ್ಷಗಾನ ಕಲಾಸಮಿತಿಯ ಅಧ್ಯಕ್ಷರಾಗಿದ್ದು ಸಂಘದ ಸರ್ವತೋಮುಖ ಅಭಿವೃದ್ಧಿಗೆ ದುಡಿಯುತ್ತಿರುವ ಶ್ರೀಯುತ ಬೋಳ ರಾಘವೇಂದ್ರ ಕಾಮತರು ಇಪ್ಪತ್ತು ವರ್ಷಗಳ ಹಿಂದೆಯೇ ತಾಳ ಮದ್ದಳೆಯ ಅರ್ಥಧಾರಿಗಳಲ್ಲಿ ಅಗ್ರ ಪಂಕ್ತಿಯಲ್ಲಿ ಗಣಿಸಲ್ಪಟ್ಟವರು.

ಹಾಗೆಯೇ ಬಜಗೋಳಿಯ ಶ್ರೀ ಅನಂತರಾಜ ಸೆಟ್ಟಿ, ದಿವಂಗತ ಸೀತಾನದಿ ಗಣಪಯ್ಯ ಶೆಟ್ಟಿ, ದಿವಂಗತ ಭುಜಬಲಿ ಅಧಿಕಾರಿ ಇವರೆಲ್ಲರೂ ಯಕ್ಷಗಾನಾಕಾಶದಲ್ಲಿ ಹಿಂದೆ ವಿರಾಜಿಸಿದ ತಾರೆಗಳು. ದಿವಂಗತ ಸೀತಾನದಿ ಗಣಪಯ್ಯ ಶೆಟ್ಟಿಯವರಂತೂ ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಅತ್ಯಂತ ಪ್ರಸಿದ್ಧರಾಗಿದ್ದಾರೆ. ಶ್ರೀಯುತ ರಘುವೀರ, ಶ್ರೀ ನಾರಾಯಣ ಶೆಟ್ಟಿ, ಶ್ರೀ ಶ್ರೀಕರ ಭಟ್, ಶ್ರೀ ಸೇಡಿ ಗಣಪತಿ ಭಟ್, ಶ್ರೀ ಎನ್ ಕೃಷ್ಣರಾವ್ ಮುಂತಾದವರೂ ಅರ್ಥಗಾರಿಕೆಯಲ್ಲಿ ಜನ ಮನ್ನಣೆ ಪಡೆದವರು. ಈಗಿನ ಪ್ರಸಿದ್ಧ ಅರ್ಥಧಾರಿಗಳಲ್ಲೊಬ್ಬರಾದ ಶ್ರೀ ಎಮ್. ಪ್ರಭಾಕರ ಜೋಶಿ ಇವರು ಕಾರ್ಕಳ ತಾಲೂಕಿನ ಮಾಳಗ್ರಾಮದವರೆಂಬುದು ನಮಗೊಂದು ಹೆಮ್ಮೆಯ ವಿಷಯ. ಹಾಗೆಯೇ ಶ್ರೀ ಜನಾರ್ದನ ಆಚಾರ್ ಅವರೂ ಓರ್ವ ಉತ್ತಮ ಅರ್ಥಧಾರಿಗಳಾಗಿದ್ದಾರೆ. ಮೂಡ ಬಿದರೆಯ ಶ್ರೀ ಕೆ. ಕಾಂತ ರೈ ವಿದ್ವಾನ್ ಇವರು ಸೌಮ್ಯ ಪಾತ್ರಗಳಿಗೆ ಪ್ರಖ್ಯಾತರಾದರೆ ಶ್ರೀ ಮಾರೂರು ಮಂಜುನಾಥ ಭಂಡಾರಿಯವರು ತಮ್ಮ ಕಂಚಿನ ಕಂಠದಿಂದ ಕೇಳುಗರ ಮನಸೆಳೆಯುವವರು. ಯಕ್ಷ ಗಾನದ ಅನೇಕ ರಂಗಗಳಲ್ಲಿ ಅನುಭವ ಗಳಿಸಿಕೊಂಡ ಶ್ರೀ ಕೆ. ಎಮ್. ರಾಘವ ನಂಬಿಯಾರ್ ಅವರು ಇಂದಿನ ಉತ್ತಮ ಅರ್ಥಧಾರಿಗಳಲ್ಲಿ ಒಬ್ಬರಾಗಿದ್ದಾರೆ. ಇಂದಿನ ಅನೇಕ ತರುಣರಿಗೆ ಮಾರ್ಗದರ್ಶಿ ಯಂತಿದ್ದ ಶ್ರೀ ಪಿ. ವಾಮನ ಪ್ರಭುಗಳು ಶ್ರೇಷ್ಠ ಮಟ್ಟದ ಅರ್ಥಧಾರಿಯೆಂಬುದು ಜಿಲ್ಲೆಯ ಜನತೆಗೆ ಗೊತ್ತೇ ಇದೆ. ಶ್ರೀ ಕೆ. ವಸಂತ, ಸಾಣೂರಿನ ಶ್ರೀ ಮೋಹನ ಪ್ರಭು. ಮುರತಂಗಡಿಯ ಶ್ರೀ ನಾಗೇಶ್ ಕಾಮತ್, ಕುಕ್ಕುಂದೂರಿನ ಶ್ರೀ ವೆಂಕಟರಾಯರು. ತೆಳ್ಳಾರಿನ ಶ್ರೀ ಅನಂತರಾಮ ಭಟ್ಟರೇ ಮೊದಲಾದ ಅನೇಕ ಅರ್ಥಧಾರಿಗಳನ್ನು ಇಲ್ಲಿ ಹೆಸರಿಸಲೇಬೇಕು. ಪ್ರಕೃತ ಅಧ್ಯಾಪಕರಾಗಿದ್ದರೂ, ವೇಷಧಾರಿಗಳೂ,

ರ್ಥಧಾರಿಗಳೂ, ಪ್ರಸಂಗ ಕರ್ತೃಗಳೂ ಆಗಿರುವ ಶ್ರೀ ಕೇಶವ ಶೆಟ್ಟಿಗಾರ, (ಅಂಬಾತನಯ ಮುದ್ರಾಡಿ) ವರನ್ನು ಮರೆಯುವುದು ಸಾಧ್ಯವೇ ಇಲ್ಲ.

ಾಗವತರು

ಶ್ರೀ ಬಲಿಪ ನಾರಾಯಣ ಭಾಗವತರು ಭಾಗವತರಾಗಿ ಖ್ಯಾತಿಗಳಿಸಿದ್ದಾರೆ. ಅದರಂತೆ ಮೂಡ ಬಿದರೆಯ ಎಸ್. ಪುಂಡಲೀಕ ಶೆಣೈ, ಶ್ರೀ ಶ್ರೀನಿವಾಸ ಇವರೂ ಈ ರಂಗದಲ್ಲಿ ಮುಖ್ಯರೇ. ಶ್ರೀ ರಾಮಗೌಡರೂ ಭಾಗವತಿಕೆಯಲ್ಲಿ ಖ್ಯಾತಿ ಪಡೆದವರೇ ಆಗಿದ್ದರು. ಬಡಗುತಿಟ್ಟಿನಲ್ಲಿ ಶ್ರೀ ದುರ್ಗ ಸೀತಾರಾಮ ಭಟ್ಟರು, ಮುದ್ರಾಡಿ ನಾರಾಯಣ ಶೆಟ್ಟಿಯವರು ಹೆಸರಾಂತ ವ್ಯಕ್ತಿಗಳು. ಶ್ರೀ ಕೇದಿಗೆ ರತ್ನಾಕರ ರಾವ್, ಶ್ರೀ ಸುರೇಂದ್ರು ಶೆಣೈ ಕೆರ್ವಾಸೆ, ಶ್ರೀ ಶಂಕರ ಭಟ್, ಶ್ರೀ ನಾರಾರುಣ ಶೆಣೈ, ಶ್ರೀ ಬಾಲಗುಗಾಧರ ರಾವ್, ಮತ್ತು ಶ್ರೀ ಮೆಂಕಟರಮಣ ಹೊಳ್ಳ ಮೂಡಬಿದಿರೆ ಇವರೆಲ್ಲ ಭಾಗ ವತರಾಗಿ ಯಕ್ಷಗಾನ ಕಲೆಗೆ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

ವಾದನಕಾರರು

ಶ್ರೀ ಪಿ. ವಾಮನ ಪ್ರಭುಗಳ ಮಾತಿನಲ್ಲಿ ಹೇಳುವುದಾದರೆ ದಿವಂಗತ ಕೆಮ್ಮಣ್ಣು ಸಾರ್ಣ ಪ್ಪಯ್ಯನವರ ಮೃದಂಗದ ಗುಡುಗಿಗೆ ಶ್ರೋತೃಗಳ ಮನ ಮಯೂರ ಗರಿಗೆದರಿ ನಲಿಯದೆ ಇರು ತ್ತಿರಲಿಲ್ಲ. ಅಂತೆಯೇ ಶ್ರೀಯುತ ವೆಂಕಟರಾಯರೂ ಒಳ್ಳೆಯ ಮೃದಂಗ ವಾದಕರೆಂದು ಕರೆಯಿಸಿ ಕೊಂಡಿದ್ದಾರೆ. ಈ ನಿಟ್ಟಿನಲ್ಲಿ ನಾವು ಶ್ರೀ ವಸಂತರಾಯರನ್ನೂ ಇಲ್ಲಿ ಹೆಸರಿಸಬಹುದು.

ಸರ್ವಶ್ರೀ ಪಿ. ವಿಠಲ ಪ್ರಭು, ಸುಬ್ರಾಯ ಆಚಾರ್, ಕೆ. ಗೋವಿಂದ ಪ್ರಭು, ಮೂಡಬಿದಿರೆ ಕೃಷ್ಣರಾವ್, ಬೆಳ್ಮಣ್ಣು ಹರಿದಾಸ ಉಡುಪ ಇವರೆಲ್ಲ ಮದ್ದಳೆ ವಾದನದಲ್ಲಿ ಹೆಸರಾಗಿದ್ದಾರೆ. ಶ್ರೀ ನಾರಾಯಣ ಶೆಟ್ಟಿಗಾರ, ಶ್ರೀ ಮೋಹನ ಶೆಟ್ಟಿಗಾರ ಮತ್ತು ಶ್ರೀ ಪ್ರಭಾಕರ ಗೋರೆ ಇವರೆಲ್ಲ ಈ ದಿಕ್ಕಿನಲ್ಲಿ ಸೇವೆ ಸಲ್ಲಿಸುತ್ತಿರುವವರೇ ಆಗಿದ್ದಾರೆ.

ಯಕ್ಷಗಾನ ಕೃತಿಗಳು – ವಿಮರ್ಶೆಗಳು

ನಂದಳಿಕೆ ಲಕ್ಷ್ಮೀನಾರಾಯಣ (ಮುದ್ದಣ)ನ ಎರಡು ಯಕ್ಷಗಾನದ ಕೃತಿಗಳು ಸಿಕ್ಕಿವೆ. ಇವನ ರತ್ನಾವತಿ ಕಲ್ಯಾಣ ರಂಗದ ದೃಷ್ಟಿಯಿಂದ ಬಹಳ ಯಶಸ್ವಿಯಾದ ಪ್ರಸಂಗ. ಶೃಂಗಾರ ಮತ್ತು ವೀರ ರಸದ ಸನ್ನಿವೇಶಗಳಿಗೆ ಹಾಗೆಯೇ ವೈವಿಧ್ಯ ಪೂರ್ಣವಾದ ವೇಷಗಳಿಗೆ ಅವಕಾಶವನ್ನು ಒದಗಿಸುವ ಈ ಕಾಲ್ಪನಿಕ ಪ್ರಸಂಗ ಒಳ್ಳೆಯ ಹಾಡುಗಳಿಂದಾಗಿ ರಂಗದ ಮೇಲೆ ಹೃದ್ಯವಾಗಬಲ್ಲುದು ಎಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ಇದರ ಕಥಾಮೂಲ ಬೃಹತ್ಕಥೆ ಎಂದು ಕವಿ ತಿಳಿಸಿದರೂ, ಅಲ್ಲಿ ಆ ಕಥೆಯಿಲ್ಲವೆಂದು ಶ್ರೀ ಕ. ಪು. ಸೀತಾರಾಮ ಕೆದಿಲಾಯರು ತಿಳಿಸಿದ್ದಾರೆ. ಆದರೂ ಇದೊಂದು ಅತ್ಯಂತ ಯಶಸ್ವೀ ಪ್ರಸಂಗವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇವನ 'ಕುಮಾರ ವಿಜಯ'ದಲ್ಲಿ ಛಂದಸ್ಸಿನ ಹೊಸ ಪ್ರಯೋಗಗಳನ್ನು ಕಾಣಬಹುದಾದರೂ ರಂಗದ ದೃಷ್ಟಿಯಿಂದ ಯಶಸ್ವಿಯಾಗಲಿಲ್ಲ.

ಕಾರ್ಕಳ ತಾಲೂಕಿನ, ಸೀತಾನದಿ ಗಣಪಯ್ಯ ಶೆಟ್ಟಿಯರಂತೂ ನೂರಾರು ಪ್ರಸಂಗಗಳನು ಬರೆದು ಪ್ರಸಿದ್ಧರಾಗಿದ್ದರು. ಅವರ ಅನೇಕ ಪ್ರಸಂಗಗಳು ಜನಪ್ರಿಯತೆಗಳಿಸಿವೆ.

ಯಕ್ಷಗಾನ ಪ್ರಸಂಗಗಳನ್ನು ಬರೆದವರಲ್ಲಿ ಇಂದು ಶ್ರೀ ಕೆ. ಎಮ್. ರಾಘವ ನಂಬಿಯಾರ್ ಅವರು ಮುಖ್ಯರಾಗಿದ್ದಾರೆ. ಚಕ್ರೇಶ್ವರ ಪರೀಕ್ಷಿತ, ಉತ್ತಮ ಸೌದಾಮಿನಿ, ಅಮರೇಂದ್ರ ಪದ ವಿಜಯಿ,

ವಜ್ರಧರ ವಿಲಾಸ, ಮತ್ತು ರಘುವಂಶ ಇವು ಶ್ರೀ ನಂಬಿಯಾರ್‌ರ ಮುಖ್ಯ ಕೃತಿಗಳು. ಯಕ್ಷಗಾನ ರಂಗದಲ್ಲಿ ಇವರ ಅನೇಕ ಪ್ರಸಂಗಗಳು ಯಶಸ್ವಿಯಾಗಿವೆಯೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡ ಮತ್ತು ತುಳು ಭಾಷೆಗಳಲ್ಲಿ ಪ್ರಸಂಗಗಳನ್ನು ಬರೆದ ಶ್ರೇಯಸ್ಸು ಶ್ರೀ ಕೆ. ಜನಾರ್ದನ ಆಚಾರ್ ಅವರಿಗೆ ಸಲ್ಲಬೇಕು. ವಿಶ್ವಕರ್ಮ ಮಹಾತ್ಮೆ, ನಂಜನಗೂಡು ಕ್ಷೇತ್ರ ಮಹಾತ್ಮೆ, ಅನಂತವ್ರತ ಮಹಾತ್ಮೆ. ಶ್ರೀ ರವಳೇಶ ವಿಜಯ, ಸೋಮಕ್ಕು ಪ್ರತಾಪ (ತುಳು) ಇವು ಇವರ ಮುಖ್ಯ ಕೃತಿಗಳು. ಶ್ರೀ ರವಳೇಶ ವಿಜಯ ಒಂದು ವಿಶಿಷ್ಟ ಕೃತಿಯೆಂದು ಯಕ್ಷಗಾನಾಭಿಮಾನಿಗಳ ಮತವಾಗಿದೆ.

ಶ್ರೀ ಕೂಷ್ಮಾಂಡಿನೀ ದೇವಿ ಮಹಾತ್ಮೆ, ಶ್ರೀ ಜ್ವಾಲಾಮಾಲಿನಿ ದೇವಿ ಮಹಾತ್ಮೆ, ಶ್ರೀ ಪಾರ್ಶ್ವ ನಾಥ ಸ್ವಾಮಿ ಚರಿತೆ ಅಥವಾ ಕಮಠೋಪಸರ್ಗ ವಿಜಯ ಮುಂತಾದವುಗಳು ಶ್ರೀ ಶ್ರೀಧರ ಪಾಂಡಿ ಯವರ ಕೃತಿಗಳಾಗಿವೆ. ಶ್ರೀ ಕೂಷ್ಮಾಂಡಿನೀ ದೇವಿ ಮಹಾತ್ಮೆ ರಂಗದಲ್ಲಿ ಅತ್ಯಂತ ಯಶಸ್ವಿಯಾಗಿದೆ. ಇವರ ಇತರ ಪ್ರಸಂಗಗಳೂ ಜನಪ್ರಿಯವಾಗಿವೆಯೆಂದು ತಿಳಿದುಬಂದಿದೆ.

ತೆಂಕು – ಬಡಗು ತಿಟ್ಟುಗಳೆರಡರಲ್ಲಿಯೂ ವೇಷ ಹಾಕುವ, ಅರ್ಥಧಾರಿಗಳಾದ ಶ್ರೀ ಅಂಬಾ ತನಯ ಮುದ್ರಾಡಿಯವರು ರಚಿಸಿರುವ ಅನೇಕ ಪ್ರಸಂಗಗಳನ್ನು ಯಕ್ಷಗಾನ ಮೇಳಗಳು ರಂಗದ ಮೇಲೆ ಆಡುತ್ತಿವೆ. 'ಹನುಮದ್ವಿಲಾಸ' ಇವರ ಶ್ರೇಷ್ಠ ಕೃತಿಯೆಂದು ಪರಿಗಣಿಸಲ್ಪಟ್ಟಿದೆ.

ಶ್ರೀ ಎಸ್. ಪುಂಡಲೀಕ ಶೆಣೈ ಅವರು ಅನೇಕ ಪೌರಾಣಿಕ ಪ್ರಸಂಗಗಳನ್ನು ಕೊಂಕಣಿ ಭಾಷೆಯಲ್ಲಿ ಬರೆದಿದ್ದಾರೆ. ಅದರಂತೆ 'ನಂದಳಿಕೆ ಕ್ಷೇತ್ರ ಮಹಾತ್ಮೆ' ಶ್ರೀ ಹರಿದಾಸ ಉಡುಪರಿಂದ ಬರೆಯಲ್ಪಟ್ಟಿದೆ. ಶ್ರೀ ಬಿಪಿನ್ ಚಂದ್ರಪಾಲ್ ಅವರು ಅನೇಕ ಪ್ರಸಂಗಗಳನ್ನು ತುಳುವಿನಲ್ಲಿ ರಚಿಸಿದ್ದಾರೆ.

ಶ್ರೀ ಎಂ. ಪ್ರಭಾಕರ ಜೋಶಿಯವರು ಯಕ್ಷಗಾನ ಲೋಕದಲ್ಲಿ ಪ್ರಸಿದ್ಧ ವಿಮರ್ಶಕರೂ ಹೌದು. ಇವರ ಯಕ್ಷಗಾನ ವಿಮರ್ಶಾ ಪ್ರಬಂಧಗಳು ಅನೇಕ ಪತ್ರಿಕೆಗಳಲ್ಲಿ ಬಂದಿವೆ. ಇವರ 'ಜಾಗರ' ಯಕ್ಷ ಗಾನದ ವಿವಿಧ ರಂಗಗಳ ಕುರಿತು ಚಿಂತನ ಪರ ಲೇಖನಗಳನ್ನು ಒಳಗೊಂಡ ಕೃತಿಯಾಗಿದೆ. 'ಅರ್ಥಗಾರಿಕೆ ಸ್ವರೂಪ ಸಮೀಕ್ಷೆ' ಎಂಬ ಕೃತಿಯ ಸಂಪಾದಕರು ಶ್ರೀ ಜೋಶಿಯವರು.

ಹೀಗೆ ಯಕ್ಷಗಾನ ಸಾಹಿತ್ಯಕ್ಕೆ ಕಾರ್ಕಳವು ತನ್ನದೇ ಆದ ವಿಶಿಷ್ಟ ದೇಣಿಗೆಯನ್ನು ನೀಡಿದೆ ಎಂದು ಹೇಳಬಹುದು.

ಕಾರ್ಕಳದಲ್ಲಿ ಯಕ್ಷಗಾನ ಪ್ರೇಮಿಗಳು ಅಪಾರ. ಯಕ್ಷಗಾನ ಕಲೆಯಲ್ಲಿ ಪ್ರಾದೇಶಿಕ ಭೇದವನ್ನು ಎಣಿಸದೆ, ಊರು - ಪರವೂರು ಎಂಬ ತಾರತಮ್ಯವಿಲ್ಲದೆ, ಅನೇಕ ಯಕ್ಷಗಾನ ಕಲಾವಿದರನ್ನು ಕರೆಸಿ ಸನ್ಮಾನಿಸಿದ ಶ್ರೇಯಸ್ಸು ಕಾರ್ಕಳಕ್ಕಿದೆ. ತೆಂಕು ತಿಟ್ಟು ಮತ್ತು ಬಡಗು ತಿಟ್ಟುಗಳಿಗೆ ಸಮಾನ ಆದ್ಯತೆ ಇರುವುದು ಕಾರ್ಕಳದ ಒಂದು ವಿಶೇಷವೆಂದು ಹೇಳಬಹುದು. ವರ್ಷದುದ್ದಕ್ಕೂ ಕಾರ್ಕಳದಲ್ಲಿ ಯಕ್ಷಗಾನ ಆಟಕೂಟಗಳು ನಡೆಯುತ್ತವೆ. ಕನ್ನಡ ಮತ್ತು ತುಳು ಪ್ರಸಂಗಗಳಿಗೆ ಪ್ರೇಕ್ಷಕರ ಸಮಾನ ಬೆಂಬಲವಿದೆ. ಒಟ್ಟಿನಲ್ಲಿ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಕಾರ್ಕಳವೂ ತನ್ನ ಅಳಿಲ ಸೇವೆ ಯನ್ನು ಶತಮಾನಗಳಿಂದಲೂ ಮಾಡುತ್ತ ಬಂದಿದೆ ವೆಂದು ಹೇಳಬಹುದು.

ಕಂಬಳ

ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ 'ಕಂಬಳ'ದ ಅರ್ಥ ಬೇರೆ ಬೇರೆ ತೆರನಾಗಿ ಇದ್ದುದು ಕಂಡುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ ವಿಶಿಷ್ಟವಾದುದು. ಇಲ್ಲಿ ಕೋಣಗಳ ಓಟದ ಸ್ಪರ್ಧೆಗೆ ಕಂಬಳವೆನ್ನುತ್ತಾರೆ. ಇದೊಂದು ಜನಪದ ಕ್ರೀಡೆ. ಈ ಜನಪದ ಕ್ರೀಡೆಯು ಅನೇಕ ಶತಮಾನಗಳಿಂದ

ಡೆದುಬಂದ ಪದ್ಧತಿಯಾಗಿರಬೇಕು. ನಾಡದೊರೆಗಳೆಲ್ಲ ಈ ಕ್ರೀಡೆಗೆ ತುಂಬಾ ಮಹತ್ವವನ್ನು ನೀಡುತ್ತಿದ್ದಿರ ಬೇಕು. ಜೈನ ಅರಸೊತ್ತಿಗೆಯ ಕಾಲದಲ್ಲಿ ಸೀಮೆ ಕಂಬಳ ರೂಢಿಯಲ್ಲಿ ಬಂದವು. ವಂಡಾರ ಕಂಬಳವು ಬಾರಕೂರು ಸಂಸ್ಥಾನದ ಒಡೆಯರಹೋಬಳಿ ಕಂಬಳವಾಗಿತ್ತು ಎಂದು ಹೇಳುತ್ತಾರೆ. ಅಳದಂಗಡಿ ಅರಸು ಕಂಬಳವನ್ನೂ ಇಲ್ಲಿ ನೆನೆಯಬಹುದಾಗಿದೆ. ದಕ್ಷಿಣ ಕನ್ನಡದಲ್ಲಿ ರೂಢಿಯಲ್ಲಿರುವ ಕಂಬಳ ಶಬ್ದದ ನಿಷ್ಪತ್ತಿಯ ಬಗ್ಗೆ ಹೇಳುತ್ತಾ ಶ್ರೀ ಗುಣಪಾಲ ಕಡಂಬ ಅವರು, 'ಗಂಪ (ಕೆಸರು ಮಣ್ಣು)+ಕಳ ಸಮತಟ್ಟಾದ ಕೆಸರು ಮಣ್ಣಿನ ಜಾಗ) ಕಂಬಳ ಅಥವಾ ಕಂಬ (ಗದ್ದೆಯಲ್ಲಿ ನೆಡುವ ಕಂಬ)+ ಳ=ಕಂಬಳ' ಎಂದು ಹೇಳಿದ್ದನ್ನು ಇಲ್ಲಿ ನೆನೆಯಬಹುದು.

ನೆರೆಯ ಕೇರಳ ರಾಜ್ಯದಲ್ಲಿ ಕಂಬಳ ಕಾರ್ಯಕ್ರಮ ಪ್ರಚಲಿತವಾಗಿದೆ. ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಈ ವಿನೋದವನ್ನು ಕಾಣಬಹುದಾಗಿದೆ. ತುಳುನಾಡಿನಲ್ಲಿ ಕೇವಲ ಮನುಷ್ಯ ರಷ್ಟೇ ಅಲ್ಲ ದೇವತೆಗಳೂ ಕಂಬಳದ ಅಭಿಮಾನಿಗಳು ಎಂಬುದನ್ನು ತಿಳಿಸುವ ಒಂದು ಪಾಡ್ದನವಿದೆ. ಈ ಪಾಡ್ದನದ ಪ್ರಕಾರ ಪಡುಬಿದ್ರಿ ಕಂಬಳದ ಸೊಬಗನ್ನು ಸವಿಯಲು ಕಾಂತಾಬಾರೆ ಮತ್ತು ಬುದಬಾರೆ ಎಂಬ ದೈವಗಳು ಬಂದವಂತೆ. ತಮ್ಮ ಕ್ಷೇತ್ರದಲ್ಲಿ ಈ ರೀತಿಯ ಕಂಬಳವಿಲ್ಲವೆಂದು ಅಸೂಯೆಗೊಂಡ ಅವರು ಕಂಬಳವನ್ನು ಕೆಡಿಸಲು ಹೊಂಚುಹಾಕಿದವಂತೆ. ಪಡುಬಿದ್ರಿ ಕಂಬಳದ ದೈವ ಇವರ ಈ ಅಸೂಯೆ ಯನ್ನು ಕಂಡು, ಕೋಳಿಯ ರೂಪತಾಳಿ ಮಧ್ಯರಾತ್ರಿಯಲ್ಲಿಯೇ ಕೂಗಲು ಪ್ರಾರಂಭಿಸಿತು. ಬೆಳಗಾಯಿ ತೆಂದು ತಿಳಿದು, ತಮ್ಮ ಯೋಜನೆ ಸಿದ್ಧಿಸಲಿಕ್ಕಿಲ್ಲವೆಂದು ತಿಳಿದ ಕಾಂತಾಬಾರೆ-ಬುದಬಾರೆಯರು ಓಡಿಹೋದರಂತೆ. ಈ ಕಥೆ ಕಂಬಳದ ಬಗ್ಗೆ ಈ ಜನರಿಗೆ ಇರುವ ಅಭಿಮಾನವನ್ನು ತಿಳಿಸುತ್ತದೆ.

ಮೂಲ್ಕಿ ಅರಸುಗಂಬಳ, ಕಟಪಾಡಿ ಬೀಡಿನ ಕಂಬಳ, ಐಕಳ ಕಂಬಳ, ಪಾಣೆಮಂಗಳೂರಿನ ಕಂಬಳ ಮುಂತಾದವುಗಳು ಜಿಲ್ಲೆಯಲ್ಲಿ ಪ್ರಸಿದ್ಧಿಪಡೆದ ಕಂಬಳಗಳಾಗಿದ್ದವು.

ಕಂಬಳ ಪ್ರೇಮಿಗಳು ಸಂಪ್ರದಾಯದ ಕಂಬಳದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಸಂಪ್ರದಾಯ ಕಂಬಳವು ಹರಕೆ ಕಂಬಳವೆಂದು ಪರಿಗಣಿಸಲ್ಪಡುವುದು. ಇಲ್ಲಿ ದೈವಗಳಿಗೆ ಹರಕೆ ಹೇಳಿ ಕೊಂಡವರು ಕಂಬಳದ ದಿನ ತಮ್ಮ ಕೋಣಗಳನ್ನು ತಂದು ಕಂಬಳದ ಬಯಲಿನಲ್ಲಿ ಓಡಿಸುತ್ತಾರೆ. ಇದಕ್ಕೆ ಬಹುಮಾನವಿಲ್ಲ. ಈ ಕಂಬಳದ ಕರೆ ಸಾಮಾನ್ಯವಾಗಿ ಒಂದೇ ಇರುತ್ತದೆ. ನಿರ್ಣಾಯಕರು ಗಡಿಯಾರವನ್ನು ಹಿಡಿದು ನಿಲ್ಲುತ್ತಿದ್ದರು. ಪ್ರತಿ ಕೋಣಗಳ ಜೊತೆ ಓಡಿದ, ಮಂಜೊಟ್ಟಿ ತಲುಪಲು ತೆಗೆದುಕೊಂಡ ಅವಧಿಯನ್ನು ನೋಡಿ ಬಹುಮಾನವಿದ್ದರೆ ಅದನ್ನು ನಿರ್ಣಯಿಸುವ ಪದ್ಧತಿ ಇತ್ತೀಚೆಗಿನ ವರೆಗೂ ಇತ್ತು. ಈಗ ಅನೇಕ ಕಂಬಳ ಗದ್ದೆಗಳಲ್ಲಿ ಜೋಡುಕರೆಗಳನ್ನು ಕಾಣಬಹುದು. ಎರಡು ಜೊತೆ ಕೋಣಗಳನ್ನು ಒಮ್ಮೆಗೇ ಬಿಟ್ಟು, ಅವು ಮಂಜೊಟ್ಟಿ ತಲುಪುವ ಅಂತರದಿಂದ ಗೆಲುವನ್ನು ನಿರ್ಧರಿಸುವ ಪದ್ಧತಿ ಆಧುನಿಕ ಕಂಬಳದಲ್ಲಿ ರೂಢಿಯಲ್ಲಿ ಬಂದಿದೆ. ಪವನಿನ ಬಹುಮಾನವನ್ನು ನೀಡುವುದೂ ಇದೆ. ಕಾಲಮಾನಕ್ಕೆ ತಕ್ಕಂತೆ ಸ್ಟೇಡಿಯಂ, ಪ್ರೇಕ್ಷಕರಿಗಾಗಿ ಗ್ಯಾಲರಿ, ಆಸನ ವ್ಯವಸ್ಥೆ, ಉಪಾಹಾರ ವ್ಯವಸ್ಥೆ ಮುಂತಾದವುಗಳೂ ಈಗ ಇವೆ.

ಇನೋಳಿ ಶ್ರೀ ಸಂಕು ಬಂಗರು ಆಧುನಿಕ ಕಂಬಳದ ಪ್ರವರ್ತಕರು. ಇದನ್ನು ಮೊಟ್ಟಮೊದಲು ಬಜಗೋಳಿಯಲ್ಲಿ ಆಚರಣೆಗೆ ತಂದವರು, ಕಾರ್ಕಳದ ಶ್ರೀ ಗುಣಪಾಲ ಜೈನರು.

ಕಾರ್ಕಳ ತಾಲೂಕಿನಲ್ಲಿ ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಹರಕೆ ಕಂಬಳಗಳು ನಡೆಯುತ್ತವೆ. ಬಹುಮಾನ ಕಂಬಳಗಳು ಬಜಗೋಳಿ ಮತ್ತು ಮಿಜಾರುಗಳಲ್ಲಿ ನಡೆಯುತ್ತವೆ. ಇವೆರಡೂ ಈಗ ಪ್ರಸಿದ್ಧವಾದವುಗಳು. ನೀರೆಬೈಲೂರಿನಲ್ಲಿ ಹರಕೆ ಕಂಬಳ ಪ್ರತಿವರ್ಷ ನಡೆಯುತ್ತದೆ. ಇವುಗಳ ಬಗ್ಗೆ ಸ್ವಲ ದರಲ್ಲಿ ನೋಡೋಣ.

ಬಜಗೋಳಿ ಕಂಬಳ: ಆಧುನಿಕ ಪದ್ಧತಿಯ ಕಂಬಳವನ್ನು ಶ್ರೀ ಗುಣಪಾಲ ಜೈನರು 1970ರಲ್ಲಿ ಬಜಗೋಳಿಯಲ್ಲಿ ಪ್ರಾರಂಭಿಸಿದರು. ಈ ಕಂಬಳದ ದಶಮಾನೋತ್ಸವ ಅದ್ದೂರಿಯಾಗಿ ಆಚರಿಸ

ಲಟ್ಟಿತು. ಇಲ್ಲಿ ಒಂದು ಸ್ಟೇಡಿಯಂ ರಚಿಸಿದ್ದು, ನಾಲ್ಕು ವಿಭಾಗದ ಕೋಣಗಳಿಗೆ ಒಂದೇ ಕೂಟದಲ್ಲಿ ಅವಕಾಶ ಕಲ್ಪಿಸಿಕೊಡಲಾಯಿತು. ನಾಲ್ಕೂ ವಿಭಾಗಗಳಿಗೆ ಪ್ರತ್ಯೇಕ ಚಿನ್ನದ ಪವನ್ ಬಹುಮಾನ ನೀಡುವ ವ್ಯವಸ್ಥೆಯೂ ಇಲ್ಲಿದೆ. ವಿದ್ಯುತ್ತಿನ ವ್ಯವಸ್ಥೆ, ಪ್ರೇಕ್ಷಕರಿಗೆ ಆಸನ ವ್ಯವಸ್ಥೆಗಳನ್ನೂ ಇಲ್ಲಿ ಮಾಡುತ್ತಾರೆ.

ಮಿಜಾರು ಕಂಬಳ: ಕಾರ್ಕಳ ತಾಲೂಕಿನ ಮಿಜಾರು ಕಂಬಳ ಈಗ ಜಿಲ್ಲೆಯಲ್ಲಿ ಪ್ರಸಿದ್ಧವಾದ ಕಂಬಳವಾಗಿದೆ. 1979ರಲ್ಲಿ ಈ ಕಂಬಳದ ಸ್ಟೇಡಿಯಂ ಆಧುನಿಕ ರೀತಿಯಲ್ಲಿ ನಿರ್ಮಾಣವಾಯಿತು. ಸ್ವತಃ ಬೇಸಾಯಗಾರರಾದ ಮಿಜಾರುಗುತ್ತು ಶ್ರೀ ಆನಂದ ಆಳ್ವರು ಈ ಕಂಬಳದ ಶಿಲ್ಪಿಗಳು. ಇವರ ನೇತೃತ್ವದಲ್ಲಿಯೇ ಮುರಕಲ್ಲಿನ ಗುಡ್ಡೆಯನ್ನು ಕಡಿದು ಪ್ರೇಕ್ಷಕರಿಗಾಗಿ ಗ್ಯಾಲರಿಯನ್ನು ಒಳಗೊಂಡ ಸ್ಟೇಡಿಯಂ ನಿರ್ಮಾಣವಾಗಿದೆ. ಸುಮಾರು ಇನ್ನೂರು ಅಡಿ ಉದ್ದದ ಜೋಡುಕರೆಯನ್ನು ಇವರು ನಿರ್ಮಿಸಿದ್ದಾರೆ. 1982ರಲ್ಲಿ ಗಣ್ಯರನೇಕರು ಮಿಜಾರಿನ ಕಂಬಳವನ್ನು ನಿರೀಕ್ಷಿಸಿ, ಪ್ರಶಂಸಿಸಿದ್ದರು. 1982ರಲ್ಲಿ ಮಿಜಾರು ಕಂಬಳವು ಜನರಿಗೆ ಸತತವಾಗಿ 27 ತಾಸುಗಳ ಮನರಂಜನೆಯನ್ನು ಒದಗಿಸಿ ದಾಖಲೆಯನ್ನು ಸ್ಥಾಪಿಸಿದೆ. ಇದು ಕಾರ್ಕಳದಲ್ಲಿ ಜನಪದ ಕ್ರೀಡೆ ಕಂಬಳದ ಜನಪ್ರಿಯತೆಯನ್ನು ಸೂಚಿಸುವ ಒಂದು ಉದಾಹರಣೆಯಾಗಿದೆ. ಪ್ರತಿವರ್ಷ ಜನವರಿ ತಿಂಗಳಿನಲ್ಲಿ ಈ ಕಂಬಳ ನಡೆಯುವುದು.

ನೀರೆಬೈಲೂರಿನ ಕಂಬಳ: ಪ್ರತಿವರ್ಷ ಸಂಕ್ರಾಂತಿ ಕಳೆದು ಆರೇಳು ದಿನಗಳ ಅಂತರದಲ್ಲಿ ಈ ಕಂಬಳ ನಡೆಯುತ್ತದೆ. ಶ್ರೀ ಆನಂದರಾವ್, ಶ್ರೀ ಶ್ರೀನಿವಾಸ ಭಟ್ ಮತ್ತು ಶ್ರೀ ರಾಮ ಪೂಜಾರಿ ಇವರು ಇಲ್ಲಿಯ ಮುಖ್ಯಸ್ಥರು. ಇದು ಹರಕೆಯ ಕಂಬಳ. ಕೊಡಮಂತಾಯ ಮತ್ತು ಬೈದರ್ಕಳ ದೈವಗಳನ್ನು ಸಂಪ್ರೀತಿಗೊಳಿಸಲು ಈ ಕಂಬಳವನ್ನು ತಪ್ಪದೆ ಪ್ರತಿವರ್ಷ ನಡೆಸುತ್ತಾರೆ. ಇಲ್ಲಿ ಬಹುಮಾನ ನೀಡುವ ಪದ್ಧತಿ ಇಲ್ಲ. ಮಿಜಾರು, ಬಜಗೋಳಿ ಮುಂತಾದ ಕಂಬಳಗಳಲ್ಲಿ ಕೋಣಗಳನ್ನು ಓಡಿಸುವವರು ಈ ಕಂಬಳದಲ್ಲಿ ತಮ್ಮ ಕೋಣಗಳಿಗೆ ತರಬೇತಿ ನೀಡುವುದುಂಟು. ಇಲ್ಲಿಯ ಕೆರೆ ಸುಮಾರು 35 ಕೋಲು ಉದ್ದವಿದೆ. ಕಂಬಳದ ಗದ್ದೆಯ ಸಮೀಪ ಬೈದರ್ಕಳ ದೈವದ ಗರಡಿಯಿದೆ. ಕಂಬಳ ನಡೆಯುವ ಮುನ್ನವೂ ಇಲ್ಲಿ ಕೆಲವರು ತಮ್ಮ ಕೋಣಗಳನ್ನು ತಂದು ಓಡಿಸುವರು. ಇದಕ್ಕೆ 'ಕುದಿ' ಎಂಬ ಹೆಸರು. ಕಂಬಳ ನಡೆಯುವ ದಿನ ಢೋಲು, ಕೊಂಬು, ಕಹಳೆಗಳನ್ನು ಬಾರಿಸುತ್ತಾರೆ. ಈಗೀಗ ಧ್ವನಿವರ್ಧಕಗಳನ್ನೂ ತರುತ್ತಾರೆ. ಕೆಲವು ಬಾರಿ ಕುದುರೆ ವೇಷ ಮುಂತಾದವುಗಳನ್ನು ಹಾಕುವುದೂ ಇದೆ.

ವಿಭಾಗಗಳು: ಕಂಬಳದಲ್ಲಿ ಸಾಮಾನ್ಯವಾಗಿ ಈ ಕೆಳಗಿನ ವಿಭಾಗಗಳನ್ನು ಮಾಡುತ್ತಾರೆ:

(1) ನೇಗಿಲು ಕೋಣಗಳು: ಅ) ನೇಗಿಲು ಜ್ಯೂನಿಯರ್
ಆ) ನೇಗಿಲು ಸೀನಿಯರ್

(2) ಹಗ್ಗದ ಕೋಣಗಳು: ಅ) ಹಗ್ಗ ಜ್ಯೂನಿಯರ್
ಆ) ಹಗ್ಗ ಸೀನಿಯರ್

(3) ಅಡ್ಡಹಲಗೆಯ ಕೋಣಗಳು

(4) ಕಣೆಹಲಗೆಯ ಕೋಣಗಳು.

ಒಮ್ಮೊಮ್ಮೆ ಒಂದು ವಿಭಾಗದ ಓಟಗಳು ಮುಗಿದ ಬಳಿಕ ಅವೇ ಜೋಡಿಗಳು ಇನ್ನೊಂದು ವಿಭಾಗದಲ್ಲಿ ಭಾಗವಹಿಸುವುದೂ ಇದೆ. ಕೋಣಗಳ ಹಲ್ಲುಗಳ ಮೇಲಿಂದ ಜ್ಯೂನಿಯರ್–ಸೀನಿಯರ್ ಎಂದು ಎರಡು ವಿಭಾಗಗಳನ್ನು ಮಾಡುತ್ತಾರೆ.

ಕಂಬಳಕ್ಕೆ ಹೊರಡುವಾಗ: ಕಂಬಳಕ್ಕೆಂದು ಕೋಣಗಳನ್ನು ಮನೆಯಿಂದ ಹೊರಡಿಸುವಾಗ ಅವುಗಳ ಹಿಂದೆ-ಮುಂದೆ ಜನರು ನಿಲ್ಲುತ್ತಾರೆ. ಅವರು ಸಮವಸ್ತ್ರವನ್ನು ಧರಿಸುತ್ತಾರೆ. ಕೋಣಗಳ ಯಜಮಾನರ ಅಥವಾ ಮನೆತನದ ಹೆಸರು-ಬಿರುದಾಂಕಿತಗಳನ್ನು ಬರೆದ ಒಂದು ವಸ್ತ್ರವನ್ನು ಕೋಣ

ಳಿಗೆ ಬೆನ್ನಮೇಲೆ ಇಳಿಬಿಡುತ್ತಾರೆ. ವಾಲಗದ ಸಹಿತ ಅವರು ಮೆರವಣಿಗೆಯಲ್ಲಿ ಹೊರಡುತ್ತಾರೆ. ಮೊದಲು ತಮ್ಮ ಇಷ್ಟದೈವದ ಮುಂದೆ ಕೋಣಗಳನ್ನು ಒಯ್ದು ಪ್ರಾರ್ಥನೆ ಸಲ್ಲಿಸುತ್ತಾರೆ. ಕೋಣ ಳೂ ಮಂಡಿಯೂರಿ ದೈವಕ್ಕೆ ತಲೆಬಾಗುತ್ತವೆ. ಬಾಣ-ಬಿರುಸುಗಳನ್ನು ಸುಡುತ್ತ ಅವರು ತಮ್ಮ ೋಣಗಳೊಡನೆ ಕಂಬಳದ ಸ್ಥಾನಕ್ಕೆ ಬರುತ್ತಾರೆ.

ಕಂಬಳದ ದೈವಕ್ಕೆ ಕೋಲ: ಕಂಬಳದ ಮುನ್ನಾ ದಿನ ಕಂಬಳ ದೈವಕ್ಕೆ ಕೋಲವಾಗುತ್ತದೆ. ಂಬಳ ದೈವವು ಮಾರನೆಯ ದಿನ ನಡೆಯುವ ಈ ಕಾರ್ಯಕ್ರಮ ನಿರ್ವಿಘ್ನವಾಗಿ ನಡೆಯಲು ಸಹಾಯ ಾಡುವುದು ಎಂದು ಇವರ ನಂಬಿಕೆ. ಕಂಬಳದ ದಿನವೂ ಪೂಜೆ, ಹರಕೆ, ಪ್ರಸಾದ ವಿತರಣೆಗಳು ಗುತ್ತವೆ. ಕಂಬಳದ ದಿನ ಈ ದೈವವು ಕಂಬಳದ ಗದ್ದೆಯ ಸುತ್ತಲೂ ತಿರುಗುತ್ತಿರಬೇಕು. ಕೆಲವು ಕಡೆ ಂಬಳದ ಮಾರನೆಯ ದಿನ ಕೋಲವಾಗುವುದಿದೆ. ಕೋಳಿ ಅಂಕವೂ ಮಾರನೆಯ ದಿನ ಜರಗುವುದು.

ಜೋಕಿ (ಜಾಕಿ): ಕೋಣಗಳನ್ನು ಕಂಬಳದ ಗದ್ದೆಯಲ್ಲಿ ಓಡಿಸುವವರಿಗೆ 'ಜೋಕಿ'ಗಳೆಂದು ಹೆಸರು. ಜೋಕಿಯು ಈ ಕಲೆಯಲ್ಲಿ ನಿಷ್ಣಾತನಾಗಿರುತ್ತಾನೆ. ಜೋಕಿಯನ್ನು ಕೋಣಗಳ ಯಜಮಾನರು ಮೊದಲೇ ನಿಶ್ಚಯಿಸುವರು. ಅವನು ಕೋಣಗಳಿಗೆ ತರಬೇತಿಯನ್ನು ಕೂಡ ನೀಡುತ್ತಾನೆ. ಕೋಣಗಳು ಜೋರಾಗಿ ಓಡುವಲ್ಲಿ ಇವನ ಕೈಚಳಕವೂ ಇದೆಯಂತೆ.

ನಿರ್ಣಾಯಕರು: ಈ ಸ್ಪರ್ಧೆಯಲ್ಲಿ ನಿರ್ಣಾಯಕರೂ ಇರುತ್ತಾರೆ. ಕಂಬಳದ ಗದ್ದೆಗೆ ಕೋಣಗಳು ಇಳಿಯುವಲ್ಲಿ ಮತ್ತು ಮಂಜೊಟ್ಟಿಯನ್ನು ಹತ್ತುವಲ್ಲಿ ನಿರ್ಣಾಯಕರು ನಿಲ್ಲುತ್ತಾರೆ. ಮೂಡಬಿದಿರೆಯ ಶ್ರೀ ಗುಣಪಾಲ ಕಡಂಬರು, ಕಾರ್ಕಳದ ಶ್ರೀ ಭುಜಬಲಿ ಬಂಗರು ಅನೇಕ ಕಂಬಳಗಳಲ್ಲಿ ನಿರ್ಣಾಯಕರಾಗಿ ಕರ್ತವ್ಯ ನಿರ್ವಹಿಸುತ್ತಾರೆ.

ಕಂಬಳದ ಗದ್ದೆಗೆ ಇಳಿಯುವಾಗ: ಕೋಣಗಳ ಯಜಮಾನರು ಮೆರವಣಿಗೆಯಲ್ಲಿ ತಮ್ಮ ಕೋಣ ಗಳನ್ನು ಕಂಬಳದ ಸ್ಥಳಕ್ಕೆ ತರುತ್ತಾರೆ. ವ್ಯವಸ್ಥಾಪಕರು ಕೋಣಗಳ ಮತ್ತು ಯಜಮಾನರ ಹೆಸರುಗಳನ್ನು ಬರೆದುಕೊಳ್ಳುತ್ತಾರೆ.

ಪ್ರಥಮದಲ್ಲಿ ನೇಗಿಲಿನ ಕೋಣಗಳು ಕಂಬಳದ ಗದ್ದೆಗೆ ಇಳಿಯುತ್ತವೆ. ಮೊದಲು ನೇಗಿಲು ಸೀನಿಯರ್, ಅನಂತರ ಜ್ಯೂನಿಯರ್ ಕೋಣಗಳನ್ನು ಇಳಿಸುವುದು ರೂಢಿ. ಕೋಣಗಳ ಯಜಮಾನರು ಕಂಕುಳಲ್ಲಿ ಒಂದು ಬೆತ್ತವನ್ನು ಇಟ್ಟು, ಕಂಬಳದ ಗದ್ದೆಯಲ್ಲಿ ಆರೆಂಟು ಅಡಿಗಳಷ್ಟು ನಡೆದು, ಕಂಬಳದ ಗದ್ದೆಯ ನೀರನ್ನು ತಮ್ಮ ಕೋಣಗಳಿಗೆ ಕುಡಿಸಿ, ತಮ್ಮ ದೈವಗಳನ್ನು ನೆನೆದು ಪ್ರಾರ್ಥಿಸಿಕೊಳ್ಳುತ್ತಾರೆ. ಹೀಗೆ ಸುಮಾರು ಐವತ್ತು ಜತೆ ಕೋಣಗಳು ಗದ್ದೆಗೆ ಇಳಿಯುತ್ತವೆ. ಅವು ಮೊದಲು ತಮಗಾಗಿ ನಿಗದಿ ಪಡಿಸಿದ ಕೆರೆಯಲ್ಲಿ ಒಮ್ಮೆ ಓಡುತ್ತವೆ. ಪ್ರೇಕ್ಷಕರಿಗೆ ಕೋಣಗಳನ್ನು ಪರಿಚಯಿಸುವುದು ಇಲ್ಲಿಯ ಒಂದು ಉದ್ದೇಶ. ಅಲ್ಲದೆ, ಸ್ಪರ್ಧೆಗಾಗಿ ಕೋಣನ ಜತೆಗಳನ್ನು ಆಯ್ದುಕೊಳ್ಳಲು ಇದರಿಂದ ಅನುಕೂಲ ವಾಗುವುದು. ಮೊದಲೊಮ್ಮೆ ಈ ರೀತಿ ಓಡಿಸಿದ ಬಳಿಕ, ಸ್ಪರ್ಧೆಗೆ ಪ್ರಾರಂಭವಾಗುವುದು.

ಅನಂತರ ಇತರ ವಿಭಾಗಗಳ ಕೋಣಗಳನ್ನೂ ಇದೇ ರೀತಿ ಸ್ಪರ್ಧೆಗೆ ಬಿಡುತ್ತಾರೆ. ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಕಣೆ ಹಲಿಗೆ ಕೋಣಗಳನ್ನು ಸ್ಪರ್ಧೆಗೆ ಇಳಿಸುತ್ತಾರೆ. ಸುಮಾರು 200 ಮೀಟರ್ ಉದ್ದದ ಕರೆಯಲ್ಲಿ ಎರಡು ನಿಶಾನೆಗಳನ್ನು ಹುಗಿಯುತ್ತಾರೆ. ಒಂದು ಆರೂವರೆ ಅಡಿ ಉದ್ದದ ಇನ್ನೊಂದು ಏಳೂವರೆ ಅಡಿ ಉದ್ದದ ನಿಶಾನೆಗಳಿವು. ಕಣೆ ಹಲಗೆಯ ಕೋಣಗಳು ಈ ಎರಡೂ ನಿಶಾನೆಗಳಿಗೆ ಓಡುವಾಗ ನೀರನ್ನು ಹಾರಿಸಬೇಕು. ಅದರ ಮೇಲಿಂದ ನಿರ್ಣಾಯಕರು ಪರಿಣಾಮವನ್ನು ಸಾರುತ್ತಾರೆ.

ಒಂದು ಜೊತೆ ಗೆದ್ದ ಕೋಣಗಳ ಸಂಗಡ ಇನ್ನೊಂದು ಜೊತೆ ಗೆದ್ದ ಕೋಣಗಳನ್ನು ಜೋಡಿ ಮಾಡಿ ಪುನಃ ಓಡಿಸುತ್ತಾರೆ. ಈ ರೀತಿ ಎಲ್ಲ ಕೋಣಗಳ ಜೊತೆಯಲ್ಲಿ ಯಾವ ಜೊತೆ ಮೊದಲ ಮತ್ತು ಎರಡನೆ ಮೂರನೇ ಬಹುಮಾನ ಗಳಿಸುವುದೆಂದು ನಿರ್ಧರಿಸುತ್ತಾರೆ.

ಕೋಣಗಳ ಓಟವನ್ನು ನೋಡಿಯೇ ತಿಳಿಯಬೇಕು. ಕೆಲವು ಕೋಣಗಳು ಪ್ರಾರಂಭದಲ್ಲಿ ಹಿಂದೆ ಬಿದ್ದರೂ ಅನಂತರ ಸುಧಾರಿಸಿಕೊಂಡು ಜೋರಾಗಿ ಓಡಿ ಜಯಗಳಿಸುವುದೂ ಇದೆ. ಕೆಸರುಮಣ್ಣು ಮತ್ತು ನೀರು ಇರುವ ಗದ್ದೆಯಲ್ಲಿ ಕೋಣಗಳು ಆ ರೀತಿ ಓಡುವುದು ಪ್ರೇಕ್ಷಕರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ಕೋಣಗಳ ಯಜಮಾನರು ಕೋಣಗಳನ್ನು ಸಾಕಲು ತುಂಬಾ ಖರ್ಚು ಮಾಡುತ್ತಾರೆ. ಇದರಿಂದ ಅವರಿಗೆ ವಿಶೇಷವಾದ ಲಾಭವೇನೂ ಇಲ್ಲ. ಆದರೆ ಇದು ಅವರಿಗೆ ಪ್ರತಿಷ್ಠೆಯ ಪ್ರಶ್ನೆ.

ಕಾರ್ಕಳದ ಕಂಬಳಪ್ರಿಯರು

ಕಂಬಳದ ಹಿನ್ನೆಲೆ, ಆಚರಣೆಯ ವಿಧಾನ ಮುಂತಾದವುಗಳನ್ನು ಮತ್ತು ಕಾರ್ಕಳದ ಪರಿಸರದ ಮುಖ್ಯ ಕಂಬಳಗಳ ಪರಿಚಯವನ್ನೂ ಮಾಡಿಕೊಂಡ ಮೇಲೆ, ಇಲ್ಲಿಯ ಕಂಬಳಪ್ರಿಯರು, ಕೋಣಗಳ ಯಜಮಾನರು ಇವರುಗಳ ಬಗೆಗೆ ಸ್ವಲ್ಪದರಲ್ಲಿ ಇಲ್ಲಿ ತಿಳಿಸುವುದು ಅಗತ್ಯ.

ಮಿಜಾರುಗುತ್ತು ಶ್ರೀ ಆನಂದ ಆಳ್ವರು ಕಂಬಳ ಕ್ರೀಡೆಯಲ್ಲಿ ಮುಖ್ಯರಾಗಿದ್ದಾರೆ. ಅವರೇ ಜೋಕಿಯಾಗಿ ಕೋಣಗಳನ್ನು ಓಡಿಸಿದ್ದೂ ಉಂಟು. ಇವರ ಕೋಣಗಳಾದ ಗುಂಡು ಮತ್ತು ಮೋಡ, ಕೊಡ್ಯ ಮತ್ತು ಬೊಳ್ಳ ಜಿಲ್ಲೆಯಲ್ಲಿ ಹೆಸರುಗಳಿಸಿವೆ. ನೆಲ್ಲಿಕಾರ್ ಶ್ರೀ ಜಿನರಾಜ ಜೈನರ ಕೋಣಗಳು ಮಿಜಾರು ಕಂಬಳದಲ್ಲಿ ದ್ವಿತೀಯ ಸ್ಥಾನ ಗಳಿಸಿವೆ. ಮುಂಡ್ಕೂರು ಶ್ರೀ ಶಿವರಾವ ಶೆಟ್ಟರ ಕೋಣ 'ರಾಕೆಟ್' ಈ ಕ್ರೀಡೆಯಲ್ಲಿ ಜನಪ್ರಿಯವಾಗಿವೆ. ಮುಂಡ್ಕೂರು ಶ್ರೀ ರಾಜ ಶೆಟ್ಟರು, ಇರ್ವತ್ತೂರು ಶ್ರೀ ಸುಬ್ಬಯ್ಯ ಕೋಟ್ಯಾನ್, ಶ್ರೀ ಸಾಣೂರು ಕೊಗ್ಗಾಚಾರಿ ಮುಂತಾದವರು ಕೋಣಗಳ ಯಜಮಾನ ರೆಂಬುದನ್ನು ಇಲ್ಲಿ ಹೇಳಲೇಬೇಕು. ಸಾಣೂರು ಏರ್ನಡ್ಕಗುತ್ತು ಶ್ರೀ ವಿಠಲ ಶೆಟ್ಟರ ಕೋಣಗಳು 1979ರ ವರೆಗೂ ಪ್ರಥಮ, ದ್ವಿತೀಯ ಬಹುಮಾನಗಳನ್ನು ಗಳಿಸುತ್ತಿದ್ದವು. ನಾಲ್ಕು ದಶಕಗಳ ಹಿಂದೆ ಕಾರ್ಕಳದ ಶ್ರೀ ಶಿವಪ್ಪ ಹೆಗಡೆಯವರು ಓಟದ ಕೋಣಗಳನ್ನು ಕಟ್ಟಿ ಪ್ರಸಿದ್ಧಿ ಪಡೆದಿದ್ದರು. ಕಾರ್ಕಳದ ಶ್ರೀ ಸದಾನಂದ ಕಾಮತರ ಓಟದ ಕೋಣಗಳು ಜ್ಯೂನಿಯರ್ ವಿಭಾಗದಲ್ಲಿ ಹಲವು ಬಾರಿ ಬಹುಮಾನ ಗಳನ್ನು ಗಳಿಸಿವೆ. ಕುಂಟಾಡಿ ಶ್ರೀ ಶಿವಪ್ಪ ಹೆಗಡೆ, ರೆಂಜಾಳ ಶ್ರೀ ಅಹಮ್ಮದ್ ಬ್ಯಾರಿ, ಇವರೂ ಓಟದ ಕೋಣಗಳ ಯಜಮಾನರುಗಳು.

ಕಾಬೆಟ್ಟು ಶ್ರೀ ಸುಂದರ ಹೆಗ್ಡೆ ಕಣೆಹಲಗೆಯ ಜೋಕಿಯಾಗಿ ಪ್ರಸಿದ್ಧರಾಗಿದ್ದಾರೆ. ಹಿರಿಹಗ್ಗದ ಜೋಕಿಗಳಾಗಿ ಸರ್ವಶ್ರೀ ರಂಜಾಳ ಸಂಜೀವ, ಕುಕ್ಕುಂದೂರು ಶಂಕರ, ಬೆಳುವಾಯಿ ರವೀಂದ್ರ, ಕಾಂತಾವರ ಧರ್ಮಣ್ಣ ಕೋಟ್ಯಾನ್, ಮುಂಡ್ಕೂರು ಸೀನ ಮಡಿವಾಳ, ಮಿಜಾರಿನ ಕುಟ್ಟಿ ಇವರು ಪ್ರಸಿದ್ಧರು.

ಸರ್ವಶ್ರೀ ಕಾರ್ಕಳ ನಾಗಪ್ಪಯ್ಯ, ಕೊಳಕ್ಕೆ ಗುಣಪಾಲ ಕಡಂಬ, ನಿಟ್ಟೆ ಪಂಚ ಭಟ್, ಮಾರೂರು ರಾಜೀವ ಭಂಡಾರಿ, ನಿಟ್ಟೆ ದೇಜಪ್ಪ ಅತಿಕಾರಿ, ನಿಡಿಮನೆ ಜಗನ್ನಾಥ ಶೆಟ್ಟಿ, ನಂದಳಿಕೆ ಮುದ್ದು ಚೌಟ, ಖಾದ್ರಿ ಬ್ಯಾರಿ, ಕೆ. ಪಿ. ಅಪ್ಪಣ್ಣ ಕಾರ್ಕಳ, ರೆಂಜಾಳ ಇಬ್ರಾಹಿಂ, ನಿಟ್ಟೆ ನಾರಾಯಣ ಕುಂದರ್, ಕುಂಟಾಡಿ ಕಾನಮರ್ಧ ಶೆಟ್ಟಿ, ತೆಳ್ಳಾರು ಚಂದು ಶೆಟ್ಟಿ, ಅಮೀರ್ ಸಾಹೇಬ್, ಭುಜಬಲಿ ಕಡಂಬ, ಮಾಳ ಕಟಾರಿ ಬಾಬು ಪ್ರಭು, ದುಗ್ಗಯ್ಯ ಹೆಗಡೆ, ಮಿಯ್ಯಾರು ಕೊಂಕಣಬೆಟ್ಟು ದುಗ್ಗಣ ಪೂಜಾರಿ, ಅತ್ತೂರು ಮೈಲಾಜೆ ತನಿಯ ಪೂಜಾರಿ, ಕುಕ್ಕುಂದೂರು ಮುತ್ತಣ್ಣ ಶೆಟ್ಟಿ – ಇವರೆಲ್ಲ ಕಂಬಳ ಕ್ರೀಡೆಯಲ್ಲಿ ಮಹತ್ವದ ಪಾತ್ರಗಳನ್ನು ವಹಿಸುತ್ತಾರೆ.

ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು

ಕಂಬಳ ಕ್ರೀಡೆಗೆ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳಿವೆ. ಅವುಗಳನ್ನು ಈ ಕೆಳಗಿನಂತೆ ಹೇಳಬಹುದು:

1) ಕಂಬಳವು ಮುಖ್ಯವಾಗಿ ಮನರಂಜನೆಯ ಕ್ರೀಡೆ.
2) ಕಂಬಳದಲ್ಲಿ ಅನೇಕ ಊರುಗಳ ಜನರು ಭಾಗವಹಿಸುವುದರಿಂದ ಪರಸ್ಪರ ಪರಿಚಯ• ತಿಳುವಳಿಕೆ ಮೂಡಿಸುವಲ್ಲಿ ಕಂಬಳ ಒಂದು ಮಾಧ್ಯಮ.
3) ಕೋಣಗಳನ್ನು ಓಡಿಸುವ ಜಾಕಿಗಳಿಗೆ ಇದೊಂದು ವೃತ್ತಿ.
4) ಕಂಬಳದ ಮುನ್ನಾದಿನ ಕೋಲವನ್ನು ಮಾಡುತ್ತಾರೆ. ಮಾರನೆಯ ದಿನ ಕೋಳಿಅಂಕ ಗಳಿರುತ್ತವೆ. ಇವುಗಳಿಂದ ಜನಪದ ಕ್ರೀಡೆಗಳು ಸಮಾಜದಲ್ಲಿ ಮುಂದುವರಿಯಲು ಸಹಾಯವಾಗುತ್ತದೆ;
5) ಹರಕೆ ಕಂಬಳಗಳು ದೈವವನ್ನು ಸಂಪ್ರೀತಿಗೊಳಿಸುವ ಕಂಬಳಗಳು. ಇಲ್ಲಿ ಧಾರ್ಮಿಕ ಮೌಲ್ಯವನ್ನು ಗುರುತಿಸಬಹುದು;
6) ಕಂಬಳಗಳ ಬಗ್ಗೆ ಇರುವ ಪಾಡ್ದನಗಳು ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ಭೂತಾರಾಧನೆಯಲ್ಲಿ ಕೋಲ

ಭೂತಾರಾಧನೆ ಭಾರತೀಯ ಸಂಸ್ಕೃತಿಯಲ್ಲಿ ದೇಶದುದ್ದಕ್ಕೂ ಕಂಡುಬರುವ ಸಾಮಾನ್ಯವಾದ ಒಂದು ಪದ್ಧತಿಯಾಗಿದೆ. ಆದರೆ ಪ್ರಾದೇಶಿಕ ಭಿನ್ನತೆಗೆ ಅನುಸಾರವಾಗಿ, ಅವುಗಳ ಆಚರಣೆಗಳಲ್ಲಿ, ದೈವಗಳ ಹೆಸರು-ಪೂಜಾ ವಿಧಾನಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ದಕ್ಷಿಣ ಕನ್ನಡದ ಭೂತಾರಾಧನೆ ತನ್ನದೇ ಆದ ವಿಶಿಷ್ಟ ಪದ್ಧತಿಗಳಿಂದ ಕೂಡಿದೆ.

ಸುಮಾರು ಡಿಸೆಂಬರ್ ತಿಂಗಳಿನಿಂದ, ಮುಖ್ಯವಾಗಿ ಚೈತ್ರಮಾಸದ ಹುಣ್ಣಿಮೆಯಂದು ದಕ್ಷಿಣ ಕನ್ನಡದುದ್ದಕ್ಕೂ ಕೋಲಗಳನ್ನು ಕಾಣಬಹುದು. ಭೂತಗಳ ಪೂಜೆಗಳನ್ನು ನೇಮ, ಕೋಲ, ತಂಬಿಲ ಮುಂತಾದ ಹೆಸರುಗಳಿಂದ ಕರೆಯುವುದು ರೂಢಿಯಲ್ಲಿದೆ.

ತಾನು ನಂಬಿದ ಶಕ್ತಿಯನ್ನು ಮಾನಸಿಕವಾಗಿ ನೆನೆದು, ಪ್ರತ್ಯಕ್ಷದಲ್ಲಿ ಅದಕ್ಕೆ ಪ್ರತೀಕ ಕಲ್ಪಿಸಿ, ಅದನ್ನು ಬಣ್ಣ ಬೆಡಗುಗಳಿಂದ ಸಿಂಗರಿಸಿ, ಬೆಳಕು ತೋರಿಸಿ, ಪುಷ್ಪಾದಿಗಳನ್ನು ಅರ್ಪಿಸಿ, ತಾನುಣ್ಣುವುದನ್ನೇ ನೈವೇದ್ಯ (ಬಾರ್ನೆ) ವಾಗಿ ಕೊಟ್ಟು, ಎಳನೀರು ಕುಡಿಸಿ, ಬಲಿಕೊಟ್ಟು, ವಾದ್ಯ - ಮೇಳ - ನರ್ತನಗಳನ್ನು ಅಳವಡಿಸಿ (ಮದಿಪು) ಸ್ತುತಿಮಾಡಿ ಪಾಡ್ದನಗಳೆಂಬ ದೈವದ ದನಿಗೂಡಿಸಿ ಹಾಡಿ, ಪಾಡಿ ದೈವ ಶಕ್ತಿ ಮೈ ತುಂಬಿದಾಗ (ದರ್ಶನ) ತನ್ನ ಸ್ವಂತದ ಹಾಲು - ಅಹವಾಲುಗಳನ್ನು ವಿನಂತಿಸಿ ಇಷ್ಟಾರ್ಥ ಬೇಡಿಕೊಂಡು ಹರಕೆ ಸಲ್ಲಿಸಿ ಪ್ರಸಾದ (ಬೂಳ್ಯ) ಪಡೆವ ರಾತ್ರಿ ಘಂಟೆ 10 ರಿಂದ ಬೆಳಗಿನ ಆರು ಗಂಟೆಯವರೆಗೆ ನಡೆವ ವಿಧಿಯೇ ಕೋಲ ಎನಿಸಿಕೊಳ್ಳುವುದು. 'ಕೋಲ' ಎಂದರೆ 'ಸಿಂಗಾರ' ಎಂದರ್ಥ. ಕೋಲ ಕಟ್ಟುವವನ ವೇಷ ಭೂಷಣಗಳಿಗೆ ಅನುಸಾರವಾಗಿ ಈ ಹೆಸರು ಬಂದಿರಬಹುದೆಂದು ಕೆಲವರ ಹೇಳಿಕೆ.

ಕೆಲವು ದೈವಗಳು ದೇವ - ದೇವತೆಗಳ ಅಂಶಗಳಾಗಿ ವಿಶಿಷ್ಟವಾದ ರೀತಿಯಲ್ಲಿ ಸಮಾಜದಲ್ಲಿ ಜನರಿಂದ ಪೂಜೆಗಳನ್ನು ಸ್ವೀಕರಿಸುತ್ತವೆ. ಕೋಲ ಕಟ್ಟುವ ಸಂದರ್ಭಗಳಲ್ಲಿ ಆಯಾ ದೈವಗಳ ಹುಟ್ಟುಗಳೇ ಮೊದಲಾದವುಗಳನ್ನು ಹಾಡುವ ಪರಿಪಾಠವೂ ಇದೆ.

ಭೂತಾರಾಧನೆಯು ಪ್ರಾಚೀನ ಕಾಲದಲ್ಲಿಯೇ ರೂಢಿಯಲ್ಲಿದ್ದಿರಬೇಕು. ಹುಲಿ, ಎತ್ತು, ಮನುಷ್ಯ ಮುಂತಾದ ವಿಗ್ರಹಗಳನ್ನು ಭೂತಾರಾಧನೆಯಲ್ಲಿ ಪೂಜಿಸುತ್ತಾರೆ. ಮೊಹೆಂಜೊದಾರೊದಲ್ಲಿ ಸಿಕ್ಕಿದ ಪ್ರಾಣಿಗಳ ವಿಗ್ರಹಗಳಿಗೂ, ಭೂತಾರಾಧನೆಯ ವಿಗ್ರಹಗಳಿಗೂ ಸಾಮ್ಯತೆಯನ್ನು ಗುರುತಿಸಿದ ಫಾದರ್ ಹೆರಾಸ್, ಮೊಹೆಂಜೊದಾರೋದ ವಿಗ್ರಹರಾಧಕರೇ ಅಲೆದಾಡುತ್ತ ದಕ್ಷಿಣ ಕನ್ನಡದ ಕರಾವಳಿಯಲ್ಲಿ ನೆಲೆಯೂರಿರಬಹುದೆಂದು ತರ್ಕಿಸಿದ್ದಾರೆ. ಭೂತಗಳನ್ನು ಪೂಜಿಸುವ ಜನಾಂಗದ ಪೂರ್ವಜರು ಉತ್ತರ ಭಾರತದ ಮೂಲದವರಿರಬೇಕೆಂದೂ ಅವರು ಹೇಳಿದ್ದಾರೆ.

ಕೋಲಕಟ್ಟುವವರು: ಕೋಲದಲ್ಲಿ ಭೂತದ ವೇಷ ಹಾಕುವುದು ಕೆಲವು ವರ್ಗದ ಜನರಿಗೆ ಮಾತ್ರ ಮೀಸಲಾಗಿದೆ. ಕೆಲವು ದೈವಗಳಿಗೆ ಮಾಂಸವನ್ನು ಅರ್ಪಿಸುವ ಪದ್ಧತಿ ಇದೆ. ಇಂಥ ದೈವಗಳ ಕೋಲದಲ್ಲಿ ನಲ್ಕೆಯವರು ಭಾಗವಹಿಸುವುದು ಹೆಚ್ಚು. ಪರವ, ಪಂಬದ, ಪಾಣಾರು, ನಲ್ಕೆ ಜಾತಿಯ ಜನರು ಕೋಲಗಳಲ್ಲಿ ದೈವಗಳನ್ನು ಪೂಜಿಸುವ ಮುಖ್ಯ ವರ್ಗಗಳು.

ಪ್ರಮುಖವಾದ ದೈವಗಳು: ದಕ್ಷಿಣ ಕನ್ನಡದಲ್ಲಿ ನೂರಾರು ದೈವಗಳನ್ನು ಪೂಜಿಸುತ್ತಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ದೈವಗಳ ಬಗ್ಗೆ ಇಲ್ಲಿ ನೋಡಬಹುದು.

ಕೊರತ್ತಿ ದೈವ: ಇದು ಹೆಣ್ಣು ದೆ.ವ. ಹರಿಜನ ವರ್ಗಕ್ಕೆ ಸೇರಿದ 'ಅಜಿಲ'ರು ಅಥವಾ 'ನಲಿಕೆ' ಯವರು ಕೋಲದಲ್ಲಿ ಮುಖ್ಯ ಪಾತ್ರವಹಿಸುತ್ತಾರೆ.

ಕೊರಗತನಿಯ: ನಲಿಕೆಯವರು ಈ ದೈವಕ್ಕೆ ಕೋಲ ಕಟ್ಟುವವರು. 'ತೆಂಬರೆ' ವಾದ್ಯಕ್ಕೆ ಅನುಸಾರವಾಗಿ ಕುಣಿಯುತ್ತಾರೆ.

ಪಂಜುರುಳಿ (ಪಂಜುರ್ಲಿ) ಭೂತ: ದಕ್ಷಿಣ ಕನ್ನಡದುದ್ದಕ್ಕೂ ಬಹಳ ಪ್ರಸಿದ್ಧವಾಗಿವರು ದೈವವಿದು. ವಿಷ್ಣುವಿನ ವರಾಹ ಅವತಾರದ ಅಂಶವನ್ನು ಇಲ್ಲಿ ಕಾಣಬಹುದು. ಪಂಜನ್ನು ಉರುಳಿಸುತ್ತ ಕುಣಿಯುವದರಿಂದ ಪಂಜುರುಳಿ ಎಂಬ ಹೆಸರು ಬಂದಿರಬೇಕು. ಹಂದಿಯ ಮುಖವಾಡ ಧರಿಸಿ ಭೂತ ಕಟ್ಟುವವನು ಕುಣಿಯುತ್ತಾನೆ. ಕುಣಿತದಲ್ಲಿ ಹಂದಿಯ ಚಲನೆಯ ಗತಿಯನ್ನು ಕಾಣಬಹುದು, ಕಾರ್ಕಳದ ಮಿಜಾರಿನಲ್ಲಿ ನಡೆಯುವ ಈ ಭೂತ ಕೋಲ ಬಹಳ ಪ್ರಸಿದ್ಧವಾಗಿದೆ.

ಕಲ್ಕುಡ ಮತ್ತು ಕಲ್ಲುರ್ಟಿ: ಈ ದೈವಗಳು ಅಣ್ಣ ತಂಗಿಯರೆಂಬ ಭಾವನೆ ಜನರಲ್ಲಿದೆ. ಈ ಭೂತಗಳ ಆರಾಧನೆ ಹೆಚ್ಚಾಗಿ ಮನೆಗಳಲ್ಲಿ ನಡೆಯುವುದು. ಈ ಭೂತ ರಕ್ತದ ಬಲಿಯನ್ನು ಬಯಸುತ್ತದೆ. ಅಣ್ಣನ ಜೊತೆ ತಂಗಿಯಿರುವದರಿಂದ ಅಣ್ಣನ ಶಕ್ತಿ ಹೆಚ್ಚಾಗುವುದೆಂಬ ನಂಬಿಕೆಯೂ ಇದೆ.

ಕಪ್ಪೆ ಪಂಜರ್ಲಿ: ಈ ಭೂತ ಕಟ್ಟುವವನು ಕಪ್ಪೆಯಂತೆ ಗುಪ್ಪ ಹಾರುತ್ತ ಕುಣಿಯುತ್ತಾನೆ. ಏರ್ನರೆ ಪಂಜುರ್ಲಿ ಎಂಬ ದೈವವೂ ಇದೆ.

ಉಳ್ಳಾಲ್ತಿ ದೈವ: ಈ ಭೂತದ ಜೊತೆ ಎರಡು ಚಿಕ್ಕ ಭೂತಗಳು ಇರುತ್ತವೆ. ಅವುಗಳಿಗೆ 'ಪಿಲಿಚಾಮುಂಡಿ ಭೂತ' ಮತ್ತು 'ಮಲ್ಲರಾಯ ಭೂತ' ಎಂಬ ಹೆಸರು. ಪ್ರತಿವರ್ಷ ಇವುಗಳಿಗೆ 'ನೇಮ' ನಡೆಯಬೇಕು. ಉಳ್ಳಾಲ್ತಿಯ ಜೊತೆಗೇ ಇದ್ದು ಈ ಚಿಕ್ಕ ಭೂತಗಳು ಕಡ್ತಲೆ ಹಿಡಿದು ಕುಣಿಯಬೇಕು. ಉಳ್ಳಾಲ್ತಿ ದೇವಿಯ ಅಂಶವಂತೆ, ಉಳ್ಳಾಲ್ತಿಗೆ ಹೆಚ್ಚಿನ ಕಡೆಗಳಲ್ಲಿ ಬಂಗಾರದ ಮುಖವಾಡವಿದೆ. ಪಿಲಿಚಾಮುಂಡಿಗೆ ಬೆಳ್ಳಿಯ ಮುಖವಾಡಗಳಿರುತ್ತವೆ. ಉಳ್ಳಾಲ್ತಿ ಎಂದರೆ 'ಒಡತಿ'. ಉಳ್ಳಾಲ್ತಿ ವೀರ ವನಿತೆಯಾಗಿದ್ದಳು ಎಂಬುದು ಪಾಡ್ದನಗಳಿಂದ ತಿಳಿದು ಬರುತ್ತದೆ. ಮರಣ ಹೊಂದಿ ಅವಳು ದೇವತ್ವಕ್ಕೇರಿದವಳೆಂಬ ನಂಬಿಕೆ ಇದೆ. ಅವಳಿಗೆ ಅವಳದೇ ಆದ ಪರಿವಾರ ದೈವಗಳಿವೆ. ಪಂಬದರು ಎಂಬ ಜಾತಿಯವರು ಈ ಭೂತವೇಷವನ್ನು ಕಟ್ಟುತ್ತಾರೆ.

'ಸಿರಿಜಾತ್ರೆ' ಮಾತೃ ಪ್ರಧಾನ ಸಂಸ್ಕೃತಿಯ ಒಂದು ಉದಾಹರಣೆಯಾಗಿದೆ. ಸಿರಿಗಳಾದ ಸೊನ್ನೆ,

ಂಡೆ, ಅಬ್ಬಗೆ, ದಾರಗೆ, ಅಕ್ಕೆ ಸಿರಿಯರ ಪ್ರಭಾವಗಳು ಇಲ್ಲಿ ಜೋರಾಗಿ ಕಂಡು ಬರುತ್ತದೆ. ಸ್ತ್ರೀ ರ್ಗಕ್ಕೆ ಸಾಮೂಹಿಕ ಆವೇಶ ಬರುವುದೂ ಇದೆ. ಅವರ ತಾಪತ್ರಯುಗಳಿಗೆ ಪರಿಹಾರ ಹೇಳುವ ಈ ೈವ ನಂದಳಿಕೆ ಮುಂತಾದ ಸ್ಥಳಗಳಲ್ಲಿ ಪ್ರಸಿದ್ಧಿವಾಗಿದೆ.

ಜುಮಾದಿ: ಕಾರ್ಕಳದ ಪರಿಸರದಲ್ಲಿ ಪ್ರಸಿದ್ಧವಾದ ಇನ್ನೊಂದು ದೈವ ಜುಮಾದಿ. ಪರವರು ವೇಷ ಕಟ್ಟುತ್ತಾರೆ. ಕೋಲದ ಪ್ರಥಮ ಪ್ರವೇಶದ ಅನಂತರದ ವಿರಾಮದಲ್ಲಿ ಆವಳಿ ಬಂಟನು ಕುಣಿಯು ವುದನ್ನು ಕಾಣಬಹುದು.

ಜುಮಾದಿಗೆ ಧೂಮಾವತಿ ಎಂದು ಹೇಳವುದಿದೆ. ಆದರೆ ಮುಸಲ್ಮಾನ ಮೂಲದಿಂದ ಈ ದೈವ ಹಿಂದುಗಳಲ್ಲಿ ನುಸುಳಿಕೊಂಡಿರಬಹುದೇ ಎಂಬುದು ಜಿಜ್ಞಾಸೆಗೆ ತಕ್ಕ ವಿಷಯವಾಗಿದೆ.

ಬೈದರ್ಕಳ ನೇಮ: ಕೋಟಿ - ಚೆನ್ನಯ್ಯ ದೈವಗಳಿಗೆ ಸಂಬಂಧಿಸಿದ ನೇಮವಿದು. ಇಲ್ಲಿ ನಲಿಕೆ ಯವರು ವೇಷ ಕಟ್ಟುವವರು, ಈ ದೈವಗಳಿಗೆ ಮುಖ್ಯವಾಗಿ ಬತ್ತವನ್ನು ಅರ್ಪಿಸುತ್ತಾರೆ. ಇವು ವೀರ ಪೂಜೆಯುನ್ನು ಪಡೆಯುವ ದೈವಗಳು. ಕೋಟಿ - ಚೆನ್ನಯ್ಯರ ಬಳಿ ದೇಯಿ ಬೈದ್ಯತಿ ಇರುವುದು ಸಾಮಾನ್ಯ. ದೇಯಿ ಬೈದ್ಯತಿ ಕೋಟಿ - ಚೆನ್ನಯ್ಯರ ತಾಯಿ.

ಇವುಗಳಲ್ಲದೆ, ಆಲಿಭೂತ, ಶಿರಾಡಿ ಭೂತ, ಕೊರ್ದಬ್ಬು ಅಥವಾ ಕೋಟದ ಬಬ್ಬು, ಜಾರಂದಾಯ,, ಚೊಬ್ಬಯ್ಯ, ದುಗ್ಗಿಲಾಯ, ಕೊಡಮಂತಾಯ, ರಕ್ತೇಶ್ವರಿ ಮೊದಲಾದ ನೂರಾರು ದೈವಗಳು ಇವೆ. ಇವುಗಳ ಆರಾಧನೆಗಳು ಜನತೆಗೆ ಜೀವನದಲ್ಲಿ ಮಂಗಲವನ್ನುಂಟು ಮಾಡುವುದೆಂಬ ನಂಬಿಕೆ ಗಳಿವೆ.

ಕಾರ್ಕಳದ ಪೆರ್ವಾಜೆ, ಕುಕ್ಕಿಕಟ್ಟೆ, ನಕ್ರೆ, ಮಿಯಾರು, ದಿಡಿಂಬಿರಿ, ಮುಡಾರು, ಕೆರ್ವಾಸೆ ರೆಂಜಾಳ, ಪರಪಾಡಿ, ನಿಟ್ಟೆ, ಸಾಣೂರು, ಮಾರ್ನಾಡು, ತೆಳ್ಳಾರು, ಮಾಳ, ಮೂರೂರು, ನಲ್ಲೂರು ಮುಂತಾದ ಊರುಗಳಲ್ಲಿ ಪರವರು, ಕೊಡಮಂತಾಯ, ಕುಕ್ಕಿನಂಗಾಯ, ಬೈದರ್ಕಳ, ಮತ್ತು ಮಹಂದಾಲ್ ಭೂತಗಳಿಗೆ ಕೋಲ ಕಟ್ಟುತ್ತಾರೆ.

ಪೆರ್ವಾಜೆ, ಕಾಬೆಟ್ಟು, ಮಿಯಾರು, ಕರ್ದೆ, ದುರ್ಗ, ನಿಟ್ಟೆ, ಸಾಣೂರು ಮುಂತಾದ ಊರುಗಳಲ್ಲಿ ಮೊಗ್ಗೇರ ಜಾತಿಯ ಕೋಲಗಳಲ್ಲಿ, ನಲಿಕೆಯವರು ಕೋಲ ಕಟ್ಟುತ್ತಾರೆ. ಆಳಿರ್‌ದಾಯಿ, ಬೈದರ್ಕಳ, ತನಿಮಾನಿಗ ಮುಂತಾದ ಭೂತಗಳಿಗೆ ಇಲ್ಲಿ ಕೋಲ ಮಾಡುವುದು ಕಂಡು ಬಂದಿದೆ.

ಬೊಬ್ಬಳ, ಕಾರ್ಕಳಗಳಲ್ಲಿ ನಲಿಕೆಯವರು ಬೊಬ್ಬರ್ಯ, ದೈವಕ್ಕೆ ಕೋಲ ಕಟ್ಟುವುದಿದೆ.

ಕರ್ದೆ ಮುಟ್ಲಾಡಿಗಳಲ್ಲಿ ಪರವರು, ಜುಮಾದಿ, ಕೊಡಮಂತಾಯ, ಕುಕ್ಕಿನಂತಾಯ, ಬೈದರ್ಕಳ ಕೋಲಗಳನ್ನು ಕಟ್ಟುವುದು ರೂಢಿಯಲ್ಲಿದೆ.

ನಿಟ್ಟೆ ಮತ್ತು ಕುಕ್ಕುಂದೂರುಗಳಲ್ಲಿ ನಡೆಯುವ ಕೋಲಗಳಲ್ಲಿ ಪರವರು ಕಟ್ಟುವ ಪಿಲಿಚಂಡಿ ಕೋಲ ಮುಖ್ಯವಾಗಿದೆ.

ಸಿರಿಬೈಲು, ಅಜೆಕ್ಕಾರುಗಳಲ್ಲಿ ಪರವರು ಕೊಡಮಂತಾಯ, ಕುಕ್ಕಿನಂತಾಯ, ಬೈದರ್ಕಳ, ಬೊಬ್ಬರ್ಯ, ಮಹೆಂದಳ ದೈವಗಳಿಗೆ ಕೋಲ ಕಟ್ಟುತ್ತಾರೆ.

ಆಭರಣಗಳು – ವೇಷಭೂಷಣಗಳು:

ಬೇರೆ ಬೇರೆ ದೈವಗಳಿಗೆ ಬೇರೆ ಬೇರೆ ಮುಖವಾಡಗಳೂ ಆಭರಣಗಳೂ ಇರುವುವು. ಎಲ್ಲ ವೇಷಗಳಿಗೆ ಸಾಮಾನ್ಯವಾದ ಕೆಲವು ಆಭರಣಗಳೂ ಇವೆ.

ಭೂತದ ವೇಷದಲ್ಲಿ ಮುಖ್ಯವಾದ ಅಲಂಕಾರ ಅಣಿ. ಇದು ಹೆಚ್ಚು ಕಡಿಮೆ ಅಶ್ವತ್ಥ ಎಲೆಯ ಆಕಾರದಲ್ಲಿ ಇರುವುದು. ಅಡಿಕೆ ಹಾಳೆಗಳನ್ನು ಕ್ರಮಬದ್ಧವಾಗಿ ಜೋಡಿಸಿ ಬಣ್ಣ ಬಳಿಯುತ್ತಾರೆ. ಇದು ಬೆನ್ನಿಗೆ ಕಟ್ಟುವ ಅಣಿ. ದೇಹದ ಮುಂಭಾಗಕ್ಕೆ ಕಟ್ಟುವ ಅಣಿ ಅರ್ಧ ಚಂದ್ರಾಕಾರದಲ್ಲಿ ಇರುತ್ತದೆ.

ಇಲ್ಲಿಯೂ ಸಹ ಹಾಳೆಯನ್ನು ಜೋಡಿಸಿ ಕಟ್ಟುವುದಿದೆ. ಇದಕ್ಕೆ ಬೆಳ್ಳಿಯ ಕವಚವೂ ಇರುತ್ತದೆ. ಇದಕ್ಕೆ 'ಜಕ್ಕೆಲಣಿ' ಎಂದು ಹೇಳುತ್ತಾರೆ.

ಕಾಲಿಗೆ ಗಗ್ಗರ, ಸೊಂಟಕ್ಕೆ ತೆಂಗಿನ ಸಿರಿ, ಸೊಂಟ ಪಟ್ಟಿ, ಮುಂತಾದ ಆಭರಣಗಳು ಸಾಮಾನ್ಯ ವಾಗಿ ಎಲ್ಲ ದೈವಗಳಿಗೂ ಕಂಡುಬರುವ ಆಭರಣಗಳು.

ಕೊರತ್ತಿ ವೇಷದವನು ವಿಭೂತಿ ಬಳಿದುಕೊಂಡು ಕಣ್ಣಿಗೆ ಕಾಡಿಗೆ ಬಳಿದುಕೊಳ್ಳುವನು. ಕೊರಗ ತನಿಯ ವೇಷದವನು ಮೈಗೆ ಬಿಳಿಯ ಪಟ್ಟೆಯನ್ನು ಸುತ್ತಿಕೊಂಡರೆ ಕಲ್ಕುಡ್ಕ ವೇಷದವನು ಕೆಂಪು ನಿಲುವಂಗಿಯನ್ನೂ, ಕೊರ್ದಬ್ಬು ದೈವದವನು ಪಾಹಿಜಾಮಾ ರೀತಿಯ ಸುರುವಾಲು ತೊಡುವುದನ್ನೂ ಕಾಣಬಹುದು. ಕೊರಗ ತನಿಯನ ತಲೆಗೆ ಚಿನ್ನದ ಮುಟ್ಟಾಳೆ, ಪಂಜುರ್ಲಿಯ ತಲೆಗೆ ಪೇಟಗಳನ್ನು ತೊಡಿಸುತ್ತಾರೆ. ಕೈಯಲ್ಲಿ ಖಡ್ಗವನ್ನೋ ಬೆಳ್ಳಿಯ ಬೆತ್ತಗಳನ್ನೋ ಹಿಡಿಯುವುದೂ ಇದೆ. ತೋಳಿಗೆ ವಂಕಿ, ಕೈಗೆ ಬಳೆಗಳನ್ನು ತೊಡುವ ದೈವಗಳೂ ಇವೆ.

ಜುಮಾದಿಗೆ ಸ್ತನಗಳಿರುವ ಎದೆ ಕವಚ ಮತ್ತು ಮೀಸೆಗಳುಳ್ಳ ಕಂಚಿನ ಮುಖವಾಡಗಳು ಕಂಡುಬಂದರೆ, ಪಂಜುರ್ಲಿಗೆ ಹಾಳೆಯ ಮುಖವಾಡವಿರುತ್ತದೆ. ಪಿಲಿಚಾಮುಂಡಿಗೆ ಕಂಚಿನ ಅಥವಾ ಬೆಳ್ಳಿಯ ಮುಖವಾಡಗಳೂ, ಉಳ್ಳಾಲ್ತಿಗೆ ಬಂಗಾರದ ಮುಖವಾಡವೂ ಇವೆ. ಪಿಲಿಚಾಮುಂಡಿಗೆ ಹುಲಿಯ, ಪಂಜುರ್ಲಿಗೆ ವರಾಹ, ಮುಖವಾಡಗಳಿದ್ದರೆ, ಮೈಸಂದಾಯನಿಗೆ ಕೊಂಬುಗಳಿರುತ್ತವೆ. ಹೀಗೆ ಪ್ರತಿಯೊಂದು ಆಭರಣವೂ ಜನಪದ ಕಲೆಗೆ ಉತ್ತಮ ಉದಾಹರಣೆಗಳಾಗಿವೆ. ಅವುಗಳ ಹಿಂದೆ ಜನಪದ ನಂಬಿಕೆಗಳು ಮತ್ತು ಭಾವನೆಗಳು ವ್ಯಕ್ತವಾಗುತ್ತವೆ.

ಕೋಲಗಳಲ್ಲಿ ಗ್ರಾಮದ ಕೋಲ ಮತ್ತು ಮನೆತನದ ಕೋಲಗಳೆಂಬ ಎರಡು ಬಗೆಗಳು ಇವೆ. ಗ್ರಾಮದ ವಿವಿಧ ವರ್ಗಗಳು ಕೂಡಿ ಆಚರಿಸುವ ಕೋಲವು ಗ್ರಾಮದ ಕೋಲ. ಕೆಲವು ಮನೆತನಗಳು ತಮ್ಮ ಮನೆಯ ಅಂಗಣದಲ್ಲಿ ಅಥವಾ ಭೂತಸ್ಥಾನಗಳ ಮುಂದೆ ಕೋಲ ಕಟ್ಟುವುದೂ ರೂಢಿ ಯಲ್ಲಿದೆ.

ಭೂತ ಸ್ಥಾನ: ತುಳುವಿನಲ್ಲಿ 'ಸಾನ' ಎಂದು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತ ಸ್ಥಾನವಿರದ ಹಳ್ಳಿಯೇ ಇಲ್ಲ. ಇದು ಒಂದು ಕೋಣೆಯಂತಿರುತ್ತದೆ. ಈ ಕೋಣೆಯಲ್ಲಿ ಒಂದು ಮಂಚ ವಿರುವುದು. ಇದಕ್ಕೆ 'ಭೂತದ ಮಂಚ' ಎಂದೇ ಹೇಳುತ್ತಾರೆ. ಮನುಷ್ಯರ ಇಲ್ಲವೇ ಪ್ರಾಣಿಗಳ ರೂಪದಲ್ಲಿರುವ ಹಿತ್ತಾಳಿಯ ಕೆಲವು ಗೊಂಬೆಗಳು ಕೂಡಾ ಇಲ್ಲಿರುತ್ತವೆ. ಹುಲಿ, ಹಂದಿ, ಕೋಣ, ಎತ್ತು ಮುಂತಾದ ಪ್ರಾಣಿಗಳ ಮುಖವಾಡಗಳನ್ನು ಕೂಡ ಇಲ್ಲಿ ಕಾಣಬಹುದು. ಈ ಭೂತಗುಡಿಗೆ ಆಲಡೆ, ಗರಡಿ ಎಂದು ಮುಂತಾಗಿ ಹೇಳುವುದುಂಟು. ಕೆಲವು ಕೋಲಗಳು ಪ್ರತಿವರ್ಷ ನಿಶ್ಚಿತ ಮಿತಿಯಲ್ಲಿ ನಡೆಯುವವು. ವಿಶೇಷ ಹರಕೆಗಳನ್ನು ಹೇಳಿಕೊಂಡು ಸಲ್ಲಿಸುವ ಕೋಲಗಳೂ ಇವೆ.

ಆಚರಣೆಯ ಪರಿ: ಕೋಲದ ಮೊದಲು 'ಮಣ್ಣು ಮುಹೂರ್ತ' ಎಂಬ ವಿಧಿ ಜರಗುವುದು. ಕೋಲ ಕಟ್ಟುವವರು, ಪೂಜಾರಿ ಮುಂತಾದವರು ಅಂದು ಮುಂಚಿತವಾಗಿಯೇ ಬರುತ್ತಾರೆ. ಭೂತದ ಆಭರಣಗಳು, ದೀವಟಿಗೆ, ಸತ್ತಿಗೆ ಮುಂತಾದವುಗಳನ್ನು ಕೋಲಕ್ಕಾಗಿ ಕಟ್ಟುವ ಚಪ್ಪರಕ್ಕೆ ತರುತ್ತಾರೆ.

ಭೂತದ ವೇಷ ಹಾಕುವವನು ಮುಖ್ಯಸ್ಥರೊಡನೆ ಎಣ್ಣೆ ಹಚ್ಚಿಕೊಳ್ಳಲು ಅಪ್ಪಣೆ ಕೇಳುತ್ತಾನೆ. ಪಾಡ್ದನವನ್ನು ಹೇಳುವಾಗಲೇ ವೇಷವನ್ನು ಕಟ್ಟಿಕೊಳ್ಳುತ್ತಾನೆ. ಮುಖಕ್ಕೆ ಅರದಾಳವನ್ನು ಬಡಿದು ಕೊಳ್ಳುತ್ತಾನೆ. ಆಭರಣಗಳನ್ನು ತೊಡುತ್ತಾನೆ. (ಬೇರೆ ಬೇರೆ ದೈವಗಳಿಗೆ ತಕ್ಕ ಆಭರಣಗಳು ಇರುತ್ತವೆ

ಎಂಬುದನ್ನು ನೋಡಿದ್ದೇವೆ) ಕೈಗಳಿಗೆ ಕೇಪಳ ಹೂವಿನ ಮಾಲೆಯನ್ನು ಸುತ್ತಿಕೊಳ್ಳುತ್ತಾನೆ. ಸೊಂಟಕ್ಕೆ ತೆಂಗಿನಸಿರಿಯನ್ನು ಬಿಗಿದುಕೊಳ್ಳುತ್ತಾನೆ. ಹೀಗೆ ವೇಷ ಕಟ್ಟುವವನು ಸಜ್ಜಾಗಿ ನಿಲ್ಲಬೇಕು.

ರಾತ್ರಿ ಸುಮಾರು 9 ಅಥವಾ 10 ಘಂಟೆಯ ವೇಳೆಗೆ ಪೂಜಾರಿಯು ಕೈಯಲ್ಲಿ ಗಂಟೆ ಮತ್ತು ಖಡ್ಗಗಳನ್ನು ಹಿಡಿದು ಹೊರಬರುತ್ತಾನೆ. ಅಲ್ಲಿ ನೆರೆದ ಜನರು ಅವನ ಮೇಲೆ ಅಕ್ಕಿಕಾಳು ಎರಚುತ್ತಾರೆ. ಆಗ ಅವನಲ್ಲಿ ಭೂತ ಸಂಚಾರವಾಗುತ್ತದೆ. ಅವನು 'ಮದಿಪಿ'ಗೆ ಕೋಲವನ್ನು ಸುಸೂತ್ರವಾಗಿ ನಡೆಸಿ ಕೊಡುವ ಅಭಯವನ್ನು ನೀಡುತ್ತಾನೆ. ಈ ಪಾತ್ರಿಗೂ, ದುಭಾಷಿಗೂ ಮಧ್ಯೆ ಸಂಭಾಷಣೆ ನಡೆಯುತ್ತದೆ. ಈ ಮಾತುಕತೆಗಳು ಸ್ವಾರಸ್ಯಕರವಾಗಿರುತ್ತವೆ. ಸಾಹಿತ್ಯದ ಸೊಬಗು, ಇಲ್ಲಿ ಕಂಡುಬರುತ್ತದೆ.

ಪಾತ್ರಿಯು ವೇಷಧಾರಿಯನ್ನು ಸಂಧಿಸಿದೊಡನೆ ಪ್ರಾರ್ಥನೆಯಾಗುತ್ತದೆ. ವಾದ್ಯದವರು ವಾದ್ಯ ವನ್ನು ಬಾರಿಸುತ್ತಾರೆ. ಗಗ್ಗರ ಇಟ್ಟೊಡನೆ ಭೂತದ ಆವೇಶ ಬಂದು ಕುಣಿತವು ಪ್ರಾರಂಭವಾಗುತ್ತದೆ. ಈ ಆವೇಶದ ಸಮಯದಲ್ಲಿ ಕತ್ತಿಯನ್ನು ಶರೀರಕ್ಕೆ ತಾಗಿಸಿಕೊಳ್ಳುವುದು, ದೊಂದಿಯನ್ನು ಎದೆಯ ಮೇಲಿಟ್ಟುಕೊಳ್ಳುವುದೇ ಮುಂತಾದ ಚಮತ್ಕಾರಗಳು ಸಾಗುತ್ತವೆ. ಅರ್ಧ ಗಂಟೆಯ ವರೆಗೆ ಈ ಕುಣಿತ ಸಾಗುತ್ತದೆ. ಆಗ ಭಕ್ತರು ತಮ್ಮ ಕಷ್ಟಗಳಿಗೆ ಪರಿಹಾರ ಕೇಳಿಕೊಳ್ಳುವ ಕ್ರಮವಿದೆ. ಆವೇಶ ಬರಿಸುವ ವಾದ್ಯಕ್ಕೆ ಸರಿಯಾಗಿ ವೇಷಧಾರಿ ಕುಣಿಯುತ್ತಾನೆ. ಕೆಲವರಿಗೆ ಪ್ರಜ್ಞೆತಪ್ಪುವುದೂ ಇದೆ. ಆಗ ಮುಕಾಲ್ದಿ ತೀರ್ಥ ಚಿಮುಕಿಸುತ್ತಾನೆ. ವೇಷಧಾರಿಗೆ ಈಗ ಸ್ವಲ್ಪ ವಿಶ್ರಾಂತಿ.

ವಾದ್ಯದವರಿಗೆ ತೆಂಗಿನಕಾಯಿ ನೀಡುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ಭೂತ ವೇಷಧಾರಿ ಕೈಯಲ್ಲಿ ಅಡಿಕೆಯ ಹಿಂಗಾರವನ್ನು ಹಿಡಿದು ಸುಮಾರು ಒಂದು ತಾಸಿನ ವರೆಗೆ ಕುಣಿಯುತ್ತಾನೆ. ಕಾರ್ಕಳದ ತೆಲ್ಲಾರಿನಲ್ಲಿ ನಡೆಯುವ ಕಲ್ಕುಡ ಭೂತಕೋಲದಲ್ಲಿ ಐತು ಎನ್ನುವ ವೇಷಧಾರಿಯು ಮನರಂಜನೀಯ ವಾಗಿ ಭೂತದ ಕುಣಿತವನ್ನು ಕುಣಿಯುತ್ತಾನೆ. ಹಂದಿಯಂತೆ ನಿಧಾನವಾಗಿ ಹೆಜ್ಜೆಯನ್ನಿಡುತ್ತ ಕುಣಿಯುವ ಪಂಜುರ್ಲಿ ಭೂತ ವೇಷವನ್ನು ಕಾರ್ಕಳದ ಕಾಳಿಕಾಂಬಾ ದೇವಾಲಯದ ಕೋಲದಲ್ಲಿ ನೋಡಬಹು ದಾಗಿದೆ. ಮಿಜಾರಿನ ಕೋಲಕಟ್ಟುವ ಗಂಗಯ್ಯ, ಕುಟ್ಟಿ, ಜಾರಪ್ಪ ಇವರು ವೇಷಧರಿಸಿ ಕುಣಿಯುವಾಗ, ಕುಣಿತದಲ್ಲಿ ಮೋಹಕ ಶೈಲಿ-ಭಂಗಿಗಳನ್ನು ಗುರುತಿಸಬಹುದು. ಬೊಬ್ಬರ್ಯನ ಕುಣಿತ ಕೂಡ ಮೋಹಕವಾಗಿದೆ.

ಹೀಗೆ ಎರಡನೆಯ ಪ್ರವೇಶ ಮುಕ್ತಾಯವಾಗಿ ಕೊನೆಯ ಪ್ರವೇಶಕ್ಕೆ ಸಿದ್ಧತೆಯಾಗುತ್ತಿರುತ್ತದೆ. ಅಣಿಯನ್ನು ಬೆನ್ನಿಗೆ ಕಟ್ಟುತ್ತಾರೆ. ಸೊಂಟಕ್ಕೆ 'ಜಕ್ಕಿದಣೆ'ಯನ್ನು ಕಟ್ಟುತ್ತಾರೆ. ಕೊನೆಯ ಪ್ರವೇಶದಲ್ಲಿ ವೇಷ ಮುಖವಾಡ ಧರಿಸಿ ಗತ್ತಿನಿಂದ ಹೆಜ್ಜೆಹಾಕುತ್ತ ಕುಣಿಯುತ್ತದೆ. ಕೊನೆಗೆ ಭೂತಬಲಿಯನು ಕೊಡುತ್ತಾರೆ. ಕಲ್ಕುಡನಾದರೆ ಕೋಳಿಯ ಕತ್ತು ಚೀಪುವುದು, ಜುಮಾದಿಯ ಬಂಟನು ಹರಕೆ ಕೋಳಿ ಗಳನ್ನು ಕಡಿಯುವುದು ಕೆಲಸಮಯ ನಡೆಯುತ್ತದೆ. ಕೆಲವು ದೈವಗಳಿಗೆ ರಕ್ತಬಲಿ ನೀಡಿದರೆ ಇನ್ನು ಕೆಲವು ದೈವಗಳು ಸಾತ್ವಿಕ ಆಹಾರವನ್ನು ಮಾತ್ರ ಇಚ್ಛಿಸುತ್ತದೆ. ಅನಂತರ ಪ್ರಸಾದ ವಿತರಣೆಯಾಗುತ್ತದೆ ದೈವವು ಭಕ್ತಾದಿಗಳನ್ನು ಹರಸುತ್ತದೆ. ಅನಂತರ ಅಕ್ಕಿ ಕಾಳುಗಳನ್ನು ವೇಷಧಾರಿಯ ಮೇಲೆ ಎರಚಿದ ಕೂಡಲೇ ಭೂತದ ಆವೇಶ ಬಿಟ್ಟುಹೋಗುವುದು.

ಹೀಗೆ ಜನ ತಾವು ನಂಬಿದ ದೈವವನ್ನು ಸಂಪ್ರೀತಗೊಳಿಸಿ, ತಮ್ಮ ಜೀವನವನ್ನು ಹಸನಗೊಳಿಸಿ ಕೊಳುತ್ತಾರೆ.

ಗ್ರಾಮದೈವಗಳಿಗೆ ನಡೆಸುವ ಸೇವೆಗೆ 'ನೇಮ' ಎಂದು ಹೇಳುತ್ತಾರೆ. ಇಲ್ಲಿ 'ಕೊಡಿ' ಏರಿಸುವ ಕ್ರಮವಿದೆ. 'ಕೊಡಿ' ಎಂದರೆ ಧ್ವಜ. 'ಅಗೆಲು', 'ಪರ್ವ' ಮುಂತಾದವುಗಳು ಭೂತಗಳಿಗೆ ನಿವೇದಿಸುವ ಎಡೆಗಳು.

ಕೋಲದಿಂದಾಗುವ ಪ್ರಯೋಜನಗಳು: ಕೋಲವು ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯ ಗಳಿಂದ ಕೂಡಿದ ಕಾರ್ಯಕ್ರಮವಾಗಿದೆ.

ಕೋಲದ ಸೇವೆ ಸಲ್ಲಿಸಿ ದೈವವನ್ನು ಸಂಪ್ರೀತಗೊಳಿಸುವುದರಿಂದ, ಸಾಕುಪ್ರಾಣಿಗಳು, ಬೆಳೆ, ಸಂಪತ್ತುಗಳು ವೃದ್ಧಿಯಾಗುವುದೆಂಬ ನಂಬಿಗೆ ಹಳ್ಳಿಗರಲ್ಲಿದೆ.

ಗ್ರಾಮ ಕೋಲಗಳೇ ಮೊದಲಾದ ಸಂದರ್ಭಗಳಲ್ಲಿ ಊರಿನ ಎಲ್ಲ ವರ್ಗಗಳ ಜನರು ಒಟ್ಟಾಗಿ ಕಲೆತು ತಮ್ಮ ಬೇಕುಬೇಡಗಳನ್ನು ಪರಸ್ಪರ ಚರ್ಚಿಸುವ ಅವಕಾಶ ದೊರೆಯುತ್ತದೆ. ನಾಪಿತ, ಕುಂಬಾರ ಮಡಿವಾಳ, ಹರಿಜನರೇ ಮೊದಲಾದ ಎಲ್ಲ ವರ್ಗಗಳ ಜನರು ಒಂದುಗೂಡಿ, ಹೊಂದಾಣಿಕೆಯಿಂದ, ಕೆಲಸಕಾರ್ಯಗಳನ್ನು ಸಾಗಿಸಬೇಕು; ಸಮಾಜದಲ್ಲಿ ವರ್ಗ-ವರ್ಗಗಳಲ್ಲಿ ಇರುವ ಅಂತರಗಳನ್ನು ಕಡಿಮೆ ಮಾಡಲು ಸಹಾಯವಾಗಬಲ್ಲ ಒಂದು ಸಾಧನವಾಗಿದೆ ಈ ಕೋಲ.

ಕೆಲವು ದೈವಗಳು ಮುಸಲ್ಮಾನ ಮೂಲದವುಗಳೆಂದು ಹೇಳುತ್ತಾರೆ. ಉದಾಹರಣೆಗಾಗಿ ಜುಮಾದಿಯನ್ನು ಶುಕ್ರವಾರದ ಅಮ್ಮ ಎಂದು ಕರೆಯುವರಷ್ಟೆ. ಇದು ಮುಸಲ್ಮಾನ ಮೂಲಕ್ಕೆ ಸೇರಿರಬಹುದೆಂಬ ಹೇಳಿಕೆಯಿದೆ. ಅದರಂತೆ ಮುಸಲ್ಮಾನನೊಬ್ಬನ ಮರಣದ ನಂತರ ಅವನು, 'ಬೊಬ್ಬರ್ಯ' ದೈವವಾದನೆಂಬ ಪ್ರತೀತಿಯಿದೆ. (ಉತ್ತರ ಕನ್ನಡದ ಬಬ್ರು ದೇವನು ಬೊಬ್ಬರ್ಯ ನಾಗಿರಬಹುದು). ಹೀಗೆ ಈ ಕೋಲವು ಎರಡು ಧರ್ಮಗಳ ಜನರನ್ನು ಹತ್ತಿರ ತರಲು ಆಸ್ಪದವನ್ನೀಯುವ ಒಂದು ಕಾರ್ಯಕ್ರಮವಾಗಿದೆ.

ಕೋಲದಲ್ಲಿ ಅನುಸರಿಸುವ ಕೆಲವು ನಿಯಮಗಳು, ಗ್ರಾಮಕೋಲದಲ್ಲಿ ಎಲ್ಲ ಮನೆಗಳೂ ವಂತಿಗೆ ನೀಡುವುದು, ನ್ಯಾಯ ತೀರ್ಮಾನ, ದೈವದ ಕುರಿತು ಇರುವ ಭಯ, ಮುಂತಾದವುಗಳು ಸಮಾಜದಲ್ಲಿ ಆರೋಗ್ಯಕರ ವಾತಾವರಣವನ್ನು ನಿರ್ಮಿಸಬಲ್ಲುದು.

ಕೋಲದಲ್ಲಿ ಹೇಳುವ ಪಾಡ್ದನಗಳು, ಸಾಹಿತ್ಯದೃಷ್ಟಿಯಲ್ಲಿ ಮಹತ್ವದ್ದಾಗಿವೆ. ಪಾಡ್ದನಗಳು ಜನಪದ ಸಾಹಿತ್ಯಕ್ಕೆ ಮಹತ್ವವಾದ ದೇಣಿಗೆಗಳಾಗಿವೆ.

ಜನಪದ ಕಲೆಗಳನ್ನು ಉಳಿಸಬಲ್ಲ ಒಂದು ಕಾರ್ಯಕ್ರಮ ಕೋಲವೆನ್ನಬಹುದು. ವಿಶಿಷ್ಟವಾದ ಬಡವರ-ಶ್ರೀಮಂತರ ಆಭರಣಗಳು, ಮುಖವಾಡಗಳು, ಅಣಿಗಳು ಮುಂತಾದವುಗಳೆಲ್ಲ ಜನಪದ ಕಲೆಗೆ ತುಳುನಾಡಿನ ಕಾಣಿಕೆಗಳೆಂದು ಹೇಳಬಹುದು.

ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ವಿವಿಧ ತೆರನಾದ ನೃತ್ಯಗಳಿಗೆ ಇಂದು ಬೇರೆಡೆ ಅವ ಕಾಶವಿಲ್ಲದಿರುವಾಗ, ಕೋಲಗಳ ಮುಖಾಂತರವಾಗಿ, ಈ ನೃತ್ಯಕಲೆಗಳು ರಕ್ಷಿಸಲ್ಪಟ್ಟಿವೆಯೆಂದು ಹೇಳ ಬಹುದು.

ಹೀಗೆ ದಕ್ಷಿಣ ಕನ್ನಡದ ಕೋಲ ಕರ್ನಾಟಕ ಸಂಸ್ಕೃತಿಯಲ್ಲಿ ಪ್ರಾಮುಖ್ಯ ಸ್ಥಾನ ಗಳಿಸಿದೆ ಎಂಬು ದರಲ್ಲಿ ಸಂಶಯವಿಲ್ಲ.

ಕೋಳಿ ಅಂಕ

ಕೋಳಿ ಅಂಕ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳಲ್ಲಿ ಕಾಣಸಿಗುವ ಬಡಜನತೆಯ ಒಂದು ಮನೋರಂಜನಾ ಕಾರ್ಯಕ್ರಮ. ಕೋಳಿಗಳ ಕಾದಾಟವನ್ನು ಏರ್ಪಡಿಸುವ ಪದ್ಧತಿ ವಿದೇಶಗಳಲ್ಲಿ ಕೂಡಾ ಜನಪ್ರಿಯವಾಗಿತ್ತು. ಜಾತ್ರೆಗಳು, ಕೋಲ, ನೇಮ, ಕಂಬಳ ಮುಂತಾದ ಉತ್ಸವಗಳ ಅನಂತರ ಕೋಳಿ ಅಂಕಗಳನ್ನು ನಡೆಸುವುದು ರೂಢಿ. ಕೋಳಿ ಅಂಕಗಳ ಮೂಲಕ ಮಾರಿಗೆ ರಕ್ತತರ್ಪಣ ನೀಡಿದಂತೆ ಆಗುವುದೆಂಬ ನಂಬಿಗೆಯೂ ಇದೆ. ದೀಪಾವಳಿ, ಸಂಕ್ರಾಂತಿ, ಚವತಿ ಮುಂತಾದ ಹಬ್ಬಗಳ ಸಮಯದಲ್ಲಿ ಕೂಡಾ ಕೋಳಿ ಅಂಕಗಳನ್ನು ಆಡುವುದು ರೂಢಿಯಲ್ಲಿತ್ತು. ಈಗ ವರ್ಷದುದ್ದಕ್ಕೂ ಈ ಅಂಕಗಳು ನಡೆಯುತ್ತಲೇ ಇರುತ್ತವೆ.

ಕೋಳಿಗಳ ಕಾದಾಟವನ್ನು ಕಂಡು ಹೊಸೆದ ಅನೇಕ ಗಾದೆಗಳೂ ಇವೆ. ಉದಾಹರಣೆಗಾಗಿ ಅಂಕಕ್ಕೆ ಕಟ್ಟಿದ ಕೋಳಿ', 'ಉರಿಸಿಟ್ಟಿನ ಕೋಳಿ' ಎಂದು ಮುಂತಾಗಿ ಛಲದಿಂದ ಹೋರಾಡುವವರನ್ನು ಕುರಿತು, ಜಗಳವಾಡುವವರ ಕುರಿತು ಜನರು ಹೇಳುವುದುಂಟು.

ಅಂಕಕ್ಕೆ ಕಟ್ಟುವ ಕೋಳಿ ಹುಂಜಗಳನ್ನು ಬಹಳ ಕಾಳಜಿಯಿಂದ ಸಾಕುತ್ತಾರೆ. ಅವುಗಳಲ್ಲಿ ಈರ್ಷೆ ಹೆಚ್ಚಲು ಬೆಣ್ಣೆ-ಬೆಲ್ಲ, ನೀರುಳ್ಳಿ-ಮೆಣಸುಗಳನ್ನು ಎಣ್ಣೆಯಲ್ಲಿ ಕಾಯಿಸಿ ಕೊಡುತ್ತಾರೆ. ಹಲ್ಲಿ, ಕಪ್ಪೆ, ಹುಳ-ಹುಪ್ಪಡಿಗಳನ್ನು ತಿನ್ನಿಸುವುದೂ ಉಂಟು.

ಅಂಕಕ್ಕೆ ಕಟ್ಟುವ ಕೋಳಿಗಳ ಕಾಲಿಗೆ ಹರಿತವಾದ ಚೂರಿಯಂಥ ಆಯುಧವನ್ನು ಕಟ್ಟುತ್ತಾರೆ. ಇದಕ್ಕೆ ಕೋಳಿಕತ್ತಿ (ಬಾಳ್) ಎನ್ನುತ್ತಾರೆ. ಇದು ಹರಿತವಾಗಿದ್ದು, ನಾಲ್ಕು ಇಂಚಿನಷ್ಟು ಉದ್ದವಿರುತ್ತದೆ; ಮಡಚಿದ ತೊಡೆಯ ಆಕಾರದಲ್ಲಿರುವುದು. ಹಿಂದಿನ ಕಾಲದಲ್ಲಿ ಬೆಳ್ಳಿಯ ಮೊನೆಗಳನ್ನು ಕಟ್ಟುತ್ತಿದ್ದರಂತೆ. ಕ್ಯೂಬಾ ದೇಶದಲ್ಲಿ ಎಲುಬಿನ ಮೊನೆಗಳನ್ನು ಕಟ್ಟುತ್ತಾರೆ.

ಬಾಳ್‌ಗಳಲ್ಲಿ ಅನೇಕ ವಿಧಗಳು ಇರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳು —

1) ಬಡಕ್ಕಾಯಿ ಬಾಳ್ (ಉತ್ತರದ ಕೋಳಿಕತ್ತಿ)

2) ತೆಂಕಾಯಿ ಬಾಳ್ (ದಕ್ಷಿಣದ ಕೋಳಿಕತ್ತಿ)

3) ನಾಗರ ಕಿರ್ಸ (ಅಂಕುಡೊಂಕಾದ ಕತ್ತಿ)

4) ಇಟ್ಟಿಮುಳ್ಳು (ಕೊಕ್ಕೆಯಾಕಾರದ ಕತ್ತಿ)

ಮುಂತಾದವುಗಳನ್ನು ಹೆಸರಿಸಬಹುದು. 'ಉರಿಬಾಳ್' 'ವಿಷಬಾಳ್'ಗಳೂ ಇವೆ.

ಅಂಕಗಳ ವಿಧಗಳು

ಕೋಳಿ ಅಂಕಗಳಲ್ಲಿ ಮುಖ್ಯವಾಗಿ 'ಭಾಗದ ಕಟ್ಟ' ಮತ್ತು 'ಬಹುಮಾನ ಕಟ್ಟ' ಎಂಬ ಎರಡು ರೀತಿಯ ಕಟ್ಟಗಳು ಇವೆ.

1) ಭಾಗದ ಕಟ್ಟ: ಜಾತ್ರೆಗಳಿಗೆ ಬರುವ ಅತಿಥಿಗಳು ಇದರಲ್ಲಿ ಭಾಗವಹಿಸುತ್ತಾರೆ. ಹಿಂದಿನ ಕಾಲದಲ್ಲಿ ಬೀಗರ ಬಲವನ್ನು ಪರೀಕ್ಷಿಸಲು ಅವರನ್ನು ಕೋಳಿ ಅಂಕಕ್ಕೆ ಆಹ್ವಾನಿಸುತ್ತಿದ್ದರು. ಅವರು ತರುವ ಕೋಳಿಯ ಬಲಕ್ಕೆ ಅನುಸಾರವಾಗಿ ಅವರ ಬಲಪರೀಕ್ಷೆಯಾಗುತ್ತಿತ್ತು. ಈ ಕಟ್ಟದಲ್ಲಿ ಎದುರಾಳಿ ಕೋಳಿ ಸೋತರೂ, ಅದರ ಅರ್ಧಮಾಂಸವನ್ನು ಸೋತವರಿಗೆ ನೀಡುತ್ತಾರೆ. ಕೋಳಿಯ ಕಾಲಿಗೆ ಒಮ್ಮೆ ಚೂರಿಯನ್ನು ಕಟ್ಟಿದರೆ ಬಿಚ್ಚುವಂತಿಲ್ಲ. ಚೂರಿಯ ಮೊನೆ ತುಂಡಾದರೆ ಮಾತ್ರ ಬಿಚ್ಚಬಹುದು. ಕೋಳಿಗಳ ಶುಶ್ರೂಷೆಯನ್ನೂ ಮಾಡುವಂತಿಲ್ಲ.

2) ಬಹುಮಾನ ಕಟ್ಟ: ಇದು ಆಧುನಿಕ ರೀತಿಯದು. ಪಾರಿತೋಷಕಕ್ಕಾಗಿ ಕೋಳಿ ಅಂಕಗಳನ್ನು ಇಲ್ಲಿ ನಡೆಸಲಾಗುವುದು.

ಅಂಕಕ್ಕೆ ಹೊರಡುವಾಗ

ಕೋಳಿಯನ್ನು ಹಿಡಿದುಕೊಂಡು ಅಂಕಕ್ಕೆ ಹೊರಡುವವನು ಕೆಲವು ನಿಯಮಗಳನ್ನು ಪಾಲಿಸಬೇಕು.

1) ತಲೆಗೆ ಮುಂಡಾಸ ಸುತ್ತಬೇಕು;

2) ಮುಂಡಾಸದ ಎಡೆಯಲ್ಲಿ ಅಂಕದ ಚೂರಿಯನ್ನು ನೆಟ್ಟಿರಬೇಕು;

3) ಬಾಳ್ ಪೆಟ್ಟಿಗೆ, ಕೋಳಿಗೆ ನೀಡಲು ಅಕ್ಕಿ-ಸಕ್ಕರೆ ಮುಂತಾದವುಗಳನ್ನು ಜೊತೆಗೇ ಒಯ್ಯಬೇಕು.

ಶಕುನಗಳು

ಅಂಕಕ್ಕೆ ಹೊರಡುವವನು ಕೆಲವು ಶಕುನಗಳ ಮೇಲಿಂದ ತನ್ನ ಜಯಾಪಜಯಗಳನ್ನು ಮೊದಲೇ ನಿರ್ಧರಿಸುತ್ತಾನೆ. ಈ ಕುರಿತು ಕೆಲವು ನಂಬಿಕೆಗಳು ಹೀಗಿವೆ —

1) ಆತನು ಮನೆಯಿಂದ ಹೊರಟ ಮೇಲೆ ಏನಾದರೊಂದು ವಸ್ತುವನ್ನು ಬಿಟ್ಟೆನೆಂದು ಪುನಃ ಮನೆಗೆ ಬರುವುದು ಅಶುಭ;
2) ಮನೆಯಿಂದ ಹೊರಟ ಕೂಡಲೇ ಮನೆಯವರು ಆತನನ್ನು ಹಿಂದಕ್ಕೆ ಕರೆಯಬಾರದು;
3) ಯಾರಾದರೂ ಎಲ್ಲಿಗೆ? ಎಂದು ಕೇಳುವುದು ಅಶುಭ.
4) ತಾಳೆ ಮರವನ್ನು ಹತ್ತುವವನನ್ನು ಅವನು ಕಂಡರೆ ಶುಭ. ಇಳಿಯುವವನನ್ನು ಕಂಡರೆ ಅಶುಭ;
5) ಹೊಸ ಮಡಕೆ ಎದುರಾಗುವುದು ಅಶುಭ;
6) ಕಟ್ಟಿಗೆ ಹೊರೆ ಎದುರಾಗುವುದು ಅಶುಭ;
7) ಕೇರೆ, ಮುಂಗಸಿ, ನರಿಗಳನ್ನು ಕಂಡರೆ ಶುಭ.

ಹೀಗೆ ಕೆಲವು ನಂಬಿಕೆಗಳು ಇನ್ನಿತರ ಅನೇಕ ಶುಭಕೆಲಸಗಳಿಗೂ ಅನ್ವಯವಾಗುವವು.

ಕೋಳಿಗಳ ಬಣ್ಣಗಳಿಂದ ಅವುಗಳನ್ನು ಬೇರೆ ಬೇರೆ ಜಾತಿಗಳನ್ನಾಗಿ ವಿಂಗಡಿಸುವುದೂ ಇದೆ. ಕೋಳಿಗಳನ್ನು ಕಾದಾಡಿಸುವುದರಲ್ಲಿ ಕೆಲವರು ನಿಪುಣರಿರುತ್ತಾರೆ. ಅವರಿಗೆ 'ದೂದುಗಾರರು' ಎನ್ನುತ್ತಾರೆ.

ಜೂಜು ಕಟ್ಟುವುದು

ಕೋಳಿ ಅಂಕ ಜನಪ್ರಿಯವಾಗಲು ಕಾರಣವೇ ಜೂಜುಕಟ್ಟುವುದು. ಆ ದಿನ ಬೆಳಗಿನಿಂದಲೇ ಅಂಕ ನಡೆಯುವ ಸ್ಥಳಕ್ಕೆ ಕೋಳಿಗಳನ್ನು ತರುವವರ ತಂಡ ಬರುವುದನ್ನು ಕಾಣಬಹುದು. ಅಂಕದ ಸಮಯದುದ್ದಕ್ಕೂ —

ಆರಾಣೆ ಆರಾಣೆ ಆರಾಣೆಯಲ್ಲುಂಟಾ?
ಹತ್ತಾಣೆ ಹತ್ತಾಣೆ ಹತ್ತಾಣೆಯಲ್ಲುಂಟಾ?
ಹಾಂ ಸಮ ಸಮ ರೂಪಾಯಿ ಉಂಟಾ?

ಎಂದು ಮುಂತಾಗಿ ಬೊಬ್ಬೆಯು ಕೇಳಿಬರುತ್ತಿದೆ. ಸಾವಿಲಗಟ್ಟಲೆ ರೂಪಾಯಿಗಳನ್ನು ಪಂಥದಲ್ಲಿ ಕಟ್ಟುವುದೂ ಇದೆ.

ಕಾದಾಟ

ಚೂರಿಯನ್ನು ಕೋಳಿಗಳ ಬಲಗಾಲಿಗೆ ಹಿಂದಾಗಿ ಕಟ್ಟುತ್ತಾರೆ. ಅನೇಕ ಅಂಕಗಳನ್ನು ಕಂಡ ಕೋಳಿಗಳು ಅನುಭವದಿಂದ ಕಾದಾಡುತ್ತವೆ. ಚೂರಿಯಿಂದ ಕಾಲು ಗಾಯವಾದರೂ ಛಲದಿಂದ ಸೆಣಸಾಡುವ ಕೋಳಿಗಳನ್ನು ಕಾಣಬಹುದು.

ಹೀಗೆ ಈ ಕೋಳಿ ಅಂಕವು ಕಾರ್ಕಳದ ಪರಿಸರದಲ್ಲಿ ಜಿಲ್ಲೆಯ ಇತರ ಕಡೆಗಳಂತೆ ಬೃಹತ್ ಪ್ರಮಾಣದಲ್ಲಿ ನಡೆಯುವುದು. ಇಂದು ಸಾರಾಯಿ ಅಂಗಡಿಗಳಿಗೂ ಕೋಳಿ ಅಂಕಕ್ಕೂ ನಂಟು. ಸಾವಿರಾರು ರೂಪಾಯಿಗಳನ್ನು ಜೂಜಾಡಿ ಕಳೆದುಕೊಳ್ಳುವವರೂ ಇದ್ದಾರೆ. ಅಂಕ ನಡೆಯುವಷ್ಟೂ ದಿನ ಸಾವಿರಾರು ಜನರು ತಮ್ಮ ಉದ್ಯೋಗವನ್ನು ಬಿಟ್ಟು ಈ ಜೂಜಿನಲ್ಲಿ ತೊಡಗುತ್ತಾರೆ. ಇದರಿಂದ ಕೋಳಿ ಅಂಕವು ಒಂದು ಶಾಪ ಎಂದು ಹೇಳುವವರೂ ಇದ್ದಾರೆ.

ಕಾರ್ಕಳದ ಬೋಳ ಗ್ರಾಮದ ಬೆವರ್‌ತಳೆನ ಕಟ್ಟ ಜಿಲ್ಲೆಯಲ್ಲಿ ಮುಖ್ಯ ಕಟ್ಟಗಳಲ್ಲಿ ಒಂದಾಗಿತ್ತು. ಹಿಂದೆ ಕಾರ್ಕಳದ ಗಾಂಧಿ ಮೈದಾನಿನಲ್ಲಿ ಚೌತಿಯ ಮಾರನೆಯ ದಿನ ಐದು ದಿನಗಳ ಕಟ್ಟ ನಡೆಯುತ್ತಿತ್ತು. ಬಜಗೋಳಿಯಲ್ಲಿ ಪ್ರತಿ ವಾರವೂ ಕೋಳಿ ಅಂಕ ಇದೆ ಎಂಬುದಾಗಿ ಕೇಳಿದ್ದೇವೆ. ಕಡಂದಲೆಯಲ್ಲಿ ವರ್ಷದಲ್ಲಿ ಸತತವಾಗಿ ಮೂರು ತಿಂಗಳು ಈ ಕ್ರೀಡೆ ನಡೆಯುತ್ತದೆಯಂತೆ.

ಕಂಬಳ-ಕೋಲ-ಕೋಳಿ ಅಂಕಗಳು ಒಂದಕ್ಕೊಂದು ಪೂರಕವಾದವುಗಳು. ಸಾಮಾನ್ಯವಾಗಿ ಎಲ್ಲೆಲ್ಲಿ ಕಂಬಳ-ಕೋಲಗಳು ನಡೆಯುವವೋ ಅಲ್ಲೆಲ್ಲಾ ಮಾರನೆಯ ದಿನ ಕೋಳಿ ಅಂಕವನ್ನು ಆಡುತ್ತಾರೆ.

ಹೀಗೆ ಕಾರ್ಕಳ ಪರಿಸರದ ಜನಪದ ಜೀವನದಲ್ಲಿ ಯಕ್ಷಗಾನ, ಕಂಬಳ, ಭೂತಾರಾಧನೆಯ ಕೋಲ, ಮತ್ತು ಕೋಳಿ ಅಂಕಗಳು ಮುಖ್ಯವಾಗಿವೆ. ಇವು ಇಲ್ಲಿಯ ಸಂಸ್ಕೃತಿಯ ಪ್ರತಿಬಿಂಬಗಳೆಂದು ಹೇಳಬಹುದು. ಸಮಾಜದ ಎಲ್ಲ ವರ್ಗಗಳೂ ಸೇರಿ ಆಚರಿಸಲ್ಪಡುವ ಈ ಕಲೆ ಮತ್ತು ಕ್ರೀಡೆಗಳಿಗೆ ಅವುಗಳದೇ ಆದ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳಿವೆ.

ಗ್ರಂಥಋಣ

1. ಡಾ। ಕೆ. ಶಿವರಾಮ ಕಾರಂತ: 'ಯಕ್ಷಗಾನ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ., 1974.
2. ಎಂ. ಪ್ರಭಾಕರ ಜೋಶಿ: 'ಜಾಗರ', ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ.
3. ಡಾ। ಕೆ. ಎಂ. ಕೃಷ್ಣರಾವ್; 'ಯಕ್ಷಗಾನ ಸಾಹಿತ್ಯ', ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, 1956.
4. ಬೋಳ ಚಿತ್ತರಂಜನದಾಸ ಶೆಟ್ಟಿ: 'ಕಂಬಳ', 1983.
5. ಅ. ಗಣಪ್ಪಯ್ಯ ಅಲ್ಸೆ: 'ಯಕ್ಷಗಾನ ಕಲಾವಿದರು', ಮಯೂರ ಪ್ರಕಾಶನ, ಬೆಂಗಳೂರು, 1974.
6. ದಶಮಾನೋತ್ಸವ ಸ್ಮರಣ ಸಂಚಿಕೆ 'ಯಕ್ಷ ಕನ್ಯೆ', ಶ್ರೀ ಅನಂತ ಪದ್ಮನಾಭ ಯಕ್ಷಗಾನ ಕಲಾ ಮಂಡಳಿ, ಕಾರ್ಕಳ.
7. ಎನ್. ಮಾಲಿನಿ, 'ದಕ್ಷಿಣ ಕನ್ನಡದಲ್ಲಿ ಭೂತಾರಾಧನೆ', ಜಾನಪದ 5ನೇ ಸಂಚಿಕೆ.
8. ಲೀಲಾ ಭಟ್: 'ಭೂತಾರಾಧನೆ-ಶಕ್ತಿಪೂಜೆ', ರತ್ನಮಂಜೂಷ.
9. ಬೋಳ ಚಿತ್ತರಂಜನದಾಸ ಶೆಟ್ಟಿ: 'ಕೋಳಿ ಅಂಕ' (ಹಸ್ತಪ್ರತಿ).
10. ಪಿ. ವಾಮನ ಪ್ರಭು: 'ಕಾರ್ಕಳದಲ್ಲಿ ಯಕ್ಷಗಾನ' (ಹಸ್ತಪ್ರತಿ).
11. Report: Socio-Economic Survey of Karkala 1983-84. (Sri Bhuvanendra College, Karkala)
12. Report: Socio-Economic Survey of Rane Community-1984. (N.S,S. Unit: Sri Bhuvanendra College, Karkala)
13. ಡಾ। ಎಲ್. ಆರ್. ಹೆಗಡೆ: 'ತಿಮ್ಮಕ್ಕನ ಪದಗಳು'.
14. ಗೊ. ರು. ಚೆನ್ನಬಸಪ್ಪ: 'ಕರ್ನಾಟಕದ ಜನಪದ ಕಲೆಗಳು'.
15. 'ಕವಿಕಾವ್ಯ ಪರಂಪರೆ–8: ಯಕ್ಷಗಾನ', ಸಂ। ವಿ. ಸೀತಾರಾಮಯ್ಯ, ಐ. ಬಿ. ಎಚ್. ಪ್ರಕಾಶನ, 1975.
16. 'ಕುಂದದರ್ಶನ', ಸಂ। ಎ. ವಿ. ನಾವಡ: ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ.

ಸಾಮಾಜಿಕ ಪರಿಸ್ಥಿತಿ



ಬಿ. ಕೆ. ಸೂರ್ಯನಾರಾಯಣ, ಎಂ.ಎ.

ಶ್ರೀ ಭುವನೇಂದ್ರ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರು ಮತ್ತು ಮುಖ್ಯಸ್ಥರು; ಹದಿನೇಳು ವರ್ಷಗಳ ಅಧ್ಯಾಪನ (1967). ದೇಶ - ವಿದೇಶಗಳ ರಾಜಕೀಯ ವಿದ್ಯಮಾನಗಳನ್ನು ವಿಶ್ಲೇಷಿಸಿ, ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ.

ಕಾರ್ಕಳ ತಾಲೂಕಿನಲ್ಲಿ ಕಂಡು ಬರುವ ವಿವಿಧ ಜಾತಿ, ಪಂಥಗಳು, ಮತ ವ್ಯವಸ್ಥೆಗಳು, ನಂಬಿಕೆ - ನಡವಳಿಕೆಗಳು, ಕಲಾಕಾರ - ಕಲಾಸಂಸ್ಥೆಗಳು, ಸಾಮಾಜಿಕ - ರಾಜಕೀಯ - ಸಾಂಸ್ಕೃತಿಕ ರಂಗಗಳಲ್ಲಿ ದುಡಿದು ಹೆಸರಾದವರು – ಇವೇ ಮುಂತಾದ ಅಂಶಗಳು ಪ್ರಕೃತ ಲೇಖನದಲ್ಲಿ ನಿರೂಪಿತವಾಗಿವೆ.

ಸಾಮಾಜಿಕ ಪರಿಸ್ಥಿತಿ

ಸಾಮಾಜಿಕ ಪರಿಸ್ಥಿತಿ ಎಂಬ ಈ ನಿಬಂಧದಲ್ಲಿ ಕಾರ್ಕಳಕ್ಕೆ ಸಂಬಂಧಿಸಿದಂತೆ ಕ್ರಮವಾಗಿ ಸಾಮಾಜಿಕ ವ್ಯವಸ್ಥೆ, ಸಂಘ ಸಂಸ್ಥೆಗಳು ಧಾರ್ಮಿಕ ಕೇಂದ್ರಗಳು ಮತ್ತು ವಿಶಿಷ್ಟ ವ್ಯಕ್ತಿಗಳ ಒಂದು ಪರಿಚಯವನ್ನು ಮಾಡಿಕೊಡಲಾಗಿದೆ. ಭಿನ್ನ ಭಿನ್ನ ದೃಷ್ಟಿಗಳಿಂದ ನೋಡಿದಾಗ ಪ್ರತಿಯೊಂದು ಸಮಾಜ ತನ್ನದೇ ಆದ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವುದು ತಿಳಿದು ಬರುತ್ತದೆ. ಒಂದೇ ಪ್ರದೇಶದಲ್ಲಿ ವಾಸಿಸುವ ಜನತೆಯ ಆಚಾರ, ವಿಚಾರ, ವ್ಯವಹಾರಗಳಲ್ಲಿ ವಿವಿಧತೆಗಳು ಕಂಡುಬಂದು ಅವುಗಳ ಸಾಫಲ್ಯಕ್ಕಾಗಿ ರಚಿಸಿಕೊಂಡ ಸಂಘ ಸಂಸ್ಥೆಗಳು ಮತ್ತು ಸಂಬಂಧಿಸಿದ ಸಮಾಜಕ್ಕಾಗಲೀ ಜನತೆಗಾಗಲೀ ಶ್ರಮಿಸಿದ ವ್ಯಕ್ತಿಗಳ ಹಿರಿಮೆ ಇವುಗಳು ಸಾಮಾಜಿಕ ಪರಿಸ್ಥಿತಿಯ ಸಿದ್ಧ ವಸ್ತುಗಳಾಗಿವೆ. ಈ ನಿಬಂಧಕ್ಕೆ ಈ ಎಲ್ಲ ಅಂಶಗಳೂ ಆಧಾರವಾಗಿವೆ.

ಸಮಾಜ ವ್ಯವಸ್ಥೆ:-

ಗೌಡ ಸಾರಸ್ವತರು

ಕಾರ್ಕಳದ ಪ್ರಮುಖ ಸಮಾಜಗಳಲ್ಲಿ ಗೌಡ ಸಾರಸ್ವತ ಸಮಾಜ ವಿಶಿಷ್ಟವಾದುದು.

ಗೌಡ ಸಾರಸ್ವತ ಸಮಾಜ ಬಾಂಧವರು ಕಾರ್ಕಳಕ್ಕೆ ಗೋವಾದಿಂದ ಬಂದರೆಂಬ ಪ್ರತೀತಿಯಿದೆ ಇಂದೂ ಕೂಡ ಗೋವಾದ ಗೌಡ ಸಾರಸ್ವತ ಸಮಾಜದವರ ಜತೆ ಇವರಿಗೆ ಒಳ್ಳೆಯ ಸಂಪರ್ಕವಿದೆ. ಗೋವಾದಲ್ಲಿರುವ ಗೌಡ ಸಾರಸ್ವತ ದೇವ ಮಂದಿರಗಳಿಗೆ ಈಗಲೂ ಕೂಡ ಯಾತ್ರಾರ್ಥಿಗಳು ಹೋಗುತ್ತಾರೆ. ಆದುದರಿಂದ ಕಾರ್ಕಳದ ಗೌಡಸಾರಸ್ವತರ ಪೂರ್ವಿಕರು ಹಿಂದೆ ಗೋವಾದಲ್ಲಿ ನೆಲೆಸಿದ್ದರು ಎಂದು ಸುಲಭವಾಗಿ ಊಹಿಸಬಹುದಾಗಿದೆ.

ಮೂಲತಃ ಗೌಡ ಸಾರಸ್ವತರು ಸ್ಮಾರ್ತರು. ಶಿವಶಕ್ತಿಗಳು ಇವರ ಕುಲದೇವತೆಗಳು. ಈಗಲೂ ಕೂಡ ಗೌಡ ಸಾರಸ್ವತ ಬ್ರಾಹಣ ಸಮುದಾಯದಲ್ಲಿ ವೈಷ್ಣವರನ್ನೂ, ಸ್ಮಾರ್ತರನ್ನೂ ಕಾಣಬಹುದಾಗಿದೆ. ಇಲ್ಲಿನ ಗೌಡ ಸಾರಸ್ವತರು ಕಾಶೀಮಠ, ಗೋಕರ್ಣ, ಪರ್ತಗಾಳೀ ಮಠ ಮತ್ತು ಕೈವಲ್ಯ (ಕವಳೇ) ಮಠದ, ಶಿಷ್ಯವರ್ಗಕ್ಕೆ ಸೇರಿದವರಾಗಿದ್ದಾರೆ.

. ಗೌಡ ಸಾರಸ್ವತ ಬ್ರಾಹ್ಮಣರು ಷಟ್ಕರ್ಮಿಗಳೂ, ಷೋಡಶ ಸಂಸ್ಕಾರ ಉಳ್ಳವರೂ ಆಗಿದ್ದಾರೆ. ಇವರಲ್ಲಿ ವ್ಯವಹಾರ ದೃಷ್ಟಿಯಿಂದ ಪೌರೋಹಿತ್ಯಾದಿ, ವೈದಿಕ ಕರ್ಮಗಳನ್ನು ನಡೆಸಿಕೊಂಡು ಬರುವವರಿಗೆ 'ವೈದಿಕ'ರೆಂದೂ, ವ್ಯಾಪಾರ ಉದ್ಯಮಗಳನ್ನು ಅವಲಂಬಿಸಿ ಜೀವನ ನಿರ್ವಹಣೆಯನ್ನು ಮಾಡುವವರನ್ನು ಗೃಹಸ್ಥರೆಂದೂ ಕರೆಯುವುದು ವಾಡಿಕೆ. ಪೂರ್ವದಲ್ಲಿ ಅಧ್ಯಯನ, ಅಧ್ಯಾಪನ, ಮುಂತಾದ ಷಟ್ಕರ್ಮಗಳಲ್ಲೆ ಈ ಬ್ರಾಹ್ಮಣ ಸಮುದಾಯವು ನಿರತವಾಗಿತ್ತು. ಆದರೆ ಕಾಲಧರ್ಮಕ್ಕನುಸಾರವಾಗಿ ಜೀವನಪದ್ಧತಿಯಲ್ಲಿ ಮೂಲಭೂತ ಬದಲಾವಣೆಯನ್ನು ಕಾಣಬಹುದಾಗಿದೆ. ಇಂದು ಸಮಾಜದ ವಿವಿಧ ರಂಗಗಳಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು ದುಡಿಯುತ್ತಿದ್ದಾರೆ.

ಸಾಮಾನ್ಯವಾಗಿ ಗೌಡ ಸಾರಸ್ವತರು ಶಾಖಾಹಾರಿಗಳು. ಮಡಿ, ಮೈಲಿಗೆ ಮುಂತಾದ ವಿಷಯಗಳಲ್ಲಿ ಕಟ್ಟುನಿಟ್ಟುಳ್ಳವರು. ಸಂಧ್ಯಾವಂದನೆ, ಜಪ, ತಪ, ಅಗ್ನಿಹೋತ್ರ, ದೇವತಾರ್ಚನೆ, ವ್ರತೋಪವಾಸ. ಇತ್ಯಾದಿಗಳಲ್ಲಿ ಶಾಸ್ತ್ರೋಕ್ತ ಕರ್ಮನಿರತರು. ಇದಕ್ಕೆ ಗೌಡ ಸಾರಸ್ವತರ ವಸತಿಗಳಿದ್ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುವ ದೇವಸ್ಥಾನಗಳೇ ಸಾಕ್ಷಿ. ಕುಲದೇವತೆ ಯಾವುವೇ ಇರಲಿ, ಗೌಡ ಸಾರಸ್ವತ ಬ್ರಾಹ್ಮಣರಿಗೆ ವೆಂಕಟರಮಣ ದೇವರು ಯಾವಾಗಲೂ ಇಷ್ಟದೇವರು. ದೇವಾಲಯಗಳಲ್ಲಿ ರಥೋತ್ಸವ, ದೀಪೋತ್ಸವ, ಪಕ್ಷೋತ್ಸವಾದಿಗಳನ್ನು ಬಹು ವಿಜೃಂಭಣೆಯಿಂದ ನಡೆಸುತ್ತಾರೆ.

ಭಾರತೀಯರಿಗೆ ಸಾಮಾನ್ಯವಾಗಿರುವ ಎಲ್ಲಾ ಹಬ್ಬ ಹರಿದಿನಗಳನ್ನೂ ಇವರು ತಪ್ಪದೇ ಆಚರಿಸುತ್ತಾರೆ. ಕೃಷ್ಣಾಷ್ಟಮಿ, ವಿನಾಯಕ ಚೌತಿ, ನವರಾತ್ರಿ, ದೀಪಾವಳಿ, ತುಳಸೀ ಪೂಜೆ, ರಾಮನವಮಿ ಉಗಾದಿ ಇತ್ಯಾದಿ ಪರ್ವಗಳನ್ನು ಇವರು ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಿದ್ದಾರೆ.

ಗೌಡ ಸಾರಸ್ವತರು ಮಹಿಳಾ ಸಾತಂತ್ರ್ಯ, ಮಹಿಳಾ ವಿದ್ಯಾಭ್ಯಾಸ, ವಿಧವಾ ವಿವಾಹ ಮುಂತಾದ ಸಾಮಾಜಿಕ ವಿಷಯಗಳಲ್ಲಿ ಉದಾತ್ತ ಮನೋಭಾವ ಉಳ್ಳವರು. ಮೌಢ್ಯದ ಅಂಧಕಾರವು ಇನ್ನೂ ದಟ್ಟವಾಗಿ ಹಬ್ಬಿಕೊಂಡಿದ್ದು ಕಾಲದಲ್ಲಿಯೇ, ದಿಟ್ಟತನದಿಂದ ಆದರ್ಶ ಮಾರ್ಗವನ್ನು ತುಳಿದು, ಪರಂಪರೆಯ ಕೋಟೆಯನ್ನು ಮುರಿದು ವಿಧವಾ ವಿವಾಹವನ್ನು ಮಾಡಿಕೊಂಡು ಸಮಾಜ ಸುಧಾರಣೆಗೆ ಅಡಿಪಾಯ ಹಾಕಿದ ವ್ಯಕ್ತಿ. ದಿವಂಗತ ಕಾರ್ಕಳ ಸದಾಶಿವರಾಯರು. ಶ್ರೀಯುತರು ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದು ಮಂಗಳೂರಿನಲ್ಲಿ ದುಡಿಯುತ್ತಿದ್ದರು.

ಗೌಡ ಸಾರಸ್ವತರು ದಾನಧರ್ಮಗಳಲ್ಲೂ ಹಿಂದೆ ಬಿದ್ದಿಲ್ಲ – ದಿ। ಕುಕ್ಕುಂದೂರು ಅನಂತ ಪದ್ಮನಾಭ ಕಾಮತರು ತಮ್ಮ ಸರ್ವಸ್ವವನ್ನೂ ಸತ್ಕಾರ್ಯಕ್ಕಾಗಿ ತ್ಯಾಗ ಮಾಡಿದ ದಾನಶೂರರು. ಕಾರ್ಕಳ ವೆಂಕಟರಮಣ ದೇವಾಲಯದಲ್ಲಿ ಅನೇಕಾನೇಕ ವಿನಿಯೋಗಗಳು ಇಂದಿಗೂ ಶ್ರೀಯುತ ಪದ್ಮನಾಭ ಕಾಮತರು ಬಿಟ್ಟ ಉಂಬಳಿಯಿಂದ ನಡೆಯುತ್ತಿವೆ. ದೇವಸ್ಥಾನದ ಕೆರೆ, ಕೆರೆಯ ಹತ್ತಿರದ ಮಠ, ಊರ ಸ್ಮಶಾನ, ಶ್ರೀ ಮದ್ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯ, ಶ್ರೀ ಭುವನೇಂದ್ರ ಪ್ರೌಢಶಾಲೆ, ಈಗಿನ ಸರ್ಕಾರಿ ಜ್ಯೂನಿಯರ್ ಕಾಲೇಜು ಮುಂತಾದವುಗಳು ಇವರ ಉದಾರ ಕೊಡುಗೆಯ ಫಲದಿಂದ ಸ್ಥಾಪಿತವಾದಂಥವುಗಳು.

ಉಪನಾಮಗಳು : ಗೌಡ ಸಾರಸ್ವತರಲ್ಲಿ ಅನೇಕ ಉಪನಾಮಗಳು ಬಳಕೆಯಲ್ಲಿವೆ. ಅವುಗಳಲ್ಲಿ ಮುಖ್ಯವಾದವುಗಳು, ಕಾಮತ್, ಕಿಣಿ, ಪ್ರಭು, ಶೆಣೈ, ಪೈ, ಶಾನಭಾಗ್, ಭಟ್ಟ, ಜ್ಯೋಶಿ, ನಾಯಕ್ ಪಂಡಿತ್, ಕುಡ್ವ, ಭಂಡಾರಿ, ಪುರಾಣಿಕ್, ಭಂಡಾರ್‌ಕರ್, ಬಾಳಿಗ, ಭಕ್ತ, ಗಾಯತೊಂಡೆ, ಕುಲಕರ್ಣಿ ಹೆಗಡೆ ಇತ್ಯಾದಿ.

ರಾಜಾಪುರ ಸಾರಸ್ವತರು:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಾಜಾಪುರ ಸಾರಸ್ವತರು ಗೋವಾದಿಂದ ಉತ್ತರಕ್ಕಿರುವ ರತ್ನಗಿರಿ ಜಿಲ್ಲೆಯ ರಾಜಾಪುರ ತಾಲ್ಲೂಕು ಮತ್ತು ಬಾಣಾವಲೀ ತಾಲ್ಲೂಕುಗಳಿಂದ ವಲಸೆ ಬಂದವರಾಗಿರುತ್ತಾರೆ. ನಿರಾಶ್ರಿತರಾಗಿ ಬಹುದೂರ ಬಂದ ಈ ಪಂಗಡಕ್ಕೆ ಸ್ಥಳೀಯ ಭಾಷೆಗಳ ಅರಿವಿಲ್ಲದೇ ಹೋದುದರಿಂದ ಪೇಟೆ ಪಟ್ಟಣಗಳಲ್ಲಿರುವ ಪ್ರಮುಖರ ಸಂಪರ್ಕ ಅಸಾಧ್ಯವಾಯಿತು. ವ್ಯಾಪಾರೋದ್ಯಮಕ್ಕೆ ತೊಡಗಲು ಬಂಡವಾಳದ ತೊಂದರೆಯಾಯಿತು. ಆದುದರಿಂದ ಜೀವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿಕೊಂಡಿರಬೇಕಾಯಿತು. ಜಿಲ್ಲೆಯನ್ನು ಆಳುತ್ತಿದ್ದ ಪಾಳೆಯಗಾರರಿಂದ ಅಲ್ಪ ಸ್ವಲ್ಪ ಸಹಕಾರ ಪಡೆದು ಆಯುರ್ವೇದ, ಜ್ಯೋತಿಷ್ಯವೇ ಮೊದಲಾದ ವಿದ್ಯೆಗಳ ಬಲದಿಂದ, ಸಮಾಜದಲ್ಲಿ ವಿಶೇಷ ಸನ್ಮಾನಗಳನ್ನು ಗಳಿಸಲಾರಂಭಿಸಿದರು.

ರಾಜಾಪುರ ಸಾರಸ್ವತರು ತಾವು ಬೆಳೆದುಕೊಂಡ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಚಿಂತಿಸಿ ಸಮಾಜದ ಅಭಿವೃದ್ಧಿಯ ಬಗ್ಗೆ ವ್ಯವಸ್ಥಿತ ಕಾರ್ಯಕ್ರಮಗಳನ್ನು ನಿಯೋಗಿಸಿಕೊಂಡರು ಅವರ ಸಮಾಜದ ಉನ್ನತಿಯ ಯತ್ನದ ಫಲವಾಗಿ 1891ರಲ್ಲಿ ಕಾರ್ಕಳ ತಾಲ್ಲೂಕಿನ ಹಿರ್ಗಾನ ಗ್ರಾಮದ ನರಕೆ ಎಂಬಲ್ಲಿ ಶ್ರೀ ಆದಿಶಕ್ತಿ ಮಹಾಲಕ್ಷ್ಮಿ ದೇವಸ್ಥಾನವನ್ನು ಪ್ರತಿಷ್ಠಾಪಿಸಿದರು. ಕಾರ್ಕಳದ ಕೈಲಾಜೆ ದಿ। ಅಪ್ಪುಯಾನೆ ಶಿವರಾಮಭಟ್ಟರ ನೆರವಿನೊಡನೆ ರಾಜಾಪುರ ಸಾರಸ್ವತ ಬ್ರಾಹ್ಮಣರ ಸಮಾಜದ ವೈದಿಕ ವಿದ್ಯಾಭ್ಯಾಸ ಪುನರಾರಂಭಗೊಂಡುದಲ್ಲದೇ, ನರಕೆ ಆದಿಶಕ್ತಿ ಮಹಾಲಕ್ಷ್ಮಿ ದೇವಾಲಯದ ಪೌರೋಹಿತ್ಯವನ್ನು ಸಮಾಜದ ವೈದಿಕ ಪುರೋಹಿತರಿಗೆ ಹಸ್ತಾಂತರಿಸಲಾಯಿತು. 1963ರಲ್ಲಿ ಸಂಸ್ಥಾನ ಗೌಡ ಪಾದಾಚಾರ್ಯ ಕೈವಲ್ಯ ಮಠದ (ಕವಳೇ ಮಠದ) ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಮಹಾರಾಜ್ ಅವರು ದೇವಸ್ಥಾನಕ್ಕೆ ಚಿತ್ತೈಸಿ ಭಕ್ತರನ್ನು ಆಶೀರ್ವದಿಸಿದರು. ಅಲ್ಲದೇ 1967ರಲ್ಲಿ ದೇವಾಲಯದ ಚಂದ್ರಶಾಲಾ ಕಟ್ಟಡವನ್ನೂ ಉದ್ಘಾಟಿಸಿದರು. ರಾಜಾಪುರ ಸಾರಸ್ವತರು ಋಗ್ವೇದಿಗಳಾಗಿದ್ದು ಹತ್ತುಗೋತ್ರಗಳನ್ನು ಹೊಂದಿದ್ದಾರೆ. ಇವರನ್ನು ದಶಗೋತ್ರಿಗಳೆಂದು ಕರೆಯಬಹುದು. ಇವರು ನರಸಿಂಹ, ಶಾಂತದುರ್ಗ, ಗಣಪತಿ, ವೇತಾಳ, ಮಹಾಲಕ್ಷ್ಮಿ ಶ್ರೀನಿವಾಸ, ಲಕ್ಷ್ಮೀ ರವಳನಾಥ, ಅನಂತವಿಠಲ, ಲಕ್ಷ್ಮೀ ನಾರಾಯಣ, ಸಪ್ತಕೋಟೇಶ್ವರ, ಕಾಮಾಕ್ಷಿ ಶಾಂತೇರಿ, ಧಾರೇಶ್ವರ, ಭಗವತೀ, ರಾಮನಾಥ, ನಾಗೇಶ ಮತ್ತು ಸೋಮನಾಥೇಶ್ವರ ದೇವತೆಗಳನ್ನು ಆಯಾಯ ಗೋತ್ರಕ್ಕೆ ಸಂಬಂಧಪಟ್ಟಂತೆ ಕುಲದೇವರ ಸ್ಥಾನದಲ್ಲಿ ಅರ್ಚಿಸುತ್ತಾರೆ. ಎಲ್ಲಾ ಹಿಂದು ಹಬ್ಬ ಹರಿದಿನಗಳ ಆಚರಣೆಯನ್ನು ಇವರು ಆಚರಿಸಿಕೊಂಡು ಬರುತ್ತಿದ್ದಾರೆ.

ಉಪನಾಮಗಳು: ರಾಜಾಪುರ ಬ್ರಾಹ್ಮಣರ ಜನ್ಮನಾಮ ಮತ್ತು ಉಪನಾಮಗಳು ಹಲವು ಪ್ರಭು, ನಾಯಕ್, ಕಾಮತ್ ಎಂಬ ಜನ್ಮನಾಮಗಳಲ್ಲದೇ ಶಿವಾಜಿ, ಠಾಕುರ್, ಸಾಲವಣಕರ್, ಮಡ್ಕೈಕರ್, ವಾಗ್ಳೆ, ಬೋರ್‌ಕರ್, ಬುಡಕುಲ, ಬೋಕಡೆ, ಭುರಕೆ, ಶಿಂದ್ರೆ, ಶೇಗ್ವೆ, ಸಾಂಕಳಕರ್, ಕಿನರೆ, ಭಾಗವ, ಮುಳ್ಯೆ, ದೊಂಡ್ಯೆ, ಪೊಕ್ಕರ್, ಹಳದ್ವಣ್‌ಕರ್, ಕವೀರ್, ಶೆವುಡೆ, ಅಂಬೇಲ್ಕರ್ ಲಾಂಜೋಲ್ಕರ್, ಆಸ್ಕೇಕರ್, ನಾವ್ಲೇಲ್ಕರ್, ಸೀನ್ಕರ್, ವಾಕಡೆ, ಬಟಕೂಳೆ, ಬೋರ್, ಗೋಸಾಮಿ, ಲೋಟಲೀಕರ್, ಕಾಂಚಿಕರ್, ಶೇಂಬೆಕ್ಕಾರ್, ಪಾಟ್ಕರ್, ತೇಂಡುಲ್ಕರ್, ಕಾವಕರ್, ಗವಾಳಕರ್ ಭಾಗವತ್, ಗಡಕರಿ, ಬ್ರಾಹ್ಮ, ಗೋಡಬೋಲೆ, ಕೇಳ್ಕರ್, ಜರಮೆ, ಜುವಳೆ, ಬಾಂದವಡೇಕರ್ ಪಂಡಿತ, ಚಿಂಬಿವಲೀಕರ್, ಮರಾಠೆ, ಕಡಲ್ಕರ್, ಕಾರ್ತಿಕರ್ ಎಂಬ ಉಪನಾಮಗಳನ್ನು ಹೊಂದಿದ್ದಾರೆ.

ಚಿತ್ರಾಪುರ ಸಾರಸ್ವತ ಬ್ರಾಹ್ಮಣರು:

ಕಾರ್ಕಳದಲ್ಲಿ ಚಿತ್ರಾಪುರ ಸಾರಸ್ವತ ಬ್ರಾಹ್ಮಣರ ಕೆಲವೇ ಕುಟುಂಬಗಳು ನೆಲಸಿವೆ. ಇಡೀ ಕಾರ್ಕಳ ತಾಲ್ಲೂಕಿನಲ್ಲಿ ಚಿತ್ರಾಪುರ ಸಾರಸ್ವತ ಬ್ರಾಹ್ಮಣರಿಗೆ ಸಂಬಂಧಪಟ್ಟಂತೆ ಏಳೆಂಟು ಕುಟುಂಬಗಳು ಮಾತ್ರ ಇವೆ. ಇವರ ಸಂಬಂಧಿಗಳು ಅಧಿಕ ಸಂಖ್ಯೆಯಲ್ಲಿ ಮುಂಬೈಯಲ್ಲಿ ನೆಲಸಿದ್ದಾರೆ. ಆದುದರಿಂದ ಇವರಿಗೆ ಮುಂಬೈ ಸಂಪರ್ಕ ಹೆಚ್ಚು. ಚಿತ್ರಾಪುರ ಬ್ರಾಹ್ಮಣರು ಸ್ಮಾರ್ತರು. ಇವರಲ್ಲಿ ಆರು ಗೋತ್ರಗಳಿವೆ. ಇವರು ಅಶ್ವಲಾಯನ ಸೂತ್ರದಲ್ಲಿ ತಮ್ಮ ನಂಬಿಕೆಯನ್ನಿರಿಸಿಕೊಂಡಿದ್ದಾರೆ. ಇವರೆಲ್ಲಾ ಋಗ್ವೇದಿಗಳು. ಕಾರ್ಕಳದ ಶ್ರೀ ರಘುನಾಥ ಭಟ್ಟರವರ ಪ್ರಕಾರ ಚಿತ್ರಾಪುರ ಬ್ರಾಹ್ಮಣರು ಪಂಚಗೌಡ ಸಾರಸ್ವತ ಪೀಳಿಗೆಯಿಂದ ಬಂದವರು. ಈ ವಂಶದ ಜನರು ಮೊದಲು ಸರಸ್ವತೀ ನದಿಯ ತೀರದಲ್ಲಿ ವಾಸಿಸುತ್ತಿದ್ದರೆನ್ನಲಾಗಿದೆ. ಅಲ್ಲದೇ ಇವರು ಸರಸ್ವತಿಯ ಭಕ್ತರು ಮತ್ತು ಸಾರಸ್ವತ ಋಷಿಯ ಶಿಷ್ಯರು. ಆದುದರಿಂದಲೇ ಇವರಿಗೆ ಸಾರಸ್ವತ ಬ್ರಾಹ್ಮಣರೆಂಬ ಹೆಸರು ಬಂದಿದೆ ಎನ್ನಬಹುದು.

ಸಾರಸ್ವತ ಬ್ರಾಹ್ಮಣರು ಭಾಗವತ ಸಂಪ್ರದಾಯದಲ್ಲಿ ಹೆಚ್ಚಿನ ವಿಶ್ವಾಸವನ್ನಿರಿಸಿಕೊಂಡಿದ್ದಾರೆ. ಭಾಗವತ ಸಂಪ್ರದಾಯದಲ್ಲಿ ಬರುವ ಎಲ್ಲಾ ವ್ರತಗಳನ್ನೂ ಇವರು ಸಾಮಾನ್ಯವಾಗಿ ಆಚರಿಸುತ್ತಾರೆ.

ಶೆಣೈ ಸಾರಸ್ವತರೆಂದು ಕರೆಯಲ್ಪಡುವ ಈ ವರ್ಗದ ಅನುಯಾಯಿಗಳು ಭಟ್ಕಳದ ಸಮೀಪವಿರು ಚಿತ್ರಾಪುರಮಠ ಸಂಸ್ಥಾನದ ಶಿಷ್ಯರು. ಚಿತ್ರಾಪುರ ಸಾರಸ್ವತ ಬ್ರಾಹ್ಮಣರು ತಮ್ಮ ಜನ್ಮನಾಮ ಮುಂದೆ ತಾವು ಜನಿಸಿದ ಊರಿನ ಹೆಸರನ್ನು ಹಾಕಿಕೊಳ್ಳುವುದು ಸಾಮಾನ್ಯ. ಪ್ರಸನ್ನ ಕೈಲಾ ಗಿರೀಶ ಕಾರ್ನಾಡ್, ಪ್ರಸಾದ ಧಾರವಾಡಕರ್ ಮುಂತಾದ ಎಂಬ ಹೆಸರುಗಳು ಚಿತ್ರಾಪುರ ಸಾರಸ್ವತ ಹೆಸರಿನ ವಿವಿಧತೆಯನ್ನು ಸೂಚಿಸುತ್ತದೆ.

ಚಿತ್ಪಾವನರು

ಚಿತ್ಪಾವನರು ದಕ್ಷಿಣ ಕನ್ನಡ ಜಿಲ್ಲೆಗೆ ಗೋವಾದಿಂದ ಬಂದು ಸುಮಾರು 400ವರ್ಷಗಳಾಗಿ ಬಹುದೆಂದು ನಡೆಸಿದ ಸಂಶೋಧನೆಗಳಿಂದ ತಿಳಿದು ಬರುತ್ತದೆ. ಪೋರ್ಚುಗೀಸರು ಗೋವಾದಲ್ಲಿ ಮತ ಪ್ರಚಾರ ಆರಂಭಿಸಿದಾಗ ಇವರು ಈ ಭಾಗಕ್ಕೆ ಬಂದರೆಂಬುದು ಒಂದು ಅಭಿಪ್ರಾಯವಾದರೆ, ಕೃಷಿ ಗಾಗಿಯೋ ಅಥವಾ ಉದ್ಯೋಗವನ್ನು ಹುಡುಕಿಯೋ ಚಿತ್ಪಾವನರು ದಕ್ಷಿಣ ಕನ್ನಡಕ್ಕೆ ಬಂದಿರಬೇಕೆಂದು ಮತ್ತೊಂದು ಅಭಿಪ್ರಾಯ. ಚಿತ್ಪಾವನರು ಆರ್ಯಮೂಲದವರೆಂಬ ಭಾವನೆಯಿಂದ ಹೊಸದಾದ ಸ್ಥಳಗಳನ್ನು ಹುಡುಕಿಕೊಂಡು ಹೋಗಿ ಕೃಷಿ ಮಾಡುವ ಅಭ್ಯಾಸ ಈಗಲೂ ಅವರಲ್ಲಿದೆ. ವಲಸ ಹೋಗುವ ರೂಢಿಯನ್ನಿರಿಸಿಕೊಂಡಿದ್ದ ಇವರಲ್ಲಿ ಹಲವರು ಗುಜರಾತಿನಲ್ಲಿ ನೆಲಸಿದರೆ, ಇನ್ನು ಕೆಲವರು ರತ್ನಗಿರಿ, ಚಿಪಳೂಣ ಮುಂತಾದ ತಾಲ್ಲೂಕುಗಳಲ್ಲಿ ಬಂದು ನೆಲಸಿದರು. ಚಿಪಳೂಣ ತಾಲ್ಲೂಕಿನಲ್ಲಿ ಪ್ರಪ್ರಥಮವಾಗಿ ಬಂದು ನೆಲಸಿದ ಜನರು ಪ್ರಾದೇಶಿಕ ಉಪನಾಮವನ್ನು ತಮ್ಮ ಜನಾಂಗಕ್ಕೆ ಇಟ್ಟು ಕೊಂಡಿದ್ದರಿಂದ ಮುಂದೆ ಆ ಸಮಾಜವನ್ನು ಚಿತ್ಪಾವನ ಸಮಾಜ ಎಂದು ಕರೆಯಲಾಯಿತೆನ್ನಬಹುದು ಚಿಪಳೂಣ ತಾಲ್ಲೂಕಿನಲ್ಲಿದ್ದವರು ತಮ್ಮನ್ನು ಚಿತಪೊವಣೆ ಎಂದು ಗುರುತಿಸಿಕೊಂಡು ತಮ್ಮ ಕುಲ ಬಾಂಧವರಿರನ್ನೂ ಹಾಗೆಯೇ ಕರೆಯತೊಡಗಿದರು.

ಚಿತ್ಪಾವನ ಎಂಬ ಉಪನಾಮದ ಹಿಂದೆ ಒಂದು ಉಪಕಥೆಯೂ ಇದೆ. ಶ್ರೀ ಪರಶುರಾಮ ಒಂದು ಸಾರಿ ಶ್ರಾದ್ಧಕ್ಕಾಗಿ ಬ್ರಾಹ್ಮಣರನ್ನು ಹುಡುಕಿದರಂತೆ. ಯಾರೂ ಸಿಗದಿದ್ದಾಗ ಸಮುದ್ರ ದಡೆಯ ಮೇಲಿದ್ದ ಶವಗಳನ್ನು ಚಿತೆಯಲ್ಲಿಟ್ಟು, ಪಾವನಗೊಳಿಸಿ ಜೀವತುಂಬಿ ನಂತರ ಪಿತೃಶ್ರಾದ್ಧ ವನ್ನು ಸಾಂಗಗೊಳಿಸಿದರಂತೆ. ಆದರಿಂದಾಗಿ ಚಿತೆಯಿಂದ ಪಾವನರಾದ ಇವರನ್ನು ಚಿತ್‌ಪಾವನ, ಚಿತ್ಪಾವನರೆಂದು ಪರಶುರಾಮರು ಕರೆದರಂತೆ. ಇಂದಿಗೂ ಕೂಡ ಚಿತ್ಪಾವನ ಜನಾಂಗದವರಿಗೆ ಗುರು ಪೀಠವೆಂಬುದಿಲ್ಲ. ಅದರ ಸ್ಥಾನದಲ್ಲಿ ಚಿತ್ಪಾವನರು ಪರಶುರಾಮನಿಗೆ ಆದ್ಯತೆಯನ್ನು ಕೊಡುತ್ತಿದ್ದಾರೆ.

ಚಿತ್ಪಾವನರು ಸ್ವಭಾವತಃ ಕಷ್ಟ ಸಹಿಷ್ಣುಗಳು, ಪ್ರಾಮಾಣಿಕರು, ವಿದ್ಯಾವಂತರು ಹಾಗೂ ಪರಿಶುದ್ಧರು. ದಕ್ಷಿಣ ಕನ್ನಡದಲ್ಲಿರುವ ಕೊಂಕಣೆ, ಕೋಟ, ಶಿವಳ್ಳಿ, ಹವಕ ಹಾಗೂ ತೌಳವ ಬ್ರಾಹ್ಮಣ ರೊಡನೆ ಸೌಹಾರ್ದಯುತವಾಗಿ ಜೀವಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ಹೊರಗಿನಿಂದ ಬಂದು ಇಲ್ಲಿ ನೆಲಸಿದರೂ, ಸುತ್ತಮುತ್ತಲಿನ ಸಮಾಜಬಾಂಧವರೊಡನೆ ಸುಮಧುರ ಬಾಂಧವ್ಯವನ್ನು ವೃದ್ಧಿ ಗೊಳಿಸಿಕೊಳ್ಳಬೇಕೆಂಬ ಬಯಕೆ ಅವರಲ್ಲಿ ಸದಾ ಜಾಗೃತವಾಗಿದೆ.

ಕಾರ್ಕಳ ತಾಲ್ಲೂಕಿನ ಚಿತ್ಪಾವನರ ಭಾಷೆ ಮರಾಠಿಯನ್ನು ಹೋಲುತ್ತದೆಯಾದರೂ, ಇವರದ್ದು ಪ್ರಾಕೃತ ಮರಾಠಿ ಅಥವಾ ತದ್ಭವಭಾಷೆ. ಇವರಾಡುವ ಭಾಷೆಗೆ ಲಿಪಿಯಿಲ್ಲ. ಈ ಭಾಷೆ ಚಿಪಳೂಣ ಪ್ರಾಂತದಿಂದ ಬಂದಿರುವ ಕಾರಣ ಇದಕ್ಕೆ ನಾನ್ನೂರು ವರ್ಷಗಳ ಇತಿಹಾಸವಿದೆ. ನಾನ್ನೂರು ವರ್ಷಗಳ ಹಿಂದೆ ವೆಂಗುಲಾಳ, ಮಾಳವಣ, ಸಾವಂತವಾಡಿ ಪ್ರದೇಶದಲ್ಲಿಯ ಜನರ ಮನೆಮಾತಿನ ಭಾಷೆ ಇದಾಗಿರಬಹುದೆಂದು ಸಾಮಾನ್ಯ ನಂಬಿಕೆ.

ಚಿತ್ಪಾವನರು ತಂತ್ರ ಶಾಸ್ತ್ರದ ಅಂಶಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡುವುದಿಲ್ಲ. ನಿತ್ಯ

ಪೂಜಾವಿಧಾನದಲ್ಲಿ ಕಲ್ಪೋಕ್ತರೀತಿಯಿಂದ ಅರ್ಚನೆ ಮಾಡುವುದಿಲ್ಲ. ಕೇವಲ ಪುರುಷಸೂಕ್ತದಿಂದ ಷೋಡಷ ಉಪಚಾರಗಳಿಂದ ಪೂಜೆಯನ್ನು ಮಾಡುತ್ತಾರೆ. ನಿತ್ಯಪೂಜೆಯಲ್ಲಿ ಪ್ರಾಣ ಪ್ರತಿಷ್ಠೆ, ಅಂತ್ಯದಲ್ಲಿ ವಿಸರ್ಜನೆ, ದ್ವಾರಪೂಜೆ, ಪೀಠಪೂಜೆ, ನವಶಕ್ತಿ ಪೂಜೆ ಕಲಾವಾಹನ ಇವುಗಳು ಇರುವುದಿಲ್ಲ. ಇವರು ಆಚರಿಸುವ ಮುಖ್ಯ ಪರ್ವದಿನ ವ್ರತಾದಿಗಳಲ್ಲಿ ಶಿವರಾತ್ರಿ, ನವರಾತ್ರಿ, ಅಷ್ಟಮೀ, ಏಕಾದಶಿ ವ್ರತಗಳು ಸೇರಿವೆ. ಕಾರ್ಕಳ ತಾಲ್ಲೂಕಿನ ದುರ್ಗಾ ಶ್ರೀ ಹರಿಹರೇಶ್ವರ ದೇವಸ್ಥಾನ, ಶ್ರೀ ಲಕ್ಷ್ಮೀ ನಾರಾಯಣ ದೇವಾಲಯಗಳು ಈ ಭಾಗದ ಚಿತ್ಪಾವನರ ಪ್ರಸಿದ್ಧ ದೇವಾಲಯಗಳು.

ಚಿತ್ಪಾವನ ಮಹಿಳೆಯರು ತಾವು ಋಷಿ ಪತ್ನಿಯರ ವಂಶದವರೆಂದು ಭಾವಿಸಿದ್ದಾರೆ. ಸಾಮಾನ್ಯವಾಗಿ ಅವರು ಕಚ್ಚೆಹಾಕಿ ಸೀರೆಉಟ್ಟು, ಮೈತುಂಬಾ ರವಿಕೆ ತೊಟ್ಟು, ಮುಡಿ ತುಂಬಾ ಹೂ ಮುಡಿದು ಕೈತುಂಬಾ ಬಳೆಯಿಟ್ಟುಕೊಳ್ಳುವ ಗೃಹಿಣಿಯರು . ಈಗ ಚಿತ್ಪಾವನರಲ್ಲಿ ಅನೇಕ ಮಹಿಳೆಯರು ಸಮಾಜದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ಪಂಡಿತಾ ರಮಾಬಾಯಿ ಸರಸ್ವತಿ' ಈ ಜನಾಂಗದ ಒಬ್ಬ ಆದರ್ಶ ಮಹಿಳೆ.

ಚಿತ್ಪಾವನ ಮಹಿಳೆಯರು ಅನೇಕ ವ್ರತಗಳನ್ನು ಆಚರಿಸುತ್ತಾರೆ. ಅನೇಕ ವ್ರತ ಸಂಬಂಧವಾಗಿ ತಮ್ಮ ದೇಶ ಭಾಷೆಯಲ್ಲಿಯೇ ಪೂಜಾವಿಧಾನ, ಫಲಶ್ರುತಿ, ವ್ರತಕಥಾ ಇತ್ಯಾದಿಗಳನ್ನು ನಿರ್ಮಿಸಿಕೊಂಡು ಪುರೋಹಿತರು ಇಲ್ಲದಿದ್ದರೂ ಸಾಂಗವಾಗಿ ನಡೆಸಿಕೊಂಡು ಹೋಗುತ್ತಾರೆ. ಇವರು ಸೋಮವಾರ ವ್ರತ, ಮಂಗಳ ಗೌರಿ ವ್ರತ, ಶುಕ್ರವಾರ ವ್ರತ, ಸೋಳಾಂಡೆ ವ್ರತ, ಹರಿತಾಲಿಕಾ ವ್ರತ, ಋಷಿ ಪಂಚಮಿ ಶಿವಾಮುಷ್ಟಿ, ರಾಂಗಣಿ, ಗೋಪದ್ಮ ಹಾಗೂ ಸೋಮಾವತಿ ವ್ರತಗಳನ್ನು ಭಕ್ತಿಯಿಂದ ಆಚರಿಸುತ್ತಾರೆ. ಹರಿತಾಲಿಕಾ ವ್ರತ ಕೇವಲ ತೀರ್ಥ ಮತ್ತು ಅನಿವಾರ್ಯ ಪ್ರಸಂಗಗಳಲ್ಲಿ ಫಲಗಳನ್ನು ಸೇವಿಸಿ ಆಚರಿಸುವ 'ಶಿವ ಪಾರ್ವತಿಯರ' ಆರಾಧನೆ. ಋಷಿ ಪಂಚಮಿ ವ್ರತ ಅರುಂಧತಿಯ ಸಹಿತ ಸಪ್ತರ್ಷಿಗಳನ್ನು ಪೂಜಿಸಿ ನೈವೇದ್ಯಕ್ಕೆ ಏಳು ಬಗೆಯ ಗಡ್ಡೆ ಗೆಣಸುಗಳ ಪ್ರಸಾದವನ್ನು ತಯಾರಿಸಿ, ಆ ಪ್ರಸಾದವನ್ನು ಸ್ವೀಕರಿಸಿ ಸೌಭಾಗ್ಯಸಹಿತ ವಾಯನವನ್ನು ದಾನ ಮಾಡುವ ವ್ರತ. ರಾಂಗಣೆ ಅಥವಾ ರಂಗೋಲಿ ಲಗ್ನವಾದ ನಂತರ ಐದು ವರ್ಷಗಳಲ್ಲಿ ಪ್ರತಿ ಕರ್ಕಾಟಕ ಸಂಕ್ರಾಂತಿಯಂದು ಐದು ಮನೆಗಳಲ್ಲಿ ಅರಸಿನ ಕುಂಕುಮ ಸಹಿತ ಸೂರ್ಯನಾರಾಯಣ ದೇವರ ಪ್ರೀತ್ಯರ್ಥವಾಗಿ ಪೂಜೆ ಮಾಡಿ, ಐದು ಮನೆಗಳಲ್ಲಿ ಐದು ತೆಂಗಿನ ಕಾಯಿಗಳನ್ನು ಅರ್ಪಿಸುವ ವ್ರತ. ಇವಲ್ಲದೇ – ಸೋಳಂಡೆ (ಹದಿನಾರು ಬಗೆಯ ದಾನ) ಸಭಾದೀಪ (ಅಕ್ಕಿ ಹಿಟ್ಟಿನಿಂದ ಮಾಡಿದ ದೀಪದಾನ) ಅಶ್ವತ್ಥ ಪೂಜೆ, ನಿತ್ಯ ತುಳಸೀಪೂಜೆ ಹಾಗೂ – ವಟ ಸಾವಿತ್ರೀ ವ್ರತಗಳನ್ನು ಇವರು ಆಚರಿಸುತ್ತಾರೆ.

ಉಪನಾಮಗಳು: ಅಗ್ನಿಹೋತ್ರಿ, ಜೋಷಿ, ಚಿಪಳೂಣಕರ, ಕಾಶೀಕರ, ಪಾಟನಕರ, ವಿದ್ವಾಂಸ, ಸಾವಣಕರ, ಶಿವಣೇಕರ, ದೇವಧರ, ಆಗಲಾವೆ, ಪಟವರ್ಧನ, ದೇಶಮುಖ, ಕಾನಡೆ, ಫಾಟಕ, ಫಾಳಕ, ಬಿಢೆ, ಭಟ್ಟ, ಬರ್ವೆ, ಗೋಡಬೋಲೆ, ಫಡಕೆ, ಛತ್ರಿ, ಧಾತೆ, ಟಿಳಕ, ಪುರಾಣಿಕ, ರಾನಡೆ, ಡೊಂಗರೆ ತುಳಪುಳೆ, ಪರಾಂಜಪೆ, ಚಿತಳೆ, ಕೇಳಕರ, ಸಾಠೆ, ಭಾವೆ, ದಾತಾರ, ನಾಯಿಕ, ಬೋಡಸ್, ತಾಮ್ಹಣಕರ್ ಸಾವರಕರ ಮುಂತಾದವುಗಳು ಚಿತ್ಪಾವನರ ಕೆಲವು ಉಪನಾಮಗಳು.

ಜೈನ ಸಮಾಜ

ಜೈನರು ಪಶ್ಚಿಮ ಕರಾವಳಿಯ ದಕ್ಷಿಣ ಭಾಗದಲ್ಲಿ ಹಿಂದೆ ತಮ್ಮದೇ ಆದ ಪ್ರಭಾವವನ್ನು ಹೊಂದಿದ್ದರು. ಕಾರ್ಕಳ ಮತ್ತು ಮೂಡಬಿದ್ರೆಯಲ್ಲಿ ದೊರಕಿರುವ ಶಾಸನಗಳ ಪ್ರಕಾರ, ಜೈನರು ಕಾರ್ಕಳ ತಾಲ್ಲೂಕಿನಲ್ಲಿ 9ನೆಯ ಶತಮಾನಕ್ಕಿಂತ ಮುಂಚಿತವಾಗಿಯೇ ನೆಲಸಿದ್ದರು ಎಂಬುದು ತಿಳಿದು ಬರುತ್ತದೆ. ಡಾ। ಪಿ. ಎಸ್. ನರಸಿಂಹಮೂರ್ತಿಯವರ ಪ್ರಕಾರ ಜೈನಮತೀಯರು ಈ ಪ್ರಾಂತ್ಯದಲ್ಲಿ 6 ಅಥವಾ 7ನೇ ಶತಮಾನದಲ್ಲಿಯೇ ನೆಲಸಿದ್ದರು. ಬನವಾಸಿಯ ಕದಂಬರು ದಕ್ಷಿಣ ಕನ್ನಡದಲ್ಲಿ ತಮ್ಮ

ಪ್ರಾಬಲ್ಯವನ್ನು ಸಾಧಿಸಿದಾಗ, ಜೈನರ ಬಗ್ಗೆ ಅನೇಕ ಮಾಹಿತಿಗಳನ್ನು ನಮಗೆ ಶಾಸನಗಳ ಮೂಲ ಒದಗಿಸಿಕೊಟ್ಟಿದ್ದಾರೆ. ಬಾದಾಮಿಯ ಚಾಲುಕ್ಯರು, ಆಳುಪರು ಕಡಲ ತೀರದಲ್ಲಿ ಜೈನರ ಸಂತತಿಯ ಬ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಕಾರ್ಕಳ ತಾಲ್ಲೂಕಿನಲ್ಲಿಂದು ಜೈನರು ಹೆಚ್ಚಿನ ಸಂಖ್ಯೆಯ ನೆಲಸಿದ್ದಾರೆ.

ಇಲ್ಲಿಯ ಜೈನರು 'ದಿಗಂಬರ ಜೈನ' ಸಂಪ್ರದಾಯವನ್ನು ಅನುಸರಿಸುತ್ತಾರೆ. ಇವರಲ್ಲಿ ಒಂದ ಪಂಗಡವನ್ನು 'ಇಂದ್ರರು' ಎಂದರೆ ಪೂಜಾರಿಗಳು ಅಥವಾ ಅರ್ಚಕರು ಎಂದು ಕರೆದರೆ, ಮತ್ತೊಂದ ಪಂಗಡದವರು ಆಸ್ತಿಯ ಒಡೆತನವನ್ನು ಹೊಂದಿ ಹೆಗಡೆ ಮುಂತಾದ ಉಪನಾಮಗಳೊಡನೆ ಸಮಾಜದ ವ್ಯವಹರಿಸುತ್ತಿದ್ದಾರೆ.

ಬಂಟ ಅಥವಾ ನಾಡವರ ಜನಾಂಗದ ಹಾಗೆಯೇ ಜೈನರೂ ಸಹ 'ಅಳಿಯ ಸಂತಾನ' ಪದ್ಧ ಯನ್ನು ಅನುಸರಿಸುತ್ತಿದ್ದಾರೆ. ಈ ಸಂಪ್ರದಾಯ ಭೂತಾಳಪಾಂಡ್ಯ (ಬಾರಕೂರಿನ ರಾಜ) ನ ಕೊಡುಗೆ ಎಂದು ಜೈನರು ಭಾವಿಸಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಭೂಸುಧಾರಣೆ ಇನ್ನಿತರ ಸರ್ಕಾರದ ಸಾಮಾಜಿಕ ಕಾನೂನುಗಳ ಮಧ್ಯೆ ಅಳಿಯಸಂತಾನ ಸಂಪ್ರದಾಯ ನಶಿಸುತ್ತಾ ಬಂದಿರು ವುದನ್ನು ತಿಳಿಯಬಹುದು.

ಜೈನರಲ್ಲಿ ಕುಲದೇವರು ಮತ್ತು ಸಮಾಜದೇವತೆಯನ್ನು ಪೂಜಿಸುವುದು ರೂಢಿಯಾಗಿದೆ. ಜೈನ ತೀರ್ಥಂಕರರು ಕುಲದೇವರಾದರೆ ಶಿವನನ್ನು ಅಥವಾ ವಿಷ್ಣುವನ್ನು ಸಾಮೂಹಿಕವಾಗಿ ಪೂಜಿಸುವ ಪದ್ಧತಿ ಇದೆ. ಉದಾಹರಣೆಗೆ ಬೈರರಸರು ತಮ್ಮ ಕುಲದೇವರಾದ ಚಂದ್ರನಾಥಜಿನರನ್ನು ಪೂಜಿಸು ತ್ತಿದ್ದರಲ್ಲದೇ ಕಲಶೇಶ್ವರನನ್ನೂ ಪೂಜಿಸುತ್ತಿದ್ದರು. ಇದೇ ರೀತಿ ಪುತ್ತಿಗೆಯ ಚೌಟರು ಸೋಮನಾಥ ನನ್ನೂ ಹೊಸಂಗಡಿಯ ಬಿನ್ನಾಣಿಗಳು ವೇಣುಗೋಪಾಲನನ್ನು ಪೂಜಿಸುತ್ತಾರೆ. ಕೊಲ್ಲೂರು ಮೂಕಾಂಬಿಕಾ, ಶರವಿನ ಮೂಲ ಗಣಪತಿಯನ್ನೂ ಜೈನರು ಆರಾಧಿಸುತ್ತಾರೆ.

ಕಾರ್ಕಳದ ಗೊಮ್ಮಟ ಹಾಗೂ ಮೂಡಬಿದಿರೆಯ ಸಾವಿರ ಕಂಬಗಳ ಬಸದಿ ಈ ಭಾಗದ ಜೈನ ಬಂಧುಗಳ ಪವಿತ್ರ ದೇವತಾ ಸ್ಥಳಗಳು. ಕ್ರಿ.ಶ. 1432ರಲ್ಲಿ ವೀರ ಪಾಂಡ್ಯನ ನೇತೃತ್ವದಲ್ಲಿ ಕೆತ್ತಿಸಿದ 41 ಅಡಿ ಎತ್ತರದ ಗೊಮ್ಮಟನ ವಿಗ್ರಹ ಏಕಶಿಲೆಯಿಂದ ಕೂಡಿದ್ದಾಗಿದೆ. ಕಾರ್ಕಳದ ಹೆಸರನ್ನು ಚಿರಸ್ಥಾಯಿಗೊಳಿಸಿದ ಶ್ರೇಷ್ಠ ಕವಿ ಚದುರ ಚಂದ್ರಮ "ಕಾರ್ಕಳದ ಗೊಮ್ಮಟೇಶ್ವರ ಚರಿತೆ" ಎಂಬ ಸಾಂಗತ್ಯ ಕೃತಿಯಲ್ಲಿ 1646ರಲ್ಲಿ ಇಲ್ಲಿಯ ಗೊಮ್ಮಟೇಶ್ವರನಿಗೆ ನಡೆದ ಮಹಾಮಸ್ತ ಕಾಬಿಷೇಕವನ್ನು ವಿವರವಾಗಿ ವರ್ಣಿಸಿದ್ದಾನೆ. 20ನೇಯ ಶತಮಾನದಲ್ಲಿ ಗೊಮ್ಮಟದೇವರ ಮಹಾ ಮಸ್ತಕಾಭಿಷೇಕವನ್ನು ಅನುಕ್ರಮವಾಗಿ 1921, 1951, 1957 ಮತ್ತು 1961ರಲ್ಲಿ ವಿದ್ಯುಕ್ತವಾಗಿ ಮಾಡಲಾಯಿತು. ನಂತರ ಹಲವಾರು ಕಾರಣಗಳಿಂದಾಗಿ ಕಾರ್ಕಳ ಗೊಮ್ಮಟನಿಗೆ ಶಾಸ್ತ್ರವಿಧಿಯಂತೆ ಮಸ್ತಕಾಭಿಷೇಕವಾಗಲಿಲ್ಲ. ಪ್ರತಿವರ್ಷ ಫೆಬ್ರುವರಿ ತಿಂಗಳ ಹುಣ್ಣಿಮೆಯ ದಿನದಂದು ಬಾಹುಬಲಿಯ ರಥೋತ್ಸವ ಬಹಳ ವಿಜೃಂಭಣೆಯಿಂದ ಜರುಗುತ್ತದೆ. ಜೈನರು ಮಹಾವೀರ ಜಯಂತಿಯನ್ನು ಭಕ್ತಿ ಯಿಂದ ಆಚರಿಸುತ್ತಾರೆ.

ವಿವಾಹವಿಧಿಗಳು, ಪದ್ಧತಿಗಳು ಸಾಮಾನ್ಯವಾಗಿ ಬಂಟರ ಪದ್ಧತಿಗಳ ರೀತಿಯಲ್ಲಿಯೇ ಇರುವು ದನ್ನು ಕಾಣಬಹುದು. ಜೈನರ ಅಡಿಗೆಯಲ್ಲಿ ವಿಶೇಷ ವ್ಯತ್ಯಾಸವೇನೂ ಇಲ್ಲದಿದ್ದರೂ, ಇವರು ತಯಾರಿ ಸುವ 'ಕಟಮುಂಡಿಗೆ' (ಕಾಗದ ವಿಠಾಯಿ)ಗೆ ಬಹಳ ಬೇಡಿಕೆಯಿದೆ. ಉಪ್ಪಿನಕಾಯಿ ತಯಾರಿಕೆಯಲ್ಲಿ ಇವರಿಗೆ ವಿಶಿಷ್ಟವಾದ ಸ್ಥಾನವಿದೆ.

ಉಪನಾಮಗಳು: ಸಾಮಾನ್ಯವಾಗಿ ಜೈನರಲ್ಲಿ ಹಾಗೂ ಬಂಟರಲ್ಲಿ ಒಂದೇ ರೀತಿಯ ಉಪ ನಾಮಗಳನ್ನು ಕಾಣಬಹುದು. ಜೈನರಲ್ಲಿ ಹೆಗಡೆ, ಇಂದ್ರ, ಜೈನ್, ಪೂವಣಿ, ಅರಿಗ, ಬಂಗ, ಪಡಿವಾಳ,

ಲ್ಲಾಳ, ಆಜ್ರಿ, ಮುದ್ಯ, ಸೆಟ್ಟಿ, ಆಳ್ವ, ಪ್ರಸಾದ್, ಅತಿಕಾರಿ, ಸಾಮಾಜ್ಯ, ನಾಯಕ್, ರೈ, ಕಟ್ಟಡ, ಡಿತ, ಗೌಡ, ಯಾದವ, ಶಾಸ್ತ್ರಿ, ವರ್ಣ, ಕುಮಾರ್, ಕರ್ಕೇರ, ಕಂಬಳಿ, ಸುವರ್ಣ, ಅಧಿಕಾರಿ, ಲಿಪ, ಅಜಿಲ, ಭಂಡಾರಿ, ಕಾಜವ, ಪಾಂಡಿ, ವರ್ಮಾ, ಚೌಟ, ಎಂಬ ಉಪನಾಮಗಳಿವೆ.

ಬಂಟರು (ನಾಡವರು)

ನಾಡಿನ ವ್ಯವಸ್ಥೆಯನ್ನು ಮಾಡುವವರು ನಾಡವರು (ಬಂಟರು) ಎಂದು ಇಂಡೋಲಾಜಿಕಲ್ ೂಸ್ಟಿಟ್ಯೂಟಿಯು ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಸಂಘದ ಪ್ರಕಟಣೆಯಲ್ಲಿನವ ೂದಿಸಲಾಗಿದ್ದರೂ ವರ ಮೂಲದ ಬಗ್ಗೆ ಖಚಿತವಾದ ಯಾವ ದಾಖಲೆಯೂ ದೊರಕಿಲ್ಲ. ಆದರೆ ತುಳುನಾಡು ಂದೆ ಚಕ್ರಾಧಿಪತಿಗಳ ಹಾಗೂ ಸಾಮಂತ ರಾಜರುಗಳಾದ ಪಲ್ಲವರು, ಕದಂಬರು, ಚಾಲುಕ್ಯರು, ೊಯ್ಸಳ ಬಲ್ಲಾಳರೇ ಮೊದಲಾದವರ ಆಧಿಪತ್ಯದಲ್ಲಿದ್ದು, ಬಂಟರು ಅವರ ಪಾಳೆಯಗಾರರಾಗಿ ಾಜ್ಯದ ವ್ಯವಸ್ಥೆಯನ್ನು ನೋಡಿಕೊಳುತ್ತಿದ್ದರು. ಇವರ ಸಾಹಸ ಅಥವಾ ಶೂರತನದಲ್ಲಿ ಹೆಸ ಾಗಿದ್ದುದರಿಂದ, ಇವರಿಗೆ ಭಟರು ಎಂದರೆ ಸರ್ವಶಕ್ತಿಯುತ ಯೋಧರು ಎಂಬ ಹೆಸರು ಬಂದಿರಬೇಕು. ಾಲಕ್ರಮೇಣ ಬಂಟರು ಎಂದು ಕರೆಯಲ್ಪಟ್ಟಿರಬೇಕು. ದಕ್ಷಿಣ ಕನ್ನಡದ ಉತ್ತರ ಭಾಗದಲ್ಲಿ ನೆಲಸಿದ ಾಡವರು ಕೂಡ ಬಂಟರೇ ಆಗಿದ್ದು ಅವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ನಾಡಿಗಾಗಿ ೋರಾಡುವ ಈ ವರ್ಗದವರನ್ನು ಸಾಮಾನ್ಯವಾಗಿ 'ನಾಡಬಂಟ'ರೆಂದು ಕರೆಯುವುದು ವಾಡಿಕೆ ಯಾಗಿದೆ.

ಯೋಧರಾಗಿ ಯುದ್ಧರಂಗದಲ್ಲಿ ಹೋರಾಡುತ್ತಿದ್ದ ಈ ಸಮಾಜಭಾಂದವರು ಇಂದೂ ಕೂಡ ತಮ್ಮ ಸಾಹಸ ಪ್ರವೃತ್ತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಸ್ವಾಭಿಮಾನದ ಸ್ವಭಾವ, ಬಲಿಷ್ಠವಾದ ದೇಹರಚನೆ ಇಂದಿಗೂ ಅವರ ಪ್ರಾಚೀನ ಯೋಧ ವ್ಯವಸಾಯದ ಹೆಗ್ಗುರುತುಗಳಾಗಿವೆ. ಕಾಲ ಬದಲಾವಣೆಯಿಂದಾಗಿ ನಾಡವರ ಸಮಾಜ ಇಂದು ಕೃಷಿಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿ ಕೊಂಡಿದೆ.

ಬಂಟ ಜನಾಂಗದಲ್ಲಿ ನಾಡವರು ಅಥವಾ ನಾಡಬಂಟರು, ಪರಿವಾರ ಬಂಟರು, ಜೈನ ಬಂಟರು ಮತ್ತು ಮಾಸಾಧಿಕ ಬಂಟರು ಎಂಬ ನಾಲ್ಕು ಉಪವಿಭಾಗಗಳಿವೆ. ಸಾಮಾನ್ಯವಾಗಿ ಬಂಟರು ಮಾಂಸಾಹಾರಿ ಗಳು. ಆದರೆ ಬಲ್ಲಾಳ ಹಾಗೂ ಹೆಗ್ಗಡೆಯವರು ಪೂರ್ಣ ಸಸ್ಯಾಹಾರಿಗಳಾಗಿರುತ್ತಾರೆ. ಬಂಟರಲ್ಲಿ ಜನಿವಾರ ಧಾರಣೆ ಕಂಡು ಬರುವುದು ಅಪರೂಪ. ಇವರ ಪ್ರಕಾರ ಬಲ್ಲಾಳ ಮತ್ತು ಹೆಗ್ಗಡೆ ಎಂಬ ಪಟ್ಟದ ಅಧಿಕಾರವಿರುವ ಕುಟುಂಬ ಪ್ರಮುಖರು ಜನಿವಾರ ಧಾರಣೆ ಮಾಡುತ್ತಾರೆ.

ಬಂಟರ ಕುಟುಂಬ ಮಾತೃಪ್ರಧಾನವಾದದ್ದು. ಭೂಮಿಯ ಮೇಲಿನ ಸಂಪೂರ್ಣ ಒಡೆತನ ಬಂಟರ ವರ್ಗದಲ್ಲಿ ಮಹಿಳೆಯರಲ್ಲಿ ಕೇಂದ್ರೀಕೃತವಾಗಿರುತ್ತದೆ. ಮಾತೃಪ್ರಧಾನ ಕುಟುಂಬಲ್ಲಿ ಸ್ತ್ರೀಯ ಸಂಬಂಧಿಕರಿಗೆ ಎಂದರೆ ತಾಯಿಯ ಅಣ್ಣ ತಮ್ಮಂದಿರಿಗಿರುವ ಸ್ಥಾನಮಾನ, ತಂದೆಯ ಅಣ್ಣ ತಮ್ಮಂದಿರಿಗೆ ದೊರೆಯುವುದಿಲ್ಲ. ಅಳಿಯ ಸಂತಾನ ಪದ್ಧತಿ ಇವರಲ್ಲಿ ಬೆಳೆದುಕೊಂಡು ಬಂದಿರುವ ಜೀವನಕ್ರಮ. ಇವರು ಅನುಸರಿಸುತ್ತಿರುವ ಅಳಿಯ ಸಂತಾನ ಪದ್ಧತಿ ಜೈನ ದೊರೆಯಾದ ಭೂತಾಳ ಪಾಂಡ್ಯನ ಕೊಡುಗೆ ಎಂದು ಭಾವಿಸಿದ್ದಾರೆ. ಪ್ರಾಚೀನ ಸಾಮಾಜಿಕ ಪದ್ಧತಿಯಾಗಿರುವ ಅಳಿಯ ಸಂತಾನ 16–17ನೇ ಶತಮಾನಗಳಲ್ಲಿ ಪರಿಪೂರ್ಣತೆಯನ್ನು ಗಳಿಸಿತು ಎಂದು ನಾಡವ ಯಾನೆ ಬಂಟರು ತಿಳಿದಿದ್ದಾರೆ.

ಬಂಟ ಅಥವಾ ನಾಡವರಲ್ಲಿ ಸುಮಾರು 20 'ಬಳಿ'ಗಳಿವೆ. ಬಳಿ (ಬರಿ) ಬ್ರಾಹ್ಮಣ ಸಮುದಾಯದ ಗೋತ್ರಗಳನ್ನು ಹೋಲುತ್ತದೆಯಾದರೂ, ಇದು ತಾಯಿಯ ಕಡೆಯಿಂದ ಗುರುತಿಸಲ್ಪಡುತ್ತದೆ. ಒಂದೇ ಬಳಿ (ಬರಿ)ಗೆ ಸೇರಿದ ಕುಟುಂಗಳಲ್ಲಿ ವಿವಾಹ ನಿಷೇಧಿಸಲ್ಪಟ್ಟಿದೆ. ಈ ಬಳಿ

ಗಳ ಹೆಸರುಗಳನ್ನು ತಿಳಿಯುವುದು ತುಂಬಾ ಸ್ವಾರಸ್ಯದ ವಿಷಯ. ಬೆಂಗತ್ರಿನ್ನಾಯ, ಬಂಗೇರನ್ನಾಯ, ಬರಮರನ್ನಾಯ, ಬೋನಾನ್ನಾಯ, ಹಿಂಬನ್ನಾಯ, ಕರಮುಂಬರನ್ನಾಯ, ಕಾರಬುರನ್ನಾಯ, ಕೆಲ್ಲಾರ ಬನ್ನಾಯ, ಕೊಚ್ಚರ ಬನ್ನಾಯ, ನೆಲಬನ್ನಾಯ, ಕುಂದೋಣಿ ಬನ್ನಾಯ, ಕುಂದಲನ್ನಾಯ, ಪಾಂಗಾಲನ್ನಾಯ – ಪೆರ್‌ಗದನ್ನಾಯ, ಸಾಲಬನ್ನಾಯ, ಪುಲ್ಯತ್ರನ್ನಾಯ, ಸಾಲನ್ನಾಯ, ತಲಾರ ಬನ್ನಾಯ, ಉಲಿಬನ್ನಾಯ, ಉಪ್ಪೆರನ್ನಾಯ ಎಂಬುವು ಈ ಇಪ್ಪತ್ತು ಬಳಿಗಳ ಹೆಸರುಗಳು.

ಧರ್ಮದಲ್ಲಿ ಬಂಟರು ತಮ್ಮದೇ ಆದಂತಹ ವಿಶಿಷ್ಟ ಪದ್ಧತಿಯನ್ನು ಹೊಂದಿದ್ದು ಹಿಂದೂ ಧರ್ಮವನ್ನು ಅನುಸರಿಸುತ್ತಾರೆ. ಇವರು ದೈವ ಅಥವಾ ಭೂತಗಳ ಆರಾಧನೆಗಳನ್ನೂ ಮಾಡುತ್ತಾರೆ. ಪೂಜಾರಿಯು ದೈವಾರಾಧನೆಗೆ ನಿಲ್ಲುವಾಗ ಖಡ್ಸಲೆ (ಖಡ್ಗ)ಯನ್ನು ಕೈಯುಲ್ಲಿ – ಹಿಡಿದುಕೊಂಡು ಕುಣಿಯುವ ಸಂಪ್ರದಾಯ ಇವರಲ್ಲಿದೆ. ಇವರು ಆರಾಧಿಸುವ ದೈವಗಳು ಹಲವು.

ಕಲ್ಕುಟ್ಟಿ, ಧೂಮಾವತಿ, ಬಂಟಾ, ಕೊಡಮಣಿತ್ತಾಯ, ಪಂಜುರಲಿ, ಜಾಗಂದಾಯ, ಮಹಿಸಂದಾಯ ಎಂಬ ದೈವಗಳನ್ನು ಇವರು ಆರಾಧಿಸುತ್ತಾರೆ. ಇವುಗಳಿಗೆ ಕೋಲ, ನೇಮ, ಬಂಡಿ, ತಂಬಿಲಗಳಿಂದ ಸೇವೆ ನಡೆಯುತ್ತದೆ. ಎಲ್ಲಾ ಹಿಂದೂ ದೇವತೆಗಳನ್ನೂ ಇವರು ಸಾಮಾನ್ಯವಾಗಿ ಪೂಜಿಸುತ್ತಾರೆ.

ಉಪನಾಮಗಳು : ಬಂಟರಲ್ಲಿ ಅನೇಕ ಉಪನಾಮಗಳು(ಅಡ್ಡ ಹೆಸರು)ಗಳಿವೆ. ಅಜಿಲ, ಆಳ್ವ, ಅಧಿಕಾರಿ, ಅತ್ರೆ, ಅರಳ, ಬಲ್ಲಾಳ, ಬಂಗ, ಬಂಟ, ಭಂಡಾರಿ, ಬುಡಲಿ, ಬೈತಾನಿ, ಚೌಟ, ಗಂಭೀರ್ಯ, ಹೆಗ್ಡೆ, ಕಡಂಬ ಕಾಡವ, ಕಂಬ್ಳಿ,(ಕಂಬ್ಳಿ), ಕಾವ, ಕೊಂಡೆ, ಕಿಲ್ಲೆ, ಕುಂದೆಡೆ, ಕಯ್ಯ, ಕರಿಯಾಲ್, ಕೊಬ್ಬಾರಿ, ಮಾಡ, ಮಲ್ಲಿ, ಮಾರ್ಲ, ಮನ್ಯಾ, ಮೇಲಂಟ, ಮದ್ಗ, ಮಾಣಿಕಿ, ಮರ್ತೆ, ಮುಂಡೆಲ್, ನಾನಯ, ನೊಂಡ ಪಕ್ಕಳ, ಪೆರ್ಗಡ, ಪಲಾಯಿ, ಪೂಂಜ, ಪುವಾನಿ, ಪಯ್ಯಜಿ, ರೈ, ಸೊರಪ್, ಸೋಮಿತ, ಶೇಕ, ಸೇನವ, ಸೇರ್ವೆಗಾರ, ಸುಲಯ, ಸೂಡ, ಶೆಟ್ಟಿ, ಸಾಂತ, ಸಾಮಾನಿ, ತೋಳಾರ ಮೊದಲಾದವುಗಳು ಬಂಟರ ಪ್ರಮುಖ ಉಪನಾಮಗಳು.

ಬಿಲ್ಲವ ಸಮಾಜ

ಕಾರ್ಕಳ ತಾಲೂಕಿನ ಮತ್ತೊಂದು ಪ್ರಮುಖ ಜನಾಂಗ ಬಿಲ್ಲವ ಸಮಾಜ. ಈ ಜನಾಂಗದವರನ್ನು 'ಪೂಜಾರಿಗಳು' ಎಂಬ ಹೆಸರಿನಿಂದಲೂ ಕರೆಯುವ ವಾಡಿಕೆಯಿದೆ. ಇವರಿಗೆ ತಮ್ಮದೇ ಆದ ಚಾರಿತ್ರಿಕ ಹಿನ್ನೆಲೆಯಿದೆ. ಬಿಲ್ಲುವಿದ್ಯೆಯಲ್ಲಿ ಪ್ರವೀಣರಾದ ಈ ಜನಾಂಗದವರನ್ನು 'ಬಿಲ್ಲಿನವರು ಎಂದು ಕರೆಯುವ ವಾಡಿಕೆಯಿದ್ದು ಕ್ರಮೇಣ 'ಬಿಲ್ಲವರು' ಎಂದು ಕರೆಯಲ್ಪಟ್ಟರು. ಸದೃಢಕಾಯರಾದ ಬಿಲ್ಲವರು ಬೇಟೆಯಲ್ಲಿ ಎತ್ತಿದ ಕೈ. 16 ಮೂಲ ಬುಡಕಟ್ಟುಗಳನ್ನು (ಬಳಿ) ಹೊಂದಿದ ಇವರು, ಅನೇಕ ಉಪ ಬುಡಕಟ್ಟುಗಳನ್ನೂ ಹೊಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕಿರುವ ಬಿಲ್ಲವರಿಗೆ 'ಹಳೇಪೈಕ' ರೆಂಬ ಹೆಸರು ಕೂಡ ಇದ್ದು, ಅವರು ಮೊದಲು ಯೋಧರಾಗಿದ್ದರೆಂಬ ಉಲ್ಲೇಖವಿದೆ. ಅವರು ಕನ್ನಡದಲ್ಲಿ ಮಾತನಾಡಿದರೆ, ಇವರು ತುಳು ಭಾಷೆಯನ್ನು ಆಡುತ್ತಾರೆ.

ಈ ಜನಾಂಗದ ಯುಗ ಪುರುಷರುಗಳಲ್ಲಿ 'ಕೋಟಿ ಚೆನ್ನಯ' ಎಂಬ ಅವಳಿಜವಳಿ ಯುವಕರು ಪ್ರಮುಖ ಪಾತ್ರವಹಿಸಿದ್ದಾರೆ. ದೇವಿ ಬೈದೆತ್ತಿ ಎಂಬುವಳ ಗರ್ಭದಲ್ಲಿ ಜನಿಸಿದ ಈ ಪುಣ್ಯಪುರುಷರು ಶಾಂತಿ ಸಂಯಮದಿಂದ ಸತ್ಯ-ಧರ್ಮ ಸ್ಥಾಪನೆಗೆ ತನ್ಮೂಲಕ ತುಳುನಾಡಿನ ಏಳಿಗೆಗಾಗಿ ಶ್ರಮಿಸಿ ತಮ್ಮ ಜೀವನವನ್ನು ಪಾವನವಾಗಿರಿಸಿಕೊಂಡಿದ್ದರು. ಅವರ ಆದರ್ಶಗಳನ್ನೂ ಇಂದು ಕೂಡ ಬಿಲ್ಲವ ಸಮಾಜದ ಜನತೆ ನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿದೆ.

ಮಾತೃಪ್ರಧಾನ ಕುಟುಂಬ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿರುವ ಬಿಲ್ಲವರು ಅಳಿಯ ಂತಾನದ ಬಗ್ಗೆ ಹೆಮ್ಮೆ ಪಡುತ್ತಾರೆ. ಮದುವೆ ಮುಂಜಿಗಳು ಗಂಡಿನ ಮನೆಯಲ್ಲಿ ನಡೆಯುವುದಲ್ಲದೇ, ಡಿಗೆತೊಡಿಗೆಗಳಲ್ಲಿ ವಿಶೇಷ ಬದಲಾವಣೆಯಿಲ್ಲದೇ ಸಮಾಜದ ಇತರೇ ವರ್ಗಗಳಂತೆ ಉಡುಪನ್ನು ರಿಸುತ್ತಾರೆ. ಈ ಜನಾಂಗದ ದೈನಂದಿನ ಕಸುಬುಗಳಲ್ಲಿ ಕಳ್ಳು ಇಳಿಸುವಿಕೆ, ಕೃಷಿ ಅಥವಾ ಸಾಗುವಳಿ ಶು ಸಂಗೋಪನೆ, ಹೈನುಗಾರಿಕೆ, ಬೀಡಿ ಕಟ್ಟುವುದು ಪ್ರಮುಖವಾಗಿದೆ. ಇತ್ತೀಚಿನ ದಶಕಗಳಲ್ಲಿ. ಜನಾಂಗದ ಯುವಕರು ವಿದ್ಯಾವಂತರಾಗಿ ಸಮಾಜದ ವಿವಿಧ ರಂಗಗಳಲ್ಲಿ ದುಡಿಯುತ್ತಿದ್ದಾರೆ. ರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಈ ಸಮಾಜವನ್ನು ಕೇರಳದ 'ನಾರಾಯಣ ಗುರು ಸ್ವಾಮಿಗಳು' 908ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದ್ದಾಗ, ಪರಿವರ್ತಿಸಿದರು. ಅನೇಕ ಕಡೆಗಳಲ್ಲಿ ಶಾಲಾ ಮಾಧ್ಯಮ ಳನ್ನು ಸ್ಥಾಪಿಸಿ, ತುಳುನಾಡಿನ ಬಿಲ್ಲವ ಸಮಾಜದವರು ವಿದ್ಯಾರ್ಜನೆ ಮಾಡಲು ಸಹಾಯಕರಾದರು. ವಿದ್ಯೆ ಗಳಿಸಿ ಸ್ವತಂತ್ರರಾಗಿರಿ, ಸಂಘಟನೆಯಿಂದ ಶಕ್ತಿಯುತರಾಗಿರಿ' ಎಂಬ ಅವರ ಧ್ಯೇಯ ವಾಕ್ಯಗಳನ್ನು ಚರಣೆಗೆ ತರಲು ಬಿಲ್ಲವ ಸಮಾಜದವರು ಶಕ್ತರಾಗಿದ್ದಾರೆ. ಬಿಲ್ಲವ ಸೇವಾ ಸಮಾಜ ಈಗ ತಮ್ಮ ಮಾಜದ ಏಳಿಗೆಗಾಗಿ ಶ್ರಮಿಸುತ್ತಿದೆ.

ಕೊರಗರು

ಕಾರ್ಕಳ ತಾಲೂಕಿನ ಕೊರಗರು ನಿಮ್ನವರ್ಗದವರಾಗಿದ್ದು, ಬಡತನದ ರೇಖೆಯ ಕೆಳಗೇ ಬದುಕನ್ನು ಸಾಗಿಸುತ್ತಿದ್ದಾರೆ. ಅಧಿಕ ಸಂಖ್ಯೆಯಲ್ಲಿರುವ ಕೊರಗರು ಮೊದಲು ಊರಿಂದ ಊರಿಗೆ ವಲಸೆ ಹೋಗುತ್ತಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಒದಗಿಸಿದ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಶಾಶ್ವತವಾಗಿ ಒಂದು ಕಡೆ ನೆಲಸಿ ಶಾಶ್ವತ ಕೃಷಿಯನ್ನು ಮಾಡಿಕೊಂಡಿದ್ದಾರೆ. ಆದರೆ ಹೆಚ್ಚಿನ ಭೂಮಿಯ ಒಡೆತನ ಅವರದ್ದಾಗಿರದೇ ಇದ್ದುದರಿಂದ ಕೊರಗರು ಉಪಕಸುಬನ್ನು ಅವಲಂಬಿಸಿಕೊಂಡೇ ತಮ್ಮ ಜೀವನವನ್ನು ಸಾಗಿಸಬೇಕಾಗಿದೆ. ದಿನಗೂಲಿ, ಬೆತ್ತದಿಂದ ಬುಟ್ಟಿಯನ್ನು ನೇಯುವುದು, ಜಾಡ ಮಾಲಿಗಳಾಗಿ ದುಡಿಯುವುದು ಮೊದಲಾದ ಕೆಲಸಗಳಿಂದ ಜೀವನ ನಿರ್ವಹಣೆಯನ್ನು ಮಾಡಿ ಕೊಳ್ಳುತ್ತಿದ್ದಾರೆ. ಸರ್ಕಾರ ಉಚಿತ ನಿವೇಶನ, ಹಸು, ಎಮ್ಮೆ ಮುಂತಾದವುಗಳನ್ನು (ತೆಂಗಿನಸಸಿಗಳು) ಹಂಚಿ ಇವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ನೆರವಾಗುತ್ತಿದೆ.

ಸಾಮಾನ್ಯವಾಗಿ ಕೊರಗರ ಸಾಮಾಜಿಕ ಜೀವನವನ್ನು ನೀಲಗಿರಿಯ ತೋಡರ ಜೀವನಕ್ಕೆ ಹೋಲಿಸಬಹುದು. ಸಣ್ಣ ಜೋಪಡಿಯಲ್ಲಿ ಇವರ ವಾಸ. ಕೊರಗರ ಉಪಪಂಗಡಕ್ಕೆ ಸೊಪ್ಪು ಕೊರಗರು ಎಂದು ಕರೆಯುತ್ತಾರೆ. ಹಿಂದೆ ಇವರು ತಮ್ಮ ಸೊಂಟಕ್ಕೆ ಸೊಪ್ಪುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಈಗ ವಸ್ತ್ರಗಳನ್ನು ಧರಿಸುತ್ತಿದ್ದಾರೆ. ಇವರು ಮಾಂಸಾಹಾರಿಗಳು. ದಿ॥ ಗೋವಿಂದ ಪೈಯವರೊಮ್ಮೆ– ಕೊರಗರು ಹುಲಿಯ ಮಾಂಸವನ್ನು ತಿನ್ನುವುದನ್ನು ನೋಡಿದ್ದರಂತೆ. ಇವರು ತಲೆಗೆ ತೆಂಗಿನ ಹಾಳೆಯಿಂದ ಮಾಡಿದ ಟೋಪಿಯನ್ನು ಹಾಕುತ್ತಾರೆ. ಕಷ್ಟಸಹಿಷ್ಣುಗಳಾದ ಕೊರಗರಿಗೆ ವಿದ್ಯಾರ್ಜನೆ ಮಾಡಲು ಸರ್ಕಾರ ಮತ್ತು ಸಮಾಜ ಉತ್ತೇಜನವನ್ನು ನೀಡುತ್ತಿದೆ. ಹಳ್ಳಿಯ ಕಡೆ ಸಾಮಾನ್ಯವಾಗಿ ಕೊರಗರ ಗಂಡಸರು ಲಂಗೋಟಿಯನ್ನು ಧರಿಸುತ್ತಾರೆ.

ಈ ಮೇಲೆ ಹೆಸರಿಸಿದವರೇ ಅಲ್ಲದೆ ಮ್ಯೊಲಿ, ಶೆಟ್ಟಿಗಾರ, ದೇವಾಡಿಗ, ರಾಣೆ,ಮೊದಲಾದ ಪಂಗಡದವರು ಕಾರ್ಕಳ ತಾಲೂಕಿನಾದ್ಯಂತ ಇತರ ಸಮಾಜ ಬಾಂಧವರೊಡನೆ ಬಾಳಿ ಬದುಕುತ್ತಿದ್ದಾರೆ.

ಸಂಘ ಸಂಸ್ಥೆಗಳು

ಸಮಾಜ ಮಂದಿರ ಸಭಾ, ಮೂಡಬಿದಿರೆ

ಭರತೇಶ ವೈಭವವನ್ನು ಬರೆದ ಕವಿ ರತ್ನಾಕರವರ್ಣಿಯು ತವರೂರಾದ ಮೂಡಬಿದಿರೆಯ

ಸಮಾಜ ಮಂದಿರ ಸಭಾ ಆ ಊರಿನ ಜನತೆಯ ಹೆಮ್ಮೆಯ ಸಾಂಸ್ಕೃತಿಕ ಕೇಂದ್ರ. 1957ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಮಾಜ ಮಂದಿರ ಮೂಡ ಬಿದಿರೆಯ ಜನತೆಯ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಂಪೂರ್ಣ ಯಶಸ್ಸನ್ನು ಸಾಧಿಸಿದೆ. ಸಮಾಡ ಮಂದಿರ, ಸಾಮಾಜಿಕ ಕಲ್ಯಾಣ ಕೇಂದ್ರವಾಗಿ ತನ್ನ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಸಮಾನ ಸಮಸ್ಯೆಗಳ ಬಗ್ಗೆ ಚರ್ಚಿಸುವುದೇ ಅಲ್ಲದೇ, ನೃತ್ಯ, ನಾಟಕ, ಸಂಗೀತ ಮುಂತಾದ ಜನಾದರಿಣೀಯ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಾದೇಶಿಕ ಜನತೆಯನ್ನು ರಂಜಿಸುತ್ತದೆ. ಅಲ್ಲದೇ, ವಿದ್ವಾಂಸರು, ಸಾಹಿತಿಗಳು, ಮತ್ತು ಧಾರ್ಮಿಕ ಮುಖಂಡರುಗಳನ್ನು ಆಹ್ವಾನಿಸಿ ಅಲ್ಲಿಯ ಜನತೆಗೆ ವಿವಿಧ ರಂಗ ಚಟುವಟಿಕೆಗಳ ಬಗ್ಗೆ ಜ್ಞಾನವನ್ನು ಸಂಪಾದಿಸಿಕೊಡುವುದರಲ್ಲಿ ಸಮಾಜ ಮಂದಿರ ಹಿಂದೆ ಬಿದ್ದಿಲ್ಲ. ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಮೂಡಬದಿರೆಯ ಸಮಾಜ ಮಂದಿರ ಸಭಾವನ್ನು ಸಮಾಜ ಕಲ್ಯಾಣ ಕೇಂದ್ರವಾಗಿ ಮಾನ್ಯತೆ ಮಾಡಿರುವುದು ಈ ಮಂದಿರದ ಕಾರ್ಯಚಟುವಟಿಕೆಗಳ ವೈಖರಿಯ ಲಕ್ಷಣವಲ್ಲದೇ ಮತ್ತೇನು? ಹರಿಕಥೆ, ಯಕ್ಷಗಾನ ಮೊದಲಾದ ಕಾರ್ಯಕ್ರಮಗಳನ್ನು ಶ್ರೀ ಸರಸ್ವತೀ ಸೇವಾ ಸಂಘದ ವತಿಯಿಂದ ಮೊದಲು ನಡೆಸಿಕೊಂಡು ಬರುತ್ತಿದ್ದು ಈಗ ಮೇಲಿನ ಕಾರ್ಯಕ್ರಮಗಳನ್ನು ಸಮಾಜ ಮಂದಿರದ ವತಿಯಿಂದ ಮುಂದುವರಿಸಿಕೊಂಡು ಬರಲಾಗುತ್ತಿದೆ. ಸಮಾಜ ಂದಿರದ 'ಸಮಾಜ ಭವನ'ವು ಕನ್ನಡದ ಉದ್ಧಾಮ ಕವಿ ದಿವಂಗತ ಮಂಜೇಶ್ವರ ಗೋವಿಂದ ಪೈಯವರ ದಿವ್ಯಹಸ್ತದಿಂದ ಉದ್ಘಾಟಿಸಲ್ಪಟ್ಟಿದ್ದು ಈಗ ಬಿಡುವಿಲ್ಲದ ಕಾರ್ಯಕ್ರಮಗಳನ್ನು ಅಲ್ಲಿ ನಡೆಸಿಕೊಂಡು ಬರಲು ಅನುಕೂಲವಾಗಿದೆ.

ಸಮಾಜ ಮಂದಿರದ ಆಶ್ರಯದಲ್ಲಿ 'ಉದಯ ಕಲಾನಿಕೇತನ' ಮಹಿಳಾ ಸಮಾಜ, ವಿಜ್ಞಾನ ಮಂದಿರ ಮತ್ತು ಪುಸ್ತಕ ಭಂಡಾರಗಳು ಸದಾ ಕಾರ್ಯ ನಿರತವಾಗಿರುತ್ತವೆ. ಸಾರ್ವಜನಿಕ ಆರೋಗ್ಯ ಪ್ರಥಮ ಚಿಕಿತ್ಸೆ, ಕುಟುಂಬ ಯೋಜನೆ, ವಸ್ತು ಪ್ರದರ್ಶನ ಮುಂತಾದವುಗಳ ಬಗ್ಗೆ ಆಗಾಗ ಗೋಷ್ಠಿಗಳನ್ನು ನಡೆಸಿದ ಕೀರ್ತಿ ಸಮಾಜ ಮಂದಿರಕ್ಕಿದೆ. ಈ ಸಾಧನೆಗಳಲ್ಲದೇ, ಸಮಾಜ ಮಂದಿರಸಭಾ, ದಸರಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವಗಳನ್ನು ವರ್ಷಂಪ್ರತಿ ನಡೆಸಿಕೊಂಡು ಬರುತ್ತಿದೆ. 1945ರಲ್ಲಿ ಪ್ರಾರಂಭವಾದ ದಸರಾ ಕ್ರೀಡೋತ್ಸವಗಳನ್ನು ಹಾಗೂ ಸಾಹಿತ್ಯ ಸಾಂಸ್ಕೃತಿಕ ಉತ್ಸವಗಳನ್ನು ಇಂದೂ ಕೂಡ ಮುಂದುವರಿಸಿಕೊಂಡು ಬಂದಿರುವ ಸಾಧನೆ ಸಮಾಜಮಂದಿರದ್ದಾಗಿದೆ.

ಸಮಾಜ ಮಂದಿರ ಸಭಾ ಈಗ ಎಸ್. ಎನ್. ಮೂಡಬಿದಿರಿ ಮತ್ತು ಜಿ. ವಾಸುದೇವ ಪೈ ಇವರ ಹೆಸರಿನಲ್ಲಿ 15ಲಕ್ಷ ರೂಗಳ ವೆಚ್ಚದಲ್ಲಿ 'Founders memorial complex' ಅನ್ನು ಸಮಾಜ ಮಂದಿರದ ಸ್ಥಾಪಕ ಸದಸ್ಯರ ಸ್ಮರಣಾರ್ಥ ಕಟ್ಟುತ್ತಲಿದೆ. ಈ ಸಂಕೀರ್ಣದಲ್ಲಿ ಕೆಲವು ಹೊಸ ವಿದ್ಯಾ ಸಂಸ್ಥೆಗಳನ್ನೂ ತೆರೆಯುವ ಹಂಬಲ ಸಮಾಜ ಮಂದಿರದ ಈಗಿನ ಸದಸ್ಯರಿಗಿದೆ. ಪ್ರಸ್ತುತ ಸಮಾಜ ಮಂದಿರದ ಕಟ್ಟದಡಲ್ಲಿ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಗಳಾದ ರೋಟರಿ, ಲಯನ್ಸ್ ಮತ್ತು ಜೇಸೀ ಕಾರ್ಯಕ್ರಮಗಳು ಕೂಡ ಜರಗುತ್ತಿವೆ.

ವನಿತಾ ಸಮಾಜ, ಕಾರ್ಕಳ

ಮಹಿಳೆಯರ ಆಶೋತ್ತರಗಳನ್ನು ಈಡೇರಿಸಲು ಸಹಾಯಕವಾಗಬಲ್ಲ 'ವನಿತಾ ಸಮಾಜ' ಕಾರ್ಕಳದಲ್ಲಿ 1956ರಲ್ಲಿ ಸ್ಥಾಪಿತವಾಯಿತು. ಇದಕ್ಕೂ ಮುಂಚೆ 1940 ರಿಂದ 'ವನಿತಾ ವೃಂದ' ಎಂಬ ಮಹಿಳಾ ಸಂಘ ಸಂಗೀತ, ಕಲೆಗಳ ಪೋಷಣೆಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿತ್ತು. ಶ್ರೀಮತಿ ತಾರಾ ಶೆಣೈ, ಶ್ರೀಮತಿ ಮನೋರಮ ಸಂಪಿಗೆತ್ತಾಯ, ಶ್ರೀಮತಿ ಜೆನ್ನಿಬಾಯಿ ಕಿಣಿ ಮುಂತಾದವರ ನೇತೃತ್ವದಲ್ಲಿ ಸ್ಥಾಪಿತವಾದ ಈ ವನಿತಾ ಸಮಾಜ, ತನ್ನದೇ ಆದ ಸ್ಥಳದ ಕೊರತೆಯಿಂದಾಗಿ ಆನಂದ ಭವನ, ಎಸ್. ವಿ. ಟಿ ಶಾಲೆ ಮುಂತಾದ ಸ್ಥಳಗಳಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದು, ಈಗ ತನ್ನದೇ ಆದ ಕಟ್ಟಡದ ನಿರ್ಮಾಣದಲ್ಲಿ ಪ್ರವೃತ್ತವಾಗಿದೆ. ಸೋಶಿಯಲ್ ವೆಲ್‌ಫೇರ್

ಬೋರ್ಡ್‌ನಿಂದ ಪಡೆದ ಧನ ಸಹಾಯ ಹಾಗೂ ಊರಿನವರ ಧನ ಸಹಾಯದ ಸಹಕಾರದಿಂದ ವನಿತಾ ಸಮಾಜ ತನ್ನ ಸ್ವಂತ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ಪ್ರತಿವರ್ಷ 30 - 40 ಮಂದಿ ಆಸಕ್ತ ಮಹಿಳೆಯರು ಇಲ್ಲಿ ಹೊಲಿಗೆ ತರಬೇತಿಯನ್ನು ಪಡೆಯುತ್ತಿದ್ದಾರೆ. ತರಬೇತಿ ಪಡೆದ ಮಹಿಳೆಯರು ವನಿತಾ ಸಮಾಜದ ಉಪಯೋಗವನ್ನು ವೈಯುಕ್ತಿಕವಾಗಿ ಅನುಭವಿಸುತ್ತಿದ್ದಾರೆ. ಸ್ತ್ರೀಯರ ಜೀವನದ ಒಂದಂಶವಾದ ಗುಡಿಕೈಗಾರಿಕೆ, ಕರಕುಶಲ ವಸ್ತುಗಳ ತಯಾರಿಕೆ ಮತ್ತು ಪಾಕ ಶಾಸ್ತ್ರಗಳಲ್ಲಿ ಆಸಕ್ತ ವನಿತೆಯರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವಲ್ಲಿ ವನಿತಾ ಸಮಾಜ ಹಿಂದೆ ಬಿದ್ದಿಲ್ಲ. ಮಹಿಳೆಯರ ಜ್ಞಾನಾಭಿವೃದ್ಧಿಗೆ ಪೋಷಕವಾದ ಭಾಷಣ ಸ್ಪರ್ಧೆಗಳನ್ನು ಆಗಾಗ ಏರ್ಪಡಿಸುವುದೇ ಅಲ್ಲದೇ ಪ್ರತಿ ಭಾನುವಾರ ಭಜನೆ ಮತ್ತು ಆಟಾಟೋಪ ಸ್ಪರ್ಧೆಗಳನ್ನು ಮುಂದುವರಿಸಿಕೊಂಡು ಬರುತ್ತಿವೆ. ನೃತ್ಯ ಮತ್ತು ಸಂಗೀತ ತರಬೇತಿಗಳನ್ನು ಸಮಾಜ ನಡೆಸುತ್ತಿದೆ. ಅವಿವಾಹಿತ ಸೋದರಿಯರಿಗೆ ಅವರ ಜೀವನ ಸಂಗಾತಿಗಳನ್ನು, ಸೂಕ್ತ ನೆಂಟಸ್ತಿಕೆಯ ಮೂಲಕ, ಕಂಡುಕೊಳ್ಳಲು ಬೇಕಾದ ಸಲಹೆ ಸಹಕಾರಗಳನ್ನು ವನಿತಾ ಸಮಾಜ ನೀಡುತ್ತಿದೆ. 1960 ರಲ್ಲಿ ಕಾರ್ಕಳದ 'ವನಿತಾ ಸಮಾಜ' ಮಹಿಳಾ ಪರಿಷತ್‌ನ ಸಭೆಯನ್ನು ಏರ್ಪಡಿಸಿ ತನ್ನ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡಿದೆ.

ಆರ್ಯ ಸಮಾಜ, ಕಾರ್ಕಳ

ಸ್ವಾಮಿ ಶ್ರದ್ಧಾನಂದರು ಮಂಗಳೂರಿನಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿ, ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರನ್ನು 1930 ರಲ್ಲಿ ಕಾರ್ಕಳಕ್ಕೆ ಪ್ರಚಾರಕ್ಕಾಗಿ ಕಳುಹಿಸಿದಾಗ ಇಲ್ಲಿ ಆರ್ಯಸಮಾಜದ ಸ್ಥಾಪನೆಯಾಯಿತು. ಕಾರ್ಕಳದ ಆರ್ಯಸಮಾಜ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಹನೀಯರಲ್ಲಿ ದಿವಂಗತರುಗಳಾದ ವೆಂಕಟೇಶ ಪ್ರಭುಗಳು, ಸೀತಾರಾಮ ಆಚಾರ್, ಮಹಾಬಲ ಅಡ್ಕಂತಾಯರು, ಮಂಜುನಾಥ ಶೆಣೈಯವರು, ವಕೀಲ ರಾಮಚಂದ್ರರಾಯರು ಪ್ರಮುಖರು. ಅಲ್ಲದೇ ಶ್ರೀಯುತರುಗಳಾದ ಎಂ. ಎಸ್. ಅಧಿಕಾರಿಗಳು, ಸಾಲ್ಮರದ ಸದಾನಂದ ಶೆಣೈಯವರು, ವಾಸುದೇವ ಉಪಾಧ್ಯಾಯರು, ಮಾಧವ ಶೆಣೈ ಮತ್ತು ಗಣಪತಿ ಶೆಣೈಯವರು. ಸು. ನಾ. ಮಲ್ಯರು, (ವಿಕ್ರಮ ಪತ್ರಿಕೆಯ ಸಂಪಾದಕರು) ಆರ್. ಎಸ್. ವಿ ಶೆಣೈಯವರು ಹಾಗೂ ಕೇಶವ ರಾಮಚಂದ್ರ ಶೆಣೈಯವರು ಆರ್ಯ ಸಮಾಜದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಸ್ವಾಮಿ ದಯಾನಂದ ಸರಸ್ವತಿಯವರ 'ಸತ್ಯಾರ್ಥ ಪ್ರಕಾಶ' ಇವರುಗಳ ಮೇಲೆ ಅಗಾಧ ಪರಿಣಾಮಗಳನ್ನು ಬೀರಿತ್ತು. ಆರ್ಯ ಸಮಾಜದ ಕಾರ್ಯಕರ್ತರು ಮತ್ತು ಹಿತೈಷಿಗಳು ಸಾಪ್ತಾಹಿಕ ಕಾರ್ಯಕ್ರಮಗಳನ್ನು ನಿಯೋಜಿಸಿಕೊಂಡು ವೇದ ಮಂತ್ರ ಪಠಣ, ಅಗ್ನಿಹೋತ್ರ, ಭಗವದ್ಗೀತೆ, ಉಪನಿಷತ್ತು ಮತ್ತು ಆರ್ಯ ಸಮಾಜದ ವಿದಾತ್ತ ತತ್ವಗಳನ್ನು ಅಭ್ಯಾಸ ಮಾಡುತ್ತಿದ್ದರು. 1939 ರಲ್ಲಿ ಆಂಗ್ಲ ಸರಕಾರ ಆರ್ಯ ಸಮಾಜದ ಮೇಲೆ ಪ್ರತಿಬಂಧವನ್ನು ಹೇರಿದಾಗ ಕೆಲವರು ಹೈದರಾಬಾದ್ ಆರ್ಯ ಸಮಾಜದ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

1939 ರಲ್ಲಿ ನಾರಾಯಣ ಸ್ವಾಮಿ ಎಂಬ ವಿದ್ವಾಂಸರು ಕಾರ್ಕಳಕ್ಕೆ ಬಂದಾಗ ಸಮಾಜದ ಸದಸ್ಯರು ಇಡೀ ಸಮಾಜದ ಪರಿವರ್ತನೆಗಾಗಿ ಹೋರಾಡಲು ಮುಂದಾದರು. ಇವರುಗಳು ಕ್ರೈಸ್ತ ಧರ್ಮದ ಪ್ರಚಾರವನ್ನು ತಡೆಯುವಲ್ಲಿ ಯಶಸ್ವಿಯಾದರು ಜನರಲ್ಲಿ ಮತಾಂತರದ ವಿರುದ್ಧ ಜಾಗೃತಿಯನ್ನುಂಟು ಮಾಡಲು, ಪ್ರಶ್ನೋತ್ತರ ಮತ್ತು ಪತ್ರವ್ಯವಹಾರ ಮಾಧ್ಯಮಗಳನ್ನು ವಿವೇಚನೆಯಿಂದ ಬಳಸಿಕೊಂಡರು. ಸಂತೆ ಮತ್ತು ಜಾತ್ರೆಗಳ ಸಮಯದಲ್ಲಿ ಆರ್ಯ ಸಮಾಜದ ತತ್ವಗಳ ಪ್ರಚಾರ ಅವ್ಯಾಹತವಾಗಿ ನಡೆಯುತ್ತಿತ್ತು. ಪ್ರಾಣಿ ಹಿಂಸೆಯ ವಿರುದ್ಧ ಯುದ್ಧವನ್ನು ಸಾರಿ, ಕಾರ್ಕಳದ ಮಾರಿಜಾತ್ರೆಯ ಸಮಯದಲ್ಲಿ ಮಾರಿಗೆ ಅರ್ಪಿಸುವ ಕುರಿ ಕೋಳಿ ಕೋಣ ಮುಂತಾದುವುಗಳ

ಬಲಿಯನ್ನು ನಿಲ್ಲಿಸುವುದರಲ್ಲಿ ಪ್ರಧಾನ ಪಾತ್ರವಹಿಸಿದರು. 1947ರ ನಂತರ ಮಾರಿಗೆ ಕೊಡುವ ಬಲಿ ಸಂಪೂರ್ಣವಾಗಿ ನಿಂತಿದೆ.

1940ರ ಸುಮಾರಿನಲ್ಲಿ ನಾಲ್ಕೈದು ಮಂದಿ ಕ್ರೈಸ್ತ ಸಮಾಜದವರನ್ನು ಹಿಂದೂ ಧರ್ಮಕ್ಕೆ ಪರಿವರ್ತನೆ ಗೊಳಿಸುವುದರಲ್ಲಿ ಸಮಾಜದ ಕಾರ್ಯಕರ್ತರು ಯಶಸ್ವಿಯಾದರು. ತೀರ್ಥ ಹಳ್ಳಿಯ ಶ್ರೀ ಜ್ಞಾನೇಂದ್ರ ಪ್ರಭುಗಳು ಮತ್ತು ಅವರ ಕುಟುಂಬದವರು ಮೊದಲು ಕ್ರೈಸ್ತರಾಗಿದ್ದು ನಂತರ ಹಿಂದೂ ಧರ್ಮಕ್ಕೆ ಪರಿವರ್ತನೆಗೊಂಡು ಮಂಗಳೂರಿನಲ್ಲಿ ಬಂದು ನೆಲಸಿದರು. ಅವರ ಮಗನಿಗೆ ಗೌಡ ಸಾರಸ್ವತ ಬ್ರಾಹ್ಮಣರ ವಧುವನ್ನು ಕೊಟ್ಟು ವಿವಾಹವನ್ನು ಜರುಗಿಸುವುದರಲ್ಲಿ ಕಾರ್ಕಳದ ಆರ್ಯ ಸಮಾಜದ ಬಂಧುಗಳು ನೆರವಾದರು. ಇದೊಂದು ಸಾಮಾಜಿಕ ಕ್ರಾಂತಿಯಾಯಿತು. ಇದೇ ಸಮಯದಲ್ಲಿ ಕಾರ್ಕಳದಲ್ಲಿ 'ಶುದ್ಧಿ ಚಳುವಳಿ' ಪ್ರಾರಂಭವಾಯಿತು. ಕಾರ್ಕಳದ ಹಿಂದೂ ಸಮಾಜದ ಭಾಂದವರೊಬ್ಬರು ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ತಮ್ಮ ನಾಲ್ಕು ಮಕ್ಕಳನ್ನು ಕ್ರೈಸ್ತಪಾದ್ರಿಗಳಿಗೆ ಒಪ್ಪಿಸಿದ್ದರು. ಈ ಸಂಗತಿ ತಿಳಿದ ಆರ್ಯ ಸಮಾಜದ ಕಾರ್ಯಕರ್ತರು ಪಾದ್ರಿಯವರಿಂದ ಆ ಮಕ್ಕಳನ್ನು ಕರೆತಂದು ಹಿಂದುಗಳಾಗಲು ಶುದ್ಧಿಗೊಳಿಸಿದರು. ಆ ನಾಲ್ವರು ಮಕ್ಕಳಿಗೆ ಆರ್ಯಸಮಾಜದ ವತಿಯಿಂದ ಮಂಗಳೂರಿನ "ಶ್ರದ್ಧಾನಂದ ಸೇವಾಶ್ರಮ"ದಲ್ಲಿ ಆಶ್ರಯವನ್ನು ಕೊಡಲಾಯಿತು. ಇದೇ ಕಾಲದಲ್ಲಿ ರಾಂದೇವ್, ಮಂಜುನಾಥ ಪೈ ಮತ್ತು ರುದ್ರದೇವ ಶಾಸ್ತ್ರಿ ಹುಬ್ಬಳ್ಳಿ ಇವರುಗಳಿಗೆ ಲಾಹೋರಿನ ಗುರು ಕುಲದಲ್ಲಿ ವಿದ್ಯಾಭ್ಯಾಸ ಪಡೆಯಲು ಅವಕಾಶ ದೊರಕಿತು. ಮುಂದೆ ಮಂಜುನಾಥ ಶೆಣೈಯವರ ಮಗಳನ್ನು ರುದ್ರದೇವ ಶಾಸ್ತ್ರಿಯವರಿಗೆ ಕೊಟ್ಟು ಅಂತರಜಾತಿಯ ವಿವಾಹ ನಡೆಯಲು ಆರ್ಯ ಸಮಾಜ ನೆರವಾಯಿತು. ಇದೊಂದು ಸಮಾಜ ಪರಿವರ್ತನೆಯ ಮತ್ತೊಂದು ಕುರುಹಾಯಿತು.

1944 ರಲ್ಲಿ ಧರ್ಮಪಾಲರೆಂಬ ಹಿಂದೀ ಅಧ್ಯಾಪಕರು ಕಾರ್ಕಳಕ್ಕೆ ಬಂದಾಗ ಆರ್ಯ ಸಮಾಜದ ಕಾರ್ಯವಿಧಾನ ಅವರನ್ನು ಆಕರ್ಷಿಸಿತು. ಅವರ ಸಹ ಧರ್ಮಿಣಿ ತೀರಿಕೊಂಡಾಗ ಅವರು ಜೀವನದಲ್ಲಿ ಜಿಗುಪ್ಸೆಗೊಂಡು ಲಾಹೋರಿಗೆ ಹೋಗುವ ತಮ್ಮ ಬಯಕೆಯನ್ನು ಶ್ರೀಯುತ ಕೇಶವ ರಾಮಚಂದ್ರ ಶೆಣೈಯವರಲ್ಲಿ ನಿವೇದಿಸಿಕೊಂಡಾಗ ಅವರು ಅಂತರ ರಾಷ್ಟ್ರೀಯ ಆರ್ಯ ಸಂಘ (International Aryan League) ದೊಡನೆ ಪತ್ರ ವ್ಯವಹಾರ ನಡೆಸಿ ಧರ್ಮಪಾಲರನ್ನು ಲಾಹೋರಿಗೆ ಕಳುಹಿಸುವಲ್ಲಿ ಸಫಲರಾದರು. ಅವರು 1946 ರಲ್ಲಿ ಪುನಃ ಕಾರ್ಕಳಕ್ಕೆ ಬಂದಾಗ ಮಂಗಳೂರಿನ ಶ್ರದ್ಧಾನಂದ ಸೇವಾಶ್ರಮದ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಡಲಾಯಿತು. ಶ್ರೀ ಯು. ಎಸ್ ಗೋಪಾಲನಾಯಕರು ಈ ಅನಾಥಾಶ್ರಮದ ಮೂಲ ಸ್ಥಾಪಕರಾಗಿದ್ದರು.

ಶ್ರೀ ಭುಜಬಲಿ ಬ್ರಹ್ಮಚರ್ಯಾಶ್ರಮ, ಹಿರಿಯಂಗಡಿ,

ಶ್ರೀ ಭುಜಬಲಿ ಬ್ರಹ್ಮಚರ್ಯಾಶ್ರಮವು 1944ರ ಸೆಪ್ಟಂಬರ್ 27ರ ವಿಜಯ ದಶಮಿಯ ಶುಭದಿನದಂದು ಶ್ರೀ ಧರ್ಮಸ್ಥಳದ ಅಂದಿನ ಧರ್ಮಾಧಿಕಾರಿಗಳಾಗಿದ್ದ ದಿ॥ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ, ಕಾರ್ಕಳ ಶ್ರೀ ಜೈನ ಧರ್ಮ ಜೀರ್ಣೋದ್ಧಾರಕ ಸಂಘದ ಆಶ್ರಯದಲ್ಲಿ ಸ್ಥಾಪನೆಯಾಯಿತು. ಜೈನ ವಿದ್ಯಾರ್ಥಿಗಳಿಗಾಗಿರುವ ಕರ್ನಾಟಕದ ಏಕೈಕ ಗುರುಕುಲವಾದ ಈ ಆಶ್ರಮವು ತನ್ನ 39ನೇ ವರ್ಷದಲ್ಲಿ ಸುಮಾರು 5 ಲಕ್ಷ ರೂಪಾಯಿ ವೆಚ್ಚದಲ್ಲಿ ತನ್ನದೇ ಆದ ವಿದ್ಯಾರ್ಥಿ ನಿಲಯವನ್ನು ಹೊಂದಿದೆ. ವಿದ್ಯಾರ್ಥಿಗಳ ದೈಹಿಕ ಮಾನಸಿಕ ಬೆಳವಣಿಗೆಗೆ ಬೇಕಾಗುವ ಪರಿಸರಗಳನ್ನು ಒದಗಿಸಿಕೊಡುವುದರೊಂದಿಗೆ ಅವರಲ್ಲಿ ಸಾಂಸ್ಕೃತಿಕ ಮೌಲ್ಯಗಳು ಕುಡಿವರಿದು ಹೆಮ್ಮರವಾಗುವಂತಹ ಶಾಂತ ವಾತಾವರಣವನ್ನು ಈ ಆಶ್ರಮ ಕಲ್ಪಿಸಿಕೊಡುತ್ತಿದೆ.

ಬಡವಿದ್ಯಾರ್ಥಿಗಳನ್ನು ಪ್ರೋತ್ಸಹಿಸಿ, ವಿದ್ಯಾದಾನವನ್ನು, ಧಾರ್ಮಿಕ ಮನೋಭಾವನೆಯನ್ನು ಬೆಳೆಸುವುದರ ಜೊತೆಗೆ ಸಮಾಜಕ್ಕೆ ಉತ್ತಮ ವಿದ್ವಾಂಸರನ್ನು ಕೊಡುವಲ್ಲಿ ಈ ಆಶ್ರಮ ಶ್ರಮಿಸುತ್ತಿದೆ.

ಶ್ರೀ ಬಾಹುಬಲಿ ಶ್ರಾವಿಕಾಶ್ರಮ

1943ರಲ್ಲಿ ಸ್ಥಾಪಿತವಾದ ಶ್ರೀ ಬಾಹುಬಲಿ ಶ್ರಾವಿಕಾಶ್ರಮ, ಜೈನ ಶ್ರಾವಿಕೆಯರಲ್ಲಿ ಧಾರ್ಮಿಕ ಭಾವನೆಗಳು ಬೆಳೆದು ಬರುವಂತಾಗಲು, ತನ್ಮೂಲಕ ಅವರಲ್ಲಿ ಸದಾಚಾರ, ಉತ್ತಮಜ್ಞಾನ ಸಂಪನ್ನತೆಗಳೂ ರೂಪಿತವಾಗಲು ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಡುತ್ತಿದೆ; ಎಳೆಯ ಹೆಣ್ಣು ಮಕ್ಕಳ ಜೀವನ ಪಾವನವಾಗಲು ಶ್ರಮಿಸುತ್ತಿದೆ. ಅವರಲ್ಲಿರುವ ಸುಪ್ತ ಚೇತನವನ್ನು ಜಾಗ್ರುತಗೊಳಿಸುವ ದಿಸೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಈ ಸಂಸ್ಥೆ ಸ್ಥಾಪನೆಯಾದಂದಿನಿಂದ ಇಂದಿನವರೆಗೆ ನೂರಾರು ವಿದ್ಯಾರ್ಥಿನಿಯರಿಗೆ ಆಶ್ರಯವನ್ನು ನೀಡಿ ಜೈನಧರ್ಮ ಹಾಗೂ ಲೌಕಿಕ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುತ್ತಿದೆ. ಪ್ರಸಕ್ತ ಸಾಲಿನಲ್ಲಿ 49 ವಿದ್ಯಾರ್ಥಿನಿಯರು ಈ ಆಶ್ರಮದಲ್ಲಿ ತಮ್ಮ ಬದುಕನ್ನು ನಿರೂಪಿಸಿಕೊಳ್ಳುವನಿಟ್ಟಿನಲ್ಲಿ ಸಾಗುತ್ತಿದ್ದಾರೆ. ಪ್ರಾಥಮಿಕ 5ನೆಯ ತರಗತಿಯಿಂದ ಹಿಡಿದು ಕಾಲೇಜು ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ತನಕ ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿದೆ ಈ ಆಶ್ರಮ.

ಶಬರಿ ಆಶ್ರಮ ಕಾರ್ಕಳ

ಹರಿಜನೋದ್ಧಾರವನ್ನು ಮೂಲ ಉದ್ದೇಶವನ್ನಾಗಿರಿಸಿಕೊಂಡ ಕಾರ್ಕಳದ ಶಬರಿ ಆಶ್ರಮ 1934ರಲ್ಲಿ ಸ್ಥಾಪನೆಗೊಂಡು 1972ರವರೆಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿತು. ಹರಿಜನರ ಜೀವನವನ್ನು ಸುಧಾರಿಸುವ ಸದುದ್ದೇಶವನ್ನಿರಿಸಿಕೊಂಡ ಶಬರಿ ಆಶ್ರಮದ ಸ್ಥಾಪನೆಗಾಗಿ ಶ್ರಮಿಸಿದವರಲ್ಲಿ ದಿವಂಗತರುಗಳಾದ ಕೆ. ಪದ್ಮನಾಭ ಕಾಮತ್, ಕೆ. ಶೇಷಗಿರಿ ಪ್ರಭು, ಮಹಾಬಲ ಅಡ್ಯಂತಾಯ, ವೆಂಕಟೇಶ ಪ್ರಭುಗಳು, ಕೆ. ಕೆ. ರಾಮಪುತುವಾಳ್ ಇವರುಗಳು ಪ್ರಮುಖ ಪಾತ್ರವಹಿಸಿದ್ದರು. ಸಿ. ಮಂಜುನಾಥ ಕಾಮತರು ಶಬರಿ ಆಶ್ರಮ ಈಗಿರುವ ನಿವೇಶನದಲ್ಲಿ ತಮ್ಮ ಅರ್ಧಎಕರೆ ಜಾಗವನ್ನು ದಾನವಾಗಿ ನೀಡಿ ಸಹಕರಿಸಿದ್ದರು. ಈ ಆಶ್ರಮ ವ್ಯವಸ್ಥಿತ ರೀತಿಯಲ್ಲಿ ಮುಂದುವರಿದು ಕೊಂಡು ಬರುವಲ್ಲಿ ತುಂಬು ಹೃದಯದಿಂದ ಶ್ರಮಿಸಿದವರಲ್ಲಿ, ಅವರೂ ಒಬ್ಬರು. ಇತ್ತೀಚಿನ ವರ್ಷಗಳಲ್ಲಿ ದಿ। ಬೈಕಾಡಿ ವಾಸುದೇವರಾಯರು ಶಬರಿ ಆಶ್ರಮದ ಖಜಾಂಚಿಗಳಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರುಗಳಾದ ನರಸಿಂಹ ಪ್ರಭು, ರಾಮಚಂದ್ರ ಪ್ರಭು ಮತ್ತು ಕೃಷ್ಣಪ್ರಭುಗಳು ಈ ಆಶ್ರಮದ ಬೆಳವಣಿಗೆಗೆ ಬೇಕಾದ ಎಲ್ಲ ಸಹಕಾರವನ್ನು ನೀಡಿದ್ದಾರೆ. ಪ್ರಾರಂಭದಲ್ಲಿ ಈ ಆಶ್ರಮದ ಸಕಲ ವೆಚ್ಚಗಳನ್ನೂ ಸಾರ್ವಜನಿಕ ವಂತಿಕೆಯ ಮೂಲಕ ಭರಿಸಲಾಗುತ್ತಿತ್ತು. ಕಾಲಕ್ರಮೇಣ ಸರ್ಕಾರದ ಧನಸಹಾಯ ದೊರಕಿ ಇವರ ಕಾರ್ಯಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಯಿತು. ಈ ಆಶ್ರಮದ ಸಾಧನೆಯನ್ನು ಮನಗಂಡ 'ಪೆಸ್ಟ್ ಕಂಟ್ರೋಲ್ ಇಂಡಿಯಾ'ದ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಯುತ ಎನ್. ಎಸ್. ರಾವ್ ಅವರು ಕೆಲವು ವರ್ಷಗಳವರೆಗೆ ಆಶ್ರಮದ ವಿದ್ಯಾರ್ಥಿಗಳಿಗೆ ಉಚಿತ ಉಪಾಹಾರ ವ್ಯವಸ್ಥೆಯನ್ನು ಮಾಡಿ ಕೊಟ್ಟಿದ್ದರು.

ಗಾಂಧೀಜಿಯವರ ಆದರ್ಶ ಪಾಲನೆಯ ಕುರುಹಾಗಿ ಆಶ್ರಮದಲ್ಲಿ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿತ್ತು. ಮನೆಮನೆಗೆ ಹೋಗಿ ಹರಿಜನ ಮಕ್ಕಳನ್ನು ಆಶ್ರಮಕ್ಕೆ ಕರೆದುಕೊಂಡು ಬಂದು ಅವರ ಬುದ್ಧಿವಿಕಾಸಕ್ಕೆ ಅಗತ್ಯವಾದ ಶಿಕ್ಷಣನೀಡುವಲ್ಲಿ ಆಶ್ರಮ ಯಶಸ್ವಿಯಾಗಿತ್ತು. ಹರಿಜನ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಹಂಚಲಾಗುತ್ತಿತ್ತು. ಆಶ್ರಮದ ಪವಿತ್ರ ವಾತಾವರಣದಲ್ಲಿ ವಿದ್ಯಾರ್ಥಿಗಳಿಗೆ ಉದ್ಯಮದ ಮೂಲಕ ಕೂಡ ಶಿಕ್ಷಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಆಶ್ರಮದ ನಾಲ್ಕು ಕೊಠಡಿಗಳಲ್ಲಿ, ಖಾದಿ ಬಟ್ಟೆಯನ್ನು ತಯಾರಿಸುವ ಸದುದ್ದೇಶದಿಂದ, ವಿದ್ಯಾರ್ಥಿಗಳಿಗೆ ನೂಲುವುದನ್ನು ಕಲಿಸಿಕೊಡುವ ಏರ್ಪಾಡು ಸಹಾ ಇತ್ತು. ಇಲ್ಲಿ ನೇಯ್ದ ಬಟ್ಟೆಗಳಿಗೆ ಪೇಟೆಯಲ್ಲಿ ಅಪಾರ ಬೇಡಿಕೆಯಿತ್ತು. ಅಲ್ಲದೇ ಆಶ್ರಮದ ಪರಿಸರದಲ್ಲಿ ತೆಂಗು,

ಮಾವು ಮುಂತಾದ ಉಪಯುಕ್ತ ಸಸಿಗಳನ್ನು ನೆಟ್ಟು ಬೆಳೆಸುವುದರೊಂದಿಗೆ, ಆಶ್ರಮವಾಸಿಗಳಿಗೆ ತೋಟ ಗಾರಿಕೆಯಲ್ಲಿ ವಿಶೇಷ ಅಭಿವೃದ್ಧಿಯನ್ನು ಮೂಡಿಸುವುದರಲ್ಲಿ ಶಬರಿ ಆಶ್ರಮ ಕಾರ್ಯಮಗ್ನವಾಗಿತ್ತು. ಸುಮಾರು ನಲವತ್ತು ವಿದ್ಯಾರ್ಥಿಗಳಿಗೆ ವಸತಿ ಗೃಹದಲ್ಲಿ ಪ್ರವೇಶವನ್ನು ಕಲ್ಪಿಸಿಕೊಡಲಾಗಿತ್ತು.

ಕಾರ್ಕಳ ಪೇಟೆಯಲ್ಲಿ ಹರಿಜನ ಮೆರವಣಿಗೆ, ಭಜನ ಹಾಗೂ ಸಹಪಂಕ್ತಿ ಭೋಜನಾಗಳ ಮೂಲಕ ಹರಿಜನ ಬಂಧುಗಳು ಇತರ ವರ್ಗಗಳ ಜನಗಳೊಂದಿಗೆ ಬೆರೆಯಲು ಅವಕಾಶಗಳನ್ನು ಕಲ್ಪಿಸಿ ಕೊಡು ಲಾಗಿತ್ತು. ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಂಡ ಶಬರಿ ಆಶ್ರಮ ಈಗ ಸರ್ಕಾರದ ಮಹಿಳೆಯರ ವಸತಿ ಗೃಹವಾಗಿ ಪರಿವರ್ತನೆಗೊಂಡಿದೆ.

ಶ್ರೀ ಸುಕೃತೀಂದ್ರ ಬಡ ವಿದ್ಯಾರ್ಥಿ ನಿಲಯ, ಕಾರ್ಕಳ

ಶ್ರೀ ಸುಕೃತೀಂದ್ರ ಸ್ವಾಮೀಜಿಯವರ ಹೆಸರಿನಲ್ಲಿ, 1973ರಲ್ಲಿ ಕಾರ್ಕಳದ ಕೃಷ್ಣಮಂದಿರದ ಸುಂದರ ತಾಣದಲ್ಲಿ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದರ ಸಮ್ಮುಖ, ಸನ್ನಿಧಿಯಲ್ಲಿ ಸ್ಥಾಪಿತವಾದ, ಶ್ರೀ ಸುಕೃತೀಂದ್ರ ಬಡ ವಿದ್ಯಾರ್ಥಿನಿಲಯ ಆರ್ಥಿಕವಾಗಿ ಹಿಂದುಳಿದ ಗೌಡ ಸಾರಸ್ವತ ಬ್ರಾಹ್ಮಣ ಗಂಡು ಮಕ್ಕಳಿಗೆ ಉಚಿತ ವಸತಿ, ಉಪಾಹಾರ, ವಿದ್ಯಾಭ್ಯಾಸ ಮೊದಲಾದ ಸೌಲಭ್ಯವನ್ನು ಕಲ್ಪಿಸಿ ಕೊಡುತ್ತಿದೆ. ಸಾಮಾನ್ಯವಾಗಿ 9 ವರ್ಷದಿಂದ 16 ವರ್ಷ ವಯೋಮಿತಿಯೊಳಗಿನ ವಿದ್ಯಾರ್ಥಿಗಳನ್ನು ಈ ವಿದ್ಯಾರ್ಥಿನಿಲಯದಲ್ಲಿ ಸೇರಿಸಿಕೊಳ್ಳಲಾಗುತ್ತಿದೆ. ನಗರ, ಹೊಸನಗರ, ಧಾರವಾಡ, ತಿರುಪತಿಯೇ ಮೊದಲಾದ ಕಡೆಗಳಿಂದ ಬಂದ 30 ವಿದ್ಯಾರ್ಥಿಗಳು ಇಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳು ತ್ತಿದ್ದಾರೆ. ದಕ್ಷಿಣ ಕನ್ನಡದ ವಿವಿಧ ಭಾಗಗಳಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಇದರ ಪ್ರಯೋ ಜನ ಪಡೆಯುತ್ತಿದ್ದಾರೆ. ಬಡ ವಿದ್ಯಾರ್ಥಿಗಳಿಂದ ಬಂದ ಜಾತಕ ಹಾಗೂ ಅರ್ಜಿಗಳ ಆಧಾರದ ಮೇಲೆ ಅವರಿಗೆ ಪ್ರವೇಶವನ್ನು ಕಲ್ಪಿಸಿಕೊಡಲಾಗುತ್ತಿದೆ.

ಲಲಿತ ಕಲಾವೃಂದ (ರಿ)

ಸಾಹಿತ್ಯ, ಸಂಗೀತ, ಕಲೆ ಇವುಗಳಲ್ಲಿ ಪರಿಜ್ಞಾನ ಇಲ್ಲದವರು, ಪಶುಪಕ್ಷಿಗಳ ಸಮಾನರೆಂದು ಭರ್ತೃಹರಿ ತನ್ನ ನೀತಿಶತಕದಲ್ಲಿ ತಿಳಿಸಿದ್ದಾನೆ. ಕಾರ್ಕಳದ ಜನತೆ ಸಾಹಿತ್ಯದಲ್ಲಾಗಲೀ, ಸಂಗೀತದಲ್ಲಾಗಲೀ, ಅಥವಾ ಕಲೆಕೆಯಲ್ಲಾಗಲೀ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅಂತೆಯೇ ಸಂಗೀತಾಭಿರುಚಿಯನ್ನು ಬೆಳೆಸುವ ಏಕಮಾತ್ರ ಗುರಿಯನ್ನು ಇರಿಸಿಕೊಂಡ 'ಲಲಿತ ಕಲಾವೃಂದ' 1967ರಲ್ಲಿ ಸ್ಥಾಪಿತವಾಯಿತು. ಯಕ್ಷಗಾನವನ್ನು ಹೊರತುಪಡಿಸಿ, ಉಳಿದ ಸಾಂಸ್ಕೃತಿಕ ಚಟುವಟಿಕೆ ಗಳಿಗೆ ಇಂಬುಕೊಟ್ಟು ರೂಪುಕೊಟ್ಟ ಕಾರ್ಕಳದ ಮೊಟ್ಟ ಮೊದಲನೆಯ ಸಂಸ್ಥೆ 'ಲಲಿತ ಕಲಾವೃಂದ'. ಅಧ್ಯಕ್ಷರೇ ಮೊದಲಾಗಿ ಹನ್ನೊಂದು ಜನ ಪದಾಧಿಕಾರಿಗಳನ್ನು ಹೊಂದಿದ ಲಲಿತ ಕಲಾವೃಂದ, ಕಾಲಕಾಲಕ್ಕೆ ತಕ್ಕಂತೆ ಸಂಗೀತ, ನೃತ್ಯ, ನಾಟಕ ಪ್ರದರ್ಶನವೇ ಮುಂತಾದ ಉಪಯುಕ್ತ ಕಾರ್ಯಕ್ರಮ ಗಳನ್ನು ನಿಯೋಜಿಸಿಕೊಂಡು ಕಾರ್ಕಳದ ಕಲಾರಸಿಕರಿಗೆ ಸಂಗೀತ ಪ್ರಿಯರಿಗೆ, ನೋಟಕರಿಗೆ, ಲಲಿತ ಕಲೆಯ ರಸದೂಟವನ್ನು ನೀಡುತ್ತಿದೆ.

ಸ್ಥಾಪನೆಯಾದಂದಿನಿಂದ ಇಂದಿನವರೆಗೆ ದೇಶದ ಪ್ರಸಿದ್ಧ ಪ್ರಬುದ್ಧ ಕಲಾವಿದರನ್ನು ಆಮಂತ್ರಿಸಿ ಪುರಸ್ಕರಿಸಿದ ಕೀರ್ತಿ ಲಲಿತ ಕಲಾವೃಂದಕ್ಕಿದೆ. ಅಲ್ಲದೇ ನಾಟಕ, ಯಕ್ಷಗಾನಕೂಟ, ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸಿ ಕಲಾ ಮಾಧ್ಯಮವನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಕೂಡ ಲಲಿತ ಕಲಾವೃಂದಕ್ಕೆ ಸಲ್ಲಬೇಕು. ಬಾಲ ಕಲಾವಿದರಿಗಾಗಿ ಸಂಗೀತ ಸ್ಪರ್ಧೆಯನ್ನು ಏರ್ಪಡಿ ಸುವುದೇ ಅಲ್ಲದೇ ಶ್ರೀ ಕೃಷ್ಣ ಜನ್ಮಾಷ್ಟಮಿ, ನವರಾತ್ರಿ ಮುಂತಾದ ಸಾಂಸ್ಕೃತಿಕ ಉತ್ಸವಗಳನ್ನು ಲಲಿತ ಕಲಾವೃಂದ ನಡೆಸಿಕೊಂಡು ಬರುತ್ತಿದೆ.

ಅಂತರ ರಾಷ್ಟ್ರೀಯ ಸೇವಾ ಸಂಸ್ಥೆಗಳು

ರೋಟರಿ, ಲಯನ್ಸ್ ಮತ್ತು ಜೇಸೀಸ್

ಕ್ರಮವಾಗಿ 1963, 1968, ಮತ್ತು 1974ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆಗಳು ಸ್ಥಾಪನೆಯಾದಂದಿನಿಂದ ಇಂದಿನವರೆಗೆ ಅನೇಕ ಉಪಯುಕ್ತ ಸಮಾಜ ಸೇವಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸಮಾಜ ಮತ್ತು ವ್ಯಕ್ತಿ ವಿಕಾಸಕ್ಕೆ ಚಾಲನೆಯನ್ನು ಕೊಡುತ್ತಿವೆ. ರಕ್ತದಾನ, ಕುಟುಂಬಯೋಜನೆ, ಸಂತಾನ ನಿಯಂತ್ರಣ, ಪ್ರಯಾಣಿಕರ ತಂಗುದಾಣ, ಪ್ರತಿಭಾ ಪುರಸ್ಕಾರ, ನೇತ್ರ ಚಿಕಿತ್ಸಾಶಿಬಿರ, ಅಂಗವಿಕಲರಿಗೆ ಸಹಾಯ, ರೋಗಿಗಳ ಆರೈಕೆ, ಪ್ರಥಮ ಚಿಕಿತ್ಸಾ ಶಿಬಿರ, ಆಟೋಟ ಸ್ಪರ್ಧೆ ಮುಂತಾದ ಜನಾದರಣೀಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತಿವೆ. ರೋಟರಿ ಮತ್ತು ಜೇಸಿಗಳು ಅನುಕ್ರಮವಾಗಿ ಸಾಣೂರು ಮತ್ತು ಚೇತನಹಳ್ಳಿಗಳನ್ನು 'ದತ್ತು' ತೆಗೆದುಕೊಂಡು ಅಲ್ಲಿಯ ನಿವಾಸಿಗಳ ಕುಂದು ಕೊರತೆಗಳನ್ನು ನಿವಾರಿಸುವುದಕ್ಕೆ ಶ್ರಮಿಸುತ್ತಿವೆ. ಲಯನ್ಸ್‌ಕ್ಲಬ್‌ನವರು ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ, ಭಾರತ ಸರ್ಕಾರ, ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸಹಯೋಗದೊಡನೆ ಗೃಹ ಕೈಗಾರಿಕೆ, ಚರ್ಮದಲ್ಲಿಯ ಕರಕುಶಲ ವಸ್ತುಗಳ ತಯಾರಿಕೆಗಳಲ್ಲಿ ಆಸಕ್ತ ಯುವಕ ಯುವತಿಯರಿಗೆ ತರಬೇತಿಯನ್ನು ಕೊಡುತ್ತಿದೆ. ಪ್ರಾಥಮಿಕ ಶಾಲಾ ಉಪಾಧ್ಯಾಯರ ಮಕ್ಕಳಿಗೆ ಅವರ ಅರ್ಹತೆಗನುಗುಣವಾಗಿ ವಿದ್ಯಾರ್ಥಿ ವೇತನವನ್ನು ನೀಡುತ್ತಿದೆ. ರೋಟರಿಕ್ಲಬ್‌ನವರು 1983ರಲ್ಲಿ "ರೋಟರಿ ಬಾಲಭವನ"ವನ್ನು ನಿರ್ಮಿಸಿ ಮಕ್ಕಳ ಮನೋವಿಕಾಸಕ್ಕೆ ಪೂರಕವಾದ "ರೋಟರಿ" ಮಕ್ಕಳ ಗ್ರಂಥಾಲಯವನ್ನು ತೆರೆದು ಎಳೆಯ ಮಕ್ಕಳಸುಪ್ತ ಭಾವನೆಗಳ ಪೋಷಣೆಗೆ ದಾರಿ ಮಾಡಿ ಕೊಟ್ಟಿದೆ. ಹಾಗೆಯೇ ಕಾರ್ಕಳದ ಜೇಸಿಯವರು1979ರಲ್ಲಿ 'ಇಂಗ್ಲೀಷ್ ಮೀಡಿಯಂ ಸ್ಕೂಲ್'ಅನ್ನು ತೆರೆದು ಎಳೆಯ ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಅಡಿಪಾಯ ಹಾಕಿದ್ದಾರೆ. ಮುಖಂಡತ್ವದ ತರಬೇತಿ, ಬ್ಯಾಂಕ್ ಪರೀಕ್ಷೆಗಳಿಗೆ ಸಂಬಂಧಪಟ್ಟಂತ ತರಬೇತಿಗಳನ್ನೂ ಜೇಸಿ ನೀಡುತ್ತಿದೆ. ಒಟ್ಟಿನಲ್ಲಿ ಮೇಲ್ಕಂಡ ಮೂರು ಸಂಸ್ಥೆಗಳೂ ಇತ್ತೀಚಿನ ವರ್ಷಗಳಲ್ಲಿ ತಮ್ಮ ಚಟುವಟಿಕೆಗಳನ್ನು ಚುರುಕುಗೊಳಿಸುತ್ತಿವೆ.

ಯುವಕ ಸಂಘಗಳು

1. ಯುವಕ ಸಂಘ ಕುಕ್ಕುಂದೂರು

ಮೇಲ್ಕಂಡ ಯುವಕ ಸಂಘವು 1955ರಲ್ಲಿ ಪ್ರಾರಂಭವಾಯಿತು. ಹಳ್ಳಿಗಾಡಿನ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಉದ್ದೇಶವಾಗಿರಿಸಿಕೊಂಡ ಈ ಯುವಜನ ಸಂಘ, ಒಂದು ಸಮಾಜ ಮಂದಿರವನ್ನು ಹಾಗೂ ಮಕ್ಕಳ ಕೇಂದ್ರವನ್ನು ನಿರ್ಮಿಸಿಕೊಂಡಿದೆ. ಯುವಕರ ಮಾನಸಿಕ ತಿಳುವಳಿಕೆಯನ್ನು ಗಮನದಲ್ಲಿರಿಸಿಕೊಂಡು ತನ್ನದೇ ಆದ ಪುಸ್ತಕ ಭಂಡಾರ ಮತ್ತು ಓದುಗರಿಗೆ ಓದುವ ಸೌಲಭ್ಯವನ್ನು ಒದಗಿಸಿ ಕೊಡುತ್ತಿದೆ. ವ್ಯವಸಾಯದಲ್ಲಿ ಸರಿಯಾದ ತಿಳುವಳಿಕೆ ನೀಡುವ ಉದ್ದೇಶದಿಂದ ಯುವಕ ಸಂಘದ ವತಿಯಿಂದ – ಯುವಕ ರೈತ ಸಂಘ ಎಂಬ ಉಪಸಂಸ್ಥೆಯನ್ನೂ ಕೂಡ ಕುಕ್ಕುಂದೂರಿನ ಯುವಕ ಸಂಘ ಪೋಷಿಸುತ್ತಿದೆ. ಅಲ್ಲದೇ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿಯೋಜಿಸಿಕೊಂಡು ಆ ಭಾಗದ ಜನರಿಗೆ ಮನರಂಜನೆಯನ್ನು ಪ್ರತಿವರ್ಷವೂ ಒದಗಿಸುತ್ತಿದೆ.

2. ಅಶ್ವತ್ಥಪುರ ಯುವಜನ ಸಂಘ

ಕಾರ್ಕಳ ತಾಲ್ಲೂಕಿನ ಅಶ್ವತ್ಥಪುರ ಯುವಜನ ಸಂಘ ಕೂಡ ಶ್ಲಾಘನೀಯ ಕೆಲಸಗಳನ್ನು ಮಾಡುತ್ತಾ ಬಂದಿದೆ. ಚಿತ್ರ ಪ್ರದರ್ಶನಗಳ ಮೂಲಕ, ರೈತ ಗೋಷ್ಠಿಗಳ ಮೂಲಕ ರೇಡಿಯೋ ಕಾರ್ಯ

ಕ್ರಮಗಳ ಮೂಲಕ, ಯುವಕರಿಗೆ ತಿಳುವಳಿಕೆ ನೀಡುತ್ತಿದೆ. ಈ ಸಂಘ ತನ್ನದೇ ಆದ ಪುಸ್ತಕ ಭಂಡಾರವನ್ನು ಹೊಂದಿದ್ದು ವಾಚನಾಲಯವನ್ನು ಕೂಡ ವ್ಯವಸ್ಥೆ ಗೊಳಿಸಿದೆ. ವ್ಯವಸಾಯಗಾರರ ಹಿತದೃಷ್ಟಿಯಿಂದ ರಸಾಯನಿಕ ಗೊಬ್ಬರ, ಸಿಂಪಡಿಸಲು ಬೇಕಾದ ಸ್ಪ್ರೇಯರ್‌ಗಳನ್ನು ಒದಗಿಸುವ ವ್ಯವಸ್ಥೆಯನ್ನು ಕೂಡ ಸಂಘ ಮಾಡುತ್ತಿದೆ.

ಗೌಡ ಸಾರಸ್ವತ ಬ್ರಾಹ್ಮಣ ಸಭಾ

ಕಾರ್ಕಳದ, ಗೌಡ ಸಾರಸ್ವತ ಬ್ರಾಹ್ಮಣರು, 1977ರಲ್ಲಿ 'ಗೌಡ ಸಾರಸ್ವತ ಬ್ರಾಹ್ಮಣ ಸಭಾ'ವನ್ನು ಸ್ಥಾಪಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸಮಾಜದ ಉಪಯುಕ್ತ ಕಾರ್ಯಕ್ರಮಗಳ ಅನ್ವಯ ಈ ಸಭಾ ಪುಸ್ತಕ ವಿತರಣೆ, ಸಾಮೂಹಿಕ ಉಪನಯನ, ವಸ್ತ್ರ ವಿತರಣೆ, ವಿದ್ಯಾರ್ಥಿವೇತನ, ವೈದ್ಯಕೀಯ ಸಹಾಯ ಮೊದಲಾದ ಕ್ರಿಯಾಶೀಲ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರುತ್ತಿದೆ. ಆರ್ಥಿಕವಾಗಿ ಹಿಂದುಳಿದ ಸಮಾಜದ ಬಂಧು ಭಗಿನಿಯರಿಗೆ ಉಚಿತ ವೈದ್ಯಕೀಯ ಸಹಾಯ ಒದಗಿಸುವಲ್ಲಿ ಈ ಸಂಘ ಹಿಂದೆ ಬಿದ್ದಿಲ್ಲ. ಅಲ್ಲದೇ ಗೌಡ ಸಾರಸ್ವತ ಸಭಾದ ವಿಧಿ ವಿಧಾನಗಳಿಗನುಗುಣವಾಗಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ನಿರುದ್ಯೋಗ ಸಮಸ್ಯೆಯ ನಿವಾರಣೆಗಾಗಿ ವೃತ್ತಿಪರ ಶಿಕ್ಷಣ ವ್ಯವಸ್ಥೆ ಮಾಡುವಂತಹ ಜನಾದರಣೀಯ ಕಾರ್ಯಕ್ರಮಗಳನ್ನು ಕೂಡ ಹಾಕಿಕೊಂಡಿದೆ.

ಧಾರ್ಮಿಕವಾಗಿ ಗೌಡ ಸಾರಸ್ವತ ಸಮಾಜದ ಸತ್ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವ ಘನ ಉದ್ದೇಶದಿಂದ, ವೈದಿಕ ತರಬೇತಿ ಮತ್ತು ಸಂಸ್ಕೃತ ಭಾಷಾಭ್ಯಾಸಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಿದೆ. ಸುಮಾರು 400ಜನ ಸದಸ್ಯರು ದೇವಸ್ಥಾನದ ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಮದುವೆ ಮುಂತಾದ ಸಮಾರಂಭಗಳಿಗೆ ಬೇಕಾದ ಪಿಠೋಪಕರಣಗಳನ್ನು ಮತ್ತು ಪಾತ್ರೆಗಳನ್ನು ನಿಯೋಜಿತ ದರದಲ್ಲಿ ಒದಗಿಸುವಲ್ಲಿ ಸಂಪೂರ್ಣ ಈ ಸಂಸ್ಥೆ ಯಶಸ್ಸನ್ನು ಸಾಧಿಸಿದೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ

ದಕ್ಷಿಣ ಕನ್ನಡದ ಬಂಟರ ಯಾನೆ ನಾಡವರ ಸಂಘವು ಮಂಗಳೂರಲ್ಲಿ ಸ್ಥಾಪಿಸಿ ಪೋಷಿಸುತ್ತಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನವು ಕಾರ್ಕಳದ ತೆಲ್ಲಾರ್ ರಸ್ತೆಯಲ್ಲಿ ಒಂದು ಶಾಖೆಯನ್ನು ಹೊಂದಿದೆ. ಭವನಕ್ಕೆ ತನ್ನದೇ ಆದ ಕಟ್ಟಡವಿದ್ದು ಅದು ಹಲವು ವರ್ಷಗಳಿಂದ ಶಾಲೆ - ಕಾಲೇಜ್ ವಿದ್ಯಾರ್ಥಿಗಳಿಗೂ, ವಿವಿಧ ವೃತ್ತಿನಿರತರಾಗಿರುವ ಉದ್ಯೋಗಿಗಳಿಗೂ ಊಟ - ವಸತಿಗಳ ಸೌಲಭ್ಯವನ್ನು ಕಲ್ಪಿಸಿ ಕೊಡುತ್ತಿದೆ.

ಧಾರ್ಮಿಕ ಕೇಂದ್ರಗಳು

ಶ್ರೀ ವೆಂಕಟರಮಣ ದೇವಸ್ಥಾನ

ಕಾರ್ಕಳದ ವೆಂಕಟರಮಣ ದೇವಾಲಯ ಈ ಭಾಗದ ಪ್ರಮುಖ ಸ್ಥಳ. ಈ ದೇವಸ್ಥಾನದ ಹಿರಿಮೆ ಕನ್ನಡ ನಾಡಿನಾದ್ಯಂತ ಹಬ್ಬಿದೆ. ಕಾರ್ಕಳಕ್ಕೆ ಬರುವ ಯಾತ್ರಿಕರು ಈ ದೇವಸ್ಥಾನವನ್ನು ಸಂದರ್ಶಿಸದೇ ಹೋಗುವುದು ತೀರಾ ವಿರಳ. ಸುಂದರ ವಿನ್ಯಾಸಗಳಿಂದ ರಚಿತವಾದ ಈ ದೇವಸ್ಥಾನ ದೇವರಿಗೆ ಸಲ್ಲುವ ಪೂಜಾವಿಧಿಗಳನ್ನು ಶಾಸ್ತ್ರೋಕ್ತವಾಗಿ ನಡೆಸಿಕೊಂಡು ಬರುತ್ತಿದೆ. ಗೌಡ ಸಾರಸ್ವತ ಬ್ರಾಹ್ಮಣರಿಗೆ, ವೆಂಕಟರಮಣ ದೇವರು ಇಷ್ಟದೇವರಾಗಿ ಅವರ ಅಭೀಷ್ಟಗಳನ್ನು

ಈಡೇರಿಸುತ್ತಿದ್ದಾನೆ. ಇಲ್ಲಿ ನವರಾತ್ರಿ, ದೀಪಾವಳಿ, ಮುಂತಾದ ಶುಭ ದಿನಗಳಂದು ವಿಶೇಷ ಪೂಜೆಗಳನ್ನು ಭಕ್ತಾದಿಗಳು ಮಾಡುತ್ತಾರೆ. ದೀಪೋತ್ಸವ, ರಥೋತ್ಸವ ಹಾಗೂ ಪಕ್ಷೋತ್ಸವಗಳನ್ನು ಬಹಳ ವಿಜೃಂಭಣೆಗಳಿಂದ ನಡೆಸುತ್ತಾರೆ. ಕಾರ್ತೀಕ ಮಾಸದಲ್ಲಿ ಜರಗುವ ಶ್ರೀ ವೆಂಕಟರಮಣ ದೇವರ ಲಕ್ಷದೀಪೋತ್ಸವ, ಕಾರ್ಕಳದಲ್ಲಿ ಹಬ್ಬದ ವಾತಾವರಣವನ್ನು ಮೂಡಿಸುತ್ತದೆ. ದೂರದ ಊರುಗಳಿಂದ ಸಂಬಂಧಿಕರು, ಇಷ್ಟಮಿತ್ರಾದಿಯಾಗಿ ಭಕ್ತಾದಿಗಳು ಬಂದು ದೇವರಿಗೆ ತಮ್ಮ ಭಾಗದ ಪೂಜಾ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಶ್ರೀ ದೇವರನ್ನು ಕೃಷ್ಣ ಮಂದಿರದವರೆಗೆ ಪಲ್ಲಕ್ಕಿ ಉತ್ಸವದಲ್ಲಿ ಊರಮಧ್ಯೆ ಮೆರವಣಿಗೆ ಮಾಡಿ, ಅಲ್ಲಿಂದ ಪುನಃ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಕರೆದುಕೊಂಡು ಬರುತ್ತಾರೆ. ದಾರಿಯುದ್ದಕ್ಕೂ (ಗುರ್ಜಿ) ರಥಗಳನ್ನು ನಿರ್ಮಿಸಿ ಅವುಗಳ ಸುತ್ತಲೂ ವಿವಿಧ ರೀತಿಯ ಹಣ್ಣು ಕಾಯಿಗಳನ್ನು ಜೋಡಿಸಿ ಕಟ್ಟಿರುವುದು ತುಂಬಾ ಆಕರ್ಷಕವಾಗಿರುತ್ತದೆ. ವೇದಘೋಷ ನಾಗಸ್ವರವಾದನವೇ ಮೊದಲಾದ ಅಷ್ಟಾವಧಾನ ಸೇವೆಗಳ ಮೂಲಕ ದೇವರನ್ನು ಸಂಪ್ರೀತಗೊಳಿಸಲಾಗುತ್ತದೆ. ಅಲ್ಲದೇ ಉತ್ಸವದ ಅಂಗವಾಗಿ ಶ್ರೀದೇವರ ತೆಪ್ಪೋತ್ಸವ ದೇವಸ್ಥಾನದ ಎದುರಿಗಿರುವ ತೀರ್ಥದಲ್ಲಿ ಅದ್ದೂರಿಯಿಂದ ನಡೆಯುತ್ತದೆ. ಬಾಣಬಿರುಸುಗಳಿಂದ ಹಾಗೂ ವಿದ್ಯುದ್ದೀಪಗಳಿಂದ ಅಲಂಕೃತವಾದ ರಸ್ತೆಗಳು ಹಾಗೂ ಮನೆಗಳು ಸರ್ವರ ಮನಗಳನ್ನು ರಂಜಿಸುತ್ತದೆ.

ಶ್ರೀ ಅನಂತ ಪದ್ಮನಾಭ ದೇವಾಲಯ

ಕಾರ್ಕಳದ ಅನಂತ ಪದ್ಮನಾಭ ಮೂರ್ತಿ ತುಂಬಾ ಸುಂದರವಾಗಿರುವುದಲ್ಲದೇ, ಶಿಲ್ಪದ ನಿರ್ದೇಶವು ಹೃದಯಂಗಮವಾಗಿದೆ. ಶಂಖಚಕ್ರಗಧಾ ಪದ್ಮಧಾರಿಯಾದ ಅನಂತ ಪದ್ಮನಾಭನು ಏಳು ಹೆಡೆಯ ಆದಿಶೇಷನ ಮೇಲೆ ಪವಡಿಸಿದ್ದಾನೆ. ಕಿರೀಟ, ಕೊರಳು ಮತ್ತು ಎದೆಯಲ್ಲಿನ ಅಲಂಕಾರಗಳು, ಕಟಿಯಿಂದ ಆರಂಭವಾದ ಉಡಿಗೆ, ಕಾಲಿನ ಆಭರಣ ಮತ್ತು ಯಜ್ಞೋಪವೀತ ಇವೆಲ್ಲವೂ ಸ್ಪಷ್ಟವಾಗಿ ಕಾಣಿಸುತ್ತವೆ. ನಾಭಿಯಿಂದ ಹೊರಬಂದು ಮೇಲೆ ಹೋದ ಕಮಲದ ನಾಳ ಮತ್ತು ಅರಳಿದ ಕಮಲದ ಮೇಲೆ ಕುಳಿತ ಚತುರ್ಮುಖ ಬ್ರಹ್ಮ ನೋಟಕರಿಗೆ, ಭಕ್ತಾಧಿಗಳಿಗೆ ಆನಂದವನ್ನು ಕೊಡುತ್ತದೆ. ಪರಂಪರೆಯನ್ನುಳಿಸಿಕೊಂಡು ಬಂದ ಈ ದೇವಾಲಯದಲ್ಲಿ ದೇವತಾ ಕಾರ್ಯಗಳು ಕಾಲಕಾಲಕ್ಕೆ ತಕ್ಕಂತೆ ನಡೆದುಕೊಂಡು ಬರುತ್ತದೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಇಲ್ಲಿಯ ವೈಶಿಷ್ಟ್ಯ. ರಥೋತ್ಸವ ವನಭೋಜನ ಇವುಗಳಿಂದ ಭಕ್ತಾಧಿಗಳಲ್ಲಿ ಭಕ್ತಿಯನ್ನು ಹೆಚ್ಚಿಸುತ್ತಿದೆ. ಭಕ್ತಾದಿಗಳ ಕೋರಿಕೆಯಂತೆ ವಿಶೇಷ ಪೂಜೆಗಳನ್ನು ಅನಂತ ಪದ್ಮನಾಭನಿಗೆ ಸಲ್ಲಿಸುವ ಸೌಲಭ್ಯ ಇತರ ದೇವಾಲಯಗಳಂತೆ ಇಲ್ಲಿಯೂ ಇದೆ. ಅನಂತ ಪದ್ಮನಾಭನ ದೇವಾಲಯವು ಈಗ ರಾಷ್ಟ್ರೀಯ ಸ್ಮಾರಕ ಎಂದು ಪರಿಗಣಿಸಲ್ಪಟ್ಟಿದೆ. ತುಂಬಾ ಪುರಾತನವಾದ ಈ ದೇವಸ್ಥಾನದ ಸಕಲ ವೆಚ್ಚಗಳನ್ನು ಭಕ್ತಾದಿಗಳಿಂದ ಬಂದ ಕಾಣಿಕೆಯ ನೆರವಿನಿಂದ ಭರಿಸಬೇಕಾಗಿದೆ. ದೇವಾಲಯದ ಗರ್ಭಗೃಹ, ತೀರ್ಥಮಂಟಪ ಮತ್ತು ಛಾವಡಿ (ಮಾಡು) ನಯನ ಮನೋಹರವಾಗಿ ನಿರ್ಮಿತವಾಗಿದೆ. ಇದೇ ರೀತಿ ಕಾರ್ಕಳದಲ್ಲಿ ಶ್ರೀ ಕಾಳಿಕಾಂಬ ದೇವಾಲಯ; ಕುಕ್ಕುಂದೂರು ದುರ್ಗಾಲಯ; ಪೆರ್ವಾಜೆ ಶ್ರೀ ಮಹಾಲಿಂಗೇಶ್ವರ ದೇವಾಲಯ, ಶ್ರೀ ಗಣಪತಿ ದೇವಾಲಯ, ವಿನಾಯಕ ಬೆಟ್ಟು; ವಿಶ್ವೇಶ್ವರ ವೇಣುಗೋಪಾಲ; ಮೀಯಾರು ಮಹಾಲಿಂಗೇಶ್ವರ ದೇವಾಲಯ; ಶ್ರೀ ಮಹಾಲಿಂಗೇಶ್ವರ ದೇವಾಲಯ ಕೆರವಸೆ; ಪದ್ಮಾಂಬ ದೇವಸ್ಥಾನ, ಜೈನ ಬಸದಿಗಳು ಊರ ಪರವೂರ ಭಕ್ತಾದಿಗಳನ್ನು ಆಕರ್ಷಿಸುತ್ತಿವೆ.

ಕಾರ್ಕಳದ ದೇವಿ ಮಾರಿಯಮ್ಮ

ಕಾರ್ಕಳದ ದೇವಿ ಮಾರಿಯಮ್ಮ ಗುಡಿಗೆ ಸುಮಾರು 750 ವರ್ಷಗಳ ಇತಿಹಾಸವಿದೆ. ದೇವಿಯು ಕಾರ್ಕಳದ ಮೂಲ ನಿವಾಸಿಯಾಗಿರಲಿಲ್ಲವೆಂದೂ ಅವಳು ಸೌರಾಷ್ಟ್ರದಿಂದ ಚೋಳರ ಸಂಗಡ ಬಂದು

ಕಾರ್ಕಳದಲ್ಲಿ ನೆಲಸಿದಳೆಂದೂ ಪ್ರತೀತಿಯಿದೆ. ಕಾರ್ಕಳದ ಮೂರು ರಸ್ತೆ ಕೂಡುವ ಜಾಗದಲ್ಲಿ ಗದ್ದುಗೆಯಲ್ಲಿ ಹಲವಾರು ವರ್ಷಗಳವರೆಗೆ ದೇವಿ ತಂಗಿದ್ದು ನಂತರ ಈಗಿರುವ ಸ್ಥಳಕ್ಕೆ ಬಂದಳು ಎಂದು ಪುರಾಣೆಗಳಿಂದ ತಿಳಿದು ಬರುತ್ತದೆ. ಈಗಲೂ ಕೂಡ ಪ್ರತಿವರ್ಷ ನಡೆಯುವ ಮಾರಿ ಜಾತ್ರೆಯ ಸಂದರ್ಭ ದೇವಿ ಈಗಿರುವ ಮಾರಿಯಮ್ಮನ ಗುಡಿಯಿಂದ ಊರ ಮಧ್ಯೆ ಇರುವ ರಾಘವೇಂದ್ರ ಹೆಗ್ಗಡೆಯವರ ಅಂಗಡಿಯ ಗದ್ದುಗೆಯಲ್ಲಿ ಒಂದು ರಾತ್ರಿ ಪವಡಿಸಿ ಭಕ್ತರ ಪೂಜೆಯನ್ನು ಸ್ವೀಕರಿಸಿ ಗುಡಿಗೆ ಹಿಂತಿರುಗುವುದು ಸಂಪ್ರದಾಯವಾಗಿದೆ. ದೇವಿಯ ಮೂರ್ತಿಯನ್ನು ಸಡಗರ ಸಂಭ್ರಮಗಳಿಂದ ಗಾಡಿಯಲ್ಲಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಭಕ್ತಾದಿಗಳಿಗೆ ದರ್ಶನ ಭಾಗ್ಯವನ್ನು ಕೊಡ ಲಾಗುತ್ತಿದೆ. ಈಗ ಮಾರಿ ಜಾತ್ರೆಯು ಪ್ರತಿವರ್ಷ ಏಪ್ರಿಲ್ ತಿಂಗಳ ಯಾವುದಾದರೊಂದು ಶುಭ ಮಂಗಳವಾರದಂದು ನಡೆಯುತ್ತದೆ. ವರ್ಷಂಪ್ರತಿ ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾತಿಯ ವರೆಗೆ ವಿಶೇಷ ಪೂಜೆಯನ್ನು ದೇವಿಯ ಸನ್ನಿಧಿಯಲ್ಲಿ ನೆರವೇರಿಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಗಳಲ್ಲದೇ ಪ್ರತಿ ವರ್ಷದ ರಾತ್ರಿಯ ಪೂಜೆಯನ್ನು ದಿನಕೊಬ್ಬ ಭಕ್ತನಿಂದ ಮಾಡಿಸ ಲಾಗುತ್ತಿದೆ.ಚ ಂಡಿಕಾ ಹೋಮವೂ ಕೂಡ ದೇವಿಯ ಸನ್ನಿಧಿಯಲ್ಲಿ ಸಲ್ಲುವ ಮುಖ್ಯ ಆರಾಧನೆಗಳಲ್ಲಿ ಒಂದು. ಮೇಲ್ಕಂಡ ಶುಭ ದಿನಗಳಂದು ದೇವಸ್ಥಾನದ ಆಡಳಿತ ವರ್ಗ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತದೆ.

ದೇವಿಯ ಮೂಲ ವಿಗ್ರಹವು ಬೆಳ್ಳಿಯಿಂದ ಮಾಡಲ್ಪಟ್ಟ ನವಗ್ರಹ ಚಕ್ರದಾಕಾರದಲ್ಲಿದ್ದು ಅದಕ್ಕೆ ಚಿನ್ನದ ಕವಚವನ್ನು ತೊಡಿಸಲಾಗಿದೆ. ದೇವಿಯ ಮೂರ್ತಿ ಶಾಂತ ಕಳೆಯಿಂದ ಕೂಡಿದ್ದು ಭಕ್ತಾದಿಗಳಲ್ಲಿ ಭಕ್ತಿಯನ್ನು ವೃದ್ಧಿಸುತ್ತಿದ್ದಾಳೆ.

ಪ್ರತಿ ಮಂಗಳವಾರ ದೇವಿ ಭಕ್ತಸ್ತೋಮಕ್ಕೆ ಅಭಯವನ್ನು ನೀಡುತ್ತಿದ್ದಾಳೆ. ದೇವಿಯ ಮನಸ್ಸಿ ನಲ್ಲಿರುವುದನ್ನು ಜನರಿಗೆ ತಿಳಿಸಲು ದೇವಿಯು ಪಾತ್ರಿಯ ಮೇಲೆ ಆವಿರ್ಭೂತಳಾಗುವುದು ನೋಡಿದ ವರಿಗೆಲ್ಲಾ ತಿಳಿದಿರುವ ವಿಚಾರ. ಕಾರಣಾಂತರಗಳಿಂದ ನಿಂತು ಹೋಗಿದ್ದ ದರ್ಶನ ಕೆಲವು ವರ್ಷಗಳಿಂದ ಪುನಃ ಆರಂಭವಾಗಿದೆ. ಇಂದಿಗೂ ದೇವಿ ಪ್ರತಿ ಮಂಗಳವಾರ ಭಕ್ತರಿಗೆ ಸಲಹೆ, ಅಭಯ ಹಾಗೂ ಸಹಾನುಭೂತಿಗಳನ್ನು ಅನುಗ್ರಹಿಸುತ್ತಿದ್ದಾಳೆ.

ಮಾರಿಯಮ್ಮನ ದೇವಸ್ಥಾನದಲ್ಲಿ 1947ಕ್ಕೆ ಮುಂಚೆ ಕುರಿ, ಕೋಳಿ, ಕೋಣ ಮುಂತಾದ ಪ್ರಾಣಿಗಳ ಬಲಿ ನಡೆಯುತ್ತಿದ್ದು, ಸರ್ಕಾರದ ಸುಗ್ರೀವಾಜ್ಞೆಯ ಫಲವಾಗಿ ಈಗ ಸಂಪೂರ್ಣವಾಗಿ ಪ್ರಾಣಿ ಬಲಿ ನಿಂತಿದೆ. 1949ರಿಂದೀಚೆಗೆ ಮಾರಿಯಮ್ಮನ ಉತ್ಸವಗಳು ಪ್ರಾಣಿ ಬಲಿಗಳಿಲ್ಲದೇ ಜರುಗುತ್ತಿವೆ. ಶ್ರೀ ದೇವಿಯ ಗುಡಿಯ ಎದುರಿನ ಬಲಭಾಗದಲ್ಲಿ ಕೋಟೆಯಿಂದ ತಂದ–'ಆಂಜನೇಯ ದೇವರ' ಪ್ರತಿಷ್ಠೆಯನ್ನು 1974ರಲ್ಲಿ ಮಾಡಲಾಯಿತು. ಆಡಳಿತ ವರ್ಗದವರು ದೇವಸ್ಥಾನದ ಸರ್ವಾಂಗೀಣ ಅಭ್ಯುದ್ಧಿಗೆ ಶ್ರಮಿಸುತ್ತಿದ್ದಾರೆ. ದೇವಸ್ಥಾನವನ್ನು ಶುಭ್ರವಾಗಿಟ್ಟು ನಡೆಯುವ ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರಲು ಆಡಳಿತ ವರ್ಗ ಅದರಲ್ಲಿಯೂ ಉಡುಪಿಯ ಸಂತೆಕಟ್ಟೆಯ ಸಿ. ಎಲ್. ಕಾಮತರು ವಿಶೇಷ ಆಸಕ್ತಿವಹಿಸುತ್ತಿದ್ದಾರೆ.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯವು, ಇಂದು ಭಾರತ ಮತ್ತು ಜಗತ್ತಿನ 52 ಇನ್ನಿತರ ರಾಷ್ಟ್ರಗಳಲ್ಲಿ ಹರಡಿ ಸುಮಾರು 2000 ಶಾಖೆಗಳನ್ನು ಹೊಂದಿದೆ. ಮೌಂಟ್ ಅಬುವಿನಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ ಕಾರ್ಕಳದ ಕಗ್ಗಲ್ಲಿನಲ್ಲಿ ಕೂಡ ತನ್ನ ಬೇರನ್ನು ಬಿಟ್ಟಿದೆ.

ಕಾರ್ಕಳದಲ್ಲಿ ಅದು ತನ್ನ ಶಾಖೆಯನ್ನು 1984ರ ಜನವರಿಯಲ್ಲಿ ತೆರೆಯಿತು. ಶಾಖೆಯಲ್ಲಿ ಪ್ರಕೃತ ಸುಮಾರು 50 ಜನ ವಿದ್ಯಾರ್ಥಿಗಳು ವಯಸ್ಸಿನ ಅಂತರವಿಲ್ಲದೇ ಈ ವಿಶ್ವವಿದ್ಯಾಲಯದಲ್ಲಿ

ನಯೋಗ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಜನತೆಯು ದೈನಂದಿನ ಚಟುವಟಿಕೆಗಳಿಗೆ ಭಂಗ ಬರದಂತೆ ಶಿಕ್ಷಣವನ್ನು ಕೊಡುವುದರಲ್ಲಿ ಈ ಸಂಸ್ಥೆ ನಿರತವಾಗಿದೆ. ಯುಕ್ತರಾಷ್ಟ್ರ ಸಂಘದಿಂದ ಮಾನ್ಯತೆಯುನ್ನು ಪಡೆದಿರುವ ಈ ಸಂಸ್ಥೆಯು ಜಗತ್ತಿನ ಹತ್ತೊಂಬತ್ತು ಭಾಷೆಗಳಲ್ಲಿ ಧಾರ್ಮಿಕ ಸಾಹಿತ್ಯವನ್ನು ಪ್ರಕಟಿಸುತ್ತಿದೆ.

ಶ್ರೀ ನಾಗಲಿಂಗೇಶ್ವರ ಸಂಸ್ಕೃತ ಮತ್ತು ವೇದ ಪಾಠಶಾಲೆ ಆಲಂಗಾರು

ಶ್ರೀ ನಾಗಲಿಂಗೇಶ್ವರ ಸಂಸ್ಕೃತ ಮತ್ತು ವೇದ ಪಾಠಶಾಲೆ ಕಾರ್ಕಳ ತಾಲ್ಲೂಕಿನ ಮೂಡ ಬಿದರೆಯ ಹತ್ತಿರವಿರುವ ಅಲಂಗಾರಿನಲ್ಲಿ ನಡೆಯುತ್ತಿದೆ. ಲಭ್ಯವಾದ ಜೈನರ ಶಾಸನದ ಪ್ರಕಾರ ನಾಗಲಿಂಗ ಸ್ವಾಮಿ ದೇವಾಲಯಕ್ಕೆ ಸುಮಾರು 400 ವರ್ಷಗಳಾಗಿರಬಹುದು. ಇದನ್ನು 1968ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. 1969 ರಲ್ಲಿ ಶ್ರೀಯುತ ಬಿ. ಎಸ್. ರುದ್ರಾಚಾರ್ ಅವರ ನೇತೃತ್ವದಲ್ಲಿ ಸಂಸ್ಕೃತ ಹಾಗೂ ವೇದ ಪಾಠಶಾಲೆಯುನ್ನು 'ವಿಶ್ವಕರ್ಮ ಜನಾಂಗದವರ' ಅನುಕೂಲಕ್ಕಾಗಿ ಪ್ರಾರಂಭಿಸಲಾಯಿತು. ಇದನ್ನು ವಿಶ್ವಕರ್ಮ ಬ್ರಾಹ್ಮಣ ಸೇವಾ ಸಂಘ' ಮಂಗಳೂರು ಇವರು ನಡೆಸಿಕೊಂಡು ಬರುತ್ತಿದ್ದಾರೆ. ವಿಶ್ವಕರ್ಮ ಜನಾಂಗದ ಐದೂ ಪಂಗಡದವರು ಇಲ್ಲಿ ಸಂಸ್ಕೃತ ವೇದ, ಪೌರೋಹಿತ್ಯಕ್ಕೆ ಸಂಬಂಧ ಪಟ್ಟಂತೆ ಕರ್ಮಾಂಗಗಳನ್ನು ಅಭ್ಯಾಸ ಮಾಡುತ್ತಿದ್ದಾರೆ. ಋಗ್ವೇದಕ್ಕೆ ಸಂಬಂಧಪಟ್ಟಂತ ಅನೇಕ ವಿಷಯಗಳನ್ನು ಕಲಿಸುತ್ತಿದ್ದಾರೆ. ಈ ವರೆಗೆ ಸುಮಾರು 35 ವಿದ್ಯಾರ್ಥಿಗಳು ತಮ್ಮ ವೇದಾಧ್ಯಯನವನ್ನು ಮುಗಿಸಿಕೊಂಡು ಹೋಗಿದ್ದಾರೆ. ಪ್ರಚಲಿತವರ್ಷ ಹತ್ತು ವಿದ್ಯಾರ್ಥಿಗಳು ವೇದಾಧ್ಯಯನ ಮಾಡುತ್ತಿದ್ದಾರೆ.

ಈ ಸಂಸ್ಥೆಯಿಂದ 1979 ರಲ್ಲಿ 'ಸಾರ್ಥಷೋಡಸ ಸಂಸ್ಕಾರ ರತ್ನ ಮಾಲ' ಎಂಬ ಸಂಸ್ಕೃತ ಪುಸ್ತಕವನ್ನು ಪೆರ್ಲ ಕೃಷ್ಣ ಭಟ್ ಅವರ ನೆರವಿನಿಂದ ಕನ್ನಡಕ್ಕೆ ಭಾಷಾಂತರಿಸಿ ಮುದ್ರಿಸಲಾಯಿತು. ಈ ಪುಸ್ತಕದ ಮೂಲ ಕರ್ತೃ 'ಪದ್ಮಾಕರ ಶಾಸ್ತ್ರಿ ಬಾಲಶಾಸ್ತ್ರಿ ಕ್ಷೀರ ಸಾಗರ' ಅವರು. ಮಾಘ ಶುದ್ಧ ಪಂಚಮಿಯುಂದು ಗುರು ಆರಾಧನಾ ಕಾರ್ಯ ಕ್ರಮವು ವಿಜೃಂಭಣೆಯಿಂದ ಪ್ರತಿ ವರ್ಷ ನಡೆಯುತ್ತಿದೆ.

ಪ್ಲಾನ್ಸೆಟ್

ಆಧ್ಯಾತ್ಮಿಕ ಸಂದೇಶವನ್ನು ನೀಡುವ ಪ್ಲಾನ್ಸೆಟ್ ಅನ್ನು 1923ರಲ್ಲಿ ದಿ॥ ಜನಾರ್ದನ ಕಾಮತರು ಕಾರ್ಕಳಕ್ಕೆ ತಂದರು. ಗುರುಜಿ ಎಂದು ಕರೆಯಲ್ಪಡುವ ದಿವ್ಯಚೇತನ ಪ್ಲಾನ್ಸೆಟ್‌ನಲ್ಲಿ ತನ್ನ ಸಂದೇಶವನ್ನು ಸಾರುತ್ತಿದೆ. ಗುರುಜಿ ತಮ್ಮನ್ನು ಸಾಮಾನ್ಯ ಸನ್ಯಾಸಿ ಎಂದು ಕರೆದುಕೊಳ್ಳುತ್ತಾರೆ. ಕಳೆದ 61 ವರ್ಷಗಳಿಂದ ಭಕ್ತರ ನೂರಾರು ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಕರುಣಿಸುವುದರ ಮೂಲಕ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಿದೆ. 1923ರಲ್ಲಿ ಬಂಟವಾಳದ ಐತಿಹಾಸಿಕ ಮಹಾಪೂರದ ಕಾಲದಲ್ಲಿ ಕಾರ್ಕಳದಲ್ಲೇ ಇದ್ದುಕೊಂಡು ಆ ನೆರೆಯ ನಿಯಂತ್ರಣ ಮತ್ತು ಪರಿಹಾರಗಳಿಗೆ ಬೇಕಾದ ಸಲಹೆಯುನ್ನು ನೀಡಿ ಪ್ಲಾನ್ಸೆಟ್ ಮಹತ್ವದ ಪಾತ್ರವಹಿಸಿದುದನ್ನು ಜನ ಇಂದಿಗೂ ಸ್ಮರಿಸಿಕೊಳ್ಳುತ್ತಿದ್ದಾರೆ. ಆಧ್ಯಾತ್ಮಿಕ ವಿಚಾರಗಳಲ್ಲಿ ಕಾರ್ಕಳದ ಬಹು ಸಂಖ್ಯಾತ ಜನ ಇಂದೂ ಪ್ಲಾನ್ಸೆಟ್‌ನಿಂದ ಸಹಾಯ ಪಡೆಯುತ್ತಿದ್ದಾರೆ.

ಸಂತ ಲೋರೆನ್ಸ್‌ರ ಇಗರ್ಜಿ

ಸಂತ ಲಾರೆನ್ಸರನ್ನು 'ಕಾರ್ಲದ ದೇವರ್' ಎಂದರೆ ಕಾರ್ಕಳದ ದೇವರು ಎಂಬ ಭಾವನೆಯಿಂದ ಕ್ರೈಸ್ತ ಬಾಂಧವರು ಪೂಜಿಸುತ್ತಾರೆ. ಈ ಸಂತ ದೇವರ ಪರಿಶುದ್ಧ ಸೇವಕರಲ್ಲಿ ಒಬ್ಬರಾಗಿದ್ದು,

ಭಜಕ ವೃಂದಕ್ಕೆ ಲೌಕಿಕ ಹಾಗೂ ಪಾರಮಾರ್ಥಿಕ ಸುಖ ಶಾಂತಿಗಳನ್ನು ಕರುಣಿಸುತ್ತಿದ್ದಾರೆ. ಈ ಚೆಚ್ ಅತ್ತೂರಿನಲ್ಲಿ 1759ರ ಮೊದಲೇ ಸ್ಥಾಪಿತವಾಗಿದೆ ಎಂಬುದನ್ನು ಶ್ರೀ ಸೆವ್ರಿನ್ ಶಿಲ್ಪಿ ಅವರ ಬರೆದ 'ದಕ್ಷಿಣಕನ್ನಡ ಜಿಲ್ಲೆಯ ಕ್ರೈಸ್ತ ಇತಿಹಾಸ' ಎಂಬ ಪುಸ್ತಕದಿಂದ ತಿಳಿಯಬಹುದು. ಕ್ರಿ. ಶ. 175 ರಲ್ಲಿ ರೆ. ಫ್ರಾನ್ಸಿಸ್ ಸಾಲ್ವದೊರ್ ಲೋಬೋ ಡಿ, ಸರಲ ಎಂಬುವರು ಇಲ್ಲಿ ಧರ್ಮಗುರುಗಳಾ ದ್ದರು ಎಂಬುದಕ್ಕೆ ಈ ಪುಸ್ತಕದಲ್ಲಿ ದಾಖಲೆಗಳಿವೆ. ಮೊದಲು ಸಂತ ಲೋರೆನ್ಸರ ಇಗರ್ಜಿ ಈಗಿರು ಸ್ಥಳದಿಂದ ಮೂರು ಮೈಲಿ ದೂರದಲ್ಲಿತ್ತು. ಕ್ರೈಸ್ತ ಸಮಾಜ ಬಾಂಧವರ ತಿಕ್ಕಾಟದಿಂದಾಗಿ ಮೊದಲಿನ ಇಗರ್ಜಿ ಶಿಥಿಲಗೊಂಡು ಅಲ್ಲಿ ಇರಿಸಿದ್ದ ಸಂತ ಲೋರೆನ್ಸ್ ವಿಗ್ರಹವನ್ನು ಈಗಿನ ಸ್ಥಳಕ್ಕೆ ತಂದಿರಿ ಲಾಯಿತು. ಈ ಪವಿತ್ರ ಮೂರ್ತಿಯು ಹಾಗೂ ಸಂತ ಲಾರೆನ್ಸರ ಸ್ಮಾರಕದೊಂದಿಗೆ ಹೊರಟ ಧರ್ಮ ಗುರುಗಳು ವಿಶ್ರಾಂತಿಗಾಗಿ ಈ ಪರಿಸರದಲ್ಲಿ ತಂಗಿದ್ದು ನಂತರ ಮುಂದೆ ತೆರಳಲು ಉಪಕ್ರಮಿಸಿದಾ ಸಂತ ಲಾರೆನ್ಸರ ಮೂರ್ತಿ ಕದಲಲಿಲ್ಲವಂತೆ. ಭಗವಂತನ ಆಣತಿಯನ್ನರಿತ ಧರ್ಮಗುರುಗಳು ಅಲ್ಲಿ ದೇವಾಲಯವನ್ನು ನಿರ್ಮಿಸುವ ಆಶ್ವಾಸನೆಯನ್ನಿತ್ತಾಗ, ಮೂರ್ತಿ ಹಾಗೂ ಸ್ಮಾರಕಗಳು ಮೇಲೆದ್ದುವ ಎಂಬ ಹೇಳಿಕೆಯಿದೆ. 1839ರಲ್ಲಿ ಸಂತ ಲಾರೆನ್ಸರು ಈಗ ಇರುವ ಇಗರ್ಜಿಯ ಸ್ಥಳದಲ್ಲಿ ಆಸೀನ ರಾದರು. ನೂತನ ಇಗರ್ಜಿಯ ಕಟ್ಟಡ 1901ರಲ್ಲಿ ಪೂರ್ಣಗೊಂಡಿತು. ಇದಕ್ಕೆ ಮೊದಲು ಸಂತರ ಮೂರ್ತಿಯನ್ನು ಹುಲ್ಲು ಚಾವಣಿಯಿಂದ ನಿರ್ಮಿಸಲಾದ ಒಂದು ಸಣ್ಣ ದೇವಾಲಯದಲ್ಲಿ ಇರಿಸಲಾಗಿತ್ತು.

ಸಂತ ಲೋರೆನ್ಸರ ಧರ್ಮಕೇಂದ್ರದಲ್ಲಿ ಪ್ರತಿ ಜನವರಿ ತಿಂಗಳ ಕೊನೆಯ ವಾರದಲ್ಲಿ ವಾರ್ಷಿ ಕೋತ್ಸವದ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರಗುತ್ತವೆ. ಜನವರಿ ತಿಂಗಳ ಕೊನೆಯ ವಾರದ ಮಂಗಳವಾರ ಸಂಭ್ರಮದ ಬಲಿಪೂಜೆ ಮತ್ತು ಪ್ರಸಂಗಗಳು ಬುಧವಾರ ಕೊಂಕಣಿ ಭಾಷೆಯಲ್ಲಿ ಹಾಗೂ ಕನ್ನಡದಲ್ಲಿ ದಿವ್ಯ ಬಲಿ ಪೂಜೆ ಮತ್ತು ಪ್ರಸಂಗಗಳು ಜರಗುತ್ತವೆ. ಗುರುವಾರ 'ಮಾರ್ಗದರ್ಶಕ ದೇವ ಮಾತೆಯ ಹಬ್ಬವನ್ನು ಆಚರಿಸುತ್ತಾರೆ. ಇವುಗಳಲ್ಲದೇ ಪ್ರವೇಶಕೀರ್ತನ, ಪಾಪ ನಿವೇದನೆ, ದಯಾಯಾಚನೆ ಸ್ತುತಿ ಗೀತೆ, ಸಭಾ ಪ್ರಾರ್ಥನೆ ಹಾಗೂ ಸುಸಂದೇಶಗಳು ಅವ್ಯಾಹತವಾಗಿ ನಡೆಯುತ್ತಿರುತ್ತವೆ. ಕ್ರಿಸ್ಮಸ್, ಪಾರಿಶ ಜಾತ್ರೆ ಹಾಗೂ ಸಂತ ಲಾರೆನ್ಸರ ಜನ್ಮ ದಿನಾಚರಣೆಗಳನ್ನು ಪ್ರತಿವರ್ಷ ಆಚರಿಸುತ್ತಾರೆ.

ಈ ಇಗರ್ಜಿಗೆ ಕ್ರೈಸ್ತರಲ್ಲದೇ ಸಮಾಜದ ಇತರ ಬಾಂಧವರೂ ಬಂದು ತಮ್ಮ ಪಾಲಿನ ಪ್ರಾರ್ಥನೆ ಗೈಯುತ್ತಾರೆ. ಮನುಷ್ಯ ಪ್ರಮಾಣದಷ್ಟು ಎತ್ತರದ ಬತ್ತಿಗಳನ್ನು ಉರಿಸುವುದು ಒಂದು ಪ್ರಮುಖ ಸೇವೆಯಾಗಿದೆ. ಸಂತ ಲೋರೆನ್ಸರ ದೀಪಕ್ಕೆ ಉರಿಸಿದ ತೈಲವು ನೂರಾರು ಭಕ್ತಾಧಿಗಳಿಗೆ ಹಲವು ಬಗೆಯಿಂದ ದೈಹಿಕ ಹಾಗೂ ಮಾನಸಿಕ ಶಮನವನ್ನೀಯುತ್ತದೆ ಎಂದು ಇಂದಿಗೂ ಭಕ್ತಾದಿಗಳು ನಂಬಿದ್ದಾರೆ. ಹಲವು ರೀತಿಯ ಗುಣಪಡಿಸಲಾಗದ ಹಳೇ ನೋವುಗಳು ಕಾಯಿಲೆಗಳು ಈ ಪವಿತ್ರ ತೈಲದಿಂದ ಗುಣವಾದ ಬಗ್ಗೆ ಆಧಾರಗಳಿವೆ. ಕಿವಿ ನೋವಿನಿಂದ ಬಳಲುತ್ತಿರುವವರು ಶ್ರದ್ಧಾಭಕ್ತಿ ಪೂರ್ವಕವಾಗಿ ಇದನ್ನು ಹಚ್ಚಿ ಗುಣ ಪಡಿಸಿಕೊಂಡಿರುವರು.

ಕ್ಯಾಥೋಲಿಕ್ ರಿಲೀಫ್ ಸರ್ವಿಸ್ ವತಿಯಿಂದ, ಅಮೆರಿಕಾ ಕ್ಯಾಥೋಲಿಕ್ ಕಾನ್‌ಫರೆನ್ಸ್ ಮೂಲಕ ಅಮೆರಿಕದಿಂದ ಬಂದ ಆಹಾರವನ್ನು ಉಚಿತವಾಗಿ ವರ್ಗಭೇದವಿಲ್ಲದೇ ಇಲ್ಲಿ ಹಂಚಲಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಸಂತ ಲೋರೆನ್ಸ್ ಇಗರ್ಜಿ ಪ್ರವಾಸಿಗಳಿಗೆ, ಭಕ್ತಾದಿಗಳಿಗೆ ಪ್ರೇಕ್ಷಣೀಯ ಹಾಗೂ ಪವಿತ್ರ ಯಾತ್ರಾಸ್ಥಳವಾಗಿದೆ.

ಕ್ರಿಸ್ತ ಸೇವಕೀ ಆಶ್ರಮ, ಪರ್ಪಲೆ

ಕ್ರಿಸ್ತ ಸೇವಕೀ ಆಶ್ರಮ ಪ್ರಾಟೆಸ್ಟೆಂಟ್ ಕ್ರೈಸ್ತ ಬಾಂಧವರ ಶ್ರಮದ ಕೊಡುಗೆ. ಇದು 1950ರಲ್ಲಿ ಸ್ಥಾಪಿತವಾಯಿತು. ಸ್ವಿಟ್ಜರ್‌ಲ್ಯಾಂಡಿನಿಂದ ಬಂದ ಮಿಶನರಿ ಸಿಸ್ಟರ್ ಹನ್ನಾ ಎಸ್ಲಿಮನ್‌ರವರು ಈ

ಸ್ಥೆಯನ್ನು ಸ್ಥಾಪಿಸಲು ಬಹಳ ಶ್ರಮಿಸಿದರು. ಇವರಲ್ಲದೇ ಸಿಸ್ಟರ್ ಲೀಲಾವತಿ ಅಮನ್ನಾ ಮತ್ತು ರ್ ಕೆ. ಕುಂದರ್ ಇವರ ಪರಿಶ್ರಮದ ಫಲವಾಗಿ ಇಂದು ಈ ಸಂಸ್ಥೆ ತನ್ನ ನೆರಳನ್ನು ಸಮಾಜ ಧವರಿಗೆ ನೀಡುತ್ತಿದೆ. ಸಿಸ್ಟರ್ ಕೆ. ಕುಂದರ್ ಈಗ ಈ ಆಶ್ರಮದ ಮೇಲ್ವಿಚಾರಿಕೆಯಾಗಿ ತಮ್ಮ ರ್ವ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲದೇ ಆರು ಮಂದಿ ಸ್ವಯಂ ಸೇವಕರೂ ಹಾಗೂ ಮತ್ತೆರಡು ಸಿಸ್ಟರ್‌ಗಳು ಈ ಸಂಸ್ಥೆಗಾಗಿ ದುಡಿಯುತ್ತಿದ್ದಾರೆ. ಈ ಆಶ್ರಮ ಹಲವಾರು ಜನೋಪಯೋಗಿ ರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಸಂಸ್ಥೆ ಪ್ರಾರಂಭವಾದ ಹೊಸತರಲ್ಲಿ ಮೂರು ವರ್ಷಗಳ ಕಾಲ, ಉಡುಪಿಯ ಲೆಂಬಾರ್ಡ್ ತ್ರೆಯು ಕ್ಷಯ ರೋಗಿಗಳಿಗೆ ಆಶ್ರಯವನ್ನು ನೀಡಿತು. ವಸತಿ ಸೌಕರ್ಯದ ಏರ್ಪಾಡನ್ನು ಮಾಡ ಗಿತ್ತು. ಆದರೆ ಇಲ್ಲಿ ವಿದ್ಯುತ್ ಸೌಕರ್ಯದ ಕೊರತೆಯಿಂದಾಗಿ ಅವರನ್ನು ಸ್ಥಳಾಂತರಿಸಲಾಯಿತು.

ಕ್ರಿಸ್ತ ಸೇವಕೀ ಆಶ್ರಮದಲ್ಲಿ ಆರಂಭದಲ್ಲಿ 65 ವರ್ಷ ದಾಟಿದ ವಯೋವೃದ್ಧ ಮಿಶನ್ ಹೆಂಗಸ ನ್ನು ಮಾತ್ರ ಸೇರಿಸಿಕೊಳ್ಳಲಾಗುತ್ತಿತ್ತು. ಕ್ರಮೇಣ ಮಿಶನ್ ವೃದ್ಧ ಗಂಡಸರನ್ನೂ ಸೇರಿಸಿಕೊಳ್ಳಲು ರಂಭಿಸಿತು. ತಮ್ಮ ಕುಲಬಾಂಧವರಲ್ಲದೇ ಬೇರೆ ಜಾತಿಯ ವಯೋವೃದ್ಧರ ಯೋಗಕ್ಷೇಮವನ್ನೂ ೀಡಿಕೊಳ್ಳಲು ಅನುವಾಗುವಂತೆ ವಯಸ್ಸಿನ ಮಿತಿಯನ್ನು ಕಡಿಮೆ ಮಾಡಲಾಯಿತು. ಆದರೆ ಸಕ್ತ ಸಾಲಿನಲ್ಲಿ ಮಿಶನ್ ವೃದ್ಧರು ಮಾತ್ರ ನೆಲೆಸಿದ್ದಾರೆ.

ವೃದ್ಧರಿಗೆ ಮಾತ್ರ ಮೀಸಲಾಗಿದ್ದ ಕ್ರಿಸ್ತ ಸೇವಕೀ ಆಶ್ರಮದಲ್ಲಿ 1965ರ ಅನಂತರ ಮಕ್ಕಳನ್ನೂ ಡ ಸೇರಿಸಿಕೊಳ್ಳಲು ಅವಕಾಶವನ್ನು ಮಾಡಿಕೊಡಲಾಯಿತು. 1ರಿಂದ 5ವರ್ಷಗಳೊಳಗಿನ ಬಡ ಕ್ಕಳನ್ನು ಹಾಗೂ ಅನಾಥ ಮಕ್ಕಳನ್ನು ಈ ಆಶ್ರಮದಲ್ಲಿ ಸೇರಿಸಿಕೊಳ್ಳಲಾಗುತ್ತಿದೆ.

ಸ್ಮರಣೀಯ ವ್ಯಕ್ತಿಗಳು

ಂಡಿತಾ ರಮಾಬಾಯಿ ಸರಸ್ವತಿ

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಿಂದ ಸುಮಾರು 6 ಕಿ.ಮೀ. ದೂರದ ಪಶ್ಚಿಮ ಘಟ್ಟ ದೇಶದ ಮಡಿಲಲ್ಲಿರುವ ಗಂಗಾಮೂಲದ ಪುಣ್ಯಕ್ಷೇತ್ರದಲ್ಲಿ ಚಿತ್ಪಾವನ ಬ್ರಾಹ್ಮಣ ಕುಟುಂಬದಲ್ಲಿ ನಿಸಿದ ರಮಾಬಾಯಿಯವರು ಭಾರತದ ಅಗ್ರೇಸರ ಮಹಿಳೆಯರಲ್ಲಿ ಒಬ್ಬರು ಎಂದು ತಿಳಿಸಲು ಮ್ಮೆಯಾಗುತ್ತಿದೆ. ಇವರು ಸ್ವದೇಶದ ದೀನದಲಿತರಿಗೆ ಅಂಗವಿಕಲರಿಗೆ, ಅನಾಥೆಯರಿಗೆ ಹಾಗೂ ಶಕ್ತರಿಗೆ ಸಲ್ಲಿಸಿದ ಸೇವೆ ಅಪಾರ ಮತ್ತು ಅನುಕರಣೀಯ. ಅನಾಥ ಸ್ತ್ರೀಯರ ಉದ್ಧಾರಕ್ಕಾಗಿ ದ್ಧಕಂಕಣಳಾದ ಈ ಆದರ್ಶ ಮಹಿಳೆ, ಇಂಗ್ಲೆಂಡ್, ಅಮೇರಿಕಾ, ಜಪಾನ್ ಮೊದಲಾದ ದೇಶಗಳಲ್ಲಿ ಂಚರಿಸಿ ಸೇವಾ ಮನೋಭಾವನೆಯಿಂದ ತನ್ನ ಉದ್ದೇಶವನ್ನು ಈಡೇರಿಸಿಕೊಂಡು, ಜೀವನವನ್ನು ಾವನವನ್ನಾಗಿ ಮಾಡಿಕೊಂಡ ದಿವ್ಯಚೇತನ. ಅವರ ವೈಶಿಷ್ಟ್ಯಪೂರ್ಣ ಕಾರ್ಯಗಳು ಹಲವು. ಂಸ್ಕೃತ ವಿದ್ಯಾಭ್ಯಾಸ, ಕಷ್ಟಸಹಿಷ್ಣುತೆ, ವಿಧವೆಯರ ಉದ್ಧಾರ, ಹೆಂಗಸರ ಆಸ್ಪತ್ರೆ, ಅನಾಥಾಶ್ರಮ, ಂಧಶಾಲೆ ಇವುಗಳು ಅವರ ಕಾರ್ಯಬಾಹುಳ್ಯದ ನಿದರ್ಶನಕ್ಕೆ ಸ್ಪಷ್ಟ ಸಾಕ್ಷಿ.

ಬಾಲ್ಯದಲ್ಲಿಯೇ ತಂದೆತಾಯಿಯರನ್ನು (ಅನಂತ ಶಾಸ್ತ್ರಿ ಮತ್ತು ಲಕ್ಷ್ಮೀಬಾಯಿ) ಕಳೆದುಕೊಂಡ ಮಾಬಾಯಿಯವರು 16ರ ಹರೆಯದಲ್ಲಿ ಕಲ್ಕತ್ತಕ್ಕೆ ಹೋಗಿ 'ಬಿಪೇನ್ ವಿಹಾರಿದಾಸ ಬಾಬು' ಎಂಬ ನ್ಯ ಜಾತಿಯವನೊಂದಿಗೆ ವಿವಾಹವಾದರು. ತಂದೆಯಿಂದ ಕಲಿತ ಸಂಸ್ಕೃತ ವಿದ್ಯಾಭ್ಯಾಸವನ್ನು ಅಲ್ಲಿ ಮುಂದುವರಿಸಿದ್ದೇ ಅಲ್ಲದೇ, ತನ್ನಲ್ಲಿರುವ ಅಗಾಧವಾದ ಸಂಸ್ಕೃತ ಪಾಂಡಿತ್ಯವನ್ನು ಕಲ್ಕತ್ತದ ಜನತೆಗೆ, ಂಡಿತರಿಗೆ ಪರಿಚಯ ಮಾಡಿಕೊಟ್ಟರು. ಇವರ ಪಾಂಡಿತ್ಯ, 'ಸಿದ್ಧಾಂತ ಕೌಮುದಿ'ಯೇ ಮುಂತಾದ ಾಸ್ತ್ರಗ್ರಂಥಗಳ ಖಚಿತ ಜ್ಞಾನ ಅಲ್ಲಿಯ ವಿದ್ವಾಂಸರನ್ನೂ ಕೂಡ ಚಕಿತಗೊಳಿಸುತ್ತಿದ್ದವು. ಮಹಿಳೆಯರಿಗೆ ಂಸ್ಕೃತ ಪಾಂಡಿತ್ಯ ಸಲ್ಲದು ಎಂಬ ಮಾತನ್ನು ಮೊತ್ತ ಮೊದಲ ಬಾರಿಗೆ ಹುಸಿಯಾಗಿಸಿದವರು ಂಡಿತಾರಮಾಬಾಯಿಯವರು.

1878ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯು ರಮಾಬಾಯಿಯವರಿಗೆ ಪಂಡಿತಾ ಸರಸ್ವತಿ ಎ ಬಿರುದನ್ನಿತ್ತು ಗೌರವಿಸಿತು. ಅಂದಿನಿಂದ ರಮಾಬಾಯಿಯವರಿಗೆ 'ಪಂಡಿತಾ ರಮಾಬಾಯಿ ಸರಸ್ ಎಂಬ ಖ್ಯಾತ ನಾಮವೇ ಉಳಿಯಿತು. ಕ್ರಮೇಣ ಡಕ್ಕಾ, ಶಿಲ್ಲಾಟ್ ಮುಂತಾದ ಪಟ್ಟಣ ವಿದ್ವಾಂಸರಿಗೂ ಅವರ ಪ್ರತಿಭೆಯ ಪರಿಚಯವಾಯಿತು.

1882ರಿಂದ ಪಂಡಿತಾ ರಮಾಬಾಯಿಯವರು ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ಅರ್ಪ ಕೊಂಡರು. ಸದಾಚರಣೆ, ನೀತಿಮಾರ್ಗ, ಧರ್ಮಜ್ಞಾನ ಇವುಗಳ ಬಗ್ಗೆ ಸ್ತ್ರೀಯರಲ್ಲಿ ತಿಳುವಳಿಕೆ ನ್ನುಂಟುಮಾಡುವ ಸದುದ್ದೇಶದಿಂದ, ಅವರು ಪುಣೆಯಲ್ಲಿ 'ಆರ್ಯ ಮಹಿಳಾ ಸಮಾಜ' ಎಂಬ ಸಂ ಯನ್ನು ಸ್ಥಾಪಿಸಿದರು. ಅಲ್ಲದೇ 'ಸ್ತ್ರೀ ಧರ್ಮ ನೀತಿ' ಎಂಬ ಪುಸ್ತಕವನ್ನು ಮರಾಠಿ ಭಾಷೆಯ ಬರೆದು ಪ್ರಕಟಿಸಿದರು. ಬಾಲವಿಧವೆಯರ ಶೋಚನೀಯ ಸ್ಥಿತಿಯನ್ನು ಮನಗಂಡ ರಮಾಬಾ ಯವರು ಅವರ ಸ್ಥಿತಿಗತಿಗಳ ಬಗ್ಗೆ ಆಸಕ್ತಿ ವಹಿಸಿದರು. ಅನಾಥ ವಿಧವೆಯರಿಗೆ ಯೋಗ್ಯ ಶಿಕ್ಷಣವನ ಕೊಡುವ ಉದ್ದೇಶದಿಂದ 1889ರಲ್ಲಿ ಬಾಲವಿಧವೆಯರ 'ವಸತಿ ಗೃಹ' ಮತ್ತು ಪಾಠಶಾಲೆಯನ ಮುಂಬೈನ ವಿಲ್ಸನ್ ಕಾಲೇಜಿನ ಸಮೀಪ ಚೌಪಾಟಿ ಎಂಬಲ್ಲಿ ಪ್ರಾರಂಭಿಸಿದರು. ಈ ಬಾಲವಿಧವೆಯ ವಸತಿಗೃಹಕ್ಕೆ ಪ್ರಥಮವಾಗಿ ಬಂದ ವಿದ್ಯಾರ್ಥಿನಿಯ ಹೆಸರು ಶಾರದಾ ಎಂದಾಗಿದ್ದುದರಿಂದ, ಮುಂ ಬಾಲ ವಿಧವೆಯರ ವಸತಿಗೃಹ ಮತ್ತು ಪಾಠಶಾಲೆಯನ್ನು 'ಶಾರದಾಸದನ' ಎಂಬ ಹೆಸರಿನಿಂದ ಕರೆಯಲಾಯಿತು. ಇಲ್ಲಿ ಅನಾಥ ಬಾಲವಿಧವೆಯರ ಪುನರ್‌ವಿವಾಹಕ್ಕೆ ಎಲ್ಲಾ ರೀತಿಯ ಪ್ರೋತ್ಸಾ ವನ್ನೂ ಕೊಡುವ ವ್ಯವಸ್ಥೆಯಾಗಿತ್ತು.

ಪಂಡಿತಾ ರಮಾಬಾಯಿ ಸರಸ್ವತಿಯವರ ಕೀರ್ತಿ ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ ವಿಸ್ತರಿಸಿತ್ತು. 1883ರಲ್ಲಿ ಅವರು ಇಂಗ್ಲೆಂಡಿಗೆ ಹೋದಾಗ 'ಇಂಗ್ಲೆಂಡಿಗೆ ಹೋದ ಭಾರತ ಪ್ರಥಮ ಮಹಿಳೆ' ಎಂಬ ಕೀರ್ತಿಗೆ ಪಾತ್ರರಾದರು. ಅಲ್ಲಿರುವಾಗ ಕ್ರೈಸ್ತಮತ ಸಿದ್ಧಾಂತಗಳನ್ನು ಅಭ್ಯಾ ಮಾಡಿ ಅದರಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡು, ಕ್ರೈಸ್ತ ಧರ್ಮ ಗುರುಗಳಿಂದ ಕ್ರೈಸ್ತ ಮತವನ ಸ್ವೀಕರಿಸಿ 'ಮೇರಿ' ಎಂಬ ಹೆಸರಿನಿಂದ ಪ್ರಖ್ಯಾತರಾದರು. ಆದರೆ ತಮ್ಮ ನಿಜನಾಮಧೇಯವನ ವ್ಯಾವಹಾರಿಕವಾಗಿ ಬದಲಾಯಿಸಿಕೊಳ್ಳಲಿಲ್ಲ. 1886ರಲ್ಲಿ ಅಮೆರಿಕಾಗೆ ತೆರಳಿದ ರಮಾಬಾಯಿಯವರ ಡಾ॥ ಸೌ। ಆನಂದೀಬಾಯಿ ಜ್ಯೋತಿ (ಇವರು ಅಮೇರಿಕೆಗೆ ಹೋದ ಪ್ರಥಮ ಭಾರತೀಯ ಮಹಿ ಮತ್ತು ಮಹಿಳಾ ವೈದ್ಯೆ) ಅವರ ಪದವೀದಾನ ಸಮಾರಂಭದಲ್ಲಿ ಭಾಗವಹಿಸಿದರು. ಅಮೇರಿಕಾದಲ್ಲಿರುವಾ ಅಲ್ಲಿಯ ಸಾಮಾಜಿಕ ಜೀವನ, ಗೃಹಜೀವನ, ವಿದ್ಯಾಪ್ರಗತಿ, ಧಾರ್ಮಿಕ ಸಂಗತಿಗಳು, ಮಹಿಳೆಯ ಸ್ಥಾನಮಾನ ಮುಂತಾದ ವಿಷಯಗಳನ್ನು ಅಭ್ಯಾಸ ಮಾಡಿದರು. ಭಾರತದ ಬಾಲವಿಧವೆಯರ ನೈ ಚಿತ್ರಣವನ್ನು ಅಮೇರಿಕಾದ ಜನತೆಗೆ ನೀಡಿ "ರಮಾ ಬಾಯಿ ಎಸೋಸಿಯೇಶನ್" ಎಂಬ ಸಂಸ್ಥೆಯನ ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಈ ಸಂಸ್ಥೆ 'ಶಾರದಾಸದನ'ಕ್ಕೆ ಧನಸಹಾಯ ಮಾಡಲ ಮುಂದೆ ಬಂದಿತು. ಪಶ್ಚಿಮ ಅಮೇರಿಕಾದಲ್ಲಿಯೂ ಸಹ 'ರಮಾಬಾಯಿ ಎಸೋಸಿಯೇಶನ್ ಆಫ ಪೆಸಿಫಿಕ್ ಕೋಸ್ಟ್' ಎಂಬ ಸಂಘ ಸ್ಥಾಪನೆಯಾಯಿತು. ಅಮೇರಿಕಾದ ಬೇರೆ ಬೇರೆ ಪಟ್ಟಣಗಳ 'ರಮಾಬಾಯಿ ವೃತ್ತ' (ರಮಾಬಾಯಿ ಸರ್ಕಲ್) ಎಂಬ ಹೆಸರಿನಲ್ಲಿ ಅನೇಕ ಶಾಖೆಗಳು ತೆರೆಯಲ್ಪಟ್ಟವ ಇದೇ ಸಮಯದಲ್ಲಿ ರಮಾಬಾಯಿಯವರು 'ಉಚ್ಚ ವರ್ಗದ ಹಿಂದೂ ಮಹಿಳೆ' (ಹೈ ಕಾಸ್ಟ್ ಹಿಂದು ವುಮನ್) ಎಂಬ ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ ಬರೆದರು. ಈ ಪುಸ್ತಕದಲ್ಲಿ ಪಂಡಿತಾ ರಮಾಬಾಯಿ ಯವರು ಹಿಂದಿ ರಾಷ್ಟ್ರ ಭಾಷೆಯಾಗಬೇಕೆಂಬ ತಮ್ಮ ನಿಲುವನ್ನು ಪ್ರತಿಪಾದಿಸಿದ್ದಾರೆ. ಭಾರತದಂ ವಿವಿಧ ಭಾಷೆ, ವಿವಿಧ ಧರ್ಮಗಳ ಪ್ರಜೆಗಳುಳ್ಳ ದೇಶದಲ್ಲಿ ಹಿಂದಿಯೊಂದೇ ರಾಷ್ಟ್ರಭಾಷೆಯಾಗಲ ಅರ್ಹ ಎಂಬ ಅಭಿಪ್ರಾಯ ಅವರದಾಗಿತ್ತು. ಅಲ್ಲದೇ ಮರಾಠಿ ಭಾಷೆಯಲ್ಲಿ 'ಸಂಯುಕ್ತ ಸಂಸ್ಥಾನ ಲೋಕ ಸ್ಥಿತಿ' ಮತ್ತು ಪ್ರವಾಸ ವೃತ್ತಾಂತ ಎಂಬ ಪುಸ್ತಕಗಳನ್ನು ಪ್ರಕಟಿಸಿದರು. ಈ ಸುಂದರ ಪುಸ್ತಕಗಳ ಅವರು ಪ್ರಜಾರಾಜ್ಯದ ಸುಂದರ ಚಿತ್ರಗಳೊಂದಿಗೆ ಪ್ರಜೆಗಳ ಆಚಾರ, ವಿಚಾರ, ವ್ಯವಹಾರ ಮುಂತಾ ಗುಣಗಳನ್ನು ವರ್ಣಿಸಿದ್ದಲ್ಲದೇ, ಭಾರತದಲ್ಲಿನ ಸ್ಥಳೀಯ ಆಡಳಿತ, ಪ್ರಾಥಮಿಕ ಶಿಕ್ಷಣ, ದಾನಧರ್ಮ

ಲೀಸ್ ನಡತೆ ಹಾಗೂ ಇವುಗಳಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ವಿವರವಾಗಿ ಮಾಹಿತಿ ದ್ದಾರೆ. 1889ರಲ್ಲಿ ಸಾಮಾಜಿಕ ಪರಿಷತ್ತಿನ ಸಭೆಯು ವೇದಿಕೆಯಲ್ಲಿ 'ವಿಧವಾ ಕೇಶವಪನ'ದ ದ್ಧವಾಗಿ ಪುಷ್ಟೀಕರಣದ ಮಾತುಗಳನ್ನು ಆಡಿದ್ದಾರೆ. ಸಮಾಜದಲ್ಲಿನ ಈ ಅನಿಷ್ಟ ಪದ್ಧತಿಯನ್ನು ರ್ಮೂಲನಗೊಳಿಸುವುದು ಅವರ ಉದ್ದೇಶವಾಗಿತ್ತು.

1897ರ ಭಯಂಕರ ಕ್ಷಾಮದ ದವಡೆಯಲ್ಲಿ ಸಿಲುಕಿದ ಸುಮಾರು 3000 ನಿರಾಶ್ರಿತರ ಯೋಗ ುವನ್ನು ಬಹಳ ಸಮರ್ಪಕವಾಗಿ ಪಂಡಿತಾ ರಮಾಬಾಯಿಯವರು ನೋಡಿಕೊಂಡರು. 1902ರಲ್ಲಿ ಾಜದಿಂದ ಬಹಿಷ್ಕೃತರಾದ ಸ್ತ್ರೀಯರಿಗಾಗಿ 'ಕೃಪಾಸದನ'ವೆಂಬ ಇನ್ನೊಂದು ಆಶ್ರಮವನ್ನು ಪಿಸಿದರು. ಅಲ್ಲದೇ ಅಂಗಹೀನರು, ವೃದ್ಧರು, ಅಶಕ್ತರು, ಇವರುಗಳ ಶ್ರೇಯಸ್ಸಿಗಾಗಿ 'ಪ್ರೀತಿಸದನ' ಬ ಆಶ್ರಮವನ್ನು ಸ್ಥಾಪಿಸಿದ ಕೀರ್ತಿ ಪಂಡಿತಾ ರಮಾಬಾಯಿಯವರಿಗೆ ಸಲ್ಲುತ್ತದೆ. ಕುರುಡರಿಗೆ ರಾಭ್ಯಾಸವನ್ನು ಮತ್ತು ವೃತ್ತಿಶಿಕ್ಷಣವನ್ನು ಕೊಡುವ ದೃಷ್ಟಿಯಿಂದ ಅವರು "ಸದಾನಂದ" ಭವನ ಬ ಮತ್ತೊಂದು ಆಶ್ರಮವನ್ನು ತೆರೆಯುವುದರಲ್ಲಿ ಯಶಸ್ವಿಯಾದರು. ಇದಲ್ಲದೆ ಬ್ರೈಲ್ ಪದ್ಧತಿ ರಾಭ್ಯಾಸವನ್ನು ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಶುರು ಮಾಡಿದವರು ಪಂಡಿತಾ ರಮಾಬಾಯಿ ವರು. ಎಳೆಯ ಮಕ್ಕಳ ಏಳಿಗೆಯ ಹಿತದೃಷ್ಟಿಯಿಂದ ರಮಾಬಾಯಿಯವರು, ಒಂದು ಸುಂದರ ಲೋದ್ಯಾನ' (ಕಿಂಡರ್‌ಗಾರ್ಟನ್)ವನ್ನು ನಿರ್ಮಿಸುವುದರಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ್ದರು.

ಇವರ ಕಾರ್ಯ ವೈಖರಿಯನ್ನು ವೀಕ್ಷಿಸಲು ದೇಶವಿದೇಶಗಳಿಂದ ಪ್ರವಾಸಿಗರು ಬರುತ್ತಿದ್ದರು. ರಿಗಾಗಿ ಪ್ರತ್ಯೇಕವಾದ 'ಅಭ್ಯಾಗತ ಗೃಹ' ತೆರೆದಿರುತ್ತಿತ್ತು. ಅದರಲ್ಲಿ ತಂಗಿದ ಅನೇಕ ಪ್ರವಾಸಿಗರು ಡಿತಾ ರಮಾಬಾಯಿಯವರ ಕಾರ್ಯವಿಧಾನಗಳನ್ನು ಬಹುವಾಗಿ ಶ್ಲಾಘಿಸಿದ್ದಾರೆ. ರಮಾಬಾಯಿ ಸ್ವತಿಯವರ ವಿವಿಧ ಸಮಾಜ ಸೇವಾ ಕಾರ್ಯಗಳನ್ನು ಗುರುತಿಸಿದ ಹಿಂದೂಸ್ಥಾನ ಸರ್ಕಾರ 19ರಲ್ಲಿ ಅವರಿಗೆ – 'ಕೈಸರ್–ಇ–ಹಿಂದ್' ಎಂಬ ಶ್ರೇಷ್ಠ ಪದವಿಯನ್ನಿತ್ತು ಗೌರವಿಸಿತು. ಜರ್ಮನಿಯ ಸಿದ್ಧ ಸಂಸ್ಕೃತ ಪಂಡಿತರಾದ ಮ್ಯಾಕ್ಸ್‌ಮುಲ್ಲರ್ ಅವರು ಪಂಡಿತಾ ರಮಾಬಾಯಿಯವರ ಚರಿತ್ರೆ ನ್ನು ಜರ್ಮನ್ ಭಾಷೆಯಲ್ಲಿ ಬರೆದು ಮುದ್ರಿಸಿರುವುದು ರಮಾಬಾಯಿಯವರ ಅಂತಾರಾಷ್ಟ್ರೀಯ ್ಯಾತಿಯ ಸ್ಪಷ್ಟ ನಿದರ್ಶನ.

ಪಂಡಿತಾ ರಮಾಬಾಯಿಯವರು ಹಿಂದೂ ಮತವನ್ನು ಬಿಟ್ಟಿದ್ದರೂ 'ಹಿಂದುತ್ವ'ವನ್ನು ಬಿಟ್ಟಿರಲಿಲ್ಲ. ್ರೀಮತಿ ಸರೋಜಿನಿ ದೇವಿಯವರು ಪಂಡಿತಾ ರಮಾಬಾಯಿಯವರನ್ನು – 'ಹಿಂದೂ ಸಂತ ಪರಂಪರೆ ಯಲ್ಲಿ ಶೋಭಿಸುವ ಪ್ರಥಮ ಕ್ರೈಸ್ತ ಮಹಿಳೆ' ಎಂದು ವರ್ಣಿಸಿರುವುದು ಅವರ ಜೀವನಕ್ಕೆ ಹಿಡಿದ ನೈಜ ನ್ನಡಿ. ಕಾರ್ಕಳದವರಾದ ಪಂಡಿತಾ ರಮಾಬಾಯಿಯವರಿಗೆ ನಮ್ಮ ನಮನಗಳು. ಎಪ್ರಿಲ್ 5, 922ರಲ್ಲಿ ಈ ದಿವ್ಯಚೇತನ ತನ್ನ ನಶ್ವರ ದೇಹವನ್ನು ತ್ಯಜಿಸಿದಾಗ ಭಾರತದ ಬಾಹ್ಯಾಕಾಶದಿಂದ ಂದು ಉಜ್ವಲ ನಕ್ಷತ್ರ ಕಳಚಿದಾತಾಯಿತು.

ೇದಮೂರ್ತಿ ಕೋದಂಡರಾಮ ಜೋಶಿ

ಕಾರ್ಕಳ ವೆಂಕಟರಮಣ ದೇವಾಲಯದ ಪ್ರಧಾನ ಅರ್ಚಕ ಕುಲದ ಶ್ರೀ ಕೋದಂಡರಾಮ ೋಶಿಯವರು ಸಂಸ್ಕೃತ ಪಂಡಿತರಾಗಿದ್ದರು. ಇಂಗ್ಲಿಷಿನಲ್ಲೂ ಅವರಿಗೆ ಒಳ್ಳೆಯ ಪರಿಜ್ಞಾನವಿತ್ತು. ್ರೀ ವೆಂಕಟರಮಣ ದೇವಾಲಯದ ಎದುರುಗಡೆಯಲ್ಲೇ ಇರುವ ಶ್ರೀ ವೀರಮಾರುತಿ ಮಂದಿರದ ಆಧಾರಸ್ತಂಭಗಳಲ್ಲಿ ಜೋಶಿಯವರು ಒಬ್ಬರಾಗಿದ್ದರು. ಮೂಲ್ಕಿ ಶ್ರೀ ಉಗ್ರನರಸಿಂಹ ವೆಂಕಟ ರಮಣ ದೇವಸ್ಥಾನದ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ ಜೋಶಿಯವರು ಕಾರ್ಕಳದಲ್ಲಿ ಸಂಸ್ಕೃತ ಪ್ರಚಾರಕ್ಕೆ ಅಹರ್ನಿಶಿ ದುಡಿದವರು.

ವಿ. ಎಸ್. ಕುಡ್ವ

ದಿ|| ವಿ. ಎಸ್. ಕುಡ್ವರು ಕಾರ್ಕಳದ ಸುಪುತ್ರರಲ್ಲಿ ಒಬ್ಬರು. ಅವರು ಗೌಡಸಾರಸ್ವತ ಸಮಾಜದ ಪ್ರಪ್ರಥಮ ಐ. ಸಿ. ಎಸ್. ಪದವೀಧರರು. ಮದ್ರಾಸ್ ಸರಕಾರದ ಸೇಲ್ಸ್ ಟ್ಯಾಕ್ಸ್ ಕಮಿಶನರ ರೆವೆನ್ಯು ಇಲಾಖೆಯ ಕಾರ್ಯದರ್ಶಿಯಾಗಿ, ರೆವೆನ್ಯು ಬೋರ್ಡ್ ಸದಸ್ಯರಾಗಿ, (1950) ರ ಸೇವೆಯನ್ನು ಸಲ್ಲಿಸಿದರು. ಕುಡ್ವರು 'ಗೌಡಸಾರಸ್ವತ ಬ್ರಾಹ್ಮಣ ಸಮಾಜ' ವನ್ನು ಕುರಿತು ಅಧಿಕೃ ವಾದ ಗ್ರಂಥವೊಂದನ್ನು ರಚಿಸಿದ್ದಾರೆ. ಸುಮಾರು ಹದಿನೆಂಟು ವರ್ಷಗಳ ಹಿಂದೆ ಅವರು ದಿವಂಗ ರಾದರು.

ಡಾ| ಸಿ. ರಾಮ ಕಾಮತ್

ಕಾರ್ಕಳದ ಸುಪ್ರಸಿದ್ಧ ಚೋಲ್ಪಾಡಿ ಮನೆತನದ ಡಾ|| ರಾಮ ಕಾಮತರು ಬಹುಕಾಲ ಮದ್ರಾಸ ಪ್ರಾಂತ್ಯದಲ್ಲಿ ವೈದ್ಯಕೀಯ ವೃತ್ತಿಯನ್ನು ನಡೆಸಿ, ಜನಾದರಣೀಯರಾದರು, 'ಥಿಯೋಸಫಿ' ಯ ಅವರಿಗೆ ಗಾಢವಾದ ಆಸಕ್ತಿ; ಗ್ರಾಮೋದ್ಧಾರ ಕಾರ್ಯಗಳಲ್ಲಿ ತೀವ್ರವಾದ ನಿಷ್ಠೆ. ನಿವೃತ್ತಿಯ ಅನಂತ ಡಾ| ಕಾಮತರು ಮದ್ರಾಸಿನಲ್ಲೇ ನೆಲಸಿದರೂ ಹುಟ್ಟಿದೂರನ್ನೂ ಪರಿಸರವನ್ನೂ ಮರೆಯಲಿಲ್ಲ ಸಾಮಾಜಿಕ - ಶೈಕ್ಷಣಿಕ - ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರು ಮಾಡಿದ ನಿಸ್ಪೃಹವಾದ ಜನ ಸೇ ಯನ್ನು ಮನಗಂಡು, ಕಾರ್ಕಳ ಸಮೀಪದ ಬೋರ್ಕಟ್ಟೆಯ ನಿವಾಸಿಗಳು ತಮ್ಮೂರಿನ ಹೆಸರನ್ನು 'ರಾಮಪುರ'ವೆಂದೇ ಪರಿವರ್ತಿಸಿದ್ದಾರೆ.

ಎಸ್. ಎಂ. ಅದ್ಯಂತಾಯ (ನಿಟ್ಟೆಗುತ್ತು ಮಹಾಲಿಂಗ ಅದ್ಯಂತಾಯ)

ಮದ್ರಾಸಿನ ಸ್ಕೂಲ್ ಆಫ್ ಟೆಕ್ನಾಲಜಿಯ ಪ್ರಿನ್ಸ್‌ಪಾಲ್‌ರಾಗಿ, ಇಂಡಸ್ಟ್ರಿಯಲ್ ಇಂಜಿನಿಯ ರಾಗಿ ಸೇವೆ ಸಲ್ಲಿಸಿದ ಎಸ್. ಎಂ. ಅದ್ಯಂತಾಯರು ಮದ್ರಾಸು ಸರಕಾರದ 'ಜ್ಯೋಂಟ್ ಡೈರೆಕ್ಟ ಆಫ್ ಕಾಮರ್ಸ್' ಸ್ಥಾನವನ್ನು ಏರಿ ನಿವೃತ್ತರಾದರು. 'ರಾವ್ ಬಹದೂರ್' ಎಂಬ ಬಿರುದನ್ನು ಪಡೆದಿದ್ದ ಅದ್ಯಂತಾಯರು ದೊಡ್ಡ ಸಂಗೀತಾಭಿಮಾನಿಯಾಗಿದ್ದರು.

ಬಂಟ ಸಮಾಜದಲ್ಲಿ ಮಾತ್ರವಲ್ಲ, ದಕ್ಷಿಣಕನ್ನಡದಲ್ಲೂ ವಿದೇಶಯಾತ್ರೆ ಮಾಡಿದವರಲ್ಲಿ ಅದ್ಯಂತಾಯರು ಪ್ರಪ್ರಥಮರು ಎಂದು ಹೇಳುವುದುಂಟು.

ಡಾ| ಕೆ. ಕೆ. ಹೆಗ್ಡೆ (ಕೆದಿಂಜೆ ಕಾಂತಪ್ಪ ಹೆಗ್ಡೆ)

ಮಂಗಳೂರಿನಲ್ಲಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದ ಡಾ|| ಕೆ. ಕೆ. ಹೆಗ್ಡೆಯವರು ಜಿಲ್ಲಾ ಬೋರ್ಡ್ ಅಧ್ಯಕ್ಷರೂ ಆಗಿದ್ದರು. 1957 ರಲ್ಲಿ ಕಾರ್ಕಳ ಕ್ಷೇತ್ರದಿಂದ ಸ್ಪರ್ಧಿಸಿ ಮೈಸೂರು ವಿಧಾನ ಸಭೆಗೆ ಆಯ್ಕೆಯಾದ ಹೆಗ್ಡೆಯವರು ಶ್ರೀ ನಿಜಲಿಂಗಪ್ಪನವರ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದರು.

ಡಾ| ಎಸ್. ಮಹಾಬಲ ಅದ್ಯಂತಾಯ

ಕಾರ್ಕಳದಲ್ಲಿ ಪ್ರಸಿದ್ಧ ವೈದ್ಯರಾಗಿದ್ದ ಅದ್ಯಂತಾಯರು ಸರ್ವ ಜನಾದರಣೀಯರಾಗಿದ್ದರು ಸಹಕಾರಿ ರಂಗದಲ್ಲಿ ಆಸಕ್ತರಾಗಿದ್ದ ಅವರು ಮರಣ ಪರ್ಯಂತ ಸ್ಥಳೀಯ ಟೌನ್ ಬ್ಯಾಂಕಿನ ಅಧ್ಯಕ್ಷ ರಾಗಿದ್ದರು.

ದಿಂಜೆ ಮಹಾಬಲ ಹೆಗ್ಡೆ

ಕಾರ್ಕಳದಲ್ಲಿ ಪ್ರಸಿದ್ಧ ವಕೀಲರಾಗಿದ್ದ ಹೆಗ್ಡೆಯವರು ಶಬರಿ ಆಶ್ರಮದ ಸಂಸ್ಥಾಪಕ – ಪೋಷಕ ಲ್ಲಿ ಒಬ್ಬರು.

ಸ್. ಎಲ್. ಮಥಾಯಿಸ್ :

ಕಾರ್ಕಳದಲ್ಲಿ ಎಸ್. ಎಲ್. ಮಥಾಯಿಸ್‌ರವರ ಹೆಸರನ್ನು ಕೇಳದವರು, ಅವರ ಪರಿಚಯವಿಲ್ಲ ರವರು ತೀರಾ ವಿರಳ. ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಅವರು ಚಿರಪರಿಚಿತರಾಗಿದ್ದಾರೆ. ುದಾರಿಗಳು, ಸತ್ಯಪ್ರಿಯರು, ನಿಷ್ಠಾವಂತರು ಮತ್ತು ಸಮಾಜ ಸುಧಾರಕರಾಗಿದ್ದ ಮಥಾಯಿಸ್ ಅವರನ್ನು ಜಾತಿಮತ ಪಂಗಡಗಳ ಬೇಧವಿಲ್ಲದೇ ಎಲ್ಲರೂ ಗೌರವಿಸುತ್ತಿದ್ದರು. ಜನಾನುರಾಗಿ ಮಥಾಯಿಸರ ಜೀವನ ಇತರರಿಗೆ ಅನುಸರಣೀಯವಾಗಿತ್ತು. ಪ್ರಸಿದ್ಧ 'ಕೆಲಗೂರು ಚಹಾ'ದ ಸಂಸ್ಥಾಪಕರಾಗಿದ್ದ ಮಥಾಯಿಸರವರು ಬಡವರ ಬಗ್ಗೆ ಅನುಕಂಪ ಉಳ್ಳವರಾಗಿದ್ದರು. ಅವರ ನಿಕಟವರ್ತಿಗಳು ಇಂದೂ ಕೂಡ ಮಥಾಯಿಸ್‌ರವರ ಕಾರ್ಯ ಸಾಧನೆಗಳನ್ನು ಕೊಂಡಾಡು ತ್ತಾರೆ. ಅವರ ಜೀವನದ ಅನೇಕ ಘಟನೆಗಳನ್ನು ನೆನೆದಾಗ ಅವರೊಬ್ಬ ಕರ್ಮಜೀವಿಯಾಗಿದ್ದರೆಂಬುದು ತಿಳಿದು ಬರುತ್ತದೆ. ಒಮ್ಮೆ ರಾಣೆಯರ ಪಂಗಡಕ್ಕೆ ಸೇರಿದ ಮಹಿಳೆಯೊಬ್ಬಳು ಒಂದು ಬುಟ್ಟಿಯಲ್ಲಿ ಲಾಮು'ಗಳನ್ನು (ಅಣಬೆಗಳು) ತಂದು ಗಿರಾಕಿಗಳಿಗಾಗಿ ಪರಿತಪಿಸುತ್ತಿದ್ದಾಗ, ಅದನ್ನು ನೋಡಿ ಮರುಕಗೊಂಡ ಶ್ರೀ ಮಥಾಯಿಸರು ಆ ಬುಟ್ಟಿಯಲ್ಲಿದ್ದ ಎಲ್ಲಾ ಲಾಮುಗಳನ್ನು ತಾವೇ ಖರೀದಿಸಿ ಬೇಕಾದವರಿಗೆ ಉಚಿತವಾಗಿ ಹಂಚಿದರಂತೆ. ಕಷ್ಟದಲ್ಲಿದ್ದ ರೋಗಿಗಳ ಬವಣೆಯನ್ನು ಕಂಡು ಸಹಿಸದ ಮಥಾಯಿಸರು ಪೇಟೆಯ ಪ್ರಮುಖ ಬೀದಿಗಳಲ್ಲಿ ರೋಗಿಗಳಿಗೆ ಔಷಧಿಯನ್ನು ಉಚಿತವಾಗಿ ಒದಗಿಸುತ್ತಿದ್ದರೆಂದು ಇಂದೂ ಕೆಲವರು ಸ್ಮರಿಸಿಕೊಳ್ಳುತ್ತಿದ್ದಾರೆ.

ತಪ್ಪಿಯಾದರೂ ಅಪ್ರಿಯವನ್ನು ನುಡಿಯದ ಶ್ರೀ ಮಥಾಯಿಸರು ಒಮ್ಮೆ ತಮ್ಮ ಕ್ರೈಸ್ತ ಧರ್ಮಗುರುಗಳ ಮೊಕದ್ದಮೆಯಲ್ಲಿ, ಅವರ ವಿರುದ್ಧ ನ್ಯಾಯಾಲಯದ ಮುಂದೆ ಸತ್ಯ ಸಾಕ್ಷಿಯನ್ನು ನುಡಿದು, ಕೇಸಿನ ಅವಗುಣಕ್ಕೆ ಕಾರಣರಾದರೂ, ಸತ್ಯದಲ್ಲಿ ನಂಬಿಕೆ ಇರಿಸಿದ್ದ ಮಥಾಯಿಸರು ಸುಳ್ಳನ್ನು ಹೇಳಲು ನಿರಾಕರಿಸಿದ್ದು ಅವರ ನ್ಯಾಯಪರತೆಯನ್ನು ಎತ್ತಿ ತೋರಿಸುತ್ತದೆ. ಅವರು ಮನಸ್ಸು ಮಾಡಿದ್ದರೆ ಕೇಸನ್ನು ಸುಲಭವಾಗಿ ಗೆಲ್ಲಬಹುದಾಗಿತ್ತು.

ಎರಡನೇ ಮಹಾಯುದ್ಧದ ಸಮಯದಲ್ಲಿ ಸೀಮೆಎಣ್ಣೆಯೇ ಮುಂತಾದ ಅವಶ್ಯಕ ವಸ್ತುಗಳು ಬಡಗ್ರಾಹಕರಿಗೆ ದೊರೆಯದಿದ್ದಾಗ ಅಂತಹ ಸಾಮಗ್ರಿಗಳನ್ನು ತಂದು ನಷ್ಟದಲ್ಲಿ ಅವುಗಳನ್ನು ಬಡವರಿಗೆ ಹಂಚುತ್ತಿದ್ದರಂತೆ. ಬಡವರ ಉದ್ಧಾರವನ್ನು ನಿಜವಾದ ಅರ್ಥದಲ್ಲಿ ಅನುಷ್ಠಾನಕ್ಕೆ ತಂದವರು ಶ್ರೀ ಮಥಾಯಿಸ್. ಸಹಾಯ ಮಾಡಿದವರನ್ನು ಮಥಾಯಿಸರು ಎಂದೂ ಮರೆಯುತ್ತಿರಲಿಲ್ಲ. ಒಮ್ಮೆ ಕಾರ್ಕಳದ ಓರ್ವ ಎಣ್ಣೆ ವ್ಯಾಪಾರಿಗಳಲ್ಲಿ (ಅವರ ತಂದೆ ಮಥಾಯಿಸ್ ಅವರಿಗೆ ಸಹಾಯ ಮಾಡಿದ್ದ ರಂತೆ) ಎಮ್ಮೆಯನ್ನು ಖರೀದಿಸಿದರಂತೆ. ಆ ವ್ಯಾಪಾರಿ ಸರಿಯಾಗಿ ಹಾಲು ಇಲ್ಲದ ಎಮ್ಮೆಯನ್ನು ಲಾಭಾಪೇಕ್ಷೆಯಿಂದ ಹೆಚ್ಚಿನ ಕ್ರಯಕ್ಕೆ ಮಥಾಯಿಸರಿಗೆ ಮಾರಿದರಂತೆ. ಕ್ರಮೇಣ ಈ ವಿಷಯವನ್ನು ತಿಳಿದ ಮಥಾಯಿಸರು ಮನನೊಂದುಕೊಂಡು ಖರೀದಿಸಿದ ಎಮ್ಮೆಯನ್ನು ಮತ್ತೊಬ್ಬರಿಗೆ ಸಾಕಿ ಕೊಳ್ಳಲು ಉಚಿತವಾಗಿ ಕೊಟ್ಟರಂತೆ. ಇಂತಹಾ ಹಲವಾರು ಘಟನೆಗಳು ಶ್ರೀಯುತ ಎಸ್. ಎಲ್. ಮಥಾಯಿಸರ ಜೀವನದಲ್ಲಿ ನಡೆದಿವೆ ಎಂದು ಬಲ್ಲವರ ಹೇಳಿಕೆ.

ಅವರು ಉದಾರ ದಾನಿಗಳಾಗಿದ್ದು ಮಂಗಳೂರಿನ ಕಂಕನಾಡಿ ಆಸ್ಪತ್ರೆಯ ಒಂದು ವಿಭಾಗ ವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿದ್ದಾರೆ. ಅದನ್ನು ಎಸ್. ಎಲ್. ಮಥಾಯಿಸ್ ಬ್ಲಾಕ್ ಎಂದು

ಇಂದಿಗೂ ಕರೆಯಲಾಗುತ್ತಿದೆ. ಅಲ್ಲದೇ ಮಂಗಳೂರಿನ ಒಂದು ಪ್ರಮುಖ ರಸ್ತೆಗೆ ಅವರ ಜ್ಞಾ ಕಾರ್ಥ ಅವರ ಹೆಸರನ್ನೇ ಇರಿಸಿರುವುದು, ಅವರ ಸಮಾಜ ಸೇವೆಯ ನಿದರ್ಶನ. ಇವರ ಹಲ ಹತ್ತು ಸಮಾಜ ಕಲ್ಯಾಣ ಕಾರ್ಯಗಳನ್ನು ತಿಳಿದ 'ಇಟಲಿಯ ಪೋಪರು', ಕ್ರೈಸ್ತರಲ್ಲಿ ನೀಡುವ ಅತ್ಯುನ್ನ ಪದಕ ಮತ್ತು 'ಕೆ. ಎಸ್. ಜಿ.'ಎಂಬ ಪದವಿಯನ್ನು ಕೊಟ್ಟು ಸನ್ಮಾನಿಸಿದ್ದಾರೆ. ಇದು ಕ್ರೈಸ್ತರಿ ದೊರಕುವ ಅತಿದೊಡ್ಡ ಗೌರವ.

ಕೆ. ಬಿ. ಜಿನರಾಜ ಹೆಗ್ಡೆ

ಕಾರ್ಕಳ ತಾಲೂಕಿನ ಸಂಸ್ಮರಣೀಯ ಸಾರ್ವಜನಿಕರಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರಿಗೆ ಪ್ರಮುಖ ಸ್ಥಾನವಿದೆ. ಧಾರ್ಮಿಕ – ಸಾಮಾಜಿಕ – ರಾಜಕೀಯ ಈ ಮೂರು ಕ್ಷೇತ್ರಗಳಲ್ಲೂ ದೀರ್ಘ ಕಾಲ ದುಡಿದು ಹಣ್ಣಾದವರು ಶ್ರೀ ಹೆಗ್ಡೆಯವರು. ಶ್ರೀ ಜಿನರಾಜ ಹೆಗ್ಡೆಯವರು ಜೈನ ಸಮಾಜದ ಹತ್ತಾರು – ಸಂಘ, ಸಂಸ್ಥೆಗಳ ಪೋಷಕರೂ ಪದಾಧಿಕಾರಿಯೂ ಆಗಿದ್ದರು. ಕಾರ್ಕಳದ ಭುಜಬಲಿ ಬ್ರಹ್ಮಚರ್ಯಾಶ್ರಮ, ಜೈನಧರ್ಮ ಜೀರ್ಣೋದ್ಧಾರಕ ಸಂಘ, ಮಂಗಳೂರಿನ ಜೈನ ವಿದ್ಯಾರ್ಥಿ ನಿಲಯಗಳ ನಿರ್ವಹಣೆಯಲ್ಲಿ ಅವರ ಸಕ್ರಿಯ ಸಹಭಾಗಿತ್ವ. ಸುಪ್ರಸಿದ್ಧ ಜೈನಯತಿ ಕುಂದ ಕುಂದಾಚಾರ್ಯರ 'ಸಮಯಸಾರ' ಎಂಬ ಉದ್ಗ್ರಂಥದ ಪ್ರಕಟಣೆಗೂ ಜಿನರಾಜ ಹೆಗ್ಡೆಯವರೇ ಮೂಲ ಕಾರಣರು. ಧರ್ಮಸ್ಥಳ ಬೀಡಿನೊಂದಿಗೆ ಅವರಿಗಿದ್ದ ಸಂಬಂಧ ತೀರ ನಿಕಟವಾದದ್ದು. ಭಾರತೀಯ ಸ್ವಾತಂತ್ರ್ಯ ಯೋಧರೂ ಕರ್ನಾಟಕ ಏಕೀಕರಣ ಧುರೀಣರೂ ಆಗಿದ್ದ ಜಿನರಾಜ ಹೆಗ್ಡೆಯವರು ಎಸ್. ನಿಜಲಿಂಗಪ್ಪ, ಆರ್. ಆರ್. ದಿವಾಕರ, ಚಕ್ರವರ್ತಿ ರಾಜಗೋಪಾಲಾಚಾರಿ ಮುಂತಾದ ನಾಯಕರೊಂದಿಗೆ ನಾನಾ ಕ್ಷೇತ್ರಗಳಲ್ಲಿ ಹೆಗಲೊಡ್ಡಿ ದುಡಿದವರು, ಅವರಿಗೆ ಹೆಗಲೆಣೆ ಯಾಗಿ ನಿಂತವರು. 1929ರಲ್ಲಿ ಕಲ್ಕತ್ತೆಯಲ್ಲಿ ಜರಗಿದ ಸರ್ವ ಪಕ್ಷ ಪರಿಷತ್ತಿನಲ್ಲಿ ಕರ್ನಾಟಕ ಪ್ರತಿ ನಿಧಿಯಾಗಿ ಅವರು ಭಾಗವಹಿಸಿದ್ದರು. 1938ರಲ್ಲಿ, ಪಾರ್ಲಿಮೆಂಟ್ ಸದಸ್ಯರಾಗಿದ್ದೂ, ಆಂಗ್ಲ ಪ್ರಭುತ್ವದ ವಿರುದ್ಧ ಕೊರಳೆತ್ತಿದವರು, ಅವರು 1944 ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಶುದ್ಧ ಕಾಂಗ್ರೆಸಿಗರಾಗಿದ್ದ ಹೆಗ್ಡೆಯವರು, ಕಾಲಾಂತರದಲ್ಲಿ ಕಾಂಗ್ರೆಸ್ಸಿನಿಂದ ಹೊರಬಂದರು. ರಾಜಾಜಿ ಯವರು ನೇತೃತ್ವ ವಹಿಸಿದ್ದ ಸ್ವತಂತ್ರ ಪಕ್ಷದ ರಚನೆಯ ಮೂಲ ಶಿಲ್ಪಿಗಳಲ್ಲಿ ಜಿನರಾಜ ಹೆಗ್ಡೆಯವರು ಬಹು ಗಣ್ಯರಾಗಿದ್ದರು.

ಹಳೆಯೂರು ಪದ್ಮನಾಭ ಆರಿಗ ಜೈನ್

ಹಳೆಯೂರು ಪದ್ಮನಾಭ ಆರಿಗ ಜೈನ್ ಇವರು 1899ರಲ್ಲಿ ಕಡಬದಲ್ಲಿ ಜನಿಸಿದರು. ಬಹಳ ಕಷ್ಟದಲ್ಲಿ ವಿದ್ಯಾರ್ಜನೆ ಮಾಡಿ ಮದ್ರಾಸಿನಲ್ಲಿ ತಮ್ಮ ಬಿ.ಎ.ಬಿ.ಎಲ್. ಪದವಿಯನ್ನು ಗಳಿಸಿದರು. ಮುಂದೆ ಶ್ರೀ ಹೆಚ್. ಪಿ. ಎ. ಜೈನರು ಪುತ್ತೂರಿನಲ್ಲಿ ಡೆಪ್ಯೂಟಿ ಕಲೆಕ್ಟರವರ ನ್ಯಾಯಾಲಯದಲ್ಲಿ ತಮ್ಮ ವಕಾಲತ್ತನ್ನು ಪ್ರಾರಂಭಿಸಿ, 1937ರಲ್ಲಿ ಕಾರ್ಕಳಕ್ಕೆ ಬಂದು ನೆಲಸಿದರು. ಸುಮಾರು 38ವರ್ಷ ಗಳ ಕಾಲ ಪ್ರಸಿದ್ಧ ನ್ಯಾಯವಾದಿಗಳಾಗಿ ಸತ್ಯ, ಧರ್ಮ, ದೀಕ್ಷೆ, ನಿಷ್ಠೆಗಳ ತಳಹದಿಯ ಆಧಾರದ ಮೇಲೆ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದರು. ಈ ಅವಧಿಯಲ್ಲಿ ಅವರು ಕಾರ್ಕಳದ 'ಬಾರ್ ಅಸೋಸಿ ಯೇಷನ್'ನ ಅಧ್ಯಕ್ಷರೂ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇವರ ಉದಾತ್ತ ಗುಣಸಂಪನ್ನತೆಯನ್ನು ಮನಗಂಡ ಡಾ। ಟಿ. ಎಂ. ಎ. ಪೈಯವರು ಶ್ರೀ ಹೆಚ್. ಪಿ. ಎ. ಜೈನರನ್ನು ಶ್ರೀ ಭುವನೇಂದ್ರ ಕಾಲೇಜಿನ ವಿಶ್ವಸ್ತ ಮಂಡಳಿಯ ಸದಸ್ಯರನ್ನಾಗಿ ನಾಮಕರಣ ಮಾಡಿದರು.

ಶ್ರೀ ಪದ್ಮನಾಭ ಆರಿಗ ಜೈನರು ಸ್ವತಃ ಬರಹಗಾರರಲ್ಲದಿದ್ದರೂ ಸಾಹಿತ್ಯದ ಬೆಳವಣಿಗೆಗೆ ಅವರ ಕೊಡುಗೆ ಸ್ಮರಣೀಯ. 1920ರ ದಶಕದಲ್ಲಿ, ಅವರು ಜೈನ ಯುವಜನ ಸಂಘ, ಪುತ್ತೂರು

ಇದರ ಕಾರ್ಯದರ್ಶಿಯಾಗಿದ್ದಾಗ ಕನ್ನಡ ಸಾಹಿತ್ಯ ಕ್ಷೇತ್ರದ ಉನ್ನತ ಕೃತಿಗಳಲ್ಲಿ ಒಂದಾದ ರತ್ನಾಕರ ವರ್ಣಿಯ 'ಭರತೇಶ ವೈಭವ'ವನ್ನು ಮೂರು ಭಾಗಗಳಾಗಿ ಪ್ರಕಟಗೊಳಿಸಿದರು. ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಕನ್ನಡದ ಅಧ್ಯಾಪಕರಾಗಿದ್ದ ಉಗ್ರಾಣ ಮಂಗೇಶರಾಯರಿಂದ ಈ ಕಾವ್ಯ ಪರಿಶೋಧಿತವಾಗಿದೆ.

ಶ್ರೀ ಪದ್ಮನಾಭ ಆರಿಗರು ಕಾರ್ಕಳದ ದಾನಶಾಲೆಯ ಬಾಹುಬಲಿ ಶ್ರಾವಿಕಾಶ್ರಮದ ಸ್ಥಾಪನೆಯ ಕಾಲದಲ್ಲಿ ಅವಿರತ ಶ್ರಮಿಸಿದವರು. ಈ ಆಶ್ರಮದ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಇವರು ಜೈನಧರ್ಮ ಜೀರ್ಣೋದ್ಧಾರಕ ಸಂಘದ ಸದಸ್ಯರಾಗಿಯೂ ಸಮರ್ಥ ಸೇವೆ ಸಲ್ಲಿಸಿದ್ದಾರೆ. ಶ್ರೀ ಬಾಹುಬಲಿ ಬ್ರಹ್ಮಚರ್ಯಾಶ್ರಮದ ಸ್ಥಾಪಕ ಸದಸ್ಯರಲ್ಲಿ ಶ್ರೀಯುತರು ಒಬ್ಬರು.

ಅಲ್ಲದೇ ಇವರು ಶ್ರೀ ಭುಜಬಲಿ ಸಂಸ್ಕೃತ ಹಿರಿಯ ಪ್ರಾಥಮಿಕ ಶಾಲಾ ಸಂಚಾಲಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಗಾಂಧೀಜಿಯವರ ಕಟ್ಟಾ ಅನುಯಾಯಿಯಾಗಿದ್ದ ಪದ್ಮನಾಭ ಆರಿಗರು ತಮ್ಮ ವಿದ್ಯಾರ್ಥಿದೆಸೆಯಲ್ಲಿ ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ವಿದ್ಯಾರ್ಥಿ ಪ್ರತಿನಿಧಿಯಾಗಿ ತೆರಳಿದ್ದರು. ಸತ್ಕಾರ್ಯ ನಿರತರಾದ ಈ ಹಿರಿಯರು 1975ರ ಜೀವದಯಾಷ್ಟಮಿಯ ಶುಭ ದಿನದಂದು ದಿವಂಗತರಾದರು.

ಎಂ. ಡಿ. ಅಧಿಕಾರಿ

1916ರಲ್ಲಿ ಜನಿಸಿದ ಶ್ರೀ ಎಂ. ಡಿ. ಅಧಿಕಾರಿಗಳು ಗಾಂಧೀಜಿಯವರ ಆದರ್ಶ ಮಾರ್ಗವನ್ನನುಸರಿಸಿದ ಧೀಮಂತ ಜೀವ. ಬಾಲ್ಯದಿಂದಲೇ ಗಾಂಧಿಜಿಯವರ ಅಸಹಕಾರ ಚಳುವಳಿಯ ವಿಧಾನಗಳನ್ನು ತಿಳಿದು ಸ್ಫೂರ್ತಿಗೊಂಡ ಅಧಿಕಾರಿಗಳು ಪಂಡಿತ ಜವಾಹರಲಾಲ ನೆಹರು ಅವರ ಪ್ರಭಾವಕ್ಕೊಳಗಾಗಿ 1936ರಲ್ಲಿ ತಮ್ಮ ಓದಿಗೆ ತಿಲಾಂಜಲಿಯನ್ನಿತ್ತು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಭಾಗವಹಿಸ ತೊಡಗಿದರು. ತಮ್ಮ ಹುಟ್ಟೂರಾದ ಮುದ್ರಾಡಿಯನ್ನೇ ಕಾಂಗ್ರೆಸ್‌ನ ಕಾರ್ಯರಂಗವಾಗಿ ಮಾಡಿಕೊಂಡ ಎಂ. ಡಿ. ಅಧಿಕಾರಿಗಳು, ಆ ಚಿಕ್ಕ ಗ್ರಾಮವನ್ನು 'ಕಾಂಗ್ರೆಸ್ ಗ್ರಾಮ' ಎಂದು ಕರೆಯುವಷ್ಟರ ಮಟ್ಟಿಗೆ ಅಲ್ಲಿಯ ಜನರನ್ನು ಸಂಘಟಿಸಿದ್ದರು. 1938ರಲ್ಲಿ ಅವರು ಕಾರ್ಕಳ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಅದೇ ಸಮಯದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸ್ಥಾನವೂ ಅವರಿಗೆ ಲಭಿಸಿತು. 1940ರಲ್ಲಿ ಜಿಲ್ಲೆಯ ಮುಂದಾಳುಗಳಲ್ಲಿ ಒಬ್ಬರಾಗಿದ್ದ ಶ್ರೀನಿವಾಸ ಮಲ್ಯರು ವೈಯಕ್ತಿಕ ಸತ್ಯಾಗ್ರಹ ಕೈಗೊಂಡು ಸೆರೆಮನೆಗೆ ಹೋದಾಗ ಶ್ರೀ ಎಂ. ಡಿ. ಅಧಿಕಾರಿಗಳು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷತೆಯ ಹೊಣೆಯನ್ನು ಹೊತ್ತರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅಧಿಕಾರಿಗಳು ಗಾಂಧೀಜಿಯವರ ಅನುಮತಿಯಂತೆ ತಮ್ಮ ಶ್ರೀಮತಿಯವರನ್ನೂ ಸತ್ಯಾಗ್ರಹ ಕಣಕ್ಕೆ ಇಳಿಸಲು ಹಿಂಜರಿಯಲಿಲ್ಲ. 1940ರ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಂ. ಡಿ. ಅಧಿಕಾರಿಗಳು 6ತಿಂಗಳ ಕಾರಾಗೃಹವಾಸವನ್ನು ಅನುಭವಿಸಿ 1941ರಲ್ಲಿ ಪುನಃ ಸತ್ಯಾಗ್ರಹವನ್ನು ಕೈಗೊಂಡರು.

1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ ಎಂ.ಡಿ. ಅಧಿಕಾರಿಯವರು 'ಮಾಡು ಇಲ್ಲವೇ ಮಡಿ' ಎಂಬ ತತ್ವಕ್ಕೆ ಬದ್ಧರಾಗಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ತಮ್ಮ ಹೊಣೆಗಾರಿಕೆಯನ್ನರಿತಿದ್ದ ಅವರು 1942ರ ಸೆಪ್ಟೆಂಬರ 9ರಂದು ಮಂಗಳೂರಿನ ಸಾರ್ವಜನಿಕ ಮೈದಾನಿನಲ್ಲಿ ಕಿಕ್ಕಿರಿದು ತುಂಬಿದ ಬೃಹತ್ ಸಭೆಯಲ್ಲಿ ಜೀವದ ಹಂಗನ್ನು ತೊರೆದು ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಲೇಬೇಕೆಂದು ಆವೇಶದಿಂದ ಕರೆಯನ್ನು ಕೊಟ್ಟರು. ಅದರ ಗಂಭೀರ ಪರಿಣಾಮವನ್ನು ಎಂ. ಡಿ. ಅಧಿಕಾರಿಗಳು ಎದುರಿಸಬೇಕಾಯಿತು. ಪೋಲೀಸರಿಂದ ತಮ್ಮ ತಲೆಗೆ ಬಿದ್ದ ಲಾಠಿ ಏಟಿನಿಂದ ಸುಧಾರಿಸಿಕೊಳ್ಳಲು ಅಧಿಕಾರಿಗಳಿಗೆ ಒಂದು ತಿಂಗಳು ಬೇಕಾಯಿತು. ರಾಜಕೀಯದಿಂದ ಹಿಂತಿರುಗಿ ಬಾ ಎಂಬ ಅವರ ಹೆತ್ತ ತಾಯಿಯ ಕರೆಯನ್ನು ತಳ್ಳಿಹಾಕಿದ ಎಂ. ಡಿ.

ಅಧಿಕಾರಿಗಳು ಹೊತ್ತ ತಾಯಿ ಭಾರತಿಯ ಬಿಡುಗಡೆಗಾಗಿ ಹೋರಾಡಲು ದೃಢ ನಿರ್ಧಾರವನ್ನು ಕೈಗೊಂಡರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿ ಯಶಸ್ವಿಯಾಗುವುದಕ್ಕೆ ಮೂಲ ಕಾರಣ ಪುರುಷರು ದಿ। ಎಂ. ಡಿ. ಅಧಿಕಾರಿಗಳು ಎಂಬುದು ನಿರ್ವಿವಾದ. ಒಟ್ಟು 2ವರ್ಷ 2ತಿಂಗಳು ಕಾರಾಗೃಹ ವಾಸಿಯಾಗಿದ್ದ ಅವರು ಅಲ್ಲಿ ಕಠಿಣ ಸಜೆಯನ್ನು ಅನುಭವಿಸಿದ್ದರು.

ದೇಶ ಸ್ವತಂತ್ರವಾದ ಮೇಲೆ ಆರ್ಥಿಕವಾಗಿ ಸಾಮಾಜಿಕವಾಗಿ ದೇಶವನ್ನು ಸ್ವಾತಂತ್ರ್ಯಗೊಳಿಸುವ ಸದುದ್ದೇಶದಿಂದ ಶ್ರೀಯುತ ಎಂ. ಡಿ. ಅಧಿಕಾರಿಯವರು, ಶ್ರೀ ಜಯಪ್ರಕಾಶ ನಾರಾಯಣರ ಸರ್ವೋದಯ ಚಳುವಳಿಯಲ್ಲಿ ಆಸಕ್ತಿಯನ್ನು ವಹಿಸಿ ಧನ ಸಂಗ್ರಹಣೆಯಲ್ಲಿ ಮುಂದಾಗಿದ್ದರು. ಮುದ್ರಾಡಿಯಲ್ಲಿ ಕಸ್ತೂರಬಾ ಸ್ಮಾರಕ ರಾಷ್ಟ್ರೀಯ ಶಾಲೆಯನ್ನು ತೆರೆದು, ಸರ್ಕಾರದ ಸಹಾಯವಿಲ್ಲದೇ 14ವರ್ಷಗಳ ಕಾಲ ನಡೆಸಿಕೊಂಡು ಬಂದ ಕೀರ್ತಿ ಅವರದ್ದಾಗಿದೆ. ಶಿಕ್ಷಣ ಪ್ರೇಮಿಯಾಗಿದ್ದ ಅವರು ತಾವು ನಡೆಸಿಕೊಂಡು ಬರುತ್ತಿದ್ದ ಶಾಲೆ ಹಾಗೂ ಶಾಲಾಸ್ಥಳಗಳನ್ನು ಜಿಲ್ಲಾ ಬೋರ್ಡಿಗೆ ಧರ್ಮಾರ್ಥ ವಾಗಿ ಬಿಟ್ಟು ಕೊಟ್ಟರು. ಇದಲ್ಲದೇ ಹರಿಜನ ಉದ್ಧಾರ, ಗ್ರಾಮೋದ್ಯೋಗ, ವಯಸ್ಕರ ಶಿಕ್ಷಣ, ಹಿಂದೀ ಪ್ರಚಾರ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಆಚರಣೆಗೆ ತಂದರು. ಕರ್ನಾಟಕ ಪ್ರದೇಶ ಸೋಷಲಿಸ್ಟ್ ಕಾನ್ಫರೆನ್ಸ್, ಸ್ಟೂಡೆಂಟ್ಸ್ ಕಾಂಗ್ರೆಸ್ ಮುಂತಾದುವುಗಳನ್ನು ಸಂಘಟಿಸಿದವರಲ್ಲಿ ಶ್ರೀ ಎಂ. ಡಿ. ಅಧಿಕಾರಿಯವರೂ ಒಬ್ಬರು. ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಸಂತ್ರಸ್ತರ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅಧಿಕಾರಿಗಳು 14-1-75ರಲ್ಲಿ ಸ್ವರ್ಗಸ್ಥರಾದರು.

ಕೆ. ಎಸ್. ಹೆಗ್ಡೆ

ಕೆ. ಎಸ್. ಹೆಗ್ಡೆಯವರೆಂದೇ ಪ್ರಸಿದ್ಧರಾದ ಕೌಡೂರು ಸದಾನಂದ ಹೆಗ್ಡೆಯವರು ಕಾರ್ಕಳ ತಾಲ್ಲೂಕಿನ ಹೆಮ್ಮೆಯ ಕಿರೀಟಕ್ಕಿರುವ ಮತ್ತೊಂದು ಗರಿ. ಶ್ರೀ ಹೆಗಡೆಯವರು, ಕಾರ್ಕಳದಲ್ಲಿ ಮಾತ್ರವಲ್ಲ, ದೇಶ-ವಿದೇಶಗಳಲ್ಲೂ ಪ್ರಸಿದ್ಧರು. ಸಮಾಜದ ವಿವಿಧ ರಂಗಗಳಲ್ಲಿ ದುಡಿದ, ದುಡಿಯುತ್ತಿರುವ ಜನಾದರಣೀಯ ವ್ಯಕ್ತಿ.

ಕೌಡೂರಿನಲ್ಲಿ ಜನಿಸಿದ ಸದಾನಂದ ಹೆಗ್ಡೆಯವರು ಕಾರ್ಕಳ - ಮಂಗಳೂರುಗಳಲ್ಲಿ ತಮ್ಮ ಶಿಕ್ಷಣ ವನ್ನು ಮುಗಿಸಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ಮದ್ರಾಸ್ ಲಾ ಕಾಲೇಜಿನಲ್ಲಿ ಬಿ.ಎಲ್. ಪದವಿಯನ್ನು ಗಳಿಸಿದ ಶ್ರೀ ಕೆ. ಎಸ್. ಹೆಗ್ಡೆಯವರು 1935ರಲ್ಲಿ ಕಾರ್ಕಳದಲ್ಲಿ ತಮ್ಮ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. 1941ರಲ್ಲಿ ಕಾರ್ಕಳದಿಂದ ಮಂಗಳೂರಿಗೆ ಹೋಗಿ ಅಲ್ಲಿಯೇ ನೆಲಸಿ, ಅಲ್ಲಿ ಮುಂದಿನ ಹತ್ತುವರ್ಷಗಳ ಕಾಲ ತಮ್ಮ ವಕೀಲು ವೃತ್ತಿಯನ್ನು ಮುಂದುವರಿಸಿದರು. 1952ರಲ್ಲಿ 'ಭಾರತ ಸಂಸತ್ತಿ'ನ ಮೊತ್ತ ಮೊದಲನೆಯ 'ರಾಜ್ಯಸಭೆ'ಗೆ, ಆಗಿನ ಮದ್ರಾಸ್ ಶಾಸನಸಭೆಯಿಂದ ಆರಿಸಿ ಹೋದರು. ಆದರೆ ಮಧ್ಯದಲ್ಲಿಯೇ ರಾಜ್ಯಸಭೆಗೆ ತಮ್ಮ ರಾಜೀನಾಮೆ ನೀಡಿದ ಶ್ರೀ ಹೆಗ್ಡೆಯವರು ಮೂರು ವರ್ಷಗಳವರೆಗೆ ಸರ್ಕಾರಿ 'ಪ್ಲೀಡರ್' ಆಗಿ ಕಾರ್ಯನಿರ್ವಹಿಸಿದರು. 1956ರ ಅಕ್ಟೋಬರ್‌ನಲ್ಲಿ ಕೆ. ಎಸ್. ಹೆಗಡೆಯವರು ದೆಹಲಿ ಮತ್ತು ಹಿಮಾಚಲ ಪ್ರದೇಶದ 'ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡರು. 1957ರಲ್ಲಿ ಅವರು 'ಮೈಸೂರು 'ಹೈಕೋರ್ಟಿನ' ನ್ಯಾಯಮೂರ್ತಿಯಾದರು. 1967ರ ಜುಲೈ ತಿಂಗಳಲ್ಲಿ ಶ್ರೀ ಕೆ. ಎಸ್. ಹೆಗಡೆಯವರು ಭಾರತದ ಪರಮೋಚ್ಚ ನ್ಯಾಯಾಲಯದ (ಸುಪ್ರೀಂ ಕೋರ್ಟ್) ನ್ಯಾಯಾಧೀಶರಾಗಿ ನೇಮಕಗೊಂಡರು. 1973ರವರೆಗೆ ಈ ಹುದ್ದೆಯಲ್ಲಿ ಮುಂದುವರಿದರು. ಆದರೆ ಆಗಿನ ಕೇಂದ್ರ ಸರ್ಕಾರ ಶ್ರೀ ಕೆ. ಎಸ್. ಹೆಗ್ಡೆ ಮತ್ತು ಅವರ ಸಹೋದ್ಯೋಗಿಗಳಾದ ನ್ಯಾಯಮೂರ್ತಿ ಗ್ರೋವರ್ ಹಾಗೂ ನ್ಯಾಯಮೂರ್ತಿ ಶೆಲಾತ್‌ರ ಸೇವಾ ಹಿರಿತನವನ್ನು ಕಡೆಗಣಿಸಿ, ಕಿರಿಯರಾಗಿದ್ದ ಎ. ಎನ್. ರಾಯ್ ಅವರನ್ನು ಮುಖ್ಯ ನ್ಯಾಯಾಧೀಶರಾಗಿ ನೇಮಕ ಮಾಡಿದಾಗ, ಅದನ್ನು ಪ್ರತಿಭಟಿಸಿ

ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೊರಬಂದರು. ಕೇಶವಾನಂದ ಭಾರತೀ ಪ್ರಕರಣ ಎಂದೇ ಪ್ರಸಿದ್ಧವಾದ ಮೊಕದ್ದಮೆಯಲ್ಲಿ ಈ ಮೂವರು ನ್ಯಾಯಾಧೀಶರುಗಳು ಸರ್ಕಾರದ ವಿರುದ್ಧ ನೀಡಿದ ತೀರ್ಪಿನ ಮಾರನೆಯ ದಿನವೇ ಇವರ ಸೇವಾ ಹಿರಿತನವನ್ನು ಸರಕಾರವು ಕಡೆಗಣಿಸಿದ್ದು ಒಂದು ವಿಚಿತ್ರ ವಿದ್ಯಮಾನವಾಗಿದೆ. ಆವರೆಗೆ ಅನುಸರಿಸಿಕೊಂಡು ಬಂದಿದ್ದ ಸಂಪ್ರದಾಯವನ್ನು ಸರಕಾರ ಕಡೆಗಣಿಸಿದ್ದುದರ ಫಲವಾಗಿ ಶ್ರೀ ಹೆಗ್ಡೆ, ಮತ್ತಿಬ್ಬರು ಅನಿವಾರ್ಯವಾಗಿ ರಾಜೀನಾಮೆ ನೀಡಬೇಕಾಯಿತು.

1974ರಿಂದ 1977ರವರೆಗೆ ಶ್ರೀ ಕೆ. ಎಸ್. ಹೆಗ್ಡೆಯವರು ಜಯಪ್ರಕಾಶ ನಾರಾಯಣರವರ ಸಮಗ್ರ ಕ್ರಾಂತಿಯ' ಚಳುವಳಿಯ ಮುಖ್ಯ ಸಂಘಟಿತರಾಗಿದ್ದರು. ಅವರು 1977ರಲ್ಲಿ ಜನತಾಪಕ್ಷದ. ಚುನಾವಣಾ ಸಮಿತಿಯ ಉಪಾಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದಲ್ಲದೇ 1977ರ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಬೆಂಗಳೂರಿನಿಂದ ಲೋಕಸಭಾ ಸದಸ್ಯತ್ವಕ್ಕೆ ಸ್ಪರ್ಧಿಸಿ ಅವರ ಪ್ರಬಲ ಪ್ರತಿಸ್ಪರ್ಧಿ ದಿ। ಕೆಂಗಲ್ ಹನುಮಂತಯ್ಯನವರನ್ನು ಅತ್ಯಧಿಕ ಬಹುಮತಗಳ ಅಂತರದಿಂದ ಸೋಲಿಸಿ ಲೋಕಸಭೆಗೆ ಆಯ್ಕೆಯಾದರು. ಚುನಾವಣೆಯ ಅನಂತರ ಜನತಾಪಕ್ಷ ಕೇಂದ್ರದಲ್ಲಿ ಸರ್ಕಾರವನ್ನು ರಚಿಸಿದಾಗ ಶ್ರೀ ಕೆ. ಎಸ್. ಹೆಗಡೆಯವರು ಲೋಕಸಭೆಯ ಅಧ್ಯಕ್ಷರಾಗಿ (Speaker) ಆಯ್ಕೆಗೊಂಡರು. ಅವರು 1980ರವರೆಗೆ ಆ ಸ್ಥಾನದಲ್ಲಿ ಮುಂದುವರಿದು ಪ್ರಕೃತ ಅಧ್ಯಕ್ಷರಾಗಿರುವ ಶ್ರೀ ಬಲರಾಮ ಜಾಕಡ್‌ರಿಗೆ ತಮ್ಮ ಅಧಿಕಾರವನ್ನು ಹಸ್ತಾಂತರಿಸಿ ಜನವರಿ 20, 1980ರಲ್ಲಿ ಸಭಾಧ್ಯಕ್ಷರ ಹುದ್ದೆಗೆ ರಾಜೀನಾಮೆ ನೀಡಿದರು. ಪ್ರಸ್ತುತ ಶ್ರೀ ಸದಾನಂದ ಹೆಗಡೆಯವರು ಭಾರತೀಯ ಜನತಾ ಪಕ್ಷದ ಓರ್ವ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆ. ಪಿ. ಮುಕುಂದ ಪ್ರಭು

ಉದಾರಿಗಳು, ಮೃದು ಸ್ವಭಾವದವರು, ಪ್ರಾಮಾಣಿಕರು, ಕರ್ತವ್ಯನಿಷ್ಠರು ಹಾಗೂ ಸಮಾಜ ಸೇವಕರು ಎಂದು ಗುರುತಿಸಲ್ಪಡುವ ಶ್ರೀ ಮುಕುಂದ ಪ್ರಭುಗಳು 1913ರಲ್ಲಿ ಜನಿಸಿದರು. ಸಮಾಜಕ್ಕೆ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುವುದರ ಮೂಲಕ ಇವರು ಕಾರ್ಕಳದ ಜನತೆಗೆ ಚಿರಪರಿಚಿತರಾಗಿದ್ದಾರೆ. ತಮ್ಮ ಶಿಕ್ಷಣವನ್ನು ಕಾರ್ಕಳ ಮತ್ತು ಮದ್ರಾಸಿನಲ್ಲಿ ಮುಗಿಸಿದ ಶ್ರೀಯುತರು ಕೆಲವು ವರ್ಷ ಬಾಳೆಹೊನ್ನೂರಿನಲ್ಲಿ ನೆಲಸಿದ್ದು, ಅನಂತರ ಕಾರ್ಕಳವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿರಿಸಿಕೊಂಡರು. ಅರ್ಥಶಾಸ್ತ್ರದಲ್ಲಿ ವಿಶೇಷ ಪರಿಣತಿ ಗಳಿಸಿರುವ ಪ್ರಭುಗಳು ಅದರ ಉಪಯೋಗವನ್ನು ಪಡೆದು ಸಫಲರಾಗಿದ್ದಾರೆ.

ಕಾರ್ಕಳದ ಭುವನೇಂದ್ರ ಕಾಲೇಜಿಗೆ ಶ್ರೀ ಮುಕುಂದ ಪ್ರಭುಗಳ ಕೊಡುಗೆ ಅಪಾರ. ಕಾಲೇಜ್ ಸ್ಥಾಪನೆಯಾಗುವ ದಿನಗಳಲ್ಲಿ ಇವರು ತಮ್ಮದೇ ಆದ ಸಲಹೆ ಸಹಕಾರಗಳನ್ನಿತ್ತು ಕಾಲೇಜು ಸ್ಥಾಪನೆಯ ಕನಸನ್ನು ನನಸಾಗಿರಿಸುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಸ್ಥಳೀಯ ಪ್ರಮುಖರು ಮಣಿಪಾಲ ಶಿಲ್ಪಿ - ಡಾ। ಟಿ. ಎಂ. ಎ. ಪೈಯವರ ಸಲಹೆಯ ಮೇರೆಗೆ ಕಾಲೇಜು ಸ್ಥಾಪನೆಯ ತೀರ್ಮಾನವನ್ನು ಕೈಗೊಂಡಾಗ ಕಾಲೇಜಿನ ನಿವೇಶನದ ಬಗ್ಗೆ ತೀರ್ಮಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದವರಲ್ಲಿ ಶ್ರೀ ಮುಕುಂದ ಪ್ರಭುಗಳೂ ಒಬ್ಬರು. ಸ್ಥಳೀಯ ಮಹನೀಯರ ಕೊಡುಗೆಯಿಂದಲೇ 'ಕಾಲೇಜು ನಿಧಿ'ಯನ್ನು ಸ್ಥಾಪಿಸಿ ಕಟ್ಟಡ ನಿರ್ಮಾಣವಾಗುವ ಹಂತದಲ್ಲಿ ಶ್ರೀ ಮುಕುಂದ ಪ್ರಭುಗಳು ಮೊತ್ತ ಮೊದಲಿಗರಾಗಿ 10,000 - ರೂ.ಗಳ ದೇಣಿಗೆಯನ್ನು ಪ್ರೋತ್ಸಾಹದ ಸಂಕೇತವಾಗಿ ಕೊಡುವುದರ ಮೂಲಕ ನಿಗದಿತ ಮೊಬಲಗನ್ನು ಸಂಗ್ರಹಿಸುವುದರಲ್ಲಿ ಅಗ್ರಪಂಕ್ತಿಯನ್ನು ಹಾಕಿಕೊಟ್ಟರು. ಕಾಲೇಜು ಕಟ್ಟಡ ನಿರ್ಮಾಣಕ್ಕೋಸ್ಕರ ರಚಿಸಿದ 'ಧನ ಸಂಗ್ರಹ' ಸಮಿತಿಯ ಮುಂಚೂಣಿಯಲ್ಲಿದ್ದು, ಹಲವಾರು ಪ್ರದೇಶಗಳಿಗೆ ಸಂಚರಿಸಿ ನಿಗದಿತ ಗುರಿಯನ್ನು ತಲುಪುವಲ್ಲಿ ಇವರು ತುಂಬಾ ಶ್ರಮಿಸಿದ್ದಾರೆ.

ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಮತ್ತು ಪ್ರೇರಕವಾದ ಪ್ರಿನ್ಸಿಪಾಲರು ಹಾಗೂ

ಪ್ರಾಧ್ಯಾಪಕರನ್ನು ನೇಮಿಸುವ ಪ್ರಶ್ನೆ ಬಂದಾಗ ರಚಿಸಲಾದ ಸಮಿತಿಯಲ್ಲಿದ್ದ ಶ್ರೀ ಮುಕುಂದ ಪ್ರಭುಗಳು ನಿಷ್ಠಾವಂತ ಪ್ರಿನ್ಸಿಪಾಲರನ್ನು ಕರೆಸುವಲ್ಲಿ ಪ್ರಮುಖ ಪಾತ್ರ ವಹಿಸಿ ಯಶಸ್ವಿಯಾದರು. ಮಂಗಳೂರಿನ ಸೈಂಟ್ ಆಲೋಸಿಯಸ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ದಾಮೋದರ ಕಿಣಿಯವರನ್ನು ಕಾಲೇಜಿನ ಪ್ರಿನ್ಸಿಪಾಲರಾಗಿ ತಮ್ಮ ಕರ್ತವ್ಯ ನಿರ್ವಹಿಸಲು ಮನವೊಲಿಸಿ ಕಾರ್ಕಳಕ್ಕೆ ಕರೆದುಕೊಂಡು ಬಂದವರು ಶ್ರೀಯುತ ಮುಕುಂದ ಪ್ರಭುಗಳು ಎಂಬುದನ್ನು ಮರೆಯುವಂತಿಲ್ಲ.

ಶ್ರೀ ಮುಕುಂದ ಪ್ರಭುಗಳು ಸಮಾಜದ ವಿವಿಧ ರಂಗಗಳಲ್ಲಿ ದುಡಿದವರು. 1935ರಿಂದ 40ರ ಅವಧಿಯಲ್ಲಿ ಅವರು ಡಿಸ್ಟ್ರಿಕ್ಟಬೋರ್ಡ್ (ಜಿಲ್ಲಾ ಸಮಿತಿ)ನ ಸದಸ್ಯರಾಗಿ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡಿ ಮುಗಿಸಿದ್ದಾರೆ. ವೈಯಕ್ತಿಕ ಕಾರಣಗಳಿಂದಾಗಿ ಎರಡು ಬಾರಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟರೂ, ಸಂಬಂಧಪಟ್ಟ ಅಧಿಕಾರಿಗಳು ಅವರ ರಾಜೀನಾಮೆಯನ್ನು ಸ್ವೀಕರಿಸದಿರುವುದು ಅವರ ಸೇವೆಗೆ ಸಲ್ಲಿಸಿದ ಪುರಸ್ಕಾರವಲ್ಲದೇ ಮತ್ತೇನು? ಸಾಮೂಹಿಕ ಅಭಿವೃದ್ಧಿ ಯೋಜನೆ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಅವರು ಅದರ 'ಸಮಾಲೋಚನಾ ಸಮಿತಿ'–'(Consultative Committee)ಯ ಸದಸ್ಯರಾಗಿ ಬಹುದಕ್ಷತೆಯಿಂದ ತಮಗೆ ವಹಿಸಿಕೊಡಲಾದ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಅಲ್ಲದೇ 1968 - 69ರ ಅವಧಿಯಲ್ಲಿ ಶ್ರೀ ಮುಕುಂದ ಪ್ರಭುಗಳು ಆಗಿನ 'ಮೈಸೂರು ರಸ್ತೆ ಸಾರಿಗೆ ಸಂಸ್ಥೆಯ (MSRTC) ಸದಸ್ಯರು ಕೂಡ ಆಗಿದ್ದರು. ಈ ಸಂಸ್ಥೆಯ ಅನೇಕ ಉಪಸಮಿತಿಗಳಲ್ಲಿದ್ದು ತಮ್ಮ ಅಮೂಲ್ಯ ಸಲಹೆ ಸಹಕಾರಗಳನ್ನು ಕೊಟ್ಟಿದ್ದಾರೆ. ಈ ಅವಧಿಯಲ್ಲಿ ಅವರ ದೈಹಿಕ ಆರೋಗ್ಯ ಹದಗೆಟ್ಟಿದ್ದರಿಂದ ಪೂರ್ಣ ಅವಧಿಯವರೆಗೆ ರಸ್ತೆ ಸಾರಿಗೆ ಸಂಸ್ಥೆಗೆ ತಮ್ಮ ಕೊಡುಗೆಯನ್ನು ಸಲ್ಲಿಸಲಾಗಲಿಲ್ಲವೆಂಬ ಪ್ರಾಮಾಣಿಕ ಕೊರಗು ಅವರಲ್ಲಿದೆ.

ಶ್ರೀ ಮುಕುಂದ ಪ್ರಭುಗಳು ದೈವಭಕ್ತಿ, ನಿರಹಂಕಾರ, ನಿಸ್ಪೃಹತೆ ವಿನಯಾದಿಗುಣಗಳ ಪ್ರತಿಮೂರ್ತಿಗಳಂತಿದ್ದಾರೆ. ಇವರು ಸಮಾಜಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಜನಾದರಣೆಗೆ ಪಾತ್ರರಾಗಿದ್ದಾರೆ. ಬೋರ್ಡ್ ಹೈಸ್ಕೂಲು, ಸ್ಥಳೀಯ ಆಸ್ಪತ್ರೆ, ಎಸ್. ವಿ. ಟಿ. ಹೈಯರ್ ಎಲಿಮೆಂಟರಿ ಶಾಲೆ, ಊರ ಸ್ಮಶಾನ, ಶ್ರೀ ವೀರಮಾರುತೀ ದೇವಸ್ಥಾನ ಇತ್ಯಾದಿ ಸಂಸ್ಥೆಗಳಿಗೆ ಉದಾರ ಧನ ಸಹಾಯ ಮಾಡಿದ್ದಾರೆ. ಆಧ್ಯಾತ್ಮಿಕತೆಗೆ ಸಂಬಂಧಪಟ್ಟ ಸಾಹಿತ್ಯದಲ್ಲಿ ಕೂಡ ಅವರಿಗೆ ವಿಶೇಷ ಆಸಕ್ತಿಯಿದೆ. ಶ್ರೀಯುತರು ಕಾರ್ಕಳದ ಮಾರುತೀ ನಿಲಯದ ಪ್ಲಾನ್ಚೆಟ್ ಮೂಲಕ ಪಡೆಯುವ ಸಂದೇಶಗಳನ್ನು 'ಆಧ್ಯಾತ್ಮಿಕ ಸಂದೇಶಗಳು' ಎಂಬ ಹೊತ್ತಿಗೆಯ ಮುಖಾಂತರ ಪ್ರಕಟಗೊಳಿಸುವ ಜವಾಬ್ದಾರಿಯನ್ನೂ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದಾರೆ.

ಕೆ. ವೆಂಕಟೇಶ ಪ್ರಭು

ದಿ। ವೆಂಕಟೇಶ ಪ್ರಭುಗಳು ತಮ್ಮ ಸೌಜನ್ಯ - ಸತ್ಕಾರ್ಯಗಳಿಂದ ಕಾರ್ಕಳದ ಜನತೆಯ ಮೇಲೆ ತಮ್ಮ ಘನ ವರ್ಚಸ್ಸನ್ನು ಬೀರಿದ್ದಾರೆ. ಅವರದು ಧೀಮಂತ ಚೇತನ. ಕರ್ಮಜೀವಿಗಳಾಗಿ, ಕಾರ್ಯಶೀಲರಾಗಿ ಉದ್ವೇಗರಹಿತ ಸರಳ ಹಾಗೂ ನಿರಾಡಂಬರ ಜೀವನವನ್ನು ನಡೆಸಿ ಇತರರಿಗೆ ಮಾರ್ಗದರ್ಶಿಗಳಾಗಿದ್ದ ವೆಂಕಟೇಶ ಪ್ರಭುಗಳು 1894ರಲ್ಲಿ ಜನಿಸಿದರು. ತಾಯಿಯಿಂದ ಕಲಿತ ಆದರ್ಶಪಾಠ ಅವರ ಬಾಳಿನಲ್ಲಿ ಹೊಸ ಚೈತನ್ಯವನ್ನು ಮೂಡಿಸಿತ್ತು. ಪ್ರಾರಂಭದಲ್ಲಿ ವ್ಯಾಪಾರ ವೃತ್ತಿಯನ್ನು ಬಹು ವಿವೇಚನೆಯಿಂದ ಕೈಗೊಂಡು 1918ರ ಸುಮಾರಿಗೆ ಶ್ರೀ ಲಕ್ಷ್ಮೀ ಶ್ರೀನಿವಾಸ ಆಯಿಲ್ ಮಿಲ್ಸ್‌ನ ಪಾಲುದಾರರಾಗಿ ಸೇರಿದರು. ಆದರೆ ಸ್ವತಂತ್ರ ವ್ಯಾಪಾರ ಮಾಡುವ ಹಂಬಲದಿಂದಾಗಿ 1931ರಲ್ಲಿ ತಮ್ಮದೇ ಆದ ಕೆ. ವಿ. ಪ್ರಭು ಓಯಿಲ್ಸ್ ಮಿಲ್ಸ್' ಅನ್ನು ಪ್ರಾರಂಭಿಸಿದರು. ಅವರು ಪ್ರಾರಂಭಿಸಿದ ಈ ಸಂಸ್ಥೆ ಇಂದೂ ಸಹ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ.

1932ರ ಅನಂತರ, ವೆಂಕಟೇಶ ಪ್ರಭುಗಳು ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲ್ಗೊಳ್ಳುವ ಸಂಕಲ್ಪವನ್ನು ಮಾಡಿದರು. ದೇಶವ್ಯಾಪಿಯಾಗಿದ್ದ ಮಹಾತ್ಮ ಗಾಂಧೀಜಿಯವರ ಅಸಹಕಾರ ಆಂದೋಲನವು ಅವರ ಮನಸ್ಸಿನ ಮೇಲೆ ಗಂಭೀರ ಪರಿಣಾಮವನ್ನು ಬೀರಿತ್ತು. ಗಾಂಧೀಜಿಯವರ ತತ್ವಗಳಲ್ಲಿ ನಂಬಿಕೆಯಿರಿಸಿದ ಅವರು ಖಾದಿ ಪ್ರಚಾರ, ಹಿಂದಿ ಪ್ರಚಾರ ಮತ್ತು ಹರಿಜನೋದ್ಧಾರ ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತಂದರು. 1940ರಲ್ಲಿ ಸತ್ಯಾಗ್ರಹಿಗಳಿಗೆ ಬೇಕಾಗುವ ಸಕಲ ವ್ಯವಸ್ಥೆಗಳನ್ನೂ ಮಾಡುವಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಕುಟುಂಬಗಳ ಸದಸ್ಯರಿಗೆ ಧೈರ್ಯವನ್ನು ನೀಡಿ ಚಳುವಳಿಗೆ ಸ್ಫೂರ್ತಿದಾತರಾಗಿದ್ದರು. ಅವರೇ ವೈಯಕ್ತಿಕವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಿ 1942ರ ಚಲೇಜಾವ್-ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಂಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಂಡರು. ಕಾರ್ಕಳದ ಅನಂತ ಶಯನದಲ್ಲಿ 1942ರ ಅಕ್ಟೋಬರ್ 9ರಂದು 144ನೇ ಸೆಕ್ಷನ್‌ಅನ್ನು ಧಿಕ್ಕರಿಸಿ ಮೆರವಣಿಗೆ ನಡೆಸಿದರು. ಪರಿಣಾಮವೆಂದರೆ ಇವರ ಮೇಲೆ ಪೋಲೀಸರ ನಿರ್ದಯವಾದ ಲಾಠಿ ಪ್ರಹಾರ.

ದಿ। ಎಂ. ಡಿ. ಅಧಿಕಾರಿಯವರು, ವೆಂಕಟೇಶ ಪ್ರಭುಗಳ ಕುರಿತು ನೆನಪಿಡಬೇಕಾದ ಮಾತುಗಳನ್ನಾಡಿದಾರೆ. "ದಿ। ವೆಂಕಟೇಶ ಪ್ರಭುಗಳು ವೈಯಕ್ತಿಕ ಸತ್ಯಾಗ್ರಹವನ್ನು ಕೈಗೊಂಡು ತಲೆಯೊಡೆಸಿಕೊಂಡು ಬಂಧಿತರಾಗಿ ಕಾರಾಗೃಹ ವಾಸವನ್ನನುಭವಿಸಿ, ಬಿಡುಗಡೆಯ ಬಳಿಕವೂ ಗಾಂಧೀಜಿಯವರು ತೋರಿಕೊಟ್ಟ ರಚನಾತ್ಮಕ ಕಾರ್ಯಕ್ರಮಗಳನ್ನು ಆಚರಿಸಿ, ಬೇರೆಯವರಿಗೂ ತೋರಿಸಿಕೊಟ್ಟು, ಪ್ರಚುರಪಡಿಸಿದ ಆದರ್ಶ ಪ್ರಾಯರು."

ದಿ। ವೆಂಕಟೇಶ ಪ್ರಭುಗಳು ಕಾರ್ಕಳದಲ್ಲಿ ನಡೆಯುತ್ತಿದ್ದ 'ಶಬರಿ ಆಶ್ರಮದ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು. ಅಲ್ಲದೇ ಶ್ರೀ ದಯಾನಂದ ಸರಸ್ವತಿಯವರ ತತ್ವವನ್ನು ಪ್ರತಿಪಾದಿಸುವ ಮತ್ತು ಪ್ರಚಾರ ಮಾಡುವ, ಆರ್ಯಸಮಾಜದ ತತ್ವಗಳಲ್ಲಿ ನಂಬಿಕೆಯನ್ನಿರಿಸಿಕೊಂಡು "ಬದುಕಲಿಕ್ಕೆ ಸೇವನೆ, ಸೇವನೆಗಲ್ಲ ಬದುಕು" ಎಂಬ ನಾಣ್ನುಡಿಯನ್ನು ಚಾಚು ತಪ್ಪದೇ ಆಚರಣೆಗೆ ತಂದವರು ದಿ। ವೆಂಕಟೇಶ ಪ್ರಭುಗಳು. ಶ್ರೀಯುತರು, ಹಲವಾರು ವರ್ಷಗಳ ಕಾಲ ಕಾರ್ಕಳ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾಗಿಯೂ, ಜಿಲ್ಲಾ ಹಾಗೂ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಲ್ಲಿ ಸದಸ್ಯರಾಗಿಯೂ ದುಡಿದಿದ್ದಾರೆ. ಕಾರ್ಕಳ ವೆಂಕಟರಮಣ ದೇವಸ್ಥಾನದ ಆಶ್ರಯದಲ್ಲಿರುವ ಶಾಲೆಗಳ ಆಡಳಿತದಲ್ಲಿಯೂ ಅವರು ಭಾಗಿಯಾಗಿದ್ದರು. ಬಡವರ ಬಗ್ಗೆ ಅವರಿಗೆ ವಿಶೇಷ ಅನುಕಂಪವಿತ್ತು. ಕಾರಾಗೃಹಕ್ಕೆ ಹೋದ ಬಡವರಾದ ಸತ್ಯಾಗ್ರಹಿಗಳ ಮನೆಯವರಿಗೆ ಸಹಾಯ ಮಾಡುವ ಹೊಣೆಗಾರಿಕೆಯನ್ನು ಅವರು ಬಹುವಾಗಿ ಹೊತ್ತುಕೊಂಡಿದ್ದರು.

ಜೀವನದಲ್ಲಿ ಉದಾತ್ತ ಧ್ಯೇಯಗಳನ್ನು ಇರಿಸಿಕೊಂಡು, ಅವುಗಳ ಸಿದ್ಧಿಗಾಗಿ ನಿಷ್ಠೆಯಿಂದಲೂ, ಪ್ರಾಮಾಣಿಕತೆಯಿಂದಲೂ ದುಡಿದು, ಜನರ ಬಾಳಿನಲ್ಲಿ ಬೆರೆತು ಒಂದಾಗಿ 1960ನೆಯ ಜೂನ್ ತಿಂಗಳ 24ರಂದು ಸ್ವರ್ಗಸ್ಥರಾದರು. ಇವರ ಬಾಳು ಯುವ ಪೀಳಿಗೆಗೆ ದಾರಿದೀಪವಾಗಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಜಿ. ವಾಸುದೇವ ಪೈ

ಧರ್ಮಕ್ಷೇತ್ರ ವಿಸ್ತಾರವಾಗಿದ್ದರೂ ಮೂಡಬಿದಿರೆಯನ್ನೇ ಕರ್ಮಕ್ಷೇತ್ರವೆಂದು ತಿಳಿದು ಊರಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿ, ಕೀರ್ತಿ ಶರೀರರಾದವರು ಶ್ರೀ ಜಿ. ವಾಸುದೇವ ಪೈಯವರು. ವೃತ್ತಿಯಲ್ಲಿ ವರ್ತಕರಾಗಿದ್ದ ಅವರ ಆಸಕ್ತಿ ಪ್ರವೃತ್ತಿಗಳು ಹಲವಾರು. ಸ್ವಾತಂತ್ರ್ಯ ಪೂರ್ವದಲ್ಲಿ ಒಬ್ಬ ಸ್ವಾತಂತ್ರ್ಯ ಯೋಧರೂ ಸ್ವಾತಂತ್ರ್ಯಾನಂತರ ವಿಧಾಯಕ ಕಾರ್ಯಗಳಲ್ಲಿ ತೀವ್ರ ಆಸಕ್ತರೂ ಆಗಿದ್ದವರು ಪೈಯವರು. ಮೂಡಬಿದಿರೆಯ ಸಮಾಜ ಮಂದಿರವು ಅವರ ಜನಹಿತ ದೃಷ್ಟಿ, ಸಂಘಟನ

ಕೌಶಲ್ಯ, ಉಪಕಾರಭಾವ ಇವೆಲ್ಲಗಳಿಗೊಂದು ಶಾಶ್ವತ ನಿದರ್ಶನ. ಗೌಡ ಸಾರಸ್ವತ ಸಮಾಜದ ನಾನಾ ಮುಖವಾದ ಅಭಿವೃದ್ಧಿಗಾಗಿಯೂ ಅವರು ನಿಡುಗಾಲ ನಿಷ್ಠೆಯಿಂದ ದುಡಿದಿದಾರೆ. ಪರಮ ಸಾತ್ವಿಕರಾಗಿದ ಪೈಯವರು ಭಜನಾ ಮಂಡಳಿಗಳ ಸದಸ್ಯರೂ ಆಗಿದ್ದರು. 1974ರಲ್ಲಿ ಅವರು ಸ್ವರ್ಗಸ್ಥರಾದಾಗ ಊರಿಗೆ ಊರೇ ಕಣ್ಣೀರು ಕರೆಯಿತು. ಜಿಲ್ಲೆಯು ಒಬ್ಬ ಸತ್ಪುತ್ರನನ್ನು ಕಳೆದು ಕೊಂಡಿತು. ಪೈಯವರಿಗೆ ಕೃತಜ್ಞವಾಗಿದ್ದ ಮೂಡಬಿದಿರೆ ಜನತೆ ಶ್ರದ್ಧಾಂಜಲಿಯನ್ನು ಮಾತ್ರ ಸಲ್ಲಿಸಿ ಸುಮ್ಮಗಾಗಲಿಲ್ಲ - 'ಜಿ ವಾಸುದೇವ ಪೈ ಮೆಮೋರಿಯಲ್ ಹಾಸ್ಪಿಟಲ್' ಒಂದನ್ನು ಕಟ್ಟಿ ಅವರ ಹೆಸರು ತಮ್ಮ ಉಸಿರಿನೊಂದಿಗೆ ಸೇರಿ ಹೋಗುವಂತಹ ಸಾರ್ಥಕ ಕಾರ್ಯವೊಂದನ್ನು ಮಾಡಿದೆ.

ಎಸ್. ಎನ್. ಮೂಡಬಿದಿರೆ:

ಶ್ರೀ ವಾಸುದೇವ ಪೈ ಮತ್ತು ಶ್ರೀ ಎಸ್. ಎನ್. ಮೂಡಬಿದಿರೆಯವರು ಒಂದು ಜೀವದ ಎರಡು ದೇಹಗಳಂತೆ ಇದ್ದವರು. ಪೈಯವರಂತೆಯೇ ಸಂಜೀವರಾಯರಿಗೂ ಊರಿನ ಅಭಿವೃದ್ಧಿಯಲ್ಲಿ ತೀವ್ರವಾದ ಆಸಕ್ತಿ, ಜನಹಿತಕಾರ್ಯಗಳಲ್ಲಿ ಹಿಂಗದ ಒಲವು. ದೂರದ ಮುಂಬಯಿ ಅವರ ವ್ಯವಹಾರ ಕ್ಷೇತ್ರವಾಗಿದ್ದರೂ ಕೊನೆಗಾಲದವರೆಗೂ ಅವರು ಹುಟ್ಟೂರನ್ನು ಮರೆಯಲಿಲ್ಲ. ಶಿಕ್ಷಣ, ವೈದ್ಯಕೀಯ ಸೌಲಭ್ಯ, ಗ್ರಾಮೋದ್ಧಾರ, ವಿಧವಾ ವಿವಾಹ, ಸಂಸ್ಕೃತಿ ಪ್ರಚಾರ, ಜಾನಪದ ಕಲೆಗಳ ಪುನರುತ್ಥಾನ - ಹೀಗೆ ಅನೇಕ ಮುಖವಾಗಿ ಹರಿದಿದೆ. ಅವರ ಆಸಕ್ತಿ, ಕಾರ್ಯ ನಿರ್ವಹಣೆ. ಮೂಡಬಿದಿರೆ ಸಮಾಜ ಮಂದಿರ'ದ ಕಾಣ್ಕೆ ಕಾರ್ಯಾಚರಣೆಗಳ ರೂವಾರಿಗಳಲ್ಲಿ ಅವರೂ ಒಬ್ಬ ಪ್ರಮುಖರು. ಶ್ರೀ ಮಹಾವೀರ ಕಾಲೇಜ್, ಬಾಬುರಾಜೇಂದ್ರ ಪ್ರಸಾದ ಹೈಸ್ಕೂಲು, ಹತ್ತಿರದ ಶಿರ್ತಾಡಿಯ ಜವಾಹರಲಾಲ ನೆಹರೂ ಹೈಸ್ಕೂಲು. ಮತ್ತು ಕಲ್ಲಮುಂಡ್ಕೂರಿನ ಸರ್ವೋದಯ ಹೈಸ್ಕೂಲು ಇವುಗಳೆಲ್ಲ ಅವರ ನಿಸ್ವಾರ್ಥ ಸೇವೆಯ ನಿದರ್ಶನಗಳು. ಮುಂಬಯಿಯಲ್ಲಿ ಮೋಟಾರು ಬಿಡಿಭಾಗಗಳ ವ್ಯಾಪಾರಿಯಾಗಿದ್ದ ಸಂಜೀವ ರಾಯರು ನೆಲೆನಿಂತ ಊರಲ್ಲೂ ಹಲವಾರು ಸಾಮಾಜಿಕ - ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಹ ಭಾಗಿಯಾಗಿದ್ದರು.

ಸ್ವಯಾರ್ಜಿತ ವ್ಯಕ್ತಿತ್ವದ ಎಸ್. ಎನ್. ಮೂಡಬಿದ್ರೆಯವರಲ್ಲಿ ದಾನಗುಣ, ಸ್ನೇಹಪರತೆಗಳು ಅಪಾರ, ಅಗಾಧ. ನಿಜಜೀವನದಲ್ಲಿ ಗಾಂಧೀವಾದಿ, ಸರಳ ನಿರಾಡಂಬರ ವ್ಯಕ್ತಿ. 1982ರಲ್ಲಿ ಅವರು ನಿಧನರಾದಾಗ, ಡಾ। ಶಿವರಾಮ ಕಾರಂತರು, "ಇವರನ್ನು ನೆನೆವಾಗ ಒಳ್ಳೆತನದ ಒಂದು ಮೂರ್ತಿವೆತ್ತ ಜೀವ ಇದಿರಾಗುತ್ತದೆ" ಎಂದು ಉದ್ಗರಿಸಿದ್ದರು.

ಬಿ. ಮಂಜುನಾಥ ಪೈ

ದೈವಕೃಪೆ - ನಿರಂತರ ಪ್ರಯತ್ನ ಎರಡೂ ಸೇರಿದಾಗ ಒಬ್ಬ ಮನುಷ್ಯ ಜೀವನದಲ್ಲಿ ಹೇಗೆ ಉನ್ನತಸ್ಥಿತಿಯನ್ನು ಮುಟ್ಟಬಹುದು ಎಂಬುದಕ್ಕೆ ದಿ। ಬಿ. ಮಂಜುನಾಥ ಪೈಯವರು ಒಂದು ಚಿರಕಾಲಿಕ, ಜ್ವಲಂತ ನಿದರ್ಶನ. ಕಾರ್ಕಳಕ್ಕೆ ಸಮೀಪದ ಬಂಚೆತಡ್ಕ ಎಂಬ ಹಳ್ಳಿಯಲ್ಲಿ ತೀರ ಬಡ ಕುಟುಂಬದಲ್ಲಿ ಜನಿಸಿದ ಮಂಜುನಾಥ ಪೈಯವರು, ಶ್ರೀನಿವಾಸ ಆಶ್ರಮದ ಶ್ರೀ ಮಧ್ಬುವನೇಂದ್ರ ಸಂಸ್ಕೃತ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದರು. ಕಿತ್ತು ತಿನ್ನುವ ಬಡತನದಿಂದಾಗಿ ವಿದ್ಯಾಭ್ಯಾಸ ಸಾಗಲಿಲ್ಲ. ತಂದೆ ದಾಮೋದರ ಪೈಯವರ ಕಷ್ಟದ ಕಾಯಕಕ್ಕೆ ಹೆಗಲೊಡ್ಡಿದ ಮಂಜುನಾಥ ಪೈ 1930ರಲ್ಲಿ ಏಕವ್ಯಕ್ತಿಯ ಬೀಡಿ ಉದ್ಯಮವನ್ನು ಪ್ರಾರಂಭಿಸಿದರು. ಶ್ರೀ ವೆಂಕಟರಮಣ ದೇವಾಲಯದಮುಂಗಡೆ ಯಲ್ಲೇ ಆರಂಭವಾದ ಈ ಉದ್ಯಮಕ್ಕೆ ದೈವಾನುಗ್ರಹ ಧಾರಾಳವಾಗಿ ಒದಗಿ ಬಂತು. ಪೈಯವರ ಅದೃಷ್ಟಚಿತ್ರ ಮೇಲ ಮೇಲಕ್ಕೆ ಏರುತ್ತಲೇ ಹೋಯಿತು. 1930ರ ಜೂನ್ 30ರಂದು ಪ್ರಾರಂಭಿಸಿ ದುದರಿಂದ ತನ್ನ ಬೀಡಿ ಉದ್ಯಮಕ್ಕೆ 'ನಂಬರ್ 30'ನ್ನೇ ಅಂಕಿತವಾಗಿರಿಸಿಕೊಂಡು, ದೇಶಭಕ್ತಿ ಪ್ರತೀಕ ವಾಗಿ 'ಭಾರತ್ ಬೀಡಿ' ಎಂದೂ ಕರೆದರು. ಹನಿ ಹಳ್ಳವಾಯಿತು, ಹಳ್ಳ ಹೊಳೆಯಾಯಿತು, ಹೊಳೆ

ಹರಿದು ಕಡಲನ್ನು ಸೇರಿತು - ಕಡಲಾಯಿತು. ಭಾರತ್ ಅಥವಾ ನಂಬರ್ 30 ಬೀಡಿ ಇದೀಗ ದೇಶ ವಿದೇಶ ವಿಖ್ಯಾತವಾದ, ವಿದೇಶೀ ವಿನಿಮಯವನ್ನೂ ಗಳಿಸುತ್ತಿರುವ ಒಂದು ಪ್ರಮುಖ ಉದ್ಯಮ. ಸೇದುವವರಿಗೆ ಬೀಡಿ ಹೊಗೆಯಾಗಿ ಕರಗಿ ಹೋಗುವ ವಸ್ತು; ಆದರೆ ಲಕ್ಷಾಂತರ ಜನರ ಕಣ್ಣೀರನ್ನು ಒರಸಿ, ಹೊಟ್ಟೆಗೆ ಅನ್ನ, ನೀರುಗಳನ್ನು ಉಣಿಸುವ ಚಿಂತಾಮಣಿ. ಭಾರತ್ ಪ್ರಿಂಟರ್ಸ್, ಭಾರತ್ ಕ್ಯಾರಿಯರ್ಸ್ ಇವೆಲ್ಲ ಅದರ ಸಹಸಂಸ್ಥೆಗಳು.

ಶ್ರೀ ಮಂಜುನಾಥ ಪೈ ದಾನದಲ್ಲಿ ಎತ್ತಿದ ಕೈ. ಹುಟ್ಟಿ ಬೆಳೆದ ಕಾರ್ಕಳ, ನೆಲೆನಿಂತ ಮಂಗಳೂರು ಸುತ್ತ ಮುತ್ತಲಿನ ಹತ್ತಾರು ಸಂಘ, ಸಂಸ್ಥೆಗಳಲ್ಲಿ ಅಲ್ಲಲ್ಲಿ ಪೈಯವರ ನಾಮಫಲಕಗಳು ಕಂಗೊಳಿಸುತ್ತಿವೆ. ಶಾಲೆ - ಕಾಲೇಜ್, ಗುಡಿ - ಗೋಪುರ, ಉತ್ಸವ - ಸಮಾರಾಧನೆ ಯಾವುದೇ ಇರಲಿ, ಸಣ್ಣದೆಂದರೆ ರೂಪಾಯಿಯಿಂದ ಆರಂಭವಾಗಿ ಶತ, ಸಹಸ್ರಾಧಿಕವಾಗಿ ಅವರು ದಾನದ ಹೊಳೆ ಹರಿಸಿದ್ದಾರೆ.

ಶ್ರೀ ಭುವನೇಂದ್ರ ಕಾಲೇಜ್ ಆರಂಭವಾದಾಗ ಅದರ ಶ್ರೇಯೋಭಿವೃದ್ಧಿಯಲ್ಲಿ ಸಕ್ರಿಯ ಸಹಭಾಗಿ; ಕಾಲೇಜ್ ಹಾಸ್ಟೆಲಿನ ಭವ್ಯ ರಚನೆಯ ನಿಜವಾದ ರೂವಾರಿ ಶ್ರೀ ಪೈಯವರು. ಅವರು ನಗದಾಗಿ ನೀಡಿದ ಒಂದು ಲಕ್ಷಕ್ಕಿಂತ, ಅನುಭವ ರೂಪದಲ್ಲಿ ನೀಡಿದ ದಾನ ಮತ್ತೂ ದೊಡ್ಡದು 1982ರ ಜನವರಿಯಲ್ಲಿ ಅವರು ದಿವಂಗತರಾದಾಗ ಕಾರ್ಕಳ ಮಾತ್ರವೇ ಅಲ್ಲ ಇಡೀ ಜಿಲ್ಲೆಯೇ ತನ್ನೊಬ್ಬ ಘನ ಉದ್ಯಮಿ, ಅಸದೃಶದಾನಿಯನ್ನು ಕಳಕೊಂಡು ಬಡವಾಯಿತು.

ಕೆ. ಪಿ. ಜೆ. ಪ್ರಭುಗಳು

ದೇಶದ ಬೃಹತ್ ಬ್ಯಾಂಕುಗಳಲ್ಲಿ ಒಂದಾಗಿರುವ ಕೆನರಾ ಬ್ಯಾಂಕಿನ ಅಧ್ಯಕ್ಷರಾಗಿ ಎತ್ತರದ ಸ್ಥಾನಕ್ಕೆ ಏರಿದವರಲ್ಲಿ ಇಬ್ಬರು ಕಾರ್ಕಳದವರು. ಅವರೆಂದರೆ ಶ್ರೀ ಕೆ. ಪಿ. ಜೆ. ಪ್ರಭು ಮತ್ತು ದಿ। ಸಿ. ಇ. ಕಾಮತ್. ಶ್ರೀ ಕೆ. ಪಿ. ಜನಾರ್ದನ ಪ್ರಭುಗಳು 1911ರಲ್ಲಿ ಜನಿಸಿದರು. ತಮ್ಮ ವಿದ್ಯಾರ್ಥಿದಶೆಯಲ್ಲಿ ಪ್ರತಿಭಾವಂತರೆನಿಸಿದ್ದ ಶ್ರೀ ಕೆ. ಪಿ. ಜೆ. ಪ್ರಭುಗಳು ಐ.ಸಿ.ಎಸ್. ಪರೀಕ್ಷೆಗಾಗಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದ್ದರು. ಹಲವಾರು ಬಾರಿ ಇಂಗ್ಲೆಂಡಿಗೆ ತೆರಳಿದ್ದ ಅವರು ಆರೋಗ್ಯದ ದೃಷ್ಟಿಯಿಂದಾಗಿ ಭಾರತ ದಲ್ಲಿ ನೆಲಸಿದರು. ಮೊದಲಿನಿಂದಲೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಆಸಕ್ತರಾದ ಶ್ರೀ ಪ್ರಭುಗಳು ಕೆನರಾ ಬ್ಯಾಂಕನ್ನು ಸೇರಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡರು. ಅವರ ವೈಯಕ್ತಿಕ ಆಸಕ್ತಿ ಹಾಗೂ ಪ್ರತಿಭೆಯಿಂದಾಗಿ ಬ್ಯಾಂಕಿನ ಹಲವಾರು ಹುದ್ದೆಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿ ಸುವುದು ಅವರಿಗೆ ಸಾಧ್ಯವಾಯಿತು. ಅವರ ಅಧ್ಯಕ್ಷತೆಯಲ್ಲಿ, ಕೆನರಾ ಬ್ಯಾಂಕ್ ಹಲವಾರು ಜನೋಪ ಯೋಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನೆರ ವಾಯಿತು. ದೀನ ದಲಿತರ ಬಗ್ಗೆ ವಿಶೇಷ ಗೌರವಿದ್ದ ಶ್ರೀ ಕೆ. ಪಿ. ಜೆ. ಪ್ರಭುಗಳು ತಮ್ಮ ಅಧಿಕಾರದ ಅವಧಿಯಲ್ಲಿ ನಿಸ್ವಾರ್ಥ ಮನೋಭಾವನೆಯಿಂದ ಬ್ಯಾಂಕಿನ ತನ್ಮೂಲಕ ದೇಶದ, ಅಭಿವೃದ್ಧಿಗಾಗಿ ದುಡಿದ ಕರ್ಮಜೀವಿ. 74ರ ಹೊಸ್ತಿಲಲ್ಲಿರುವ ಶ್ರೀಯುತರು ಈಗ ವಿಶ್ರಾಂತಿ ಜೀವನವನ್ನು ನಡೆಸು ತ್ತಿದ್ದಾರೆ.

ಸಿ. ಇ. ಕಾಮತ್ :

ಶ್ರೀ ಪ್ರಭುಗಳ ಅನಂತರ ಕೆನರಾ ಬ್ಯಾಂಕಿನ ಅಧ್ಯಕ್ಷರಾದವರು ಶ್ರೀ ಸಿ. ಇ. ಕಾಮತ್ ಅಥವಾ ಚೋಲ್ಪಾಡಿ ಏಕನಾಥ ಕಾಮತರು. ತಮ್ಮ ಕರ್ತವ್ಯಪ್ರಜ್ಞೆ, ಕಾರ್ಯಕ್ಷಮತೆಗಳಿಂದ ಬ್ಯಾಂಕಿನ ಅಧಿಕಾರ ಶ್ರೇಣಿಗಳನ್ನು ಒಂದೊಂದಾಗಿ ಏರುತ್ತಾ ಅತ್ಯುಚ್ಚಸ್ಥಾನವಾದ ಅಧ್ಯಕ್ಷ ಪದವಿಯನ್ನು ಅವರು ಪಡೆದರು. ಶ್ರೀ ಕಾಮತರು ಅಧಿಕಾರ ಸ್ಥಾನದಲ್ಲಿರುವಾಗಲೇ ನಿಧನರಾದರು.

ಏರ್ ಕಮಾಂಡರ್ ಕೆ. ಎಸ್. ಭಟ್ಟ

ಕಾರ್ಕಳದ ಸುಪ್ರಸಿದ್ಧ ವಕೀಲ ಕೆ. ಸದಾಶಿವ ಭಟ್ಟರ ಏಕೈಕ ಪುತ್ರನಾಗಿ 1918ರಲ್ಲಿ ಜನಿಸಿದವರು ಕೆ. ಸದಾನಂದ ಭಟ್ಟರು ಅಥವಾ ಕೆ. ಎಸ್. ಭಟ್ಟರು. 'ರಾಯಲ್ ಇಂಡಿಯನ್ ಏರ್‌ಫೋರ್ಸ್'ನಲ್ಲಿ ವೈಮಾನಿಕ ತರಬೇತಿಯನ್ನು ಪಡೆದ ಭಟ್ಟರು ಆ ಸಂಸ್ಥೆಯಲ್ಲಿಯೇ ವಿಮಾನಚಾಲಕರಾಗಿ ಸೇರ್ಪಡೆಗೊಂಡರಲ್ಲದೆ ದ್ವಿತೀಯ ಜಾಗತಿಕ ಸಂಗ್ರಾಮದ ಕಾಲದಲ್ಲಿ ದೇಶ-ವಿದೇಶಗಳಲ್ಲಿ ವಿಮಾನ ಚಾಲಕರಾಗಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಿದರು. ಕ್ರಮೇಣ ಸ್ಕ್ವಾರ್ಡನ್ ಲೀಡರ್ ಆಗಿ ಭಡ್ತಿ ಹೊಂದಿದ ಭಟ್ಟರು ಕೋಹಿಮಾ, ಮಣಿಪುರ, ತ್ರಿಪುರ ಮತ್ತು ಬರ್ಮಾಗಳಲ್ಲಿ ವೈಮಾನಿಕ ಕಾರ್ಯಾಚರಣೆಯ ಹೊಣೆಯನ್ನು ದಿಟ್ಟತನದಿಂದ ಹೊತ್ತಿದ್ದರು. ಮುಂದೆ ತಮ್ಮ ಸೇವಾನಿಷ್ಠೆಯಿಂದ 'ವಿಂಗ್ ಕಮಾಂಡರ್' ಆಗಿ ಪದೋನ್ನತಿಗೊಂಡರು. ಆ ಬಳಿಕ ಇಂಗ್ಲೆಂಡಿನಲ್ಲಿರುವ ಭಾರತದ ದೂತಾವಾಸದಲ್ಲಿ ಭಟ್ಟರು 'ಏರ್ ಅಟ್ಯಾಚಿ' (Air attache)ಯಾಗಿ ನೇಮಕಗೊಂಡಿದ್ದರು. ಭಾರತ ಸ್ವತಂತ್ರವಾದಾಗ 'ಇಂಡಿಯನ್ ಏರ್‌ಫೋರ್ಸ್'ನ 'ಏರ್ ಆಫೀಸರ್ ಕಮಾಂಡಿಂಗ್' ಆಗಿ ಭಾರತದ ಪೂರ್ವ ಸೀಮಾ ಪ್ರದೇಶದಲ್ಲಿ ಅಧಿಕಾರ ವಹಿಸಿದರು. 1959ರಲ್ಲಿ ಭಾರತ ಸರಕಾರ ಕೆ. ಎಸ್. ಭಟ್ಟರನ್ನು 'ಏರ್ ಕಮೋಡೋರ್' ಸ್ಥಾನಕ್ಕೆ ಭಡ್ತಿಗೊಳಿಸಿತಲ್ಲದೆ ಅವರ ಸೇವಾ ಹಿರಿತನಕ್ಕಾಗಿ ದೆಹಲಿಯ 'ಏರ್ ಹೆಡ್ ಕ್ವಾರ್ಟರ್ಸ್'ನಲ್ಲಿ ಮುಖ್ಯ ನಿರ್ವಹಣಾಧಿಕಾರಿ (Chief Administrative Office)ಯಾಗಿ ನೇಮಿಸಿತು. ದೀರ್ಘಾವಧಿಯ ಸಮರ್ಥ ಸೇವೆಯ ಸಂತೃಪ್ತಿಯೊಂದಿಗೆ ಭಟ್ಟರು 1964ರಲ್ಲಿ ಅಧಿಕಾರ ನಿವೃತ್ತರಾದರು. ಜೀವನದಲ್ಲಿ ಬಹುಮುಖ ಅನುಭವ-ಆಸಕ್ತಿಗಳನ್ನು ಹೊಂದಿದ ಭಟ್ಟರು ಸ್ವತಃ ವಿಧವಾ ವಿವಾಹ ಮಾಡಿಕೊಂಡವರಲ್ಲದೆ, ತಮ್ಮ ಮಕ್ಕಳ ಅಂತರ್ಜಾತೀಯ ವಿವಾಹಗಳನ್ನು ಉದಾರ ಭಾವದಿಂದ ಸ್ವೀಕರಿಸಿದವರಾಗಿದ್ದಾರೆ.

ಮೇ। ಜ। ಕೆ. ಎಂ. ಕಿಣಿ

ಕಾರ್ಕಳದ ಮಣ್ಣಿನ ಮಕ್ಕಳು ಹುಟ್ಟು ನೆಲದಲ್ಲಿ ಮಾತ್ರವಲ್ಲ, ಅದರ ಗಡಿಯ ಆಚೆಗೂ ಹಲವು ರಂಗಗಳಲ್ಲಿ ದುಡಿದು ಹೆಸರಾಗಿದ್ದಾರೆ, ಹುಟ್ಟಿದೂರಿಗೆ ಹೆಸರನ್ನು ತಂದಿದ್ದಾರೆ. ಅಂತಹವರಲ್ಲಿ ಮೇಜರ್ ಜನರಲ್ ಕೆ. ಎಂ. ಕಿಣಿಯವರು ಒಬ್ಬರು. ಮದ್ರಾಸು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಪದವೀಧರ ಕಾರ್ಕಳ ಮಾಧವ ಕಿಣಿಯವರು ಕಮಿಶನ್ಡ್ ಆಫೀಸರರಾಗಿ ಭಾರತೀಯ ಭೂ ಸೈನ್ಯವನ್ನು ಸೇರಿ ಸುಮಾರು ಮೂರು ದಶಕಗಳ ಕಾಲ ಇ. ಎಂ. ಇ. ಕಾಪ್ಸ್ (E.M.E. Corps)ನಲ್ಲಿ ಸಮರ್ಥ ಸೇವೆಯನ್ನು ಸಲ್ಲಿಸಿದರು. ನಿವೃತ್ತಿಕಾಲಕ್ಕೆ ಕಿಣಿಯವರು ಮೇಜರ್ ಜನರಲ್‌ರ ಉನ್ನತ ಸ್ಥಾನವನ್ನು ಪಡೆದಿದ್ದರು.

ಶ್ರೀ ಕಿಣಿಯವರು ತಮ್ಮ ಸೇವಾವಧಿಯಲ್ಲಿ ವಿವಿಧ ಕಾರ್ಯ ಗೌರವಗಳಿಂದ ಇಂಗ್ಲೆಂಡ್, ಅಮೇರಿಕಾ, ರಶ್ಯಾ, ಮುಂತಾದ ಹಲವು ರಾಷ್ಟ್ರಗಳನ್ನು ಸಂದರ್ಶಿಸಿದ್ದರು. ಸೇನಾಧಿಕಾರಿಯಾಗಿ ದೇಶದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿದ್ದರಲ್ಲದೆ, ಮದ್ರಾಸಿನ ಆವಡಿ, ಕಲ್ಕತ್ತಾದ ಫೋರ್ಟ್ ವಿಲಿಯಮ್ಸ್ ಮತ್ತು ಸೇನಾ ಪ್ರಧಾನ ಕಚೇರಿಯಿರುವ ದೆಹಲಿಗಳಲ್ಲಿ ಅವರ ಕರ್ತವ್ಯ ನಿರ್ವಹಣೆ ವಿಶೇಷ ಪ್ರಶಂಸೆಗೆ ಪಾತ್ರವಾಗಿತ್ತು. ಸುಪ್ರಸಿದ್ಧವಾದ 'ವಿಜಯಂತಾ ಟ್ಯಾಂಕ್'ನ ವಿನ್ಯಾಸದಲ್ಲಿ ಮೇ।ಜ। ಕಿಣಿಯವರ ಹಸ್ತಕೌಶಲ್ಯವು ಉಲ್ಲೇಖನೀಯವಾಗಿದೆ.

ಅಧಿಕಾರ ನಿವೃತ್ತಿಯ ಅನಂತರವೂ ಕಿಣಿಯವರ ಕರ್ತವ್ಯನಿಷ್ಠೆ, ಪ್ರಾಮಾಣಿಕತೆಗಳನ್ನು ಗುರುತಿಸಿ, ಮೆಚ್ಚಿದ್ದ ಭಾರತ ಸರಕಾರವು ರಾಂಚಿಯಲ್ಲಿರುವ 'ಹೆವಿ ಇಂಜನಿಯರಿಂಗ್ ಕಾರ್ಪೊರೇಶನ್'ನ ಚೇರಮ್ಯಾನ್ ಸ್ಥಾನವನ್ನು ಸ್ವೀಕರಿಸುವಂತೆ ಒತ್ತಾಯಿಸಿತು. ಹತ್ತು ಸಾವಿರ ಸಿಬ್ಬಂದಿಯನ್ನು ಒಳಗೊಂಡ ಆ ನಿಗಮದ ಅಧಿಕಾರ ಸ್ಥಾನವನ್ನು ಕಿಣಿಯವರು ಸ್ವೀಕರಿಸುವ ಮೊದಲು ಅದು ಶೋಚನೀಯ

ತಿಯಲ್ಲಿತ್ತು. ಆದರೆ ಕಿಣಿಯುವರ ಅಧಿಕಾರಗ್ರಹಣದ ಎರಡೇ ವರ್ಷಗಳಲ್ಲಿ ಅದು ಲಾಭ ಗಳಿಕೆಯ ಸ್ಥಿಯಾಯಿತು. ಶ್ರೀ ಕಿಣಿಯುವರು ಈಗಲೂ ಇಂತಹ ಅನೇಕ ಉದ್ಯಮಗಳ ಪದಾಧಿಕಾರಿಯಾಗಿ ರ್ತವ್ಯ ನಿರತರಾಗಿದ್ದಾರೆ.

. ವಾಸುದೇವ ಕಾಮತ್

ವಕೀಲ ಕಾಮತರೆಂದೇ ಜನಪ್ರಿಯರಾಗಿರುವ ಕಾರ್ಕಳ ವಾಸುದೇವ ಕಾಮತರು ತಮ್ಮ ತ್ವಿಕತೆ, ಸರಳತೆ, ದಾನಗುಣ, ಉಪಕಾರಭಾವಗಳಿಂದ ಸರ್ವಜನ ಮಾನ್ಯರಾದವರು. ತಮ್ಮ ತಂದೆಯ ಕೀಲೀ ವೃತ್ತಿಯನ್ನೇ ಮುಂದುವರಿಸುವುದರೊಂದಿಗೆ, ಕಾರ್ಕಳದ ಸಾಮಾಜಿಕ - ಧಾರ್ಮಿಕ - ಶೈಕ್ಷಣಿಕ ಂಗಗಳಲ್ಲೂ ನಿಸ್ಪೃಹತೆಯಿಂದ, ದಕ್ಷತೆಯಿಂದ ದುಡಿದವರು ಕಾಮತರು. ದಿ। ಮೊಳೆಹಳ್ಳಿ ಶಿವರಾಯ ಂದ ಪ್ರಭಾವಿತರಾಗಿ ಕಾರ್ಕಳದಲ್ಲಿ ಸಹಕಾರೀ ಆಂದೋಲನವನ್ನು ತೀವ್ರಗತಿಯಲ್ಲಿ ನಡೆಸಿದವರು ಾಸುದೇವ ಕಾಮತರು. ಕಾರ್ಕಳ ಟೌನ್ ಬ್ಯಾಂಕಿನೊಂದಿಗೆ ಅವರಿಗೆ ದೀರ್ಘಕಾಲದ ಸಂಬಂಧವಿತ್ತು. ಕ್ಷಣ ವತ್ಸಲರೂ ಆಗಿರುವ ಕಾಮತರು ಎಸ್. ವಿ. ಟಿ. ಶಾಲೆ, ಭುವನೇಂದ್ರ ಹೈಸ್ಕೂಲುಗಳ ಕಾರ್ಯ ರ್ವಾಹಕದಲ್ಲಿ ಒಬ್ಬರಾಗಿದ್ದರಲ್ಲದೆ, ಶ್ರೀ ಭುವನೇಂದ್ರ ಕಾಲೇಜ್ ಟ್ರಸ್ಟ್‌ನ ಉಪಾಧ್ಯಕ್ಷ - ಕೋಶಾಧಿ ಾರಿಯಾಗಿಯೂ ಅತಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ, ಪ್ರಕೃತ ಅದರ ಒಬ್ಬ ಸದಸ್ಯರಾಗಿ ುಂದುವರಿಯುತ್ತಿದ್ದಾರೆ.

ಡಾ। ಎನ್. ವಿ. ಅದ್ಯಂತಾಯ

ದಕ್ಷ ವೈದ್ಯರಾಗಿರುವ ಡಾ। ಎನ್. ವಿಶ್ವನಾಥ ಅದ್ಯಂತಾಯರು ಮುಂಬಯಿಯಲ್ಲಿ ಅತ್ಯಂತ ನಪ್ರಿಯ ವ್ಯಕ್ತಿ. ಕೊಡುಗೈತನಕ್ಕೆ ಹೆಸರಾಗಿರುವ ಅದ್ಯಂತಾಯರು ಮುಂಬಯಿಯ ಹತ್ತಾರು ಸಂಘ ಸಂಸ್ಥೆಗಳಲ್ಲಿ ಒಬ್ಬ ಆಸಕ್ತ ಕಾರ್ಯಕರ್ತರು.

ಕಲಾಕಾರರು

ಶಿಲ್ಪಿ ಡಾ। ರಂಜಾಳ ಗೋಪಾಲ ಶೆಣೈ

ಶಿಲ್ಪಿ ರಂಜಾಳ ಗೋಪಾಲ ಶೆಣೈಯವರು ಕಾರ್ಕಳದ ಹೆಮ್ಮೆಯ ಪುತ್ರ. ಶಿಲ್ಪಕಲೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಧೀಮಂತ. ಕಾರ್ಕಳದ ರಂಜಾಳ ಗೌಡಸಾರಸ್ವತ ಕುಟುಂಬದಲ್ಲಿ 1897ರಲ್ಲಿ ಜನಿಸಿದ ಶ್ರೀ ಶೆಣೈಯವರು ಶಿಲೆಗಳೊಂದಿಗೆ ಮಾತನಾಡಬಲ್ಲವರು. ಕಲ್ಲಿಗೆ ಜೀವ ತುಂಬುವ ಕಲೆ ಇವರಲ್ಲಿ ಕರಗತವಾಗಿದೆ. ಕಗ್ಗಲ್ಲನ್ನು ಸೆರೆಯಿಂದ ಬಿಡಿಸಿ ತಮ್ಮ ಕಲಾವಂತಿಕೆಯ ಪರಿಣತಿಯಿಂದ ಅದನ್ನು ಜೀವಂತಗೊಳಿಸುವ ನೈಪುಣ್ಯವನ್ನು ಶಿಲ್ಪಕಲಾಸಕ್ತ ತರುಣರು ಇವರಿಂದ ನೋಡಿ ಕಲಿಯಬೇಕು.

ಕಾರ್ಕಳದ ವೆಂಕಟರಮಣ ದೇವಸ್ಥಾನದ, 'ಗರುಡಮಂಟಪದಲ್ಲಿ' ಅವರು ಕಡೆದು ನಿಲ್ಲಿಸಿದ ನಾಲ್ಕು ಕಂಬಗಳು ಶಿಲ್ಪ ರಂಜಾಳರ ಕಲಾನೈಪುಣ್ಯಕ್ಕೆ ಒಂದು ಸುಂದರ ನಿದರ್ಶನ. ಏಳೆಂಟು ವರ್ಷಗಳ ಸತತ ಪರಿಶ್ರಮದಿಂದಾಗಿ ಮೂಡಿಬಂದ ಆ ಕಂಬಗಳು ನೋಡುವವರನ್ನು ಮಂತ್ರ ಮುಗ್ಧರನ್ನಾಗಿ ಮಾಡಿ ಬಿಡುತ್ತದೆ. ಪ್ರಾಣಿ, ಪಕ್ಷಿ, ಕೀಟಗಳನ್ನು ಆ ಕಂಬಗಳಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಶಿಲ್ಪಕಲಾಸಕ್ತನರಲ್ಲದೇ, ಉಳಿದ ಭಕ್ತಾದಿಗಳನ್ನೂ ಆಕರ್ಷಿಸುವ ಕೆತ್ತನೆಯ ಕಸೂತಿ ಕೆಲಸ ನೋಡುವವರ ಮನಸ್ಸನ್ನು ರಂಜಿಸುತ್ತದೆ. ಸುಂದರವಾದ ಕಲ್ಪನೆ, ನಯವಾದ ಕೆಲಸ, ಅತ್ಯುನ್ನತ ಜಾಣ್ಮೆ, ಶೆಣೈಯವರು ಈ ಕೃತಿಯಲ್ಲಿ ತಮ್ಮ ಅನುಭವವನ್ನೂ ಹಾಗೂ ದರ್ಶನ ವನ್ನೂ ಪ್ರತಿಬಿಂಬಿಸಿದ್ದಾರೆ.

ರಂಜಾಳರು ಮೈಸೂರಿನ ಶ್ರೀ ಜಯಚಾಮ ರಾಜೇಂದ್ರ ಒಡೆಯರಿಗೆ ಕಾಣಿಕೆಯಾಗಿ ಅರ್ಪಿಸಿದ ತೆಂಗಿನ ಗೆರಟೆಯಲ್ಲಿ ಕೆತ್ತಿದ ಮೈಸೂರು ಅರಮನೆ ಅವರ ಕಲ್ಪನಾ ಶಕ್ತಿಗೆ ಇನ್ನೊಂದು ಉದಾಹರಣೆ. ಗೋಕರ್ಣ ಮಠದಲ್ಲಿನ ಪಟ್ಟಾಭಿರಾಮನ ವಿಗ್ರಹ, ಗೋವಾದ ಪ್ರತಾಗಲೀ (ಪರ್ಥಗಾಳಿ) ಮಠದಲ್ಲಿನ ವೃಂದಾವನ ವಿಗ್ರಹಗಳು ಇವರ ಕಲಾವಿಲಾಸವನ್ನು ಎತ್ತಿ ಸಾರುತ್ತಿವೆ. ಗಣಪತಿ, ಲಕ್ಷ್ಮಿ, ವಿಷ್ಣು, ವೆಂಕಟರಮಣ, ಶಿವಲಿಂಗಪೀಠಗಳೇ ಮೊದಲಾಗಿ ಅವರಿಂದ ಮೂಡಿಬಂದ ಹಲವಾರು ಶಿಲ್ಪಕಲಾ ವಿಗ್ರಹಗಳೆಲ್ಲ ಅವರ ಸಾಧನೆಯ ಪ್ರತೀಗಕಳಾಗಿವೆ. ಶೆಣೈಯವರ ಆಸಕ್ತಿ ಕೇವಲ ಶಿಲ್ಪ ಕಲೆಗೆ ಮಾತ್ರ ಸೀಮಿತವಾಗಿಲ್ಲ. ಅವರು ಮೇಣದಲ್ಲಾಗಲೀ, ಮಣ್ಣಿನಿಂದಾಗಲೀ, ಲೋಹದಿಂದಾಗಲೀ ಮೂರ್ತಿ ನಿರ್ಮಾಣದಲ್ಲಿ ಸಿದ್ಧಹಸ್ತರು. ಆದುದರಿಂದಲೇ ಅವರ ಶಿಲಾ ಮೂರ್ತಿಗಳಿಗೆ, ಮತ್ತುಳಿದ ವಿಗ್ರಹಗಳಿಗೆ ಭಾರತದ ಮೂಲೆ ಮೂಲೆಗಳಲ್ಲಿ ಅಪರಿಮಿತ ಬೇಡಿಕೆ.

ಶೆಣೈಯವರ ಕಲಾ ಪರಿಣತಿಗೆ ದೇಶವಿದೇಶಕ್ಕೆ ಕಳುಹಿಸಿದ ಹಲವಾರು ಕಲಾ ವಿಗ್ರಹಗಳೂ ಸಾಕ್ಷಿ. ಉತ್ತರ ಪ್ರದೇಶದ ಹೃಷೀಕೇಶದ – 'ದಿವ್ಯಜೀವನ ಸಂಘ'ದವರ ಬೇಡಿಕೆಯಂತೆ ಶ್ರೀ ಕೃಷ್ಣನ ಸುಂದರ ಮೂರ್ತಿಯನ್ನು 1960ರ ದಶಕದಲ್ಲಿ ಮಾಡಿ ಕಳುಹಿಸಿದ್ದಾರೆ. ಸುಮಾರು 39 ಅಡಿ ಎತ್ತರದ ಬೃಹನ್ಮೂರ್ತಿ 'ಗೋಮಟೇಶ್ವರ'ನನ್ನು ಧರ್ಮಸ್ಥಳದ ಧರ್ಮಾಧಿಕಾರಿ ದಿ। ರತ್ನವರ್ಮ ಹೆಗ್ಗಡೆಯವರ ಕಾಲದಲ್ಲಿ (1967), ವಿಜಯ ದಶಮಿಯ ಶುಭದಿನದಂದು ಆರಂಭಿಸಿ, ಕ್ಲಪ್ತಕಾಲದಲ್ಲಿ ವಹಿಸಿದ ಕೆಲಸವನ್ನು ಮುಗಿಸಿ, ಧರ್ಮಸ್ಥಳದ ಈಗಿನ ಧರ್ಮಾಧಿಕಾರಿ ಶ್ರೀ ವೀರೇಂದ್ರಹೆಗ್ಗಡೆಯವರ ನೇತೃತ್ವದಲ್ಲಿ ಪ್ರತಿಷ್ಠಾಪಿರುವುದು ಈ ಶತಮಾನದ ಶಿಲ್ಪಕಲಾ ಕ್ಷೇತ್ರದ ಮತ್ತೊಂದು ಅದ್ಭುತ ಕಲಾ ಪ್ರೌಢಿಮೆ. ಧರ್ಮಸ್ಥಳದ ಗೊಮ್ಮಟ ವಿಗ್ರಹವನ್ನು ನೋಡಿ ಸ್ಫೂರ್ತಿಗೊಂಡ, ಉತ್ತರ ಪ್ರದೇಶದ ಫಿರೋಜಾಬಾದಿನ 'ಛದಾಮಿಲಾಲ್ ಜೈನ್ ಟ್ರಸ್ಟ್'ರವರು 33 ಅಡಿ ಎತ್ತರದ ಗೊಮ್ಮಟ ವಿಗ್ರಹವನ್ನು ಶ್ರೀ ರಂಜಾಳರವರಿಂದ ಮಾಡಿಸಿಕೊಂಡು, ತೆಗೆದುಕೊಂಡು ಹೋಗಿರುವುದು ಅವರ ಶಿಲ್ಪಕಲೆಯುಳ್ಳಿಟ್ಟ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

ಶ್ರೀ ರಂಜಾಳ ಗೋಪಾಲ ಶೆಣೈಯವರ ಕೀರ್ತಿ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರ ಕಲಾ ಪರಿಮಳ ಪ್ರಪಂಚದಾದ್ಯಂತ ಪಸರಿಸಿದೆ. 1976ರಲ್ಲಿ ಜಪಾನಿನ 'ನಾರಾ' ಎಂಬಲ್ಲಿಗೆ ಕಳುಹಿಸುವ ಸಲುವಾಗಿ 20 ಮೀಟರ್ ಬೃಹದ್ಗಾತ್ರದ 'ಅವಲೋಕಿತೇಶ್ವರ'ನ ಕಲ್ಲಿನ ವಿಗ್ರಹವನ್ನು ನಿರ್ಮಿಸಲು ಒಪ್ಪಿಕೊಂಡರು. ವಹಿಸಿದ ಕರ್ತವ್ಯವನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಿ ಕಳುಹಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಸಾಗಿಸುವ ಸಮಸ್ಯೆಯನ್ನು ನೀಗಿಸುವ ಉದ್ದೇಶದಿಂದ ಅಷ್ಟೆತ್ತರದ ವಿಗ್ರಹವನ್ನು ಹಂತಹಂತವಾಗಿ ಸಾಗಿಸಲು ಅನುಕೂಲವಾಗುವಂತೆ 66 ತುಂಡುಗಳನ್ನಾಗಿ, ಆದರೂ ಅಖಂಡವೆಂದು ತೋರುವಂತೆ ನಿರ್ಮಿಸಿದ ಶೆಣೈಯವರ ಚಾತುರಿಯನ್ನು ಮೆಚ್ಚಲೇಬೇಕು. ನಾಲ್ಕುವರೆ (4½) ವರ್ಷಗಳ ಅವಿರತ ಶ್ರಮದಿಂದ ತಯಾರಾದ ಈ ಅವಲೋಕಿತೇಶ್ವರನ ವಿಗ್ರಹವನ್ನು 1983 ಮಾರ್ಚ್ 13ರ ಶುಭದಿನದಂದು ಜಪಾನಿನ 'ತ್ಸುಬೋಸಾಕದೇರ' ('ನಾರಾ'ದ ಬೌದ್ಧ ದೇವಾಲಯ)ದಲ್ಲಿ ನಾಲ್ಕು(4) ದಿನಗಳ ಪೂಜಾವಿಧಿಗಳೊಡನೆ, ಶ್ರೀರಂಜಾಳ ಗೋಪಾಲ ಶೆಣೈಯವರ ಮೊಮ್ಮಗ ರಾಧಾಮಾಧವ ಶೆಣೈಯವರ ನೇತೃತ್ವದಲ್ಲಿ ಪ್ರತಿಷ್ಠಾಪಿಸಲಾಯಿತು. ಭಕ್ತಾದಿಗಳಿಗೆ ಹಂಚುವುದಕ್ಕಾಗಿ ಈಗ ಒಂದು ಮೀಟರ್ ಎತ್ತರದ ಸುಮಾರು 3,000 ಬೌದ್ಧ ವಿಗ್ರಹಗಳನ್ನು ರಚಿಸುವಂತೆ ನಾರಾ ದೇವಾಲಯದ ಅಧಿಕಾರಿಗಳು ಶ್ರೀ ರಂಜಾಳರನ್ನು ವಿನಂತಿಸಿಕೊಂಡಿದ್ದಾರೆ.

ಶೆಣೈಯವರ ಅದ್ಭುತ ಕಲಾ ಸಾಧನೆಯನ್ನು ಮೆಚ್ಚಿದ ಪ್ರಸಿದ್ಧ ಉದ್ಯಮಿ ಬಿ.ಕೆ. ಬಿರ್ಲ ಅವರು ಏಕಶಿಲೆ 'ದ್ವಿಭುಜ ಶಿವನ' ವಿಗ್ರಹ ರಚನೆಗಾಗಿ, ಶ್ರೀ ಗೋಪಾಲ ಶೆಣೈಯವರನ್ನು ಕೇಳಿಕೊಂಡಿದ್ದಾರೆ. ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ವಿಗ್ರಹವನ್ನು ದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿ ಪ್ರತಿಷ್ಠಾಪಿಸಲು ವ್ಯವಸ್ಥೆಯಾಗಿದೆ. ಇದಲ್ಲದೇ 30 ಅಡಿ ಎತ್ತರದ 'ಆಂಜನೇಯ'ನ

ಗ್ರಹವನ್ನು ದೆಹಲಿಯ ಪ್ರಭುದತ್ತ ಬ್ರಹ್ಮಚಾರಿಯವರ ಕೋರಿಕೆಯಂತೆ ರಚಿಸಲು ಶ್ರೀ ಶೆಣೈಯವರು ಪ್ಪಿಕೊಂಡಿದ್ದಾರೆ. ಈಗಾಗಲೇ ಬಿರ್ಲಾಭವನದಲ್ಲಿ ಪ್ರತಿಷ್ಠಾಪಿಸಲು 10 ಅಡಿ ಎತ್ತರದ ಪೂರ್ಣ ಮಾಣದ ಸುಂದರ ಈಶ್ವರನ ವಿಗ್ರಹ ಮುಕ್ತಾಯದ ಹಂತದಲ್ಲಿದೆ. ತಮಿಳು ನಾಡಿಗೆ ಕಳುಹಿಸಲು ಂದರ 'ನಟರಾಜ'ನ ವಿಗ್ರಹ ಕೂಡ ಸಿದ್ಧವಾಗಿ ನಿಂತಿದೆ.

ಶ್ರೀ ರಂಜಾಳ ಗೋಪಾಲ ಶೆಣೈಯವರ ಶಿಲ್ಪ ಕಲಾ ಸಾಧನೆಯನ್ನು ಗಮನಿಸಿದ, ಆಗಿನ ಖಿಲ ಭಾರತ ಕರಕುಶಲ ಮಂಡಳಿಯ ಅಧ್ಯಕ್ಷೆಯಾಗಿದ್ದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ 968ರಲ್ಲಿ ಶ್ರೀ ಗೋಪಾಲ ಶೆಣೈಯವರ ಹೆಸರನ್ನು ರಾಷ್ಟ್ರ ಪ್ರಶಸ್ತಿಗೋಸ್ಕರ ಸೂಚಿಸಿದ್ದರು. ಾರತ ಸರ್ಕಾರ ಶ್ರೀ ಶೆಣೈಯವರಿಗೆ 1969ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಕೊಟ್ಟು ಸನ್ಮಾನಿಸಿತು. ್ರೀಮತಿ ಚಟ್ಟೋಪಾಧ್ಯಾಯರು ಕಾರ್ಕಳದ ಹತ್ತಿರ ಒಂದು 'ಶಿಲ್ಪ ಕಲಾ ತರಬೇತಿ ಕೇಂದ್ರ'ವನ್ನು ರೆಯಲು ಕೂಡ ಸಲಹೆ ಮಾಡಿದ್ದರು. ಆದರೆ ಹಂಗಿನರಮನೆಗಿಂತ ಂಗಡದ ಗುಡಿ ಲೇಸು ಎಂಬ ಣ್ಣುಡಿಯಂತೆ ಶ್ರೀ ರಂಜಾಳರು ತಮ್ಮದೇ ಆದ "ಶ್ರೀ ಭುವನೇಂದ್ರ ಶಿಲ್ಪಕಲಾ ಶಾಲೆ"ಯನ್ನು ಡೆಸಿಕೊಂಡು ಬರುತ್ತಿದ್ದಾರೆ. ಮೈಸೂರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳು ಅವರಿಗೆ ಾಕ್ಟರೇಟ್ ಗೌರವವನ್ನು ನೀಡಿವೆ.

ಶ್ರದ್ಧೆ, ಗಾಢವಾದ ಅನುಭವ, ಕರ್ತವ್ಯ ಪ್ರಜ್ಞೆ ಮೊದಲಾದ ಉದಾತ್ತ ಗುಣಗಳು ಅವರ ಕಲಾ ್ರಷ್ಟಿಗೆ ನೆರವಾಗುತ್ತಿವೆ. ಈಗ ಶ್ರೀ ರಂಜಾಳ ಗೋಪಾಲ ಶೆಣೈಯವರು 83ರ ಹರೆಯದ ವಯೋ ್ರದ್ಧರು. ಜೀರ್ಣದೇಹ, ಬಾಗುಬೆನ್ನು, ಕೊರಳಲ್ಲಿ ತುಳಸೀ ಮಣಿಮಾಲೆ, ಹಣೆಯ ತಿಲಕ, ಮೋಹಕ ನಗೆಯೇ ಮೊದಲಾದುವುಗಳಿಂದ ಅವರು ಇಂದೂ ಕೂಡ ಎಳೆಯ ಉತ್ಸಾಹವನ್ನು ಹೆಚ್ಚಿಸಿಕೊಂಡಿದ್ದಾರೆ. ಾರ್ಕಳದ ಹೆಸರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶಿಲ್ಪಕಲಾ ಭೂಪಟದಲ್ಲಿ ಚಿರಸ್ಥಾಯಿಯಾಗಿ ಳಿಯುವಂತೆ ಮಾಡಿದವರು ಶ್ರೀ ಶಿಲ್ಪಿ ಗೋಪಾಲ ಶೆಣೈಯವರು.

ಶಿಲ್ಪಿ ಶ್ರೀ ಶಾಮರಾಯ ಆಚಾರ್ಯರು

1926ರಲ್ಲಿ ಜನಿಸಿದ ಶ್ರೀ ಶ್ಯಾಮರಾಯ ಆಚಾರ್ಯರು ತೆರೆಯ ಮರೆಯಲ್ಲಿ ತಮ್ಮ ಶಿಲ್ಪಕಲಾ ನೈಪುಣ್ಯವನ್ನು ಪ್ರದರ್ಶಿಸಿಕೊಂಡು ಬರುತ್ತಿದ್ದಾರೆ. ಕಲಿತದ್ದು ಪ್ರಾಥಮಿಕ ಎಂಟನೆಯ ತರಗತಿಯ ವರೆಗಾದರೂ ಇವರು ಶಿಲ್ಪ ಶಾಸ್ತ್ರದಲ್ಲಿ ಗಳಿಸಿದ ಪಾಂಡಿತ್ಯ ಮಾತ್ರ ದೊಡ್ಡದು. ಪ್ರಾರಂಭದಲ್ಲಿ ತಮ್ಮ ತಂದೆ ಕಟಪಾಡಿ ಜೋಗಪ್ಪಾಚಾರ್ಯರನ್ನು ಗುರುಗಳೆಂದು ಸ್ವೀಕರಿಸಿದ ಶ್ರೀಯುತರು ಶಿಲ್ಪಕಲೆಯಲ್ಲಿ ಆಸಕ್ತಿ ಮೂಡಿದಾಗ, ಶಿಲ್ಪ ಕಲಾ ಪ್ರವೀಣ ರಂಜಾಳ ಗೋಪಾಲ ಶೆಣೈಯವರನ್ನು, ತ್ರಿಕರಣ ಪೂರ್ವಕರಾಗಿ ತಮ್ಮ ನಿತ್ಯ ಗುರುಗಳಾಗಿ ಪರಿಗಣಿಸಿದರು. 1947ರಿಂದ 1969ರವರೆಗೆ, 22ವರ್ಷಗಳ ಕಾಲ ಸತತವಾಗಿ ರಂಜಾಳ ಗೋಪಾಲ ಶೆಣೈಯವರ ಗರಡಿಯಲ್ಲಿ ತಮ್ಮ ಕೈಯನ್ನು ಪಳಗಿಸಿಕೊಂಡು ಶ್ರೀ ಶ್ಯಾಮರಾಯ ಆಚಾರ್ಯರು 1969ರ ವಿಜಯ ದಶಮಿಯ ಶುಭದಿನದಂದು "ವಿಜಯ ಶಿಲ್ಪ ಶಾಲೆ"ಯನ್ನು ಗುರುವಿನ ಅಪ್ಪಣೆ ಪಡೆದೇ ಪ್ರಾರಂಭಿಸಿದರು. ಇವರು ವಾಸ್ತುಶಿಲ್ಪ ಹಾಗೂ ಮೂರ್ತಿ ಶಿಲ್ಪವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಮೂರ್ತಿ ಶಿಲ್ಪದಲ್ಲಿ ಸಂಪ್ರದಾಯ ಶೈಲಿಯಾದ ದ್ರಾವಿಡ ಶೈಲಿ (ಬೇಲೂರು ಶೈಲಿ ಎಂದೂ ಕರೆಯುತ್ತಾರೆ)ಯನ್ನು ಬಳಸಿಕೊಂಡಿದ್ದಾರೆ.

ಈವರೆಗೆ ಅವರು ರಚಿಸಿದ ಮೂರ್ತಿ ಶಿಲ್ಪಗಳು ಹಲವಾರು. ಪಡುಬಿದ್ರಿಯ ಆರು ಅಡಿಯ ವೀರಭದ್ರಸ್ವಾಮಿ, ಅಮೆರಿಕದ ಟೊರೆಂಟೋಗೆ ಕಳುಹಿಸಿರುವ 3 ಅಡಿ ಎತ್ತರದ ದೇವೇಂದ್ರ, ಕೊಪ್ಪದ ದುರ್ಗಾ ಗಣಪತಿ, ಬೊಂಬ್ಬಾಯಲ್ಲಿ ಪ್ರತಿಷ್ಠಾಪಿತವಾದ ಮುರಳೀಮನೋಹರ, ಮಂಗಳೂರಿನ ನಂದೀ ವಿಗ್ರಹ, ಮಣಿಪಾಲದ ಬಾಹುಬಲಿ ವಿಗ್ರಹ, ಶೃಂಗೇರಿಯ ಪಂಚಲೋಹದ ಕೋದಂಡರಾಮ, ನರಸಿಂಹರಾಜಪುರದ ಮಹಿಷಮರ್ದಿನಿ, ಮಂದರ್ತಿಯ ಶಕ್ತಿ ವಿಗ್ರಹ, ವೈನಾಡಿನ ಅನಂತನಾಥಸ್ವಾಮಿ, ಜಯವಿಜಯ ದ್ವಾರಪಾಲಕರು ಅವರ ಶಿಲ್ಪಾವಿದ್ಯಾ ಕುಶಲತೆಗೆ ಜ್ವಲಂತ ಸಾಕ್ಷಿಗಳಾಗಿವೆ. ಇವುಗಳಲ್ಲದೆ

ಇನ್ನೂ ಹಲವಾರು ಕಲಾಕೃತಿಗಳು ಇವರ ಉಳಿಯಿಂದ ರಚಿತವಾಗಿವೆ. ಸಾಗರದಲ್ಲಿನ ಶಾರದಾಂಬ, ಕುಂದಾಪುರದ ಲಕ್ಷ್ಮೀನಾರಾಯಣ, ಗುಂಡೀಹಳ್ಳಿಯ (ಬೇಲೂರು) ಪ್ರಸನ್ನ ಗಣಪತಿ, ಬಂಗಾಲ ಹೋಂ ಇಂಡಸ್ಟ್ರೀಸ್ ಸಂಸ್ಥೆಗೆ ಕಳುಹಿಸಿರುವ ನಾಟ್ಯ ಸರಸ್ವತೀ ವಿಗ್ರಹಗಳು ಇವರ ಕಲಾನೈಪುಣ್ಯದ ಹೆಗ್ಗುರುತುಗಳು. ಮಾನ್ಯ ವೀರೇಂದ್ರ ಹೆಗ್ಗಡೆಯವರ ಮೇಲ್ವಿಚಾರಣೆಯಲ್ಲಿ ದೆಹಲಿಯ ದರಿಯಾ ಗಂಜ್ ಪಾರ್ಕಿನಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಲಾಗಿರುವ 13½ ಅಡಿ ಎತ್ತರದ 'ಮಹಾವೀರಮೂರ್ತಿ' ಈಗ ಸಿದ್ಧವಾಗಿ ನಿಂತಿದೆ. ಮಹಾರಾಷ್ಟ್ರದ ಕೊಲ್ಲಾಪುರದಲ್ಲಿನ ನಾಂದಣಿಯಲ್ಲಿ ಪ್ರತಿಷ್ಠಾಪಿಸುವ ಸಲುವಾಗಿ 30 ಅಡಿ ಎತ್ತರದ ವೃಷಭ ತೀರ್ಥಂಕರರ ವಿಗ್ರಹದ ಕೆತ್ತನೆಯ ಕಾರ್ಯ ಕಡೂರಿನಲ್ಲಿ ಭರದಿಂದ ಸಾಗುತ್ತಿದೆ. ಅಮೆರಿಕಾದ ಕ್ಲೀವ್‌ಲ್ಯಾಂಡಿಗೆ ಕಳುಹಿಸಿದ ಕೃಷ್ಣನ ವಿಗ್ರಹಕ್ಕೆ ಪ್ರಶಸ್ತಿ ಪತ್ರ ಸಿಕ್ಕಿದೆ.

1974ರ ನಂತರ ಶ್ರೀ ಶ್ಯಾಮರಾಯ ಆಚಾರ್ಯರು ವಾಸ್ತುಶಿಲ್ಪದ ಕಡೆಗೂ ತಮ್ಮ ಗಮನ ವನ್ನು ಹರಿಸಿದ್ದಾರೆ. ಸ್ವತಂತ್ರವಾಗಿ ಕೈಗೊಂಡ ಅನೇಕ ವಾಸ್ತುಶಿಲ್ಪಗಳಲ್ಲಿ, ಕಾರ್ಕಳದ ಸುಬ್ರಹ್ಮಣ್ಯ ದೇವಾಲಯ, ಬೋಳಾದ ಗಣಪತೀ ದೇವಾಲಯ ಕೇರಳದ ತ್ರಿಕನಾಡು ಅನಂತಮೂರ್ತಿ ದೇವಾಲಯಗಳ ವಾಸ್ತುಶಿಲ್ಪಗಳು ಪ್ರಮುಖವಾದುವು.

ಪ್ರಸ್ತುತ ಕಾರ್ಕಳದ ಕಾಬೆಟ್ಟಿನಲ್ಲಿ ತಮ್ಮ ಶಿಲ್ಪಕಲಾ ಶಾಲೆಯನ್ನು ಹೊಂದಿದ ಶ್ರೀಯುತರು ಸಂತುಷ್ಟ ಶಿಲ್ಪಿಯಿಂದ ಸೌಂದರ್ಯದ ರಸದೂಟ – ನೋಟಕರಿಗೆ ಲಭಿಸುವುದು ಎಂಬ ಪ್ರಜ್ಞೆಯನ್ನು ಹೊಂದಿದವರಾಗಿದ್ದಾರೆ.

ಲೋಹಶಿಲ್ಪಿ ಡಿ. ಪಿ. ನಾರಾಯಣ ಭಟ್ಟ

ಕಾರ್ಕಳದ ದುರ್ಗಗ್ರಾಮದ ಶ್ರೀ ಡಿ. ಪಿ. ನಾರಾಯಣ ಭಟ್ಟರು ಚಿತ್ಪಾವನ ಕುಟುಂಬದವರು. ಅವರು ಕೃಷಿ-ತೋಟಗಾರಿಕೆಗಳೊಂದಿಗೆ ಚಿತ್ತವನ್ನು ಪಾವನಗೊಳಿಸಬಲ್ಲ ಲೋಹಶಿಲ್ಪದಲ್ಲೂ ನಿರತರಾಗಿದ್ದಾರೆ. 1956ರಿಂದಲೂ ಶ್ರೀ ಭಟ್ಟರು ಚಿನ್ನ, ಬೆಳ್ಳಿ, ಹಿತ್ತಾಳೆಗಳ ಎರಕದಲ್ಲಿ ತೊಡಗಿದ್ದಾರೆ. ನಾಡಿನ ಉದ್ದಗಲಗಳಲ್ಲೂ ನೂರಾರು ದೇವಾಲಗಳ ಪೂಜಾಮೂರ್ತಿಗಳಿಗೆ ಬೆಳ್ಳಿಯ ಕವಚವನ್ನು ರಚಿಸಿದ್ದಾರೆ. ಪ್ರಭಾವಳಿ, ಪೀಠ, ಕಿರೀಟಾದಿಗಳನ್ನೂ ಅನೇಕ ಸಂಖ್ಯೆಯಲ್ಲಿ ನಿರ್ಮಿಸಿದ್ದಾರೆ. ಅಂಬಲ್ಪಾಡಿ, ಅದಮಾರು, ಹುಂಬುಚ್ಚ, ಗಾಣಗಾಪುರವೇ ಮುಂತಾದ ಹಲವು ಪುಣ್ಯಕ್ಷೇತ್ರಗಳಿಗಾಗಿ ವಿವಿಧ ಶಿಲ್ಪ ಕರ್ಮವನ್ನು ಮಾಡಿ ಶ್ರೀ ಭಟ್ಟರು ಕೃತಾರ್ಥರಾಗಿದ್ದಾರೆ. ಕಾರ್ಕಳದ ಶ್ರೀ ವೆಂಕಟರಮಣ ದೇವಾ ಲಯದಲ್ಲಿರುವ ಗಣಪತಿಗಾಗಿ ಅವರು ಹನ್ನೊಂದು ಕಿ.ಗ್ರಾಂ ತೂಕದ ರಜತ ಕವಚವನ್ನು ರಚಿಸಿದ್ದಾರೆ.

ಶ್ರೀ ಭಟ್ಟರು ಶಿಲ್ಪಕರ್ಮದಲ್ಲಿ ನಿರತರಾಗುವ ಮೊದಲು ಧರ್ಮಸ್ಥಳ ದಿ। ಮಂಜಯ್ಯ ಹೆಗ್ಗಡೆ, ತಮಿಳ್ನಾಡಿನ ಶ್ರೀ ಕೃಷ್ಣಸ್ವಾಮಿ ನಾಯುಡು, ಕಾರ್ಕಳದ ಶ್ರೀ ರಂಜಾಳ ಗೋಪಾಲಶೆಣೈಯವರಲ್ಲಿ ಶಿಷ್ಯವೃತ್ತಿಯನ್ನೂ ನಡೆಸಿದ್ದರು. ಲೋಹಶಿಲ್ಪವೇ ಭಟ್ಟರ ಪ್ರಥಮ ಪ್ರೇಮವಾದರೂ ಶಿಲೆ, ದಾರು, ದಂತಶಿಲ್ಪಗಳಲ್ಲೂ ಅವರಿಗೆ ಪರಿಶ್ರಮವಿದೆ.

ನಾಗಸ್ವರ ಕೋಕಿಲ ನಾರಾಯಣ ಸ್ವಾಮಿ

ಮೂಲತಃ ಬಜಪೆಯವರಾದರೂ ಕಾರ್ಕಳದಲ್ಲೇ ಬಹುಕಾಲ ನೆಲೆಸಿ 'ಕಾರ್ಕಳ ನಾರಾಯಣ' ರೆಂದೇ ಜನಪ್ರಿಯರಾಗಿರುವವರು, ನಾರಾಯಣ ಸ್ವಾಮಿಯವರು. ಒಂದು ಕಾಲದಲ್ಲಿ ಅವರ ನಾಗಸ್ವರವು ಝೇಂಕರಿಸದ ಮದುವೆ-ಮುಂಜಿಗಳಾಗಲೀ, ಶುಭ-ಶೋಭನಗಳಾಗಲೀ, ಉತ್ಸವ-ಆಯನಗಳಾಗಲೀ ಇಲ್ಲವೇ ಇರಲಿಲ್ಲ. ಈಗ ವಯೋಮಾನದಿಂದಾಗಿ ಅವರ ವಾದನಗಳು ಕಡಿಮೆಯಾಗುತ್ತಿರುವುದಾದರೂ ಈ ಜಿಲ್ಲೆಯನ್ನು ನಾಗಸ್ವರದ ನಕ್ಷೆಯಲ್ಲಿ ಗುರುತಿಸಿ ಕೊಟ್ಟವರೆಂದರೆ ನಾರಾಯಣ ಸ್ವಾಮಿ ಎಂಬುದರಲ್ಲಿ ಸಂದೇಹವಿಲ್ಲ.

ತಮಿಳ್ನಾಡಿನ ವಿದ್ವಾಂಸರಲ್ಲಿ ಅಭ್ಯಾಸಮಾಡಿ, ಮೈಸೂರು ಮಹಾರಾಜರಿಂದ ಪುರಸ್ಕೃತರಾಗಿ ುವವರು ನಾಗಸ್ವರ ಕೋಕಿಲ ನಾರಾಯಣ ಸ್ವಾಮಿ.

. ಕೃಷ್ಣ ಪುರಾಣಿಕ

ಕಾರ್ಕಳದಲ್ಲಿ 'ತಬಲಜೀ'ಯೆಂದೇ ಪರಿಚಿತರಾಗುವ ಕೃಷ್ಣ ಪುರಾಣಿಕರು, ಬಹುಕಾಲದಿಂದ ಿದ್ದುಗದ್ದಲವಿಲ್ಲದೆ ಸಂಗೀತ ಸೇವೆ ಮಾಡುತ್ತಿದ್ದಾರೆ. ಮೈಸೂರಿನ ಡಿ. ಶೇಷಪ್ಪನವರ ಶಿಷ್ಯರಾಗಿರುವ ುರಾಣಿಕರು, ಗಾಯನಕ್ಕೆ, ಹರಿಕೀರ್ತನೆಗಳಿಗೆ, ಭಜನಾ ಮೇಳಗಳಿಗೆ ತಬಲಾ ನುಡಿಸುವುದರಲ್ಲಿ ಿಸರಾಗಿದ್ದಾರೆ. ಅವರು 'ಕಲಾಕಾರರ ದರ್ಶಿಕೆ'ಯೊಂದನ್ನೂ ಪ್ರಕಟಿಸುವ ಶ್ಲಾಘನೀಯ ಕಾರ್ಯ ವನ್ನು ಮಾಡಿದ್ದಾರೆ.

ಕೆ. ಕೆ. ವ್ಯಾಸ

ಕೆ. ವ್ಯಾಸಕೃಷ್ಣ ಉಪಾಧ್ಯಾಯರನ್ನುಕೇಳಿ ಅರಿಯದವರು ತೀರ ವಿರಳ. ಸ್ಥಳೀಯ ಎಸ್. ವಿ. ಟಿ. ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದ ವ್ಯಾಸರು ಹಾಡುಗಾರಿಕೆ, ಪಿಟೀಲು, ಕೊಳಲು, ನೃತ್ಯ, ನಾಟಕ ಎಲ್ಲವನ್ನೂ ಬಲ್ಲವರು, ಎಲ್ಲರಿಗೂ ಬೇಕಾದವರು. ಕಾರ್ಕಳ ಅನಂತ ಶಯನ ವಠಾರದಲ್ಲಿ ಶ್ರೀ ಸರಸ್ವತಿ. ಸಂಗೀತ ಶಾಲೆಯನ್ನು ಅವರು ಬಹುಕಾಲದಿಂದ ನಡೆಸಿಕೊಂಡು ಬಂದಿದ್ದಾರೆ.

ಡಿ. ವಿಶ್ವನಾಥ ಘಾಟಕ್

ಕಾರ್ಕಳ ದುರ್ಗದ ಶ್ರೀ ವಿಶ್ವನಾಥ ಘಾಟಕರು ಪಿಟೀಲು ವಾದಕರು. ಅವರಲ್ಲಿ ನೂರಾರು ಮಂದಿ ಶಿಷ್ಯ ವೃತ್ತಿಯನ್ನು ವಹಿಸಿ, ಸಂಗೀತಗಾರರಾಗಿ ಬೆಳಕಿಗೆ ಬಂದಿದ್ದಾರೆ.

ಎಂ. ಶ್ರೀನಾಥ ಮರಾಠೆ

ಗಾಯಕ ಶ್ರೀನಾಥ ಮರಾಠೆಯವರು ಮಾಳದವರು. ಕಾಂಚನದ ಸಂಗೀತ ಶಾಲೆಯಲ್ಲಿ ಅಭ್ಯಾಸ ಮಾಡಿದ ಮರಾಠೆಯವರು ಕಾಶಿಯಲ್ಲಿ ಶ್ರೀರಂಗಂ ಕಣ್ಣನ್ ಅವರಲ್ಲೂ ಸಾಧನೆಯನ್ನು ಮುಂದುವರಿಸಿ,ಬಹುಕಾಲ ಬೆಂಗಳೂರಲ್ಲಿ ಸಂಗೀತಪಾಠ ಹೇಳುತ್ತಿದ್ದವರು. ಮಂಗಳೂರಲ್ಲಿ ಆಕಾಶವಾಣಿ ಪ್ರಾರಂಭವಾದಾಗ ಅಲ್ಲಿ ಕಲಾವಿದರಾಗಿ ನಿಯುಕ್ತರಾದರು. ಮಧುರಕಂಠದ ಶ್ರೀನಾಥ ಮರಾಠೆ ಯವರು ಅಲ್ಲಲ್ಲಿ ಕಚೇರಿಗಳನ್ನು ನಡೆಯಿಸಿ ರಸಿಕರ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಕೆ. ಪ್ರಭಾಕರ ಉಪಾಧ್ಯಾಯ

ಕಾರ್ಕಳದ ಪ್ರಸಿದ್ಧ 'ಕಲ್ಮಠ' ಕುಟುಂಬದ ಕೆ. ಪ್ರಭಾಕರ ಉಪಾಧ್ಯಾಯರು ಇಂಜಿನಿಯರಿಂಗ್ ವೃತ್ತಿಯನ್ನು ತ್ಯಜಿಸಿ, ಸಂಗೀತವನ್ನೇ ಜೀವನಾಧಾರವಾಗಿ ವರಿಸಿದವರು. ಸುಪ್ರಸಿದ್ಧ ವೇಣುವಾದಕ ಎನ್. ರಮಣಿಯವರಲ್ಲಿ ಕೆಲಕಾಲ ಶಿಷ್ಯವೃತ್ತಿ ನಡೆಸಿ, ಮತ್ತೆ ಸ್ವಂತ ಸಾಧನೆಯಿಂದಲೇ ಕೊಳಲಿನಲ್ಲಿ ತನ್ನ ಹಿರಿತನವನ್ನು ಗಟ್ಟಿಮಾಡಿ ಕೊಂಡವರು. ನೂರಾರು ಸಭೆಗಳಲ್ಲಿ ಕೊಳಲನ್ನು ನುಡಿಸಿ, ಸಂಗೀತ ರಸಿಕ - ವಿಮರ್ಶಕರ ಶ್ಲಾಘನೆಯನ್ನು ಪಡೆದಿರುವ ಈ ತರುಣ ಪ್ರಕೃತ ಮೈಸೂರು ಆಕಾಶವಾಣಿಯ ಕಲಾಕಾರರಾಗಿದ್ದಾರೆ.

ಎಂ. ಎಸ್. ಗೋಪಾಲಕೃಷ್ಣ

ಮೂಡಬಿದಿರೆಯ ಎಂ. ಎಸ್. ಗೋಪಾಲಕೃಷ್ಣರು ಸ್ಯಾಕ್ಸೋಫೋನ್ ವಾದಕರಾಗಿ ಸುತ್ತ ಮುತ್ತಲೂ ಪರಿಚಿತರೂ ಪ್ರಸಿದ್ಧರೂ ಆಗಿದ್ದಾರೆ. ಮಂಗಳೂರು ಆಕಾಶವಾಣಿಯ ಮುಖೇನ ಇವರ ವಾದನವು ಪ್ರಸಾರವಾಗುತ್ತಿದೆ.

ಹೀಗೆ, ಭಿನ್ನತೆಯಲ್ಲಿ ಏಕತೆಯೆಂಬುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿರುವಂತೆಯ ಕಾರ್ಕಳದ ಸಾಮಾಜಿಕ ಜನಜೀವನದಲ್ಲೂ ಅದನ್ನು ಕಾಣಬಹುದಾಗಿದೆ. ಇಲ್ಲಿ ಆಗಿಹೋದ, ಈಗಲ ಪುಣ್ಯವಶಾತ್ ನಮ್ಮ ನಡುವೆ ಇರುವ, ಎಷ್ಟೋ ಮಂದಿ ರಾಜನೀತಿಜ್ಞರು, ಸಾಮಾಜಿಕ ಕಾರ್ಯ ಕರ್ತರು, ಕಲಾತಪಸ್ವಿಗಳು ತಮ್ಮ ವಿವಿಧ ವಿಧಾಯಕ ಕಾರ್ಯಕ್ರಮಗಳಿಂದಲೂ, ಶಿಲ್ಪ – ಸಂಗೀತಾ ಗಳಿಂದಲೂ ದೇಶದ ಭೂಪಟದಲ್ಲಿ ಈ ಸಣ್ಣ ತಾಲೂಕಿಗೆ ದೊಡ್ಡ ಸ್ಥಾನ–ಮಾನಗಳನ್ನು ಒದಗಿಸಿ ಧನ್ಯ ರಾಗಿದ್ದಾರೆ.

ಅರ್ಥ ವ್ಯವಸ್ಥೆ



ಎಸ್. ರವೀಂದ್ರ ಮಲ್ಲಿ, ಎಂ. ಎ.

ಶ್ರೀ ಭುವನೇಂದ್ರ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಉಪನ್ಯಾಸಕ - ಮುಖ್ಯಸ್ಥರಾಗಿ 1963 ರಲ್ಲಿ ನಿಯುಕ್ತರಾದ ಶ್ರೀ ಎಸ್. ರವೀಂದ್ರ ಮಲ್ಲಿಯವರು 1971 ರಿಂದ ರೀಡರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಸಂಬಂಧವಾದ ಹಲವಾರು ಗೋಷ್ಠಿ – ಕಮ್ಮಟಗಳಲ್ಲಿ ಭಾಗವಹಿಸಿರುವ ಶ್ರೀ ಮಲ್ಲಿಯವರು ಕಾಲೇಜಿನ ಎನ್. ಸಿ. ಸಿ. ಅಧಿಕಾರಿ (ಮೇಜರ್) ಯೂ ಆಗಿದ್ದಾರೆ. ಅವರು ಕಾಲೇಜಿನ 'ಯಕ್ಷಗಾನ ಕೇಂದ್ರ'ದ ಸ್ಥಾಪಕ ಅಧ್ಯಕ್ಷರೂ ಹೌದು.

ಅರ್ಥ ವ್ಯವಸ್ಥೆಯೆಂಬುದು ಜನಜೀವನದ ರಕ್ತನಾಳವಿದ್ದಂತೆ. ಕಾರ್ಕಳದಲ್ಲಿ ಕೃಷಿ, ಯಂತ್ರೋದ್ಯಮ, ಗುಡಿಕೈಗಾರಿಕೆ, ರಸ್ತೆ, ಸಾರಿಗೆಯೇ ಮೊದಲಾದ ಆರ್ಥಿಕ ಕ್ರಿಯೆಗಳು ಎಲ್ಲೆಲ್ಲಿ ಹೇಗೆ ಹೇಗೆ ನಡೆಯುತ್ತಿವೆ, ಎಂಬುದನ್ನು ಮುಂದಿನ ಲೇಖನ ಅಂಕೆ - ಆಧಾರಗಳಿಂದ ವಿವರಿಸುತ್ತದೆ.

ಅರ್ಥ ವ್ಯವಸ್ಥೆ

ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟದ ಸೆರಗಿನಲ್ಲಿ ಮುಖ್ಯವಾಗಿ ಮಲೆನಾಡಿನಲ್ಲಿ ಮೈ ಚಾಚಿರುವ ಕಾರ್ಕಳ ತಾಲೂಕು ಚಾರಿತ್ರಿಕ ಹಿನ್ನೆಲೆಯೊಂದಿಗೆ ಪ್ರಾಕೃತಿಕ ಸಂಪತ್ತನ್ನೂ ತನ್ನಲ್ಲಿ ಅಳವಡಿಸಿಕೊಂಡಿದೆ. ನೈಋತ್ಯದಲ್ಲಿ 54 ಕಿ. ಮೀ. ದೂರದಲ್ಲಿ ಸಮುದ್ರ ತೀರದ ದೊಡ್ಡನಗರವಾದ ಮಂಗಳೂರನ್ನು ಹಾಗೂ ವಾಯುವ್ಯದಲ್ಲಿ 40 ಕಿ. ಮೀ. ದೂರದಲ್ಲಿರುವ ಕರಾವಳಿಯ ಇನ್ನೊಂದು ಪಟ್ಟಣವಾದ ಉಡುಪಿಯನ್ನು ಸಮೃದ್ಧವಾದ ಮಲೆನಾಡಿನೊಡನೆ ಬೆಸೆಯುವ ಆಯಕಟ್ಟಿನಲ್ಲಿರುವ ಕಾರ್ಕಳವು ಸಮುದ್ರ ಮಟ್ಟದಿಂದ 241 ಅಡಿ ಎತ್ತರದಲ್ಲಿದೆ. ಮಲೆನಾಡಿನ ಮರೆಯಲ್ಲಿರುವುದರಿಂದ ಸಾಮಾಜಿಕವಾಗಿ ಆಧುನಿಕ ನಾಗರಿಕತೆಯ ಬಿರುಗಾಳಿಯಿಂದ ತತ್ತರಿಸದೆ, ಆರ್ಥಿಕವಾಗಿ ಔದ್ಯಮೀಕರಣದ ಸುಳಿಗೆ ಸಿಲುಕದೆ ನಿಸರ್ಗದತ್ತವಾದ ಕಾಡು, ಕಲ್ಲು, ನೆಲ, ಜಲಗಳಿಂದ ಜನರ ಜೀವನದ ಮೇಲೆ ಪ್ರಭಾವ ಬೀರುತ್ತಾ ಬಂದ ಶಾಂತ ಜೀವನದ ಸುಂದರ ಭೂ ಭಾಗವಿದು. ಕಾರ್ಕಳ ತಾಲೂಕು 2,55,773 ಜನಸಂಖ್ಯೆಯನ್ನು ಹೊಂದಿದ್ದು ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಐದನೆಯ ಸ್ಥಾನದಲ್ಲಿದೆ. ಮೂರು ಹೋಬಳಿಗಳು, 77 ಗ್ರಾಮಗಳು, 53 ಗ್ರಾಮ ಪಂಚಾಯತುಗಳು ಹಾಗೂ 2 ಪುರಸಭೆಗಳಿರುವ ಕಾರ್ಕಳದ ವಿಸ್ತೀರ್ಣ 4347.3 ಚದರ ಕಿ. ಮೀ. ಇದ್ದು ಜಿಲ್ಲೆಯಲ್ಲಿ ಮೂರನೆಯ ಸ್ಥಾನದಲ್ಲಿದೆ. ಸರಾಸರಿ 5742.8 ಮಿಲ್ಲಿ ಮೀಟರ್ ಮಳೆಯಾಗುವ ಕಾರ್ಕಳ ತಾಲೂಕು ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಅದರಿಂದಾಗಿಯೇ 'ಕಾರ್‌ಕಳ' – ಮಳೆಯ ಊರು – ಎಂಬ ಹೆಸರು ಬಂತೆಂದು ಕೆಲವರ ಅಭಿಪ್ರಾಯ. ತಾಲೂಕು ಕೇಂದ್ರವಾದ ಕಾರ್ಕಳಕ್ಕೆ ಪೂರಕವಾಗಿ ಮೂಡಬಿದ್ರಿ, ನಾರಾವಿ, ಬಜಗೋಳಿ, ಬೆಳ್ಮಣ್ಣು, ಬೈಲೂರು, ಅಜೆಕಾರು, ಹೆಬ್ರಿ, ಸೋಮೇಶ್ವರ ಮುಂತಾದ ಸಣ್ಣ ಪೇಟೆಗಳು ವಾಣಿಜ್ಯ ಹಾಗೂ ವ್ಯಾಪಾರದ ಕೇಂದ್ರಗಳಾಗಿದ್ದು ಸಾರಿಗೆ ಸಂಪರ್ಕದ ಮೂಲಕ ಕಾರ್ಕಳದ ಆರ್ಥಿಕ ಚಟುವಟಿಕೆಗಳನ್ನು ತೀವ್ರಗೊಳಿಸುತ್ತವೆ. ನಲ್ವತ್ತಾರು ವಾಣಿಜ್ಯ ಹಾಗೂ 9 ಇತರ ಬ್ಯಾಂಕುಗಳ ಶಾಖೆಯನ್ನು ಹೊಂದಿರುವ ತಾಲೂಕಿನ ರಸ್ತೆಯ ಉದ್ದ 972 ಕಿ. ಮೀ. ಗಳು. ಇದು ಆರ್ಥಿಕ ಜಾಲವನ್ನು ಪಸರಿಸಲು ಸಾಕಷ್ಟು ಸಹಕಾರಿಯಾಗಿದೆ. ಇಂದು ಹತ್ತಕ್ಕಿಂತಲೂ ಹೆಚ್ಚು ಎಣ್ಣೆ ಮಿಲ್ಲುಗಳು ಮತ್ತು ಮರದ ಮಿಲ್ಲುಗಳು ಹನ್ನೊಂದು ದೊಡ್ಡ ಹಾಗೂ. 290 ಸಣ್ಣ ಅಕ್ಕಿಯ ಮಿಲ್ಲುಗಳು ಅಲ್ಲದೆ ಕೆಲವು ದೊಡ್ಡ ಕಾರ್ಖಾನೆಗಳಿರುವ ಕಾರ್ಕಳಕ್ಕೆ, ಆರ್ಥಿಕ ಚಟುವಟಿಕೆಗಳ ತಾಯಿಬೇರಾದ ವಿದ್ಯುಚ್ಛಕ್ತಿಯು 1941ರಲ್ಲಿ ಮದ್ರಾಸಿನ ಮೇಕೌಲೀ ಇಲೆಕ್ಟ್ರಿಕಲ್ ಕಂಪೆನಿಯವರ ಜನರೇಟರಿನ ಮೂಲಕ ಪ್ರಥಮವಾಗಿ ಪ್ರವೇಶಿಸಿತು. ಇದರಿಂದ ಸಂಜೆ ಗಂಟೆ ಆರರಿಂದ ರಾತ್ರಿ 12–00 ಗಂಟೆಯ ವರೆಗೆ ದಿನಕ್ಕೆ ಆರು ಗಂಟೆಗಳ ಕಾಲ ವಿದ್ಯುಚ್ಛಕ್ತಿ ಪೂರೈಕೆಯಾಗುತ್ತಿತ್ತು. 1949–50ರಲ್ಲಿ ಜೋಗಿನ ವಿದ್ಯುತ್ ಹರಿಯಲಾರಂಭಿಸಿದಂದಿನಿಂದ ಕಾರ್ಕಳದ ವಾಣಿಜ್ಯ ವ್ಯವಹಾರಗಳು ಚುರುಕಾದವು. 1916ರಲ್ಲಿ ಉಡುಪಿಯಿಂದ ಬೇರ್ಪಟ್ಟು ಕಾರ್ಕಳವು ಪ್ರತ್ಯೇಕ ತಾಲೂಕಾಗಿ ರೂಪುಗೊಂಡಿತು. ಇದಕ್ಕೆ ಶ್ರಮಿಸಿದವರಲ್ಲಿ ದಿ। ಶ್ರೀ. ಎಸ್. ಎಲ್. ಮಥಾಯಿಸ್ ಮತ್ತು ದಿ। ಶ್ರೀ ಕುಕ್ಕುಂದೂರು ಅನಂತ ಪದ್ಮನಾಭ ಕಾಮತರು ಪ್ರಮುಖರು.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಭಾಗದಂತೆ ಕಾರ್ಕಳದ ಜನರು ಕೂಡಾ ಕಷ್ಟಜೀವಿಗಳು, ಸಾಹಸಿಗಳು ಹಾಗೂ ವ್ಯಾಪಾರಿ ಮನೋಧರ್ಮದವರು. ಬಡತನದಲ್ಲಿ ಬಳಲುತ್ತಿದ್ದ ಎಷ್ಟೋ ಜನರು ಈ ಭಾಗದಿಂದ ಬೊಂಬಾಯಿಗೆ, ಮದ್ರಾಸಿಗೆ, ಬೆಂಗಳೂರಿಗೆ ಹೋಗಿ ಅಲ್ಲಿ ಮುಖ್ಯವಾಗಿ ಹೋಟೆಲು ಉದ್ಯಮವನ್ನು ಸ್ಥಾಪಿಸಿ ಸ್ವಪ್ರಯತ್ನದಿಂದ ಮೇಲೆದ್ದವರು. ಇದಲ್ಲದೆ ದೇಶಾದ್ಯಂತ ಇತರ ಉದ್ಯಮಗಳನ್ನು ಸ್ಥಾಪಿಸಿದ

ವರ ಮತ್ತು ವಿದ್ಯಾರ್ಜನೆ ಮಾಡಿ ಉದ್ಯೋಗದಲ್ಲಿರುವವರ ಸಂಖ್ಯೆಯೂ ಕಡಿಮೆಯೇನಲ್ಲ. ಜಿಲ್ಲೆಯ ದೇವಸ್ಥಾನ, ಗುಡಿ, ಗೋಪುರಗಳ ಜೀರ್ಣೋದ್ಧಾರಕ್ಕೆ ಸಂಪತ್ತಿನ ಆಧಾರಸ್ತಂಭವಾಗಿ ನಿಂತವರೂ ಇವರೇ. ಇತ್ತೀಚೆಗೆ ಸಾಗರದಾಚೆಯ ಮಧ್ಯ ಪೂರ್ವ ದೇಶಗಳಲ್ಲಿಯೂ ಇಲ್ಲಿಯ ಜನರ ವಿಜಯಧ್ವಜ ಹಾರುವಂತಾಗಿದೆ. ಇದರಿಂದಾಗಿ ಜಿಲ್ಲೆಯ ಜನಸಂಖ್ಯಾ ಸಮಸ್ಯೆಯು ಸ್ವಲ್ಪಮಟ್ಟಿಗೆ ನಿಯಂತ್ರಿಸಲ್ಪಟ್ಟಿದೆ. ಜನಸಂಖ್ಯಾ ಗಣತಿಯಲ್ಲಿ ಈ ಜಿಲ್ಲೆಯಲ್ಲಿ ಮಾತ್ರ ಪುರುಷರಿಗಿಂತ ಮಹಿಳೆಯರು ಅಧಿಕವಾಗಿರಲು ಕಾರಣವೂ ಇದುವೆ. ಸಾಮಾಜಿಕ ರಚನೆಯ ಏರುಪೇರು ಕೂಡಾ ಇದರ ಪರಿಣಾಮವೇ. ಈ ಜಿಲ್ಲೆಯಿಂದ ಹೊರಟವರಲ್ಲಿ ಹೆಚ್ಚಿನವರು ಸಾಮಾಜಿಕ ಸ್ಥಾನಮಾನಗಳಿಲ್ಲದ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳು. ಇಂದು ಈ ವರ್ಗಗಳು ಶ್ರೀಮಂತವಾಗಿ ಬೆಳೆದು ಮೇಲಿನ ವರ್ಗಕ್ಕೆ ತೇರ್ಗಡೆ ಹೊಂದಿವೆ. ಸಾಂಪ್ರದಾಯಿಕ ಶ್ರೀಮಂತ ಕುಟುಂಬಗಳು, ಭೂಮಸೂದೆಯೇ ಮೊದಲಾದ ರಾಷ್ಟ್ರೀಯ ಯೋಜನೆಗಳ ಕಾರಣದಿಂದ ತಮ್ಮ ಸ್ವರೂಪವನ್ನು ಬದಲಾಯಿಸಬೇಕಾಗಿದೆ. ಒಂದು ತರದ ಸಾಮಾಜಿಕ ಕ್ರಾಂತಿಯು ಆರ್ಥಿಕ ರಚನೆಯ ಮೇಲೆ ಪರಿಣಾಮ ಬೀರಿದ ಈ ಊರು ಒಂದು ಸಂಕ್ರಾಂತಿ ಘಟ್ಟದಲ್ಲಿದೆ. ರಸ್ತೆಯುದ್ದಕ್ಕೂ ಎದ್ದು ಕಾಣುತ್ತಿರುವ ನವೀನ ವಿನ್ಯಾಸದ ಕಟ್ಟಡಗಳ ರಚನೆಗೆ ಹೊರ ರಾಜ್ಯದಿಂದ ಹಾಗೂ ಹೊರ ದೇಶಗಳಿಂದ ಹಣವು ಸುರಿಯುತ್ತಿದ್ದು ಇಲ್ಲೊಂದು ಕೃತ ಆರ್ಥಿಕ ಸಂಪನ್ನತೆಯು ಕಂಡು ಬರುತ್ತಿದೆ. ಆದರೂ ಇದೆಲ್ಲವೂ ಇಲ್ಲಿಯ ಜನರ ಉದ್ಯಮ ಸಾಹಸದ ಮತ್ತು ಕಷ್ಟಜೀವನದ ಫಲವಾಗಿ ಉಂಟಾದ ಆರ್ಥಿಕ ಪರಿವರ್ತನೆಗೆ ದ್ಯೋತಕಗಳು.

ಪುರಸಭೆ : ಅಲ್ಲಿಯವರೆಗೂ ಪಂಚಾಯತು ಆಗಿದ್ದ ಕಾರ್ಕಳದ ಪುರಸಭೆಯು 1973ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಅದರ ಜನಸಂಖ್ಯೆ 1981ರ ಗಣತಿಯ ಪ್ರಕಾರ 20,713. ಇವರಲ್ಲಿ 14,619 ಜನರು ಅಕ್ಷರ ಜ್ಞಾನ ಉಳ್ಳವರು. ಪುರಸಭೆಯ ವಿಸ್ತಾರ 8.75 ಚ. ಮೈಲು. ಇದರೊಳಗೆ 5089 ಮನೆಗಳಿದ್ದು 1984–85ರಲ್ಲಿ ಸಂಗ್ರಹವಾದ ಮನೆ ತೆರಿಗೆಯ ಮೊತ್ತ ರೂಪಾಯಿ. 2,98,734–69. 25.00 ಕಿ.ಮೀ. ಉದ್ದದ ರಸ್ತೆಯು ಪುರಸಭೆಯ ವ್ಯಾಪ್ತಿಯೊಳಗಿದ್ದು ಇದರಲ್ಲಿ 19 ಕಿ.ಮೀ. ಡಾಮರ್ ರಸ್ತೆಯಾಗಿದೆ. ನಗರದ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಕುಡಿಯುವ ನೀರನ್ನು ರಾಮಸಮುದ್ರದಿಂದ ಪೂರೈಕೆ ಮಾಡಲಾಗಿದೆ. ಬಾವಿ ನೀರಿನ ಕೊರತೆಯಿರುವ ಕಾರ್ಕಳದ ಪೇಟೆಯಲ್ಲಿ ಸಾರ್ವಜನಿಕ ನೀರಿನ ನಳ್ಳಿಗಳಲ್ಲದೆ, ಇದರ ಪ್ರಯೋಜನವನ್ನು ಪಡೆಯುತ್ತಿರುವ ಮನೆಗಳ ಸಂಖ್ಯೆ 589. ಶುದ್ಧೀಕರಣದ ಕ್ರಿಯೆಯು ಪೂರ್ಣವಾದಾಗ ಪುರಜನರಿಗೆ ಮನೆಬಾಗಿಲಲ್ಲಿ ದೊರೆಯುವ ಕುಡಿಯುವ ನೀರಿನ ಸೌಲಭ್ಯವು ದೊಡ್ಡ ವರದಾನವಾಗಲಿದೆ. ಪುರಸಭೆಯ ಮಿತಿಯೊಳಗೆ 7 ವಾಣಿಜ್ಯ ಬ್ಯಾಂಕಿನ ಮತ್ತು 4 ಇತರ ಬ್ಯಾಂಕಿನ ಶಾಖೆಗಳು, 6 ಎಣ್ಣೆಯ ಮಿಲ್ಲುಗಳು, 4 ಅಕ್ಕಿಯ ಮಿಲ್ಲುಗಳು ಮತ್ತು 5 ಮರದ ಮಿಲ್ಲುಗಳಿವೆ. ಹಾಗೆಯೇ ಎರಡು ಬೀಡಿ ತಯಾರಿಸುವ ಸಂಸ್ಥೆಗಳು, ಎರಡು ನಶ್ಯ ತಯಾರಿಸುವ ಸಂಸ್ಥೆಗಳು, ಒಂದು ಪ್ಲಾಸ್ಟಿಕ್ ಕಾರ್ಖಾನೆ ಮತ್ತು ಒಂದು ಕಬ್ಬಿಣದ ಪೀಠೋಪಕರಣಗಳನ್ನು ತಯಾರಿಸುವ ಕಾರ್ಖಾನೆಯಿದೆ.

ಕರಿಕಲ್ಲು : ಕಾರ್ಕಳದ ಮಣ್ಣು ಮಾತ್ರವಲ್ಲದೆ ಕಲ್ಲು ಕಡಾ ಫಲವತ್ತಾಗಿದೆ. 'ಕರಿಕಲ್ಲು' ಎಂಬುದರಿಂದಲೇ ಕಾರ್ಕಳ ಎಂಬ ಹೆಸರು ಬಂದಿತೆಂಬ ಸಾಮಾನ್ಯ ಹೇಳಿಕೆಗೂ ಇದೇ ಕಾರಣ. ಇಲ್ಲಿ ಹೇರಳವಾಗಿ ದೊರೆಯುವ ಈ ಕಲ್ಲು ಇಂದು ಜಿಲ್ಲೆಯಾದ್ಯಂತ ಸಂಚರಿಸುವ ವಾಣಿಜ್ಯ ವಸ್ತುವಾಗಿದೆ. ಸಾವಿರಾರು ಕುಟುಂಬಗಳಿಗೆ (ಮುಖ್ಯವಾಗಿ ತಮಿಳರು) ಜೀವನಾಧಾರದ ಕಸುಬು ಕಲ್ಲು ಕಡಿಯುವುದು. ಏಕಶಿಲೆಯ ಬಾಹುಬಲಿ, ಹಲವು ಜೋಡಣೆಗಳ ಅವಲೋಕಿತೇಶ್ವರನಂತಹ ನೀಳ ಮೂರ್ತಿಗಳಿಂದ ಹಿಡಿದು ಕಟ್ಟಡಗಳ ಗೋಡೆಗಳ ತುಂಡು ಕಲ್ಲಿನವರೆಗೆ ಯಾವ ವಿನ್ಯಾಸಕ್ಕೂ, ನಾಜೂಕಿನ ಶಿಲ್ಪಕಲೆಗೂ ಒಗ್ಗುವಂತಹ ವಿಶಿಷ್ಟ ಕಲ್ಲು ಕಾರ್ಕಳದಲ್ಲಿ ಸಿಗುತ್ತದೆ. ತಿಳಿನೀಲಿ ಬಣ್ಣವನ್ನು ಹೊಂದಿರುವ ಈ ಕಲ್ಲಿನ ಬಳಕೆಯಿಂದ ಕಟ್ಟೋಣದ ಉಷ್ಣತೆಯು ನಿಯಂತ್ರಿಸಲ್ಪಡುವುದು ಹಾಗೂ ಸಿಮೆಂಟಿನ ಉಪಯೋಗವನ್ನು ಮಿತಗೊಳಿಸುವುದು. ದೈತ್ಯಾಕಾರದಲ್ಲಿ ಎದ್ದು ನಿಂತಿರುವ ಬಂಡೆಕಲ್ಲಿನ ಶ್ರೇಣಿಗಳು ಕಾರ್ಕಳದ ಬಹುಭಾಗದಲ್ಲಿ ಕಂಡು ಬರುತ್ತಿವೆ. ಹಲವು ಶತಮಾನಗಳವರೆಗೆ ಕಡಿದರೂ ಮುಗಿಯದಷ್ಟು ದೊಡ್ಡ

ಬಂಡೆಕಲ್ಲಿನ ಗುಡ್ಡಗಳು ನಾವು ಕಾಣುವ ಸಾಮಾನ್ಯ ದೃಶ್ಯ. ಗೋಡೆ ಪಂಚಾಂಗಗಳಿಗಲ್ಲದೆ, ಚಪ್ಪರದ ಕಂಬ, ಬೇಲಿಯ ಗೂಟ, ಹಾಸುಕಲ್ಲು, ಕಡೆಯುವ ಕಲ್ಲುಗಳಾಗಿಯೂ ಇದರ ಉಪಯೋಗ ಧಾರಾಳವಾಗಿ ಆಗುತ್ತಿದೆ. ಕ್ರಶರ್‌ಗಳ ಮೂಲಕ ಬೇರೆ ಬೇರೆ ಅಳತೆಯ ಜಲ್ಲಿಕಲ್ಲುಗಳನ್ನು ಹದ ಗೊಳಿಸಿ ಬೃಹದ್ಗಾತ್ರದ ಆರ್ಥಿಕ ಚಟುವಟಿಕೆಯನ್ನು ಕುದುರಿಸುವಲ್ಲಿ ಪಾದೆಕಲ್ಲುಗಳ ಪಾತ್ರ ಮಹತ್ವ ವಾದುದು. ಕಲ್ಲಿನ ಕುಡ್ವರು, ಪಾದೆ ಚಂದಯ್ಯ ಶೆಟ್ರು ಎಂಬಿತ್ಯಾದಿಯಾಗಿ ಕೆಲವರ ಕಸುಬೇ ಅವರ ಹೆಸರಿನೊಂದಿಗೆ ಸೇರಿಕೊಳ್ಳುವಷ್ಟು ಕಲ್ಲಿನ ವ್ಯಾಪಾರ ಜನಪ್ರಿಯವಾಗಿದೆ. ಶ್ರೀಯುತ ಗಾಸ್ಪರ್ ಲೂವಿಸ್, ಜೀವನದಾಸ್ ಅಡ್ಯಂತಾಯ, ಕುಕ್ಕುಂದೂರು ಕಿಣಿಯವರು ಕಲ್ಲಿನ ವ್ಯಾಪಾರದಲ್ಲಿ ಹೆಸರಿಸ ಬೇಕಾದ ಇತರ ವ್ಯಕ್ತಿಗಳು. ಸಿನಿಮಾ ಖ್ಯಾತಿಯ ಬೈಲೂರಿನ ಕೋಟಿ-ಚೆನ್ನಯ ಪಾದೆಯೂ ಇದೇ ವರ್ಗಕ್ಕೆ ಸೇರಿದೆ. ಅದರ ಬುಡದಲ್ಲಿಯೂ ಕ್ರಶರ್ ಒಂದು ಕೆಲಸವನ್ನು ಪ್ರಾರಂಭಿಸಿದ್ದು ಕೆಲವು ವರ್ಷ ಗಳಲ್ಲಿ ಈ ಪಾದೆಯೂ ಮಾಯವಾಗುವ ಸಾಧ್ಯತೆಯಿದೆ. ಜಿಲ್ಲೆಯ ಬೇರೆಡೆಯಲ್ಲಿ ಪಾದೆಕಲ್ಲು ಸಿಕ್ಕು ವುದಾದರೂ ಅವಾವುದಕ್ಕೂ ಕಾರ್ಕಳದ ಕಲ್ಲಿನ ಗುಣಮಟ್ಟವಿಲ್ಲದಿರುವುದು ಪ್ರಕೃತಿಯ ವೈಚಿತ್ರ್ಯವೂ ವೈಶಿಷ್ಟ್ಯವೂ ಆಗಿದೆ.

ಇನ್ನೊಂದು ವಿಶೇಷ ಜಾತಿಯ ಕಲ್ಲುಗಳು – ನೆಲ್ಲಿಕಾರು ಶಿಲೆಗಳು. ಕಡುಕಪ್ಪು ಬಣ್ಣದ ಈ ಶಿಲೆಗಳು ಇತರ ಪಾದೆಕಲ್ಲಿಗಿಂತ ದೃಢವಾಗಿದ್ದು ಕೆತ್ತನೆಯ ಕೆಲಸದಲ್ಲಿ ಹೆಚ್ಚಿನ ಕಲೆಗಾರಿಕೆಯನ್ನು ಅಳವಡಿಸಲು ಸಾಧ್ಯವಿದೆ. ಹೆಚ್ಚು ಹೊಳಪು ಮತ್ತು ನುಣುಪುಗಳನ್ನು ಹೊಂದಬಲ್ಲ ಈ ಕಲ್ಲುಗಳಿಂದಲೇ ಶ್ರೀ ರಂಜಾಳ ಗೋಪಾಲ ಶೆಣೈಯವರು ಕೆತ್ತಿದ ಗರುಡ ಮಂಟಪದ ನಾಲ್ಕು ಕಂಬಗಳು ವೆಂಕಟರಮಣ ದೇವಸ್ಥಾನದ ಮುಂಭಾಗದಲ್ಲಿ ಭಕ್ತರ ಕಣ್ಮನಗಳನ್ನು ತಣಿಸುತ್ತಿವೆ; ಪ್ರೇಕ್ಷಕರ ಆಸಕ್ತಿಗಳನ್ನು ಕೆರಳಿಸುತ್ತಿವೆ.

ಕೃಷಿ: ಕೃಷಿ ಪ್ರಧಾನವಾದ ಕಾರ್ಕಳ ತಾಲೂಕಿನಲ್ಲಿ ಬತ್ತವೇ ಪ್ರಮುಖ ಬೆಳೆಯಾಗಿದೆ. ಈ ತಾಲೂಕಿನಲ್ಲಿ ಭೌಗೋಳಿಕವಾಗಿ 1,36,991 ಹೆಕ್ಟೇರು ಭೂಮಿಯಿದ್ದು ಅದರಲ್ಲಿ 36,735 ಹೆಕ್ಟೇರಿನಲ್ಲಿ ವಿವಿಧ ಬೆಳೆಗಳನ್ನು ಬೆಳೆಸುತ್ತಾರೆ – ಎಂದರೆ ಒಟ್ಟು ಭೂಮಿಯ 26.8%ದಲ್ಲಿ ತಾಲೂಕಿನ 26,954 ಹೆಕ್ಟೇರಿನಲ್ಲಿ ಬತ್ತದ ಬೆಳೆಯನ್ನೂ 2935 ಹೆಕ್ಟೇರಿನಲ್ಲಿ ಗೇರು ಮರಗಳನ್ನೂ, 1430 ಹೆಕ್ಟೇರಿನಲ್ಲಿ ತೆಂಗಿನ ಮರಗಳನ್ನೂ, 1455 ಹೆಕ್ಟೇರುಗಳಲ್ಲಿ ವಿವಿಧ ದ್ವಿದಳ ಧಾನ್ಯಗಳನ್ನೂ, 986 ಹೆಕ್ಟೇರಿನಲ್ಲಿ ಕಂಗಿನ ತೋಟಗಳನ್ನೂ ಬೆಳೆಸುತ್ತಾರೆ. ಒಟ್ಟಿನಲ್ಲಿ 38,603 ಹೆಕ್ಟೇರಿನಲ್ಲಿ ಆಹಾರದ ಬೆಳೆಗಳನ್ನೂ, 2320 ಹೆಕ್ಟೇರಿನಲ್ಲಿ ಆಹಾರೇತರ ಬೆಳೆಗಳನ್ನೂ ಬೆಳೆಸುತ್ತಾರೆ. ಸಾಮಾನ್ಯವಾಗಿ ಕಾರ್ಕಳದ ಮಣ್ಣು ತೆಂಗಿನಮರಗಳಿಗೆ ಹೆಚ್ಚು ಅನುಕೂಲವಾಗಿದೆ. ಕಾರ್ಕಳದ ಒಂದು ಪಾರ್ಶ್ವದಲ್ಲಿರುವ ದುರ್ಗಮಾಳ ಗಳೆಂಬ ಗ್ರಾಮಗಳಲ್ಲಿ ತೆಂಗುಕಂಗುಗಳು ಸಮೃದ್ಧವಾಗಿ ಬೆಳೆಯುತ್ತವೆ. ಮಾಳದ ತೆಂಗಿನ ಕಾಯಿಗಳಿಗೆ ವಿಶಿಷ್ಟ ಗುಣವಿದ್ದು ಎಣ್ಣೆ ಮಿಲ್ಲಿನವರಿಂದ ಈ ಕಾಯಿ, ಕೊಬ್ಬರಿಗಳಿಗೆ ವಿಶೇಷ ಬೇಡಿಕೆಯಿದೆ. ಕುದುರೆ ಮುಖದ ಪರ್ವತ ಶ್ರೇಣಿಯಿಂದ ದೊರೆಯುವ ನೆರಳು ಹಾಗೂ ಸದಾ ತೇವ ತುಂಬಿ ತಂಪಾಗಿರುವ ಹವಾಮಾನ ದುರ್ಗ ಮಾಳಗಳನ್ನು ಕಂಗಿನತೋಟಗಳಿಗಾಗಿ ಪ್ರಕೃತಿಯು ವಿಶೇಷವಾಗಿ ಸಜ್ಜುಗೊಳಿಸಿದೆ. ಇದಲ್ಲದೆ, ಹಲಸು, ಮಾವು, ಅನನಾಸುಗಳು ಈ ತಾಲೂಕಿನ ಇತರ ಮುಖ್ಯ ಬೆಳೆಗಳು.

ಜಿಲ್ಲೆಯ ಇತರ ಭಾಗದಂತೆ, ಕಾರ್ಕಳದಲ್ಲಿ ಕೂಡಾ ಸಣ್ಣ ಹಿಡುವಳಿದಾರರೇ ಗಣನೀಯ ಸಂಖ್ಯೆಯಲ್ಲಿದ್ದಾರೆ. ಒಂದು ಹೆಕ್ಟೇರಿಗಿಂತ ಕಡಿಮೆ ಭೂಹಿಡುವಳಿಯು 5747 ಚ.ಕಿ.ಮೀ. ಆಗಿದ್ದರೆ, ಒಂದರಿಂದ ಎರಡು ಹೆಕ್ಟೇರು ಹಿಡುವಳಿಯು 5370 ಚ.ಕಿ.ಮೀ.ನಲ್ಲಿ, 2ರಿಂದ 5 ಹೆಕ್ಟೇರು 5959 ಚ.ಕಿ.ಮೀ.ನಲ್ಲಿ, ಮತ್ತು 5ರಿಂದ 10ಹೆಕ್ಟೇರು ಹಿಡುವಳಿಯು 1333 ಚ.ಕಿ.ಮೀ.ನಲ್ಲಿದೆ. 10ರಿಂದ ಹೆಚ್ಚು ಹೆಕ್ಟೇರಿನ ಹಿಡುವಳಿಯು ಬರೇ 363 ಚ.ಕಿ.ಮೀ. ಆಗಿದೆ. ತಾಲೂಕಿನಲ್ಲಿ 1983 - 84ರಲ್ಲಿ 11,628.30 ಹೆಕ್ಟೇರುಗಳಲ್ಲಿ ಬತ್ತದ ಉತ್ತಮ ತಳಿ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ. ಸಾಣೂರಿನಲ್ಲಿ ಬತ್ತದ ಬೀಜೋತ್ಪಾದನಾಕೇಂದ್ರವೂ, ಕುಕ್ಕುಂದೂರು, ಬಿಗಾನಗಳಲ್ಲಿ ಕೃಷಿ ಶಿಕ್ಷಣ ಕೇಂದ್ರಗಳೂ

ಇದ್ದು ಪ್ರಗತಿಪರ ರೈತರಿಗೆ ಸೂಕ್ತ ಸಲಹೆ ಸಹಕಾರಗಳ ಸೌಲಭ್ಯವನ್ನು ಒದಗಿಸುತ್ತವೆ. ತಾಲೂಕಿನಲ್ಲಿ ಹಲವು ಮಂದಿ ಪ್ರಗತಿಪರ ರೈತರಿದ್ದು ಅವರಲ್ಲಿ ದುರ್ಗದ ಕೃಷ್ಣಭಟ್ ಹಾಗೂ ರಾಮಭಟ್, ಬಜಗೋಳಿಯ ಗುಣಪಾಲಜೈನ್, ಮಾಳದ ಮುನಿರಾಜಬಲ್ಲಾಳ್, ಶಿರ್ತಾಡಿಯ ಧರ್ಮಸಾಮ್ರಾಜ್ಯ, ಮಿಜಾರಿನ ಆನಂದ ಆಳ್ವ, ಮೂಡುಬಿದ್ರಿಯ ಕಾಂತ ರೈ, ಮುಂಡ್ಕೂರಿನ ಜಗದೀಶಚಂದ್ರ ಹೆಗ್ಡೆ, ಕುಕ್ಕುಂದೂರಿನ ಪಾಂಡುರಂಗ ಕಿಣಿ, ಬೇಳಿಂಜೆಯ ದಿ। ಮೋನಪ್ಪ ಹೆಗ್ಡೆ, ಕಬ್ಬಿನಾಲೆಯ ಕರುಣಾಕರ ಹೆಬ್ಬಾರ್ ಮೊದಲಾದವರು ಆಧುನಿಕ ಕೃಷಿ ಪ್ರಯೋಗಗಳಿಂದ ಸಾಕಷ್ಟು ಸಿದ್ಧಿಯನ್ನು ಪಡೆದಿದ್ದಾರೆ.

ಕಾರ್ಕಳದ ತೋಟಗಾರಿಕಾ ಇಲಾಖೆಯ ವತಿಯಿಂದ ನಡೆಸಲ್ಪಡುವ ರಾಮಸಮುದ್ರದ ಮತ್ತು ಕುಕ್ಕುಂದೂರಿನ ತೋಟಗಳಲ್ಲಿ ಕಾಡಿನ ಬೆಳೆಗಳು ಮತ್ತು ಹೊಲದ ಬೆಳೆಗಳನ್ನು ಬಿಟ್ಟು ಉಳಿದೆಲ್ಲಾ ತೋಟಗಾರಿಕಾ ಬೆಳೆಗಳನ್ನು ಬೆಳೆಸುತ್ತಾರೆ. ಜಿಲ್ಲೆಯಂತೆ ಕಾರ್ಕಳದಲ್ಲಿಯೂ ಅಣೆಕಟ್ಟಿನ ನೀರಾವರಿ ಸೌಕರ್ಯವಿಲ್ಲ. ಕೆರೆ, ಬಾವಿಗಳೇ ಮುಖ್ಯ ನೀರಿನ ಮೂಲಗಳು. ನೀರಾವರಿಗೆ ಉಪಯೋಗವಾಗುವ ಕೆರೆಗಳು 39 ಮತ್ತು ಬಾವಿಗಳು 3682.

ರಾಮಸಮುದ್ರ: ಪ್ರಕೃತಿದತ್ತವಾಗಿ ಬಂದಿರುವ ರಾಮಸಮುದ್ರವು ಕಾರ್ಕಳದ ಆರ್ಥಿಕ ಜೀವನದ ಆಸರೆಯೂ ಆಗಿದೆ. ವಿಶಾಲವಾದ ತೀರವನ್ನು ಹೊಂದಿರುವ ಇದರ ಸುತ್ತಮುತ್ತಲೂ ಇರುವ ಹೊಲ ತೋಟಗಳಿಗೆ ಇದು ನೀರಾಶ್ರಯವನ್ನು ನೀಡುವುದು. ಇದರ ಒಂದು ಬದಿಯಲ್ಲಿ ಮೀನುಗಾರಿಕೆ ನಡೆಯುತ್ತಿದ್ದು ದುರ್ಲಭವಾದ ಸಿಹಿನೀರಿನ ಮೀನನ್ನು ಬೆಳೆಸಿ ಸಾಕುತ್ತಾರೆ. ಇನ್ನೊಂದು ಕಡೆಯಲ್ಲಿ ಕೊಳೆಬಟ್ಟೆಗಳನ್ನು ಒಗೆಯುವ ವ್ಯವಸ್ಥೆಯಿದೆ. ನಗರದ ಕುಡಿಯುವ ನೀರಿನ ಪೂರೈಕೆ, ತೋಟಗಾರಿಕೆಯ ಬೆಳೆಗಳಿಗೆ ನೀರಿನ ಸೌಲಭ್ಯ, ನಾವಿಕ ಸೈನಿಕರು ದೋಣಿ ನಡೆಸುವ ತರಬೇತಿ, ಈಜುಗಾರರ ವ್ಯಾಯಾಮಧಾಮ, ಅಲ್ಲದೆ ಸಂದರ್ಶಕರಿಗೆ ರಮಣೀಯ ದೃಶ್ಯಗಳನ್ನು ಒದಗಿಸುವ ಬಹುಮುಖ ಯೋಜನೆ ರಾಮಸಮುದ್ರ.

ಕಾಡು ಮತ್ತು ಕಾಡುತ್ಪತ್ತಿ: ಕಾರ್ಕಳದಲ್ಲಿ ಕಂಗು ತೆಂಗುಗಳಿಗಿಂತಲೂ ದಟ್ಟವಾಗಿ ಬೆಳೆಯುವ ಇನ್ನೊಂದು ಬೆಳೆಯೆಂದರೆ ಕಾಡು. ಪ್ರಕೃತಿದತ್ತವಾಗಿ ಬಂದಿರುವ ಈ ಕಾಡು 33,503 ಹೆಕ್ಟೇರುಗಳಲ್ಲಿ ಪಸರಿಸಿದೆ. ಇದು ತಾಲೂಕಿನ ಹೆಚ್ಚು ಕಡಿಮೆ 25% ಭೂಭಾಗವಾಗಿದೆ. ಮಳೆಬೆಳೆಗೂ ತಂಪು ಸೊಂಪಿಗೂ ಕಾರಣವಾಗಿರುವ ಈ ಕಾಡು ಕಾದ ಕಬ್ಬಿಣದಂತಿರುವ ಇಲ್ಲಿನ ಪಾದೆಕಲ್ಲಿನ ಶಾಖವನ್ನು ಸಮತೋಲನದಲ್ಲಿಡುವ ನಿಸರ್ಗದ ವಿಚಿತ್ರ ಸೃಷ್ಟಿ. ಕಾಡುತ್ಪತ್ತಿಗಳಾದ ರಾಮಪತ್ರೆ, ಎಸಳುಹುಳಿ, ಕರಿಮೆಣಸು, ಸೀಗೆಕಾಯಿ, ನೊರೆಕಾಯಿ, ದಾಲಚೀನಿ, ಶುಂಠಿ, ಅರಸಿನ, ಕಾಸರಕನ ಬೀಜಗಳಿಗೆ ಬಹುವಾದ ಬೇಡಿಕೆ ಕೆಲವು ಮದ್ದಿಗೆ, ಅಡುಗೆಗೆ, ಬಣ್ಣಕ್ಕೆ, ಸಾಬೂನು ಮತ್ತು ಅದರ ಉಪವಸ್ತುಗಳಿಗೆ, ಹಲ್ಲುಜ್ಜುವ ಪೇಸ್ಟಿಗೆ, ಪೋಲಿಶ್‌ಗೆ ಉಪಯೋಗವಾಗುವ ಈ ವಸ್ತುಗಳು ಕಾಡಿನಲ್ಲಿ ಬೆಳೆದು, ಅಲ್ಲೇ ನಶಿಸಿ ಹೋಗುವುದನ್ನು ತಡೆದು ಇವುಗಳನ್ನು ಗುಜರಾತ್, ಬೊಂಬಾಯಿ, ಮದ್ರಾಸು, ಆಂಧ್ರಪ್ರದೇಶಗಳಿಗೆ ಕಳುಹಿಸುವ ವ್ಯಾಪಾರಿಗಳಲ್ಲಿ ಪೆಬ್ರಿಯ ಲಕ್ಷ್ಮಣ ನಾಯಕರು ಅಗ್ರಗಣ್ಯರು. ಕಾರ್ಕಳದಲ್ಲಿ ಶ್ರೀ ಬಿ. ವಾಸುದೇವ ಶೆಣೈ, ಮಟ್ಟಿ ಮಂಜುನಾಥಪ್ರಭು ಮತ್ತು ಬೋಳ ರತ್ನಾಕರ ಕಾಮತರು ಕಾಡುತ್ಪತ್ತಿಯ ವ್ಯಾಪಾರದಲ್ಲಿ ಮುಂಚೂಣಿಯಲ್ಲಿರುವವರು. ಸಾಧಾರಣ 20,000ದಷ್ಟು ಗಿರಿಜನರು ಮತ್ತು ಬುಡಕಟ್ಟಿನ ಜನರು ಇರುವ ಕಾರ್ಕಳ ತಾಲೂಕಿಗೆ ಇದೊಂದು ಉದ್ಯೋಗದ ಬುಗ್ಗೆ ಹಾಗೂ ಆದಾಯದ ಚಿಲುಮೆ. ಕಾಡುತ್ಪತ್ತಿಯ ವ್ಯವಹಾರವು ಕಾರ್ಕಳದಲ್ಲಿಂದು ಲಕ್ಷಗಟ್ಟಲೆಯ ಗಾತ್ರದಲ್ಲಿರುವುದು ಮಾತ್ರವಲ್ಲದೆ. ಅದು ಬೆಳೆಯುತ್ತಿರುವುದೂ ಗಮನಿಸಬೇಕಾದ ಅಂಶ.

ಜೋಗಿಯ ಮರದಡಿಯಲ್ಲಿ ಮಳೆಗಾಲದ ಆರಂಭದಲ್ಲಿ ಸಿಕ್ಕುವ ಅಣಬೆಯ (ಲಾಮು) ರುಚಿಯನ್ನು ಉಣ್ಣುವವರು ಕಾರ್ಕಳದವರು ಮಾತ್ರವಲ್ಲ; ಮಂಗಳೂರು, ಉಡುಪಿ, ಬೆಂಗಳೂರು, ಬೊಂಬಾಯಿಯಲ್ಲಿರುವ ಅವರ ಇಷ್ಟಮಿತ್ರರೂ ಸಹ. ಇಲ್ಲಿ ವಿಪುಲವಾಗಿ ಸಿಗುವ ಇನ್ನೊಂದು ಖಾದ್ಯ ವಸ್ತುವಾದ ಹಲಸಿನಕಾಯಿ ಮತ್ತು ಹಣ್ಣಿನಿಂದ ತಯಾರಾಗುವ ವಿವಿಧ ವಸ್ತುಗಳಿಗೆ ಇಲ್ಲಿ

ಹಲವು ಮನೆಗಳು ಹೆಸರು ಪಡೆದಿವೆ. ಗುಡಿಕೈಗಾರಿಕೆಯ ಪ್ರಮಾಣದಲ್ಲಿ ತಯಾರಾಗುವ ಈ ಸಿದ್ಧ ವಸ್ತುಗಳು ಜಿಲ್ಲೆಗೆ ಮಾತ್ರವಲ್ಲದೆ ಹೊರಜಿಲ್ಲೆ ಹೊರ ರಾಜ್ಯಗಳಿಗೂ ಪ್ರಯಾಣಿಸುವುದು ಸರ್ವ ಸಾಮಾನ್ಯ. ಹಪ್ಪಳ, ಸಂಡಿಗೆ, ಕುಮಾಂದ್ರ, ಸೋಂಟೆ – ಎಂಬಿತ್ಯಾದಿಗಳು ಇಲ್ಲಿ ಮನೆ ಮಾತಾಗಿದೆ. ಕಣಿಲೆಯೆಂದು ಕರೆಯಲ್ಪಡುವ ಎಳೆಬಿದಿರಿನ ಚಿಗುರು ಕಾರ್ಕಳದ ಜನರು ಸ್ವಾದಿಸುವ ಇನ್ನೊಂದು ಕಾಡುತ್ಪತ್ತಿ.

ಕಾರ್ಕಳದ ಆರ್ಥಿಕ ಜೀವನದ ಮೇಲೆ ಮಹತ್ವದ ಪರಿಣಾಮ ಬೀರಿದ ಕಾಡುತ್ಪತ್ತಿಯೆಂದರೆ ಕಟ್ಟಿಗೆ ಮತ್ತು ಮರದ ಸಾಮಗ್ರಿಗಳು. ಕಾಡು ಕಡಿಮೆಯಾದ ಪರಿಣಾಮವಾಗಿ ಕಟ್ಟಿಗೆಯ ಬೆಲೆ ದುಬಾರಿಯಾಗಿ ಜನಸಾಮಾನ್ಯರ ಆರ್ಥಿಕತೆಯನ್ನು ಅಡಿಮೇಲು ಮಾಡಿದೆ. ಕಾಡುಗಳಲ್ಲಿ ಕಡಿದ ಮರದ ದಿಮ್ಮಿಗಳು ಮಿಲ್ಲನ್ನು ಸೇರಿ ಅಲ್ಲಿಂದ ರೈಲಿನ ಸ್ಲೀಪರ್‌ಗಳಾಗಿಯೋ, ಕಟ್ಟಡಗಳ ಮಾಡಿನ ರಚನೆಗಾಗಿಯೋ, ಅಥವಾ ಮನೆಗಳಿಗೆ ಮರದ ಸಾಮಗ್ರಿಗಳಾಗಿಯೋ, ಪರಿವರ್ತನೆಗೊಳ್ಳುವುವು. ಕಾರ್ಕಳ ತಾಲೂಕಿನಲ್ಲಿ ಹತ್ತಕ್ಕಿಂತಲೂ ಹೆಚ್ಚು ಮರಕೊಯ್ಯುವ ಮಿಲ್ಲುಗಳಿದ್ದು, ಅವುಗಳಿಗೆ ಬೇಕಾದ ಆಹಾರವನ್ನು ಈ ಕಾಡುಗಳೇ ಒದಗಿಸುತ್ತವೆ.

ಕೈಗಾರಿಕೆಗಳು:

ಮಲೆನಾಡಿನಲ್ಲಿ ಮಲಗಿರುವ ಕಾರ್ಕಳ ತಾಲೂಕು ಘನ ಕೈಗಾರಿಕೆಗಳಿಗೆ ಅಷ್ಟೇನೂ ಪ್ರಸಿದ್ಧವಾಗಿಲ್ಲ. ಸಮುದ್ರತೀರದ ಬಂದರಿನ ಸೌಕರ್ಯವಾಗಲೀ ರೈಲ್ವೆ ಸಾರಿಗೆಯ ಸಂಪರ್ಕವಾಗಲೀ ಇಲ್ಲದಿರುವುದರಿಂದ ಕಾರ್ಕಳದಲ್ಲಿ ಔದ್ಯೋಗೀಕರಣದ ತೀವ್ರತೆಯನ್ನು ಕಾಣಲಾರೆವು. ಆದರೂ, ಇಲ್ಲಿ ಕೆಲವು ದೊಡ್ಡ ಪ್ರಮಾಣದ ಕೈಗಾರಿಕೆಗಳೂ, ಹಲವು ಸಣ್ಣ ಪ್ರಮಾಣದ ಕೈಗಾರಿಕೆಗಳೂ ಇದ್ದು ಅವುಗಳ ಸ್ಥೂಲ ಪರಿಚಯವನ್ನು ಕೊಡಲಾಗಿದೆ.

ಬೋಳ ರಾಘವೇಂದ್ರ ಕಾಮತ್ ಎಂಡ್ ಸನ್ಸ್ ಕೇಶ್ಯು ಫ್ಯಾಕ್ಟರಿ : 1958ರಲ್ಲಿ ಈ ಕಾರ್ಖಾನೆಯು ಸ್ಥಾಪನೆಯಾದಾಗ 30ಜನ ಕಾರ್ಮಿಕರಿದ್ದು ದಿನಕ್ಕೆ 7ಚೀಲದಂತೆ ಗೇರುಬೀಜದ ಸಂಸ್ಕರಣೆಯಾಗುತ್ತಿತ್ತು. ಇಂದು ಪ್ರತಿ 75ಕಿ.ಗ್ರಾ. ತೂಕದ 130ಚೀಲಗಳನ್ನು ದಿನವೊಂದಕ್ಕೆ ಸಂಸ್ಕರಿಸಲು 650 ಕಾರ್ಮಿಕರನ್ನು ಹೊಂದಿದೆ. (ಇವರಲ್ಲಿ 80% ಮಹಿಳಾ ಕಾರ್ಮಿಕರು). ಬೋಳ ರಾಘವೇಂದ್ರ ಕಾಮತ್ ಮತ್ತು ಅವರ ನಾಲ್ವರು ಮಕ್ಕಳು – ಹೀಗೆ 5ಮಂದಿ ಪಾಲುಗಾರರಿಂದ ಕುಟುಂಬದ ಸಂಸ್ಥೆಯಾಗಿ ರೂಪುಗೊಂಡು 1970ರಲ್ಲಿ 'ಬೋಳ ಸುರೇಂದ್ರ ಕಾಮತ್ ಮತ್ತು ಕಂಪನಿ' ಎಂಬ ಹೆಸರಿನ ಸೋದರ ಸಂಸ್ಥೆಯಾಗಿ ಬೀಜದೆಣ್ಣೆಯನ್ನು ತಯಾರಿಸತೊಡಗಿತು. ಕ್ರಮೇಣ ಈ ಬೀಜದೆಣ್ಣೆಯನ್ನು ಯಂತ್ರದ ಮೂಲಕ ಸಂಸ್ಕರಿಸಿ ಪರದೇಶಗಳಿಗೆ ರಫ್ತು ಮಾಡುವ ಗುಣಮಟ್ಟವನ್ನು ಪಡೆಯಿತು. 1960ರಲ್ಲಿ ರೂ. 1.5ಲಕ್ಷ ಬೆಲೆಯ ಗೇರುಬೀಜವು ಈ ಕಾರ್ಖಾನೆಯಿಂದ ಪ್ರಥಮವಾಗಿ ರಫ್ತಾಯಿತು. ಬರೇ ಏಳುವರ್ಷಗಳಲ್ಲಿ ಕರ್ಣಾಟಕ ರಾಜ್ಯದಲ್ಲಿಯೇ ರಫ್ತಿನಲ್ಲಿ ಅಗ್ರಗಣ್ಯ ಸ್ಥಾನದ ಪಾರಿತೋಷಕಕ್ಕೆ ಅರ್ಹವಾಯಿತು. 1976 - 77ರಲ್ಲಿ ರೂ. 1.25ಲಕ್ಷಕ್ಕೇರಿಸಿದ ತನ್ನ ರಫ್ತಿನ ವ್ಯಾಪಾರಕ್ಕಾಗಿ 1977 - 78ರಲ್ಲಿ ರಾಜ್ಯ ಸರಕಾರದಿಂದ ಸುವರ್ಣಪದಕವನ್ನು ಗೆದ್ದುಕೊಂಡಿತು. 1982 - 83ರಲ್ಲಿ ಇದರ ವ್ಯವಹಾರವು ರೂ. 2ಕೋಟಿಯನ್ನೂ ಮಿಕ್ಕಿದ ದಾಖಲೆಯಾಯಿತು. ಅಮೇರಿಕಾ, ರಶ್ಯಾ, ಇಂಗ್ಲೆಂಡು, ಕೊರಿಯಾ ಜಪಾನು, ಆಸ್ಟ್ರೇಲಿಯಾಗಳಂತಹ ಸಂಪದ್ಭರಿತ ದೇಶಗಳಿಂದ ಬೇಡಿಕೆಯನ್ನು ಪಡೆಯುತ್ತಿರುವ ಈ ಕಾರ್ಖಾನೆ ರಾಜ್ಯಕ್ಕೆ ಮಾತ್ರವಲ್ಲ, ಇಡಿಯ ದೇಶಕ್ಕೆ ಹೆಮ್ಮೆಯ ಕೊಡುಗೆಯಾಗಿದೆ. ಪರದೇಶಗಳಿಂದ ಡಾಲರ್ ಸಂಪಾದಿಸುವಲ್ಲಿ ದೇಶದಲ್ಲಿ ಎರಡನೆಯ ಸ್ಥಾನದಲ್ಲಿರುವ ಗೇರುಬೀಜದ ಪ್ರತಿಷ್ಠೆಯ ಕಾರ್ಖಾನೆಯೊಂದು ಕಾರ್ಕಳದಂತಹ ಪುಟ್ಟ ಪೇಟೆಯಲ್ಲಿದ್ದು ಜಗತ್ತನ್ನೇ ಚಕಿತಗೊಳಿಸಿದೆ. ಗೇರುಬೀಜಕ್ಕೆ ಇಂದು ಅತಿದೊಡ್ಡ ಬೇಡಿಕೆಯಿರುವುದು ಅಮೇರಿಕಾದಿಂದ. ಬೀಜದ ತಿರುಳಿನ ತೂಕ, ಬಣ್ಣ ಮತ್ತು ಬೆಳವಣಿಗೆಯನ್ನು ಹೊಂದಿಕೊಂಡು ಅವುಗಳನ್ನು 20 ವಿಧಗಳಲ್ಲಿ ವಿಂಗಡಿಸಿ ಗುಣಮಟ್ಟವನ್ನು ಕಾಪಾಡಲಾಗಿದೆ. ಹುರಿದ ಗೇರುಬೀಜಗಳ ಹೊರಸಿಪ್ಪೆಯನ್ನು ಯಂತ್ರಗಳ ಮೂಲಕ ಪ್ರತ್ಯೇಕಿಸಿ ಅದರಲ್ಲಿರುವ

ತೇವವನ್ನು ಆವಿಮಾಡಿ ಒಳಸಿಪ್ಪೆಯನ್ನು ಮಹಿಳೆಯರು ಯಂತ್ರಗಳಿಲ್ಲದೆ ಕೈಯಿಂದಲೇ ಪ್ರತ್ಯೇಕಿಸುವುದು ಈ ಸಂಸ್ಕರಣೆಯ ವೈಶಿಷ್ಟ್ಯ. ಇದರಿಂದಾಗಿ ಇಲ್ಲಿಯ ಗೇರುಬೀಜಗಳು ಹೆಚ್ಚು ಪುಡಿಯಾಗದೆ ಅಂತಾ ರಾಷ್ಟ್ರೀಯ ವ್ಯಾಪಾರದಲ್ಲಿ ತಮ್ಮ ಗುಣಮಟ್ಟವನ್ನು ಉಳಿಸಿಕೊಂಡಿವೆ; ಬೇಡಿಕೆಯನ್ನು ಕಾಯ್ದು ಕೊಂಡಿದೆ. ಆಫ್ರಿಕಾದಂತಹ ಇತರೆಡೆಗಳಲ್ಲಿ ಯಂತ್ರಗಳಿಂದ ಒಳಸಿಪ್ಪೆಯನ್ನು ಸುಲಿಯುವುದರಿಂದ ಬೀಜಗಳು ಹೆಚ್ಚು ಪುಡಿಯಾಗುತ್ತವೆ. ಬೀಜಗಳನ್ನು ಗಾಳಿಹೀರಿದ ಎಲ್ಯುಮಿನಿಯಂ ಡಬ್ಬಿಗಳಲ್ಲಿ ತುಂಬಿಸಿ ಎರಡು ವರ್ಷಗಳ ಕಾಲ ಕೆಡದಂತೆ ಶೇಖರಿಸಬಹುದಾಗಿದೆ. ಈ ರೀತಿಯಲ್ಲಿ ದಿನವೊಂದಕ್ಕೆ ರೂ. 1ಲಕ್ಷ ಬೆಲೆಬಾಳುವ 190 ಡಬ್ಬಿ ಬೀಜಗಳನ್ನು ಸಂಸ್ಕರಿಸಿ ಸಂಗ್ರಹಿಸಲಾಗುತ್ತಿದೆ.

ಬೀಜದೆಣ್ಣೆಗೂ ಇಂದು ಬಹುಮುಖ ಬೇಡಿಕೆ. ಅರಗು ಮತ್ತು ಪೈಂಟ್ ತಯಾರಿಸಲು. ಇನ್ಸುಲೇಟಿಂಗ್ ವಾರ್ನಿಶ್‌ಗೆ, ವಾಟರ್‌ಪ್ರೂಫ್‌ಗೇರುಸಿಮೆಂಟಿಗೆ, ಬ್ರೇಕ್ ಲೈನರ್ಸ್‌ಗೆ, ಫೌಂಡ್ರಿ ರಾಸಾಯನಿಕಗಳಿಗೆ – ಇತ್ಯಾದಿ, ಇತ್ಯಾದಿ. ಎಣ್ಣೆಯನ್ನು ಪರದೇಶಕ್ಕೆ ರಫ್ತು ಮಾಡುವ ಜೊತೆಗೆ ಬೊಂಬಾಯಿ, ಕಲ್ಕತ್ತಾ, ಫರೀದಾಬಾದ್, ಹೈದರಾಬಾದ್‌ಗಳಿಗೂ ಕಳುಹಿಸಲಾಗುತ್ತಿದೆ ದಿನವೊಂದಕ್ಕೆ ರೂ. 7,500-00 ಬೆಲೆಯ 1.5ಟನ್ ಎಣ್ಣೆಯ ಉತ್ಪಾದನೆಯಾಗುತ್ತದೆ. ಕಾರ್ಕಳದ ಹೊರವಲಯದ ಕುಕ್ಕುಂದೂರಿನಲ್ಲಿ 5ಎಕ್ರೆ ವಿಸ್ತಾರದಲ್ಲಿ ಬೆಳೆದಿರುವ ಈ ಕಾರ್ಖಾನೆಯ ಕಟ್ಟೋಣ ಮತ್ತು ಯಂತ್ರ ಗಳಿಗೆ ಹೂಡಿದ ಬಂಡವಾಳ ಸುಮಾರು ರೂ. 13ಲಕ್ಷಗಳು. ಕೈಗಾರಿಕಾ ಪ್ರಪಂಚದಲ್ಲಿ ಹೊಸ ದಿಗಂತ ವನ್ನು ತಲಪಿರುವ ಈ ಸಂಸ್ಥೆ ಕಾರ್ಕಳವನ್ನು ಹೊರಗಿನ ಜಗತ್ತಿಗೆ ಪರಿಚಯಿಸುವ ಹೆಬ್ಬಾಗಿಲಾಗಿದೆ. ಇಷ್ಟು ಔನ್ನತ್ಯವನ್ನು ಸಾಧಿಸಿದರೂ ಕೈಗಾರಿಕೆಯ ಸಮಸ್ಯೆಗಳು ಈ ಕಾರ್ಖಾನೆಯನ್ನು ಬಾಧಿಸದಿಲ್ಲ. ಗೇರುಬೀಜವು ಕಾಲಿಕ ಬೆಳೆ. ಆದುದರಿಂದ ಇದು ಬೇಕಾದಾಗ ಬೇಕಾದಷ್ಟು ಸಿಗುವಂತಿಲ್ಲ. ಇಡಿಯ ವರ್ಷಕ್ಕೆ ಬೇಕಾದುದನ್ನು ಮಾರ್ಚ್, ಎಪ್ರಿಲ್, ಮೇ – ಈ ಮೂರು ತಿಂಗಳಲ್ಲಿ ಸಂಗ್ರಹಿಸಿ ಇಡಬೇಕಾಗಿದೆ. ಏಕೆಂದರೆ. ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆ ವರ್ಷದುದ್ದಕ್ಕೂ ಕೆಲಸ ಮಾಡುತ್ತಿರಬೇಕು. ಈ ಕೈಗಾರಿಕೆಯು ರಫ್ತು ಮತ್ತು ಕಾರ್ಮಿಕಾವಲಂಬಿಯಾಗಿದೆ.

ಕಾರ್ಕಳದ ಸುತ್ತುಮುತ್ತಲಲ್ಲಿ ಇನ್ನೂ 20 ಸಣ್ಣಮಟ್ಟದ ಗೇರುಬೀಜ ಕಾರ್ಖಾನೆಗಳಿವೆ.

ಲೆಮಿನಾ ಫೌಂಡ್ರೀಸ್ ಲಿಮಿಟೆಡ್ :

ಕಾರ್ಕಳದ ಇನ್ನೊಂದು ಬೃಹದ್ಗಾತ್ರದ ಉದ್ದಿಮೆ ಲೆಮಿನಾ ಫೌಂಡ್ರೀಸ್. ಲೆಮಿನಾ ಸಸ್ಪೆನ್ಶನ್ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಮಾತೃ ಸಂಸ್ಥೆಯಿಂದ ಹುಟ್ಟಿಕೊಂಡು ಕಲ್ಲುಗುಡ್ಡಗಳಿಂದ ತುಂಬಿದ ಕಾರ್ಕಳ ಪಡುಬಿದ್ರಿ ಹೆದ್ದಾರಿಯಲ್ಲಿರುವ ನಿಟ್ಟೆಯೆಂಬ ಗ್ರಾಮದಲ್ಲಿ 9.06 ಎಕ್ರೆ ವಿಸ್ತಾರದಲ್ಲಿ ಈ ಕಾರ್ಖಾನೆ ತಲೆಯೆತ್ತಿದೆ. 1980ರಲ್ಲಿ ರೂಪುಗೊಂಡ ಈ ಕಾರ್ಖಾನೆಯ ಯೋಜನೆಯನ್ನು ಕಾರ್ಯ ಗತಗೊಳಿಸಲು 1981ರಲ್ಲಿ ಇದರ ಸಂಸ್ಥೆಯ ಸ್ಥಾಪನೆಯಾಯಿತು. 1982ರಲ್ಲಿ ಪ್ರಾರಂಭವಾದ ಈ ಕಾರ್ಖಾನೆಯ ಕೆಲಸವು 1983ರ ಜೂನ್‌ನಲ್ಲಿ ಮುಕ್ತಾಯಗೊಂಡಿತು. ಒಂದು ತಿಂಗಳೊಳಗೆ ಪ್ರಾಯೊ ಗಿಕ ಉತ್ಪಾದನೆಯನ್ನು ಆರಂಭಿಸಿದ ಕಾರ್ಖಾನೆಯಿಂದ 1983 ಅಕ್ಟೋಬರಿನಲ್ಲಿ ಉತ್ಪಾದನೆಯ ಪ್ರಥಮ ಕಂತು ಹೊರಬರಲಾರಂಭಿಸಿತು. ಭಾರತದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ರಾದ ಶ್ರೀಯುತ ಕೆ. ಎಸ್. ಹೆಗ್ಡೆಯವರ ಪುತ್ರ ಶ್ರೀ ವಿನಯ ಹೆಗ್ಡೆಯವರ ದೂರದರ್ಶಿತ್ವದ ಪ್ರತಿಫಲವೇ ಲೆಮಿನಾ ಫೌಂಡ್ರಿ. ಶ್ರೀ ಹೆಗ್ಡೆಯವರು ಇಂತಹದೇ ಇತರ ಕಾರ್ಖಾನೆಗಳಲ್ಲಿ ಪಡೆದ ಪರಿಪಕ್ವ ಅನುಭವ ಹಾಗೂ ಅವರ ಸಿಬಂದಿವರ್ಗದವರ ಸಹಭಾಗಿತ್ವ ಅವರ ಕನಸಿನ ಕೂಸನ್ನು ನಿಜ ವಾಗಿಸಿತು. ವಾಣಿಜ್ಯ ಚಟುವಟಿಕೆಗಳು, ವೈದ್ಯಕೀಯ ಸವಲತ್ತುಗಳು, ವಿದ್ಯಾಸಂಸ್ಥೆಗಳು, ತಾಂತ್ರಿಕ ತರ ಬೇತಿ ಕೇಂದ್ರಗಳು ಮೊದಲಾದುವನ್ನು ಹೊಂದಿಸಿಕೊಂಡು ಒಂದು 'ನಿಟ್ಟೆ ಸಂಕೀರ್ಣ'ವನ್ನು ಬೆಳೆಸಬೇಕೆಂದು ಹೊರಗುತ್ತಿರುವ ಮಹತ್ವಾಕಾಂಕ್ಷಿ ತರುಣ ಉದ್ಯಮಿ ಶ್ರೀ ಹೆಗ್ಡೆಯವರು ಈ ಕಾರ್ಖಾನೆಯಲ್ಲಿ ಅತ್ಯುನ್ನತ ಮಟ್ಟದ ತಾಂತ್ರಿಕತೆಯನ್ನು ಅಳವಡಿಸಿಕೊಂಡು ವಿವಿಧ ಕಾರ್ಯಾಗಾರಗಳನ್ನು ನಿಷ್ಣಾತ ಉದ್ಯೋಗಿ ಗಳಿಂದ ನಿರ್ವಹಿಸುತ್ತಿರುವರು. ಇನ್ನೂ ಬೆಳೆಯುತ್ತಿರುವ ಈ ಉದ್ಯಮಕ್ಕೆ ಹೂಡಿದ ಬಂಡವಾಳ

ರೂ. 2.68ಕೋಟಿ. ಇದು ಒದಗಿಸುವ ಉದ್ಯೋಗ 350ಮಂದಿಗೆ. ಇದರ ಮುಖ್ಯ ಅಧಿಕಾರಿಗಳಾಗಿರುವ ಶ್ರೀಯುತ ಶ್ಯಾಮಸುಂದರ್ ಈ ಫೌಂಡ್ರಿಯ ಕುರಿತು ಹೀಗೆ ಹೇಳುತ್ತಾರೆ :

"Lamina is the first full automatic Foundry with indigeneous michinery and this is the fourth fully antomatic Foundry in our country"

ಕರ್ನಾಟಕ ಎಕ್ಸ್‌ಪ್ಲೋಸಿವ್ಸ್ ಲಿಮಿಟೆಡ್ :

ಕಾರ್ಕಳ ತಾಲೂಕಿನಲ್ಲಿ ಅತಿ ದೊಡ್ಡ ಮೊತ್ತದ ಬಂಡವಾಳದ ಈ ಉದ್ದಿಮೆಯಲ್ಲಿ ರೂ 4.5 ಕೋಟಿಗೂ ಹೆಚ್ಚು ಹಣವನ್ನು ಹೂಡಲಾಗಿದೆ. ತಾಲೂಕಿನ ಅತಿ ಹಿಂದುಳಿದ ಪ್ರದೇಶಗಳಲ್ಲೊಂದಾದ ವರಂಗ ಸಮೀಪ ವಿಶ್ವಾಸನಗರ ಎಂಬಲ್ಲಿ ಈ ಕಾರ್ಖಾನೆಯು ಸ್ಥಾಪನೆಗೊಂಡಿದೆ. ಕಾರ್ಕಳ-ಹೆಬ್ರಿ ರಸ್ತೆಯಲ್ಲಿರುವ ಈ ಭೂಪ್ರದೇಶದಲ್ಲಿ ಅತಿ ವಿರಳ ಜನಸಂಖ್ಯೆ. ಭದ್ರತೆಯ ದೃಷ್ಟಿಯಿಂದ ಈ ಕಾರ್ಖಾನೆಯನ್ನು ಜನದಟ್ಟಣೆಯ ಪ್ರದೇಶದಿಂದ ದೂರವಿರಿಸಲಾಗಿದೆ. ಅದಕ್ಕಿಂತಲೂ ಹೆಚ್ಚಾಗಿ, ಹಿಂದುಳಿದ ಮಲೆನಾಡಿನ ಭೂಗಾಗದ ಅಭಿವೃದ್ಧಿಯ ಸರಕಾರದ ಯೋಜನೆಗೆ ಅನುಗುಣವಾಗಿ ಈ ಗುಡ್ಡಗಾಡಿನ ಹಳ್ಳಿ ಪ್ರದೇಶವನ್ನು ಆರಿಸಲಾಗಿದೆ. ಇದೊಂದು ಪಬ್ಲಿಕ್ ಲಿಮಿಟೆಡ್ ಕಂಪೆನಿಯಾಗಿದ್ದು ಚೌಗುಲೆ ಸಂಸ್ಥೆಯವರು ಇದರ ಪ್ರವರ್ತಕರು. ಸಾರ್ವಜನಿಕ ಶೇರುಗಳ ಜೊತೆಗೆ ಕರ್ನಾಟಕ ಸರಕಾರವೂ ಇದರಲ್ಲಿ ಸಹಭಾಗಿಯಾಗಿದೆ. ಇದಕ್ಕೆ ತಾಂತ್ರಿಕ ಸಹಭಾಗಿತ್ವ ವನ್ನು ಒದಗಿಸಿದವರು ಸ್ಫೋಟಕ ತಯಾರಿಯಲ್ಲಿ ಜಗತ್ಪ್ರಸಿದ್ಧರಾದ ಅಮೇರಿಕಾದ M/s.E.T. Dupont De Nemourse Company ಈ ಕಾರ್ಖಾನೆಯು ಸ್ಫೋಟಕಗಳ ಉತ್ಪಾದನೆಯನ್ನು 1980ನೆಯ ಅಕ್ಟೋಬರದಲ್ಲಿ ಪ್ರಾರಂಭಿಸಿತು. 'ಕೆಲ್ವೆಕ್ಸ್' (Kelvex) ಎಂಬ ಸಂಕೇತ ನಾಮದ ಸ್ಫೋಟಕವು ದ್ರವವೂ ಅಲ್ಲ ಘನವೂ ಅಲ್ಲ. ಬಂಡೆಕಲ್ಲು ಸಿಡಿಯುವುದಕ್ಕೆ, ಸುರಂಗ ಕೊರೆಯುವುದಕ್ಕೆ ಹಾಗೂ ಗನಿಗಾರಿಕೆಗೆ ಇದರ ಉಪಯೋಗವಾಗುತ್ತದೆ. ಡೈನಮೈಟ್‌ನಂತಹ ಸಾಂಪ್ರದಾಯಿಕ ಸ್ಫೋಟಕಗಳಿಗಿಂತ ಕೆಲ್ವೆಕ್ಸ್ ಹೆಚ್ಚು ಸುರಕ್ಷಿತವಾಗಿದೆ. ಈ ಕಾರ್ಖಾನೆಯು ಎದುರಿಸುವ ಕೆಲವು ಸಮಸ್ಯೆಗಳು :

1) ದೂರದ ಹಳ್ಳಿಯ ವಾತಾವರಣದಲ್ಲಿರುವ ಈ ಕಾರ್ಖಾನೆಗೆ ಸಾರಿಗೆ, ಸಂಪರ್ಕ ಮತ್ತು ವಸತಿಗಳ ಅಭಾವವಿದೆ.

2) ಕುದುರೆ ಮುಖದ ಕಬ್ಬಿಣದ ಅದುರಿನ ನಿಷ್ಕ್ರಿಯತೆಯು ಈ ಕಾರ್ಖಾನೆಗೆ ದೊಡ್ಡ ಆಘಾತವಾಗಿದೆ. ಈ ಸ್ಫೋಟಕಗಳಿಗೆ ಕುದುರೆಮುಖ ಯೋಜನೆಯಿಂದ ಗಣನೀಯ ಬೇಡಿಕೆ ಬರುವುದೆಂದು ಯೋಜಿಸಲಾಗಿತ್ತು.

3) ಜನರಿಗಿನ್ನೂ ಕೆಲ್ವೆಕ್ಸ್‌ನಲ್ಲಿರುವ ಅತ್ಯಾಧುನಿಕ ತಾಂತ್ರಿಕತೆ ಮತ್ತು ಅದರ ಸುರಕ್ಷಿತತೆಯ ಕುರಿತು ಮನವರಿಕೆಯಾದಂತಿಲ್ಲ.

4) ಈ ಘಟಕಕ್ಕೆ ಬೇಕಾದ ಕಚ್ಚಾ ವಸ್ತುಗಳು ಇಲ್ಲಿಯೇ ದೊರೆಯುವುದಿಲ್ಲ.

ಕರ್ನಾಟಕ ಎಕ್ಸ್‌ಪ್ಲೋಸಿವ್ಸ್ ಘಟಕವು ತನ್ನ ಸುತ್ತಮುತ್ತಲಿನ ಜನಜೀವನದಲ್ಲಿ ಹೊಸತೊಂದು ಸಾಮಾಜಿಕ ಚೈತನ್ಯವನ್ನೂ ಆರ್ಥಿಕ ಚಟುವಟಿಕೆಯನ್ನೂ ನಿರ್ಮಿಸಿದೆ. ತಾಂತ್ರಿಕತೆಯೇ ಪ್ರಧಾನವಾಗಿರುವ ಈ ಘಟಕದಲ್ಲಿ 40% ಉದ್ಯೋಗಿಗಳು ಕಾರ್ಕಳ ತಾಲೂಕಿನವರೂ 98% ದಕ್ಷಿಣಕನ್ನಡ ಜಿಲ್ಲೆಯವರೂ ಆಗಿದ್ದಾರೆ. ಈ ಕಾರ್ಖಾನೆಯಿಂದಾಗಿ ಈ ಗ್ರಾಮಕ್ಕೆ ಒಂದು ಪ್ರೌಢಶಾಲೆ, ಒಂದು ಬ್ಯಾಂಕು, ಒಂದು ಸಾರಿಗೆ ಕಂಪೆನಿಯ ಶಾಖೆ ಒಂದು ಅಂಚೆ-ತಂತಿ ಕಚೇರಿ ಕೂಡಾ ಈ ಪರಿಸರದಲ್ಲಿ ಬೇರೂರಿದ್ದು ಈ ಭೂಭಾಗದ ಸಮಗ್ರ ಬೆಳವಣಿಗೆಗೆ ನಾಂದಿಯಾಯಿತು. 600 ಎಕ್ರೆ ವಿಸ್ತಾರದಲ್ಲಿ ಕಾರ್ಖಾನೆ

ಇರುವುದರಿಂದ ನಿಸರ್ಗದ ಸಮತೋಲನವನ್ನು ಕಾಪಾಡುವುದಕ್ಕಾಗಿ ಕಾಡು ಬೆಳೆಸುವ ಕಾರ್ಯಕ್ರಮ ವನ್ನು ಕಾರ್ಖಾನೆಯು ಕೈಗೊಂಡಿದೆ.

ಭಾರತ್ ಬೀಡಿ ವರ್ಕ್ಸ್ :

ಒಂದು ಸಣ್ಣ ವ್ಯಾಪಾರಿ ವಸ್ತುವಿನ ಮೂಲಕ ಕಾರ್ಕಳದ ಹೆಸರನ್ನು ದೇಶಾದ್ಯಂತ ಪ್ರಚಾರ ಪಡಿಸಿದ ಕೀರ್ತಿ ಭಾರತ್ ಬೀಡಿ ಅಥವಾ ಮುವತ್ತು ಮಾರ್ಕಿನ ಬೀಡಿಗೆ ಸಲ್ಲುತ್ತದೆ. ಶ್ರೀ ಮಂಜುನಾಥ ಪೈಯವರು 1930ರಲ್ಲಿ ಈ ಬೀಡಿಯ ತಯಾರಿಗೆ ಕೈ ಹಾಕಿದಾಗ ಅವರ ವ್ಯಾಪಾರ ಬೀಡಿಯಷ್ಟೇ ಚಿಕ್ಕದಾಗಿತ್ತು. ಕೇವಲ ರೂ. 30–00 ಮತ್ತು ಒಂದು ಸೈಕಲಿನ ಬಂಡವಾಳದಿಂದ ಕಾರ್ಕಳದ ಶ್ರೀ ವೆಂಕಟ ರಮಣ ದೇವಸ್ಥಾನದ ಎದುರಿನಲ್ಲಿರುವ ಬಾಡಿಗೆಯ ಪುಟ್ಟ ಅಂಗಡಿಯೊಂದರಲ್ಲಿ ರಾತ್ರಿಯಲ್ಲಿ ತಾನು ಕಟ್ಟಿದ ಬೀಡಿಯನ್ನು ಹಗಲು ಹೊತ್ತಿನಲ್ಲಿ ಮಾರುತ್ತಾ ಪ್ರಾರಂಭವಾದ ಬೀಡಿಗೆ ಸಾಂಕೇತಿಕವಾಗಿ 30 ನಂಬರ್ ಎಂದು ನಾಮಕರಣವಾಯಿತು. ಮುಂದಕ್ಕೆ ಬೆಳೆದ ಈ ಬೀಡಿಯ ವ್ಯಾಪಾರವು ಮಂಗಳೂರು, ಕಾಞಂಗಾಡ್, ಉಡುಪಿ, ಮೂಲ್ಕಿ, ಮೂಡುಬಿದ್ರಿ, ಬೆಳ್ತಂಗಡಿ, ಸುರತ್ಕಲ್, ಬಿ.ಸಿ. ರೋಡ್, ಉಳ್ಳಾಲ, ತಲಪಾಡಿ, ಉಪ್ಪಿನಂಗಡಿ, ಪುತ್ತೂರು, ಕಣ್ಣೂರು, ಸಜಿಪ, ಕಲ್ಲಡ್ಕ, ಬೆಂಗಳೂರು, ಕಾಸರ ಗೋಡು, ಮಂಜೇಶ್ವರ, ಕುಂದಾಪುರ ಮತ್ತು ಹರಿಹರಗಳಲ್ಲಿ ಹರಡತೊಡಗಿತು. ಬೀಡಿಯ ಎಲೆಗಳನ್ನು ಮಧ್ಯಪ್ರದೇಶ, ಒರಿಸ್ಸಾ ಮತ್ತು ಮಹಾರಾಷ್ಟ್ರದಿಂದಲೂ, ತಂಬಾಕನ್ನು ನಿಪ್ಪಾಣಿ ಮತ್ತು ಗುಜರಾ ನಿಂದಲೂ ತರಿಸುತ್ತಿದ್ದರು. ಬರೇ 50 ವರ್ಷಗಳಲ್ಲಿ ಪವಾಡ ಸದೃಶವಾಗಿ ಬೆಳೆದ ಈ ಬೀಡಿಯ ಉದ್ಯಮ 1980ರಲ್ಲಿ ದಿನವೊಂದಕ್ಕೆ 5 ಕೋಟಿ ಬೀಡಿಗಳನ್ನು ಕಟ್ಟಿ, 50,000 ಜನರಿಗೆ ನೇರ ಉದ್ಯೋಗ ಸೌಲಭ್ಯಗಳನ್ನು ಕಲ್ಪಿಸಿ, ರೂ.30 ಕೋಟಿಗೆ ವಾರ್ಷಿಕ ವ್ಯವಹಾರವನ್ನು ವೃದ್ಧಿಸಿ, ಸರಕಾರದ ಬೊಕ್ಕಸಕ್ಕೆ ರೂ.8 ಕೋಟಿಯಷ್ಟನ್ನು ತುಂಬಿಸುವ ನಿರಂತರ ಸಂಪತ್ತಿನ ನೆಲೆಯಾಗಿದೆ. ದೇಶದ ಗಡಿಯನ್ನು ದಾಟಿ ಬೆಹ್ರೀನ್, ಮಸ್ಕತ್‌ಗಳಂತಹ ಮಧ್ಯಪೂರ್ವ ದೇಶಗಳಲ್ಲಿಯೂ ಮನೆಮಾತಾಗಿರುವ ಈ ಕಿರು ಕೈಗಾರಿ ಕೆಯು ಬೀರಿದ ಪರಿಣಾಮ ಅಗಣ್ಯವಾದುದು. ಲಕ್ಷಗಟ್ಟಲೆ ಜನರ ಬಡತನವನ್ನು ಅಳಿಸಿ, ಕಣ್ಣೀರನ್ನು ಒರಸಿ ಹೊಸ ಬಾಳಿನ ಬೆಳಕನ್ನು ಹೊತ್ತಿಸಿದೆ. ಬಡವರ ಮನರಂಜನೆಯ ವಸ್ತುವಾಗಿರುವ ಬೀಡಿ ಕೋಟಿಗಟ್ಟಲೆ ಕಾರ್ಮಿಕರಿಗೆ ಸ್ಫೂರ್ತಿಯನ್ನು, ತೃಪ್ತಿಯನ್ನೂ ನೀಡಬಲ್ಲ ಸಂಜೀವಿನಿಯಾಗಿದೆ. ಕಾರ್ಖಾನೆಗೆ ಹೋಗದೆ ಮನೆಯಲ್ಲಿಯೇ ಕುಳಿತುಕೊಂಡು ಹೆಂಗಸರು, ಗಂಡಸರು ಹಾಗೂ ಮಕ್ಕಳು ತಮ್ಮ ಬಿಡುವಿನ ವೇಳೆಯಲ್ಲಿ ಮಾಡುವ ಬೀಡಿಯ ಕೆಲಸ ಪಟ್ಟಣದಿಂದ ಹಳ್ಳಿಯವರೆಗೆ ಆರ್ಥಿಕ ಜೀವನದಲ್ಲಿ ಮಹಾಕ್ರಾಂತಿಯನ್ನುಂಟು ಮಾಡಿದೆ. ಬೇಸಾಯದ ಕೆಲಸದವರಿಗೆ, ಮನೆ ಕೆಲಸ ನೋಡಿ ಕೊಳ್ಳುವ ಹೆಂಗಸರಿಗೆ ಇದರಷ್ಟು ಅನುಕೂಲವಾದ ಗುಡಿ ಕಸುಬು ಇನ್ನೊಂದಿಲ್ಲ. ರೂ. 9 ಕೋಟಿ ಮೌಲ್ಯದ ಸಂಬಳವನ್ನೂ ರೂ 3 ಕೋಟಿಯ ಇತರ ಸವಲತ್ತುಗಳನ್ನು ಕಾರ್ಮಿಕರಿಗೆ ಒದಗಿಸುವ ಭಾರತ್ ಬೀಡಿಯು 'ಭಾರತ್ ಕ್ಯಾರಿಯರ್ಸ್' ಎಂಬ ಲಾರಿಗಳ ಅಂಗಸಂಸ್ಥೆಯ ಮೂಲಕ ಬೀಡಿಗಳನ್ನು ದೇಶಾದ್ಯಂತ ರಸ್ತೆಯ ಮೂಲೆ ಮೂಲೆಗೂ ತಲಪಿಸುತ್ತವೆ. ಗೋವಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು. ಗುಜರಾತ್, ರಾಜಸ್ಥಾನ, ಡೆಲ್ಲಿ, ಉತ್ತರಪ್ರದೇಶ, ಮಧ್ಯಪ್ರದೇಶ, ಪಂಜಾಬ್ ಮತ್ತು ಹರ‍್ಯಾನಾಗಳಷ್ಟೇ ಅಲ್ಲದೆ 1976 ರಿಂದ ಮಧ್ಯಪೂರ್ವದ ದೇಶಗಳಿಗೂ ಮುಟ್ಟಿದ್ದು ಈ ಕೈಗಾರಿಕೆಯ ಮಹತ್ವದ ಮೈಲುಗಲ್ಲು. 'ಭಾರತ್ ಪ್ರಿಂಟರ್ಸ್' ಎಂಬ ಇನ್ನೊಂದು ಅಂಗಸಂಸ್ಥೆಯು ಬೀಡಿಯ ಲೇಬಲ್‌ಗಳನ್ನು ಮುದ್ರಿಸುತ್ತದೆ ಬಲಿಷ್ಠವಾಗಿ ಬೆಳೆದ ಭಾರತ್ ಬೀಡಿಯು 1962ರಲ್ಲಿ ತನ್ನ ಸಂಸ್ಥೆಯ ಆಡಳಿತ ಕಚೇರಿಯನ್ನು ಕಾರ್ಕಳದಿಂದ ಮಂಗಳೂರಿನ ಮಹಾನಗರಕ್ಕೆ ಸ್ಥಳಾಂತರಿಸಿತು.

ಶೆಣೈ ಬೀಡಿ ವರ್ಕ್ಸ್ :

ಕಾರ್ಕಳದ ಇನ್ನೊಬ್ಬ ಬೀಡಿ ಉದ್ಯಮಿ ಶ್ರೀ ಆರ್ ನಾರಾಯಣ ಶೆಣೈ. ಅವರಿಂದಲೇ ಆರಂಭ ವಾದ ಈ ಬೀಡಿಗೆ 'ಶೆಣೈಬೀಡಿ' ಎಂದೇ ಹೆಸರಿದ್ದು ತಮ್ಮ ಒಟ್ಟು ಬೀಡಿಯ 75%ವನ್ನು ಕಾರ್ಕಳ

ಲ್ಲಿಯೇ ಮಾರಾಟ ಮಾಡುವ 'ಮಣ್ಣಿನ ಮಗ' ಎನಿಸಿಕೊಂಡಿದ್ದಾರೆ. ಕಷ್ಟಕಹಿಗಳಿಂದಲೇ 1934ರಲ್ಲಿ ವ್ಯವಹಾರವನ್ನು ಪ್ರಾರಂಭಿಸಿ ಮೈಲುಗಟ್ಟಲೆ ಸೈಕಲನ್ನು ತುಳಿದು ಮೇಲೆದ್ದ ಮಹಾ ಸಾಹಸಿ ಶೆಣೈ ಯುವರು. ಇಂದು320 ಜನರು ದಿನವೊಂದಕ್ಕೆ 3 ಲಕ್ಷಕ್ಕಿಂತಲೂ ಹೆಚ್ಚು ಬೀಡಿಯನ್ನು ಕಟ್ಟುತ್ತಾರೆ. ವಾರ್ಷಿಕ ರೂ. 3,60,000 ನ್ನು ಸರಕಾರದ ಬೊಕ್ಕಸಕ್ಕೆ ತುಂಬಿಸುತ್ತಾರೆ. ಕಾರ್ಕಳದಲ್ಲಿ ಅಲ್ಲದೆ ಮೂಡುಬಿದ್ರೆ, ನಾರಾವಿ, ಹೆಬ್ರಿಯಲ್ಲೂ ಪರಿಚಿತವಾಗಿರುವ ಶೆಣೈ ಬೀಡಿ ವರ್ಷಕ್ಕೆ 50,000ದಷ್ಟು ಸಂಖ್ಯೆಯಲ್ಲಿ ವೃದ್ಧಿಸುತ್ತಿದೆ.

ಅಲಂಗಾರಿನ ಅನಾನಸು ಕೇಂದ್ರ:

ಅಲ್ಪಾವಧಿಯಲ್ಲಿ ಕೆಡುವ ಹಣ್ಣನ್ನು ದೀರ್ಘಾವಧಿಯವರೆಗೆ ಬಾಳುವ ವಾಣಿಜ್ಯ ವಸ್ತುವನ್ನಾಗಿ ರೂಪಡಿಸಿ ಬಲವಾದ ಮಾರುಕಟ್ಟೆಯನ್ನು ಪಡೆಯಲು ಶಕ್ತರಾದವರು ಅಲಂಗಾರಿನಲ್ಲಿರುವ ಸೋನ್ಸ್ ಅನನಾಸು ಕೇಂದ್ರದವರು. ಕಾರ್ಕಳ–ಮೂಡುಬಿದ್ರಿ ಹೆದ್ದಾರಿಯಲ್ಲಿ ಹೆಚ್ಚು ಕಡಿಮೆ 100 ಎಕ್ರೆಗಳ ವಿಶಾಲ ಭೂಮಿಯಲ್ಲಿ (ಮೂಲತಃ ಬಾಸೆಲ್ ಮಿಶನ್ ಸಂಸ್ಥೆಯವರದ್ದು) ರೂ 25 ರಿಂದ 30 ಲಕ್ಷಗಳವರೆಗೆ ಒಟ್ಟು ಭಂಡವಾಳ ಕಳೆದ 55 ವರ್ಷಗಳಿಂದ ಹೂಡಿ ಅನನಾಸು, ಮಾವು, ಕಾಳುಮೆಣಸು, ಕೊಕ್ಕೋ, ಗೇರು, ತೆಂಗುಗಳನ್ನು ಸಮೃದ್ಧವಾಗಿ ಬೆಳೆಸುತ್ತಿದ್ದಾರೆ ಹಣ್ಣನ್ನು ಹೋಳು, ರಸ ಮತ್ತು ಜಾಮ್ (Jam)ಗಳಾಗಿ ಪರಿವರ್ತಿಸಿ ದೂರದ ಊರುಗಳಾದ ಬೆಂಗಳೂರು, ಬೊಂಬಾಯಿ, ಹಳ್ಳಿಗಾಮಿನ ಜನರಿಗೂ ಹಣ್ಣಿನ ರುಚಿಯನ್ನು ಉಣಿಸುತ್ತಾರೆ. ಮಳೆಗಾಲದಲ್ಲಿ 100ಕ್ಕಿಂತಲೂ ಹೆಚ್ಚು ಮಂದಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವ ಇವರ ಗದ್ದೆಗಳಲ್ಲಿ ವರ್ಷದುದ್ದಕ್ಕೂ 40 ರಿಂದ 50 ಜನರು ದುಡಿಯುತ್ತಾರೆ. ಡಾ॥ ಸೋನ್ಸರು ಹೇಳುತ್ತಾರೆ, "ಅನಿಶ್ಚಿತ ಮಾರುಕಟ್ಟೆಗಿಂತ, ನಿಶ್ಚಿತ ಮಾರುಕಟ್ಟೆಯಿದ್ದರೆ ಬೆಲೆ ಕಡಿಮೆಯಾದರೂ ತೊಂದರೆಯಾಗುವುದಿಲ್ಲ ಉತ್ತಮ ಹಣ್ಣನ್ನು ಸಂಸ್ಕರಿಸಿ ಶೇಖರಿಸಿದಾಗ ಇದರ ಪ್ರಯೋಜನ ಕಾಣುತ್ತದೆ. ಕೈಗಾರಿಕೆಯ ವಿಕೇಂದ್ರೀಕರಣಕ್ಕೂ ಇದು ಸಹಾಯವಾಗುತ್ತದೆ. ಇತರರನ್ನು ಅವಲಂಬಿಸದೆ, ನಾವು ಬೆಳೆಸಿದ್ದನ್ನು ನಾವೇ ಸಂಸ್ಕರಿಸುತ್ತೇವೆ. ಇದರಿಂದ ದೊರೆಯುವ ಲಾಭಾಂಶವೂ ಹೆಚ್ಚು. ಜನರಿಗೆ ಉದ್ಯೋಗಾವಕಾಶಗಳು ಅಧಿಕವಾಗುತ್ತವೆ. ಹಣ್ಣು ಸಂಸ್ಕರಣೆ ಮಾಡುವಾಗ ಬರುವ ಕಸ, ಕಶ್ಮಲಗಳು ಗದ್ದೆಗೆ ಉತ್ತಮ ಗೊಬ್ಬರವಾಗುತ್ತದೆ. ನೀರಾವರಿಯ ಸೌಕರ್ಯವಿಲ್ಲದೆ, ಕಲ್ಲು ತುಂಬಿದ ನೆಲದಲ್ಲಿ, ಯಂತ್ರಗಳಿಂದ ಉತ್ತು, ಸ್ಪ್ರಿಂಕ್ಲರ್, ಸ್ಪ್ರೇಯರ್‌ಗಳಿಂದ ಮಣ್ಣನ್ನು ಹದಮಾಡಿ, ವರ್ಷಕ್ಕೆ ಒಂದು ಲಕ್ಷ ರೂಪಾಯಿ ಕೆಲಸದವರಿಗೂ, ಮತ್ತೊಂದು ಲಕ್ಷ ರೂಪಾಯಿ ಗೊಬ್ಬರ ಕ್ರಿಮಿನಾಶಕಗಳಿಗೂ ವ್ಯಯಿಸಿ, ಒಂದು ಲಕ್ಷ ರೂಪಾಯಿ ಉಳಿತಾಯವಾಗುವ ವ್ಯವಹಾರ ನಮ್ಮದು" ಅನನಾಸಿನ ನಾರಿನಿಂದ ಚೀಲ, ಬಟ್ಟೆಗಳನ್ನು ತಯಾರಿಸಬಹುದಾಗಿದ್ದು ಇದು ಒಂದು ಕೃಷಿ ಕೈಗಾರಿಕೆ.

ವಾಲ್ಕುಂಜದ ಯುರೇನಿಯಂ ಯೋಜನೆ:

ಕಾರ್ಕಳದ ಕಾಡುಗುಡ್ಡಗಳಲ್ಲೊಂದಾದ ಅಂಡಾರಿನ ಬಳಿಯ ವಾಲ್ಕುಂಜ (ಆಜ್ಜೆಕುಂಜ)ದಲ್ಲಿ ಅಮೂಲ್ಯವಾದ ಯುರೇನಿಯಂ ಖನಿಜದ ಶೋಧನೆಯು ತೀವ್ರವಾಗಿ ಸಾಗುತ್ತಿದೆ. ಅಣುಶಕ್ತಿಯ ತಯಾರಿಗೆ ಬೇಕಾದ ಈ ಕಚ್ಚಾವಸ್ತುವು ದೇಶದ ವಿರಳ ಖನಿಜಗಳಲ್ಲೊಂದು. 3408 ಅಡಿ ಎತ್ತರದ ಮಳೆ ಮೋಡ ಮರಗಳಿಂದ ತುಂಬಿರುವ ಈ ಪ್ರದೇಶಗಳಲ್ಲಿ ಕಳೆದ ಎಂಟು ವರುಷಗಳಿಂದ ಪ್ರಕೃತಿಯು ತನ್ನ ಗರ್ಭದಲ್ಲಿ ಅಡಗಿಸಿಟ್ಟ ಸಂಪತ್ತನ್ನು ಮಾನವನು ಹುಡುಕುತ್ತಿದ್ದು, ಅವನ ಪ್ರಯತ್ನವು ಯಶಸ್ವಿಯಾದರೆ ಮಲೆನಾಡಿನ ಭಾಗ್ಯದ ಬಾಗಿಲು ತೆರೆದಂತೆಯೇ ಸರಿ. ದುರ್ಗಮವಾದ ಈ ಗುಡ್ಡಕಾಡು ನಿರಂತರ ಚಟುವಟಿಕೆಯ ತಾಣವಾಗಲಿದೆ. ದೇಶದ ಬೊಕ್ಕಸಕ್ಕೆ ಇದು ಕಾರ್ಕಳದ ಅಪೂರ್ವ ಕೊಡುಗೆಯಾಗಲಿದೆ.

ಪುತ್ತಿಗೆಯ 'ಪ್ರಕಾಶ್' ಹುರಿ ಕೈಗಾರಿಕೆ:

ರೂ. 4ಲಕ್ಷ ಭಂಡವಾಳ ಹೂಡಿ 1982 ರಿಂದ ಮೂಡುಬಿದ್ರಿ ಕಡಂದಲೆ ರಸ್ತೆಯಲ್ಲಿ ಕೆಲಸ ಮಾಡುತ್ತಿರುವ ಈ ಕೈಗಾರಿಕೆಯು ಇನ್ನೂ ಪ್ರಚಾರದ ಪ್ರಪಂಚಕ್ಕೆ ಪರಿಚಯವಾಗದೇಯೇ ಉಳಿದಿದೆ. ತಾಲೂಕಿನಲ್ಲಿರುವ ತೆಂಗಿನ ಮರಗಳಿಗೆ ಮರುಳಾಗಿ ತೆಂಗಿನ ಕಾಯಿಗಳ ಸಿಪ್ಪೆಯನ್ನೇ ಕಚ್ಚಾವಸ್ತುವಾಗಿ ಬಳಸಿದರೆ, ಕಟ್ಟಿಗೆಯಾಗಿ ವ್ಯಯವಾಗುವ ಸಿಪ್ಪೆಯನ್ನು. ಸಂಪತ್ತನ್ನು ಸಂಗ್ರಹಿಸುವ ಸಾಧನವಾಗಿ ಪರಿವರ್ತಿಸಬಹುದೆಂಬ ಸಾಹಸಕ್ಕೆ ಮನಮಾಡಿದವರು ಶ್ರೀ ವಾಸುದೇವ ಭಟ್ಟರು. ದಿನಕ್ಕೆ 15,000 (1½ ಟನ್) ಕಾಯಿಗಳ ಸಿಪ್ಪೆಯನ್ನು ಎಂಟು ಗಂಟೆಗಳ ಅವಧಿಯಲ್ಲಿ ಪುಡಿಮಾಡುವ ಗುರಿಯನ್ನಿಟ್ಟಿದ್ದರೂ, ಕಾರ್ಖಾನೆಗೆ 5,000 ಕಾಯಿಗಳ ಸಿಪ್ಪೆಗಳು ಮಾತ್ರ ಸಿಗುತ್ತವೆ. ಕಾರ್ಕಳ, ಉಡುಪಿ, ಬಂಟ್ವಾಳ, ಕುಂದಾಪುರ, ಬೆಳ್ತಂಗಡಿ ತಾಲೂಕುಗಳಿಂದ ಸಂಗ್ರಹಿಸಿದ ಸಿಪ್ಪೆಯ ಹುರಿಯನ್ನು ಡಿಲ್ಲಿ, ಬೊಂಬಾಯಿ, ಕಲ್ಕತ್ತ, ಸೇಲಂಗಳಿಗೆ ಕಳುಹಿಸುತ್ತಾರೆ. ಹಗ್ಗ, ಹಾಸಿಗೆ, ರಬ್ಬರ್ ಮಿಶ್ರಿತ ನಾರುಗಳಿಗೆ ಇದರ ಉಪಯೋಗವಾಗುತ್ತಿದೆ. ನಾರನ್ನು ತಯಾರಿಸುವಲ್ಲಿ ಎರಡು ಕ್ರಮಗಳಿದ್ದು ಕೆಲವು ಕಾರ್ಖಾನೆಗಳಲ್ಲಿ ಸಿಪ್ಪೆಯನ್ನು ಕೆಲವು ದಿನಗಳ ವರೆಗೆ ನೀರಿನಲ್ಲಿ ಕೊಳೆಯಿಸಿ ಆ ಮೇಲೆ ನಾರನ್ನು ತಯಾರಿಸುವರು. 'ಪ್ರಕಾಶ್' ಹುರಿ ಕಾರ್ಖಾನೆಯಲ್ಲಿ ಭಿನ್ನ ರೀತಿಯಲ್ಲಿ ತಯಾರಿಸುತ್ತಾರೆ. ಸಿಪ್ಪೆಯನ್ನು ತಂದೊಡನೆಯೇ ನೀರಿನ ಪಸೆಯೊಂದಿಗೆ ಯಂತ್ರದಲ್ಲಿ ಪುಡಿಮಾಡಿ ನಾರನ್ನು ತೆಗೆಯುತ್ತಾರೆ. ಇದಕ್ಕೆ ತಾಗುವ ಸಮಯ ಕಡಿಮೆ. ಹಸುರು ಮತ್ತು ಕಂದು ಬಣ್ಣದ ಎರಡು ಜಾತಿಯ ಸಿಪ್ಪೆಗಳಿದ್ದು ಮೊದಲನೆಯದು ಹಗ್ಗ ಚಾಪೆಗಳಿಗೂ ಎರಡನೆಯದು ರಬ್ಬರ್ ಮಿಶ್ರಿತ ನಾರಿಗೂ ಹೆಚ್ಚು ಒಗ್ಗುತ್ತದೆ. ಈ ಸಂಸ್ಕರಣಾ ಕ್ರಿಯೆಯಲ್ಲಿ ಬೇರ್ಪಡುವ 'ಪಿತ್' ಎಂಬ ತೆಂಗಿನ ಸಿಪ್ಪೆಯ ಹುಡಿಯನ್ನು ಮಣ್ಣಿನ ಅಗತೆಗಾಗಿ ಗದ್ದೆ ತೋಟಗಳಿಗೆ ಅಲ್ಲದೆ ಇಟ್ಟಿಗೆಯ ರೂಪದಲ್ಲಿ ಬೆಂಕಿ ಉರಿಸಲು ಉಪಯೋಗ ಮಾಡಬಹುದು. ಈ ತರದ ಕಾರ್ಖಾನೆ ಕಾರ್ಕಳ ತಾಲೂಕಿನಲ್ಲಿ ಒಂದೇ ಒಂದು ಆಗಿದ್ದು ದಕ್ಷಿಣ ಕನ್ನಡ ಜಿಲ್ಲೆಗೆ ಅತ್ಯಂತ ದೊಡ್ಡದೆನಿಸಿಕೊಂಡಿದೆ. ಆದರೂ ಕಚ್ಚಾವಸ್ತುಗಳ ಕೊರತೆ ಈ ಕೈಗಾರಿಕೆಯನ್ನು ಬಾಧಿಸುತ್ತಿದೆ. ಇಲ್ಲಿ ತೆಂಗಿನ ಮರಗಳು ಹೇರಳವಾಗಿದ್ದರೂ ಮರಗಳ ಮಾಲಕರು ಕೂಡಾ ಹೇರಳವೇ ಆಗಿರುವುದರಿಂದ ಪ್ರತಿಯೊಬ್ಬ ಮಾಲಕನ ಅಧೀನದಲ್ಲಿ ಬಹಳ ಕಡಿಮೆ ಮರಗಳಿವೆ. ಆದುದರಿಂದ ಸಿಪ್ಪೆಯನ್ನು ವ್ಯಾಪಾರಕ್ಕೆ ತೊಡಗಿಸುವಷ್ಟು ಸಂಖ್ಯೆಯಲ್ಲಿ ಕಾಯಿಗಳು ದೊರೆಯುವುದಿಲ್ಲ.

ವೆಂಕಟೇಶ್ವರ ಇಂಡಸ್ಟ್ರೀಸ್:

1971ರಲ್ಲಿ ತಲೆಯೆತ್ತಿ ಕಾರ್ಕಳದ ಪ್ರತಿಷ್ಠೆಯ ಕೈಗಾರಿಕೆಯಾಗಿ, ಜಿಲ್ಲೆಯ ಏಕಮಾತ್ರ ಘಟಕವಾಗಿರುವ ಈ ಕಾರ್ಖಾನೆಯಲ್ಲಿ ರೂ.8.35 ಲಕ್ಷದ ಭಂಡವಾಳವಿದೆ. ಇದು ಉಪಯೋಗಿಸುವ ಕಚ್ಚಾವಸ್ತು "High density polyıhylene granules" ಬೊಂಬಾಯಿಯ Polyolefins Industries Ltd. ಎಂಬಲ್ಲಿಂದ ಪೂರೈಕೆಯಾಗುವುದು. ಇದರ ಸಿದ್ಧ ವಸ್ತುವಾದ MDPE woven Fabric and Sacks (bags) – ಪ್ಲೇಸ್ಟಿಕ್ ಚೀಲಗಳು – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಬೊಂಬಾಯಿಯಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಮೀನಿನ ಗೊಬ್ಬರ ಕಾರ್ಖಾನೆಗಳಿಗೆ ವಿತರಣೆಯಾಗುವುದು. ಟನ್ನಿಗೆ ರೂ.36,000.00 ಬೆಲೆಯುಳ್ಳ ಸಿದ್ಧ ವಸ್ತುವು ತಿಂಗಳಿಗೆ ಆರರಿಂದ ಎಂಟು ಟನ್ನುಗಳಷ್ಟು ಸಿದ್ಧವಾಗುತ್ತದೆ.

'ಪೈ'ಸ್' ಇಂಡಸ್ಟ್ರಿಯಲ್ ಕೋರ್ಪರೇಶನ್:

ದೊಡ್ಡ ಗಾತ್ರದಲ್ಲಿ ಪ್ರಾರಂಭವಾಗಿ ಇಂದು ದುಸ್ಥಿತಿಯಲ್ಲಿರುವ ಈ ಕೋರ್ಪೊರೇಶನ್ ಕಾರ್ಕಳದಲ್ಲಿ 1966ರಲ್ಲಿ ಹುಟ್ಟಿ ಮೂರು ಬೇರೆ ಬೇರೆ ಘಟಕಗಳಾಗಿ ವಿಸ್ತಾರಗೊಂಡು ರೂ.80

ಕ್ಷಗಳ ವ್ಯವಹಾರವನ್ನು ಹಬ್ಬಿಕೊಂಡು 1983ರ ಆದಿ ಭಾಗದ ವರೆಗೂ ಅವ್ಯಾಹತವಾಗಿ ನಡೆಯಿತು. ನಂತರದ ಒಂದುವರೆ ವರ್ಷಗಳಲ್ಲಿ ಕಾರ್ಮಿಕ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದ ಈ ಕೋರ್ಪೊರೇಶನ್ 1984ನೇ ಅಕ್ಟೋಬರದಲ್ಲಿ ಸಣ್ಣ ಪ್ರಮಾಣದಲ್ಲಿ ಪುನರಾರಂಭಗೊಂಡಿತು. Synthetic Twisted ropeನ್ನು ತಯಾರಿಸುವ ಈ ಕಾರ್ಖಾನೆಗೆ ಬೇಕಾದ ಸಿದ್ಧವಸ್ತು MDPE poly popułin ಬೊಂಬಾಯಿಯಿಂದ ಬರುವುದು. ಹೆಚ್ಚಾಗಿ ಮೀನುಗಾರಿಕೆಗೆ ಬೇಕಾದ ಬಲೆಯನ್ನು ತಯಾರಿಸಲು ಉಪಯೋಗವಾಗುವ ಈ ಪ್ಲಾಸ್ಟಿಕ್ ಹಗ್ಗಗಳು ಕೇರಳ, ತಮಿಳ್ನಾಡುಗಳಲ್ಲಿ ಮಾರಾಟವಾಗುವುದು.

ನಶ್ಯ ತಯಾರಿಸುವ ಸಂಸ್ಥೆಗಳು: ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ದೊಡ್ಡದಾದ ನಶ್ಯ ತಯಾರಿಸುವ ಸಂಸ್ಥೆಯು ಕಾರ್ಕಳದ 'ಸೊವರಿನ್ ನಶ್ಯ.' ಶ್ರೀ ನಾಗೇಶ ಶೆಣೈಯವರ ಮುಂದಾಳ್ತನದಲ್ಲಿ ಮುಂದುವರಿಯುತ್ತಿರುವ ಇದನ್ನು 'ಮಂಗಳೂರು ನಶ್ಯ' ಎಂದು ಕೂಡಾ ಹೆಸರಿಸಿ, 'ಮದ್ರಾಸು ನಶ್ಯ'ಕ್ಕಿಂತ ಭಿನ್ನವಾದುದೆಂದು ಗಿರಾಕಿಗಳಿಗೆ ಸೂಚನೆ ಕೊಡುತ್ತಾರೆ. ಜನಸಾಮಾನ್ಯರಿಗೆ ಎಟಕುವ, ಕಡಿಮೆ ಖರ್ಚಿನ, ಕಡಿಮೆ ಹಾನಿಯ ಎಲ್ಲಾ ನಶ್ಯದ ತಯಾರಿಗೆ ಉಪಯೋಗಿಸುವ ತಂಬಾಕು, ತುಪ್ಪ, ಸುಣ್ಣ ಒಂದೇ ಆದರೂ ಅವನ್ನು ಬೆರೆಸುವ ನಾಜೂಕಿನಲ್ಲಿ ಪ್ರಭೇದಗಳನ್ನು ಕಾಣುತ್ತಾರೆ, ಇದರ ಚಟದವರು. 1936ರಲ್ಲಿ ಸೊವರಿನ್ ನಶ್ಯ ಪ್ರಾರಂಭವಾಗಿದ್ದು ಇಂದು ವರ್ಷಕ್ಕೆ 70,000 ಕಿಲೋಗ್ರಾಮ್ ನಶ್ಯದ ವ್ಯಾಪಾರವನ್ನು ಜಿಲ್ಲೆಯ ಒಳಗೂ ಹೊರಗೂ ಸಂಚಯಿಸಿಕೊಂಡಿದೆ. 1960ರಿಂದ ಇದರ ತಯಾರಿಯು ಯಾಂತ್ರೀಕರಿಸಲ್ಪಟ್ಟು ಸರಕಾರಕ್ಕೆ ವರ್ಷಕ್ಕೆ ರೂ. 4.5ಲಕ್ಷದ ವರಮಾನವು ಸಲ್ಲುತ್ತದೆ.

ಕಾರ್ಕಳದಲ್ಲಿ ಪ್ರಚಲಿತವಾಗಿರುವ ಇನ್ನೊಂದು ನಶ್ಯವು 'ಕುಂಞಪ್ಪ ನಶ್ಯ' ಎಂಬುದು. ವರ್ಷಕ್ಕೆ 5000 ಕಿಲೋಗ್ರಾಂ ನಶ್ಯ ತಯಾರಿಸಿ ಹೆಚ್ಚಾಗಿ ಕಾರ್ಕಳದಲ್ಲಿಯೇ ಮಾರಾಟ ಮಾಡುತ್ತಾರೆ.

ಮರದ ಮಿಲ್ಲುಗಳು: ಕಾರ್ಕಳದ ಹಳೆಯ ಮತ್ತು ಪ್ರಥಮ ಮರದ ಮಿಲ್ಲು 'ನಿರ್ಮಲ ಸೋ ಮಿಲ್ಸ್' 1956ರಲ್ಲಿ ಶ್ರೀ ಸಂಜೀವ ಕಾಮತರಿಂದ ಪ್ರಾರಂಭಿಸಲ್ಪಟ್ಟಿತು. ಈ ಮಿಲ್ಲಿನ ಬಂಡವಾಳ ರೂ. 5ಲಕ್ಷ, ವಾರ್ಷಿಕ ವ್ಯವಹಾರ ರೂ. 1.5ಲಕ್ಷ; 61 ಎಚ್.ಪಿ.ಯ ಸಾಮರ್ಥ್ಯ ಹಾಗೂ 10ಜನರಿಗೆ ಉದ್ಯೋಗ.

1958ರಲ್ಲಿ ಹುಟ್ಟಿಕೊಂಡ 'ಭವಾನಿ' ಮಿಲ್ಲು ಮೂಲತಃ 'ಬೋನ್‌ಮಿಲ್' ಆಗಿದ್ದು ಶ್ರೀ ಬಿ. ವಾಸುದೇವ ಶ್ಯಾನುಭೋಗರ ಮಾಲಕತ್ವದಲ್ಲಿ 1960ರಲ್ಲಿ ಪೂರ್ಣ ಪ್ರಮಾಣದ ಮರದ ಮಿಲ್ಲಾಯಿತು. ರೂ. 20ಲಕ್ಷಗಳ ವ್ಯವಹಾರ; 100 ಎಚ್.ಪಿ. ಸಾಮರ್ಥ್ಯ; 50ಮಂದಿ ಕಾರ್ಮಿಕರಿರುವ ಈ ಮಿಲ್ಲಿನಲ್ಲಿ ಮನೆಯ ಮಾಡಿನ ಮರ ಹಾಗೂ ಶಾಲೆ, ಆಫೀಸು, ಮನೆಗಳಿಗೆ ಬೇಕಾದ ಪೀಠೋಪಕರಣಗಳು ತಯಾರಾಗುತ್ತವೆ. 1964ರಲ್ಲಿ ಶ್ರೀ ಕೆ. ಎಸ್. ನಜೀರ್ ಅಹ್ಮದರಿಂದ 'ಹುಸೇನಿ ಸೊ ಮಿಲ್' ಕುಕ್ಕುಂದೂರು ಗ್ರಾಮದಲ್ಲಿ ತಲೆಯೆತ್ತಿತು. 75 ಎಚ್.ಪಿ. ಸಾಮರ್ಥ್ಯದ ಮತ್ತು ರೂ. 1.5ಲಕ್ಷ ಬಂಡವಾಳದ ಈ ಮಿಲ್ಲಿನ ಮರಗಳು ದಕ್ಷಿಣಕನ್ನಡ ಜಿಲ್ಲೆಯಲ್ಲದೆ ಬೊಂಬಾಯಿ ಬೆಂಗಳೂರಿಗೂ ಹೋಗುವುದು.

ಕಾರ್ಕಳದಲ್ಲಿ ಇನ್ನೂ ನಾಲ್ಕೈದು ಮಿಲ್ಲುಗಳೂ ತಾಲೂಕಿನಲ್ಲಿ ಒಟ್ಟು 12ಮಿಲ್ಲುಗಳೂ ಕಾರ್ಯ ನಿರತವಾಗಿವೆ.

ಎಣ್ಣೆ ಮಿಲ್ಲುಗಳು: ಕಾರ್ಕಳದ ಮೊತ್ತ ಮೊದಲಿನ ಎಣ್ಣೆಮಿಲ್ಲು 'ಲಕ್ಷ್ಮಿ ವೆಂಕಟೇಶ ಆಯಿಲ್ ಮಿಲ್ಸ್'. ಇದು 1933ರಲ್ಲಿ ತನ್ನ ವ್ಯವಹಾರವನ್ನು ಮುಚ್ಚಿತು. 'ಶ್ರೀ ರಾಮ ಆಯಿಲ್ ಮಿಲ್ಸ್' ಎಂಬ ಇನ್ನೊಂದು ಸಂಸ್ಥೆಯು ಮುಂದೆ ಗಣೇಶ ಮಿಲ್ಸ್ ಎಂಬ ಹೆಸರಿನಿಂದ ಕೆ. ವಿ. ಪಿ. ಆಯಿಲ್ ಮಿಲ್ಸ್‌ನವರ ಸೋದರ ಸಂಸ್ಥೆಯಾಗಿ ಜೀವದಾನವನ್ನು ಪಡೆದರೂ ಅದು ಹೆಚ್ಚು ಸಮಯ ಬಾಳಲಿಲ್ಲ. 1918ರಲ್ಲಿ

ಮೂರೂರು ಮಾಧವ ಪ್ರಭುಗಳ ಜೊತೆಯಲ್ಲಿ ಪ್ರಾರಂಭಿಸಿ, 1931ರಿಂದ ಸ್ವತಂತ್ರವಾಗಿ ಮಿಲ್ಲನ್ನು ಬೆಳೆಸಿ ಇಂದು ರಾಜ್ಯಾದ್ಯಂತ ಪ್ರಖ್ಯಾತಿಯನ್ನು ಪಡೆದಿರುವ ಕೆ. ವಿ. ಪಿ. ಆಯಿಲ್ ಮಿಲ್ಸ್‌ನ ಸಂಸ್ಥಾಪಕರು ಶ್ರೀ ವೆಂಕಟೇಶ ಪ್ರಭುಗಳು. ವಿದ್ಯುಚ್ಛಾಲಿತ ಯಂತ್ರಗಳಿಂದ ವರ್ಷದುದ್ದಕ್ಕೂ 15ಜನರಿಗೆ ಉದ್ಯೋಗ ವನ್ನು ಕೊಡುವ ಈ ಮಿಲ್ಲಿನ ವಾರ್ಷಿಕ ವ್ಯವಹಾರ ರೂ. 75ಲಕ್ಷ. ಇದರ ಕಚ್ಚಾವಸ್ತುವಾದ ಕೊಬ್ಬರಿಯ 75% ಕೇರಳದಿಂದ ಬರುವುದು. ಕಾರ್ಕಳದ ಇನ್ನೊಂದು ದೊಡ್ಡ ಎಣ್ಣೆ ಮಿಲ್ಲು 'ಪ್ರಸಾದ್ ಆಯಿಲ್ ಮಿಲ್ಸ್' ಇದು 1958ರಲ್ಲಿ ಪ್ರಾರಂಭವಾಯಿತು. ಹಾಗೆಯೇ ಆನೆಕೆರೆಯ ಬಳಿಯಿರುವ 'ವೆಂಕಟರಮಣ ಆಯಿಲ್ ಮಿಲ್ಸ್' ಕಾರ್ಕಳದ ಮೂರನೆಯ ದೊಡ್ಡ ಪ್ರಮಾಣದ ಎಣ್ಣೆ ಮಿಲ್ ಆಗಿದೆ.

ಅಕ್ಕಿ ಮಿಲ್ಲುಗಳು: 1957ರಲ್ಲಿ 'ಸಾಣೂರು ಪೊವ ಮತ್ತು ರೈಸ್ ಮಿಲ್ಸ್' ಸ್ಥಾಪನೆಗೊಂಡು ಮುಂದಕ್ಕೆ 'ಸ್ವಯಂಚಾಲಿತ ಯಂತ್ರಗಳಿಂದ ಆವಿಷ್ಕಾರ ಹೊಂದಿ ಜಿಲ್ಲೆಗೆ ಪ್ರಥಮ ರಾಜ್ಯಕ್ಕೆ ಎರಡನೆಯ ದಾಗಿರುವ ಈ ಮಿಲ್ಲಿನ ಭಂಡವಾಳ ರೂ. 22 ಲಕ್ಷವೂ ವಾರ್ಷಿಕ ವ್ಯವಹಾರ ರೂ. 40 ಲಕ್ಷಗಳದೂ ಆಗಿ ಘನ ಅಕ್ಕಿ ಮಿಲ್ಲೊಂದು ಕಾರ್ಕಳದಲ್ಲಿರುವುದು ಅಭಿಮಾನದ ವಿಷಯ. ಮೂಡುಬಿದಿರೆಯ 'ಬಾಲಾಜಿ ರೈಸ್ ಮಿಲ್' ತಾಲೂಕಿನಲ್ಲಿ ಎರಡನೆಯ ಸ್ಥಾನದಲ್ಲಿಯೂ, 'ಸಾಣೂರು ರೈಸ್ ಮಿಲ್' ಮೂರನೆಯ ಸ್ಥಾನದಲ್ಲಿಯೂ ಇದೆ.

ಮೇಲೆ ವಿವರಿಸಿದವುಗಳಲ್ಲದೆ ಬೈಲೂರಿನಲ್ಲಿರುವ 'ಶಿಲ್ಪ ಫ್ಲೋರಿಂಗ್ಸ್' ಕಾರ್ಕಳ ತಾಲೂಕಿನಲ್ಲಿರುವ ಒಂದೇ ಒಂದು ಕೈಗಾರಿಕೆಯಾಗಿದೆ. 'ಆರಾವ್ ಇಂಡಸ್ಟ್ರೀಸ್' ಎಂಬ ಕಬ್ಬಿಣದ ಪೀಠೋಪಕರಣಗಳನ್ನು ತಯಾರಿಸುವ ಘಟಕವು ಕಾರ್ಕಳದಲ್ಲಿದೆ. ನಿಟ್ಟೆಯಲ್ಲಿ 'ನಿಟ್ಟೆ ರೊಟ್ಟಿ' ಎಂದು ಸುಪ್ರಸಿದ್ಧವಾಗಿರುವ ಖಾದ್ಯ ವಸ್ತುವು ಗುಡಿಕೈಗಾರಿಕೆಯಾಗಿರುವುದು ಉಲ್ಲೇಖನೀಯ.

ಸಾರಿಗೆ ಸಂಪರ್ಕ: ಇಂದು ದಿನವೊಂದಕ್ಕೆ 100ಕ್ಕಿಂತ ಹೆಚ್ಚು ಬಸ್ಸುಗಳು, ಅನೇಕಾನೇಕ ಲಾರಿಗಳು ಹಾಗೂ ತಾಲೂಕಿನುದ್ದಕ್ಕೆ ಗ್ರಾಮಾಂತರ ಪ್ರದೇಶಗಳನ್ನ ಜೋಡಿಸುವ 972 ಕಿ.ಮೀ. ಉದ್ದದ ರಸ್ತೆ ಯೊಂದಿಗೆ ಸಾರಿಗೆ ಸಂಪರ್ಕದ ಜಾಲವನ್ನು ಹೆಣೆದಿರುವ ಕಾರ್ಕಳದ ಸಾರಿಗೆ ವ್ಯವಹಾರಕ್ಕೆ ಗತಕಾಲದ ಕೊಡುಗೆ ಅತಿ ಮಹತ್ತರವಾದುದು. 1920ರಲ್ಲಿ ಹೆಚ್ಚು ಕಡಿಮೆ 20 ಜನರು ಸೇರಿದ್ದ 'ಇಂಡಿಯನ್ ಮೋಟರ್ ಸರ್ವಿಸ್' ಎಂಬ ಸಾರಿಗೆ ಸಂಸ್ಥೆಯು ಬಸ್ ರಸ್ತೆಗಿಳಿಯಿತು. 1921ರಲ್ಲಿ 'ಕಾರ್ಕಳ ಮೋಟರ್ ಸರ್ವಿಸ್' ಎಂಬ ಸಂಸ್ಥೆಯು ಉದಯವಾಯಿತು. ಕಾರ್ಕಳದ ಆ ಕಾಲದ ಗಣ್ಯ ವ್ಯಕ್ತಿಗಳೆನಿಸಿಕೊಂಡಿದ್ದ ಶ್ರೀ ಕುಕ್ಕುಂದೂರು ಸುಬ್ರಾಯ ಕಾಮತ್, ವಕೀಲ್ ರಾಮ ಹೆಗ್ಡೆ, ಎಸ್. ಎಲ್. ಮಥಾಯಸ್, ಇಡ್ಯವಾಸುದೇವರಾಯರು ಇತ್ಯಾದಿ ಹತ್ತು ಜನರು ಸೇರಿ ಪ್ರತಿಯೊಬ್ಬರು ರೂ. 5,000-00ದ ಪಾಲು ಬಂಡವಾಳದಲ್ಲಿ ವ್ಯವಹಾರ ಪ್ರಾರಂಭಿಸಿದರು. ಈ ಸಾರಿಗೆ ಸಂಸ್ಥೆಯು ಕಷ್ಟಕ್ಕೊಳಗಾಗಿ ಮುಚ್ಚುವ ಸ್ಥಿತಿಯಲ್ಲಿದ್ದಾಗ ಶ್ರೀ ವಿ. ಎಸ್. ಕಾಮತರು ಅದನ್ನು ವಹಿಸಿಕೊಂಡರು. ಅದೇ ಮುಂದೆ ಸಿ.ಪಿ.ಸಿ. ಎಂಬ ಪ್ರಮುಖ ಕಂಪೆನಿಯಾಗಿ ಜಿಲ್ಲೆಯಾದ್ಯಂತ ತನ್ನ ಸಾರಿಗೆಯ ಸಂಪರ್ಕವನ್ನು ಬೆಳೆಸಿ ಕೊಂಡಿತು.

ಹಾಗೆಯೇ, 1923ರಲ್ಲಿ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯು ಕಾರ್ಕಳದಲ್ಲಿ ಶ್ರೀಯುತರು ಗಳಾದ ವಿಟ್ಠನಾಯಕ್, ರಾಮನಾಥ ನಾಯಕ್, ಮತ್ತು ಅನಂತ್ರಾಯಶೆಟ್ಟರಿಂದ ಸ್ಥಾಪನೆಯಾಗಿ ಕಾಲಕ್ರಮೇಣ ಅದು ಉಡುಪಿಯಲ್ಲಿ ನೆಲೆನಿಂತಿತು. ಇಂದು ಅದೇ ಕಂಪೆನಿಯು ಜಿಲ್ಲೆಯಲ್ಲೂ, ಹೊರಗೂ ತನ್ನ ಕಾರ್ಯಬಾಹುಳ್ಯವನ್ನು ಹೆಚ್ಚಿಸಿಕೊಂಡಿದೆ. ಕಾರ್ಕಳದ ಹೆಚ್ಚಿನ ವ್ಯಾಪಾರವು ಮಂಗಳೂರಿನೊಂದಿಗೆ ಹೆಣೆಯಲ್ಪಟ್ಟಿದ್ದರೂ, ಗುರುಪುರ ಸೇತುವೆ ಆಗುವವರೆಗೂ ಸಾರಿಗೆ ಸಂಪರ್ಕವು ಆತಂಕಕ್ಕೊಳಗಾಗಿತ್ತು. ಕಾಡುಹೊಳೆ, ಎಣ್ಣೆಹೊಳೆ, ಸೀತಾನದಿ, ಒಂಟೆಹಳ್ಳ ಸೇತುವೆಗಳು ಸೋಮೇಶ್ವರ ಕಡೆಯ ಸಂಪರ್ಕವನ್ನು ಹೆಚ್ಚಿಸಿದರೂ ರಸ್ತೆಗಳು ಬಹಳ ದುಸ್ಥಿತಿಯಲ್ಲಿದ್ದುದರಿಂದ ಸಾರಿಗೆ ಸಾಗಾಟವು ಸುಭದ್ರವಾಗಿರಲಿಲ್ಲ. ಎತ್ತಿನ ಗಾಡಿಯಲ್ಲಿ ಮಂಗಳೂರಿನಿಂದ ವಸ್ತುಗಳನ್ನು ಕಾರ್ಕಳಕ್ಕೆ ಸಾಗಿಸುವುದು ಸರ್ವೇಸಾಮಾನ್ಯ.

ರ್ಕಳದ ಶ್ರೀ ವೈ. ವಾಮನಕಿಣಿಯವರು 1935ರಲ್ಲಿ ತೆಗೆದುಕೊಂಡ ಫೋರ್ಡ್ ಲೋರಿಯು ಜಿಲ್ಲೆಯಲ್ಲಿಯೇ ಪ್ರಥಮದ್ದೆನಿಸಿತು. ಕಿಣಿಯವರೊಂದಿಗೆ ಶ್ರೀ ವೆಂಕಟೇಶ ನಾರಾಯಣ ಭಟ್ ಮತ್ತು ವೆಂಕಟೇಶ ಪ್ರಭುಗಳು ಸೇರಿಕೊಂಡು 'ಶ್ರೀ ವೆಂಕಟರಮಣ ಟ್ರಾನ್ಸ್‌ಪೋರ್ಟ್' ಎಂಬ ಹೆಸರಿನಿಂದ 1940ರವರೆಗೆ ಪಾಲು ವ್ಯಾಪಾರ ನಡೆಸಿದರು. ಕರಾವಳಿಯ ಸೇತುವೆಗಳು ಪೂರ್ಣಗೊಳ್ಳುವತನಕ ಮಂಗಳೂರು - ಕಾರ್ಕಳ - ಉಡುಪಿ ಹೆದ್ದಾರಿಯು ಜಿಲ್ಲೆಯ ಸಾರಿಗೆಯ ಮಹಾದ್ವಾರವಾಗಿತ್ತು. ಮಂಗಳೂರನ್ನು ನೇರವಾಗಿ ಉಡುಪಿ ಮತ್ತು ಕುಂದಾಪುರಗಳಿಗೆ ಜೋಡಿಸುವ ರಸ್ತೆ ಕಾರ್ಕಳದ ಮೂಲ ಕವೇ ಹಾದು ಹೋಗಬೇಕಿತ್ತು.

ಬಲ್ಲಾಳ್ ಮೋಟಾರ್: ಆಧುನಿಕ ರಸ್ತೆ ಸಾರಿಗೆಯ ಜಾಲವನ್ನು ಹೆಣೆಯುವಲ್ಲಿ ಬಲ್ಲಾಳ್ ಮೋಟರ್ಸ್ ಒಂದು ಬಲವಾದ ಕೊಂಡಿ. ಕಾಂತಾವರ ಗ್ರಾಮದ ಬಾರಾಡಿ ಬೀಡಿನ ಪಾಂಡ್ಯರಾಜ ಬಲ್ಲಾಳರಿಂದ 1958ರಲ್ಲಿ ಸ್ಥಾಪನೆಗೊಂಡ ಈ ಸಾರಿಗೆ ಸಂಸ್ಥೆಯ ಪ್ರಧಾನ ಕಚೇರಿಯಿರುವುದು ಮೂಡುಬಿದ್ರಿಯ ವಿಜಯ ಮಹಲಿನಲ್ಲಿ. ಮೂಲತಃ ಭೂ ಮಾಲಕರಾಗಿದ್ದ ಶ್ರೀ ಬಲ್ಲಾಳರು ಭೂ ಮಸೂದೆಯಿಂದಾಗಿ ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ಕಾಯಕಕ್ಕೆ ಕೈಹಾಕಿದರು. ಇದನ್ನು ತಮ್ಮ ಮಕ್ಕಳ ಸಹಾಯದಿಂದ ಕುಟುಂಬ ಸಂಸ್ಥೆಯಾಗಿ ರೂಪಿಸಿಕೊಂಡು ಇವರ ಪ್ರಥಮ ಬಸ್ಸು ನಾರಾವಿ–ಶಿರ್ತಾಡಿ–ಮಂಗಳೂರು ದಾರಿಯಾಗಿ ತನ್ನ ಯಾನವನ್ನು ಪ್ರಾರಂಭಿಸಿತು. 1964ರಲ್ಲಿ ರಾಜ್ಯದಲ್ಲಿ ಸಾರಿಗೆಯ ಅಧ್ಯಾಯದಲ್ಲಿ ಒಂದು ಹೊಸ ಪುಟವನ್ನು ತೆರೆದ ಬಲ್ಲಾಳ್ ಮೋಟರ್ಸ್ 'ಸುಖಾಸೀನ' (Luxury) ಬಸ್ಸುಗಳನ್ನು ಜನರ ಸೇವೆಗಾಗಿ ಒಪ್ಪಿಸಿತು. ಒಂದು ಕಾಲದಲ್ಲಿ 650 ಮೈಲುಗಳಷ್ಟು ದೂರವಿದ್ದ ಮಂಗಳೂರು – ಬೊಂಬಾಯಿ ದಾರಿಯನ್ನು ಬಸ್ಸಿನ ಮೂಲಕ ಸುಖ ಪ್ರಯಾಣಕ್ಕೆ ಅಣಿಗೊಳಿಸಿದ ಕೀರ್ತಿ ಬಲ್ಲಾಳ್ ಮೋಟರ್ಸ್‌ಗೆ ಸಲ್ಲುತ್ತದೆ; ಹಾಗೂ ಇಷ್ಟು ದೂರದ ಈ ಕ್ರಮದ ಪ್ರಯಾಣ ದೇಶಕ್ಕೇ ಪ್ರಥಮವೆನಿಸಿದೆ. ಕಾನೂನಿನಲ್ಲಿರುವ ಕೆಲವು ಲೋಪದೋಷಗಳ ಪ್ರಯೋಜನವನ್ನು ಪಡೆದುಕೊಂಡು 'ಒಪ್ಪಂದದ ಮೇರೆಗೆ' ಓಡಿಸುತ್ತಿದ್ದ ಈ ದೂರ ಪ್ರಯಾಣದ ಬಸ್ಸುಗಳು ಮಹಿಳೆಯರಿಗೂ, ಮಕ್ಕಳಿಗೂ ನಿರ್ಭಯ ಪ್ರಯಾಣಕ್ಕೆ ಹೆಚ್ಚು ಅನುಕೂಲವಾದುವು. ಇವಲ್ಲದೆ, ಪ್ರಯಾಣಿಕರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು 'ರಾತ್ರಿ ಪ್ರಯಾಣ'ದ ಪ್ರಯೋಗವನ್ನು ಜನರ ಮುಂದಿಡುವುದರಲ್ಲಿಯೂ ಇವರೇ ಮೊದಲಿಗರು. ಎರಡು ಮಂದಿ ಚಾಲಕ ರಿರುವ ಇಂತಹ ಬಸ್ಸುಗಳು ಒಂದು ಕಾಲದಲ್ಲಿ ಮೈಸೂರು, ಬೆಂಗಳೂರು, ಮದ್ರಾಸು, ಬೊಂಬಾಯಿ, ಬೆಳ್ಗಾವ್, ಹೈದರಾಬಾದ್ ಮುಂತಾದೆಡೆಗಳಿಗೆ ಓಡುತ್ತಿದ್ದುವು. 64 ಬಸ್ಸುಗಳು. ಹಾಗೂ 350 ಸಿಬ್ಬಂದಿ ವರ್ಗದವರನ್ನು ಹೊಂದಿದ್ದ ಈ ಸಂಸ್ಥೆಯು 1975ರಲ್ಲಿ ರಾಜ್ಯ ಸರಕಾರದ ಸಾರಿಗೆ ರಾಷ್ಟ್ರೀ ಕರಣದ ನೀತಿಯಿಂದ 36 ಬಸ್ಸುಗಳನ್ನು ಕಳೆದುಕೊಳ್ಳಬೇಕಾಯಿತು. ಖಾಸಗಿ ಸಾರಿಗೆಯ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಹಳ್ಳಿಯ ಹಾಳು ರಸ್ತೆಗಳಲ್ಲಿಯೂ ಬಸ್ಸನ್ನು ನಡೆಸಿ ದವರು ಬಲ್ಲಾಳ್ ಮೋಟಾರ್ಸ್‌ನವರು. ಸಾರಿಗೆಯ ಇತಿಹಾಸದಲ್ಲಿ ಹೊಸತೊಂದು ಶಕವನ್ನು ನಿರ್ಮಿಸಿ ಜನರ ಪ್ರಶಂಸೆಗೆ ಪಾತ್ರರಾದವರು. ಆದರೆ ರಾಷ್ಟ್ರೀಕರಣದ ಭೀತಿಯೇ ಮೊದಲಾದ ಕಾರಣಗಳಿಂದ ಈಗ ಹೆಚ್ಚುಕಡಿಮೆ 20 ಬಸ್ಸುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಳಗೇ ಯೇ ಹೆಚ್ಚಾಗಿ ನಡೆಸುತ್ತಿದ್ದಾರೆ.

ಇದಲ್ಲದೆ, ಇತ್ತೀಚೆಗೆ ಕಾರ್ಕಳ ತಾಲೂಕಿನಲ್ಲಿ ಇತರರನೇಕರು ಬಸ್ಸು ಸಾರಿಗೆಯನ್ನು ಜನರ ಸೇವೆ ಗಾಗಿ ಒದಗಿಸಿದ್ದಾರೆ. ಅವರಲ್ಲಿ ಮೂಡುಬಿದ್ರಿಯ ಶ್ರೀ ಶೀನಪ್ಪ, ಅಲಂಗಾರಿನ ಶ್ರೀ ನಿತ್ಯಾನಂದ ಮಲ್ಯ, ಅಜೆಕಾರಿನ ಶ್ರೀ ಜೀವಂಧರ ಅಧಿಕಾರಿ, ಕಾರ್ಕಳದ ಶ್ರೀ ಅನಂತಪ್ರಭು, ಶ್ರೀ ಜಿನರಾಜ ಮುಂತಾದವರು ಇಲ್ಲಿ ಹೆಸರಿಸಬೇಕಾದ ಸಾರಿಗೆಯ ಮಾಲಕರು.

ಬ್ಯಾಂಕುಗಳು

ಕಾರ್ಕಳದ ಪೇಟೆ ಹಳೆಯದು. ಅಗಲಕಿರಿದಾದ ರಸ್ತೆಗಳು. ಇಕ್ಕಟ್ಟಾದ ಅಂಗಡಿಗಳು. ಆದರೂ

ವ್ಯಾಪಾರ ದೊಡ್ಡದು. ಉಡುಪಿ, ಮಂಗಳೂರಿನಿಂದಲೂ ಜನರು ಇಲ್ಲಿಗೆ ಬಂದು ವಸ್ತುಗಳನ್ನು ಕೊಂಡುಕೊಳ್ಳುವಷ್ಟು ವಾಣಿಜ್ಯವೃಕ್ಷಕ್ಕೆ ನೀರೆರೆಯುವವರು ಬ್ಯಾಂಕಿನವರು. ಜಿಲ್ಲೆಯಲ್ಲಿ ಹುಟ್ಟಿಕೊಂಡ ಎಲ್ಲಾ ಬ್ಯಾಂಕುಗಳ ಶಾಖೆಗಳೂ ಇಲ್ಲಿವೆ. ಅವರಲ್ಲೂ ಕೆನರಾಬೆಂಕಿನ ಪ್ರಪ್ರಥಮ ಶಾಖೆಯೇ ಕಾರ್ಕಳದಲ್ಲಿ, 1926ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರಿಂದ ಆ ಕಾಲದಲ್ಲಿದ್ದ ಕಾರ್ಕಳದ ವಾಣಿಜ್ಯ ವ್ಯವಹಾರದ ಒಳಶಕ್ತಿಯನ್ನು ಅಳೆಯಲು ಸಾಧ್ಯವಿದೆ. ಇಂದು ಈ ಬೇಂಕಿನ ಶಾಖೆಯ ಡಿಪೊಸಿಟ್ ರೂ. 3ಕೋಟಿಯನ್ನೂ ಮಿಕ್ಕಿದ್ದರೆ ಕೊಟ್ಟ ಸಾಲದ ಮೊತ್ತ ರೂ. 1ಕೋಟಿಯಷ್ಟಾಗಿದೆ. ಕಾರ್ಕಳದಲ್ಲಿ ಸ್ಥಾಪನೆಯಾದ ಎರಡನೆಯ ಶಾಖೆ ಸಿಂಡಿಕೇಟ್ ಬ್ಯಾಂಕಿದ್ದು. ಇಂದು ಜಿಲ್ಲೆಯಲ್ಲಿ 'ಲೀಡ್ ಬೇಂಕ್' ಆಗಿ ಕಾರ್ಯವೆಸಗುತ್ತಿರುವ ಈ ಬೇಂಕಿನ ಶಾಖೆ ಕಾರ್ಕಳಕ್ಕೆ 1936ರಲ್ಲಿ ಕಾಲಿಟ್ಟಿತು. ಡಿಪೊಸಿಟ್‌ನ ಮೊತ್ತವನ್ನು ರೂ. 3.75ಕೋಟಿಗಿಂತಲೂ ಮೀರಿಸಿರುವ ಇದರ ಸಾಲದ ಮೊತ್ತ ರೂ. 3.5ಕೋಟಿ. ಅತಿಹೆಚ್ಚು ಗೇರುಬೀಜವು ಈ ಶಾಖೆಯ ಮೂಲಕ ಪರದೇಶಕ್ಕೆ ರಫ್ತಾಗುತ್ತದೆ. ಇದಾದ ಎರಡು ವರ್ಷಗಳಲ್ಲಿ ವಿಜಯ ಬ್ಯಾಂಕಿನ 5ನೆಯ ಶಾಖೆಯು ಕಾರ್ಕಳದ ಪಾಲಿಗಾಯಿತು. 1938ರಲ್ಲಿ ತಲೆಯೆತ್ತಿದ ಈ ಶಾಖೆಯಲ್ಲಿ ರೂ. 1ಕೋಟಿ 60ಲಕ್ಷ ಡಿಪೊಸಿಟ್ ಹಾಗೂ ರೂ. 40ಲಕ್ಷಗಳ ಸಾಲದ ಪ್ರಮಾಣವಿದೆ. ಈ ಸಾಲದ 80%ವನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ಆದ್ಯತೆಯ ವಿಭಾಗಗಳಿಗೆ ವಿತರಣೆ ಮಾಡಿದೆ. 1944ರಲ್ಲಿ ಜನ್ಮವೆತ್ತಿದ ಕರ್ಣಾಟಕ ಬ್ಯಾಂಕಿನ ಶಾಖೆಯಲ್ಲಿ ರೂ. 1.8ಕೋಟಿ ಡಿಪೊಸಿಟ್ ಹಾಗೂ ರೂ. 35ಲಕ್ಷಗಳ ಸಾಲದ ವ್ಯವಹಾರವಿದೆ. ಹೈನಗಾರಿಕೆಯ ಸಾಲಕ್ಕೆ ಹೆಚ್ಚು ಒತ್ತು ಕೊಟ್ಟ ಈ ಶಾಖೆಯ ಬೆಳವಣಿಗೆಗೆ ವಿದೇಶಿ ಎಕೌಂಟುಗಳು ಹೆಚ್ಚು ಬಲಕೊಟ್ಟಿವೆ. 1964ರಲ್ಲಿ ಸ್ಟೇಟ್ ಬೇಂಕ್ ಆಫ್ ಮೈಸೂರು ಇದರ ಶಾಖೆಯು ಸರಕಾರದ ಪ್ರತಿನಿಧಿ ಬ್ಯಾಂಕಾಗಿ ಕಾರ್ಕಳದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಉದ್ಘಾಟಿಸಿತು. ರೂ. 89,08,000=00 ಒಟ್ಟು ಡಿಪೊಸಿಟ್ (Aggregate Deposits ರೂ. 83,75,000=00 + Banks' Deposits ರೂ. 5,33,000 00) ಮತ್ತು ರೂ, ರೂ. 11,29,000=00 ಸಾಲದ ಮೊತ್ತದಲ್ಲಿ ಡಿ.ಐ.ಆರ್.ಗೆ ಒದಗಿಸಿದ ಹಣ ರೂ. 1,64,000=00 ಅನಂತರ 1974ರಲ್ಲಿ ಕೋರ್ಪೊರೇಶನ್ ಬೇಂಕ್ ತನ್ನ ಶಾಖೆಯನ್ನು ತೆರೆದು ಸದ್ಯದ ವ್ಯವಹಾರವನ್ನು ರೂ. 2ಕೋಟಿಯ ಡಿಪೊಸಿಟ್‌ಗೂ ರೂ. 1ಕೋಟಿಯ ಸಾಲಕ್ಕೂ ಮುಟ್ಟಿಸಿದೆ. 1983ರಲ್ಲಿ ಇಂಡಿಯನ್ ಓವರ್‌ಸೀಸ್ ಬೇಂಕಿನ ಶಾಖೆಯೂ ಕಾರ್ಕಳದ ವಾಣಿಜ್ಯ ವ್ಯವಹಾರದಲ್ಲಿ ಪಾಲುಗೊಂಡಿತು.

ಇವಲ್ಲದೆ ತಾಲೂಕಿನಲ್ಲಿ 5 ಸಹಕಾರಿ ಬ್ಯಾಂಕುಗಳಿವೆ. ಒಂದು ಭೂ ಅಭಿವೃದ್ಧಿ ಬ್ಯಾಂಕು, 10 ರೈತರ ಸಹಕಾರಿ ಬ್ಯಾಂಕುಗಳು, 23 ಎಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ, ಮತ್ತು 99 ಎಗ್ರಿಕಲ್ಚರಲ್ ಕೋ-ಆಪರೇಟಿವ್ ಸೊಸೈಟಿಗಳೂ ಇವೆ. ಇವುಗಳಲ್ಲಿ ಹೆಚ್ಚಿನವುಗಳು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಿಸಿದ್ದು ರೈತರಿಗೆ ಹಿತಚಿಂತಕನಾಗಿಯೂ, ಆಪದ್ಬಾಂಧವನಾಗಿಯೂ ಕಾರ್ಯವೆಸಗುತ್ತಿವೆ.

ಜೀವವಿಮೆ

ಉಡುಪಿ ವಿಭಾಗದ ಆಡಳಿತಕ್ಕೊಳಪಟ್ಟ ಐದು ಜಿಲ್ಲೆಗಳಲ್ಲಿ ದಕ್ಷಿಣಕನ್ನಡವೂ ಒಂದು. ವಿಭಾಗದ 20 ಶಾಖೆಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯೊಂದರಲ್ಲೇ ಹತ್ತು ಶಾಖೆಗಳು–49% ವ್ಯವಹಾರ–33% ಜನಸಂಖ್ಯೆ. ಜಿಲ್ಲೆಯ ಎಂಟು ತಾಲೂಕುಗಳ ಪೈಕಿ ಮಂಗಳೂರು ತಾಲೂಕು 4ಶಾಖೆಗಳನ್ನೂ, ಉಡುಪಿ ಎರಡನ್ನೂ, ಕುಂದಾಪುರ, ಪುತ್ತೂರು, ಕಾರ್ಕಳ, ಮತ್ತು ಬಂಟ್ವಾಳ ತಲಾ ಒಂದೊಂದು ಶಾಖೆಯನ್ನೂ ಹೊಂದಿರುತ್ತವೆ. ಒಂದೇ ತಾಲೂಕಿನ ಪರಿಮಿತಿಗೊಳಪಟ್ಟ ಶಾಖೆ ಕಾರ್ಕಳ ಮಾತ್ರ (ಮಂಗಳೂರು ಮತ್ತು ಉಡುಪಿ ಒಂದಕ್ಕಿಂತ ಹೆಚ್ಚು ಶಾಖೆಗಳನ್ನು ಹೊಂದಿದ್ದು, ಕುಂದಾಪುರ, ಪುತ್ತೂರು ಮತ್ತ ಬಂಟ್ವಾಳ ಶಾಖೆಗಳು ಆಯಾಯ ತಾಲೂಕುಗಳಲ್ಲದೆ ಇತರ ತಾಲೂಕು ಅಥವಾ ತಾಲೂಕುಗಳ

ಭಾಗಗಳನ್ನು ಒಳಗೊಂಡಿವೆ) ದಕ್ಷಿಣವಲಯದಲ್ಲಿ ಉಡುಪಿ ವಿಭಾಗ ಪ್ರಥಮ ಸ್ಥಾನದಲ್ಲಿದೆ. ಉಡುಪಿ ವಿಭಾಗದ 20ಶಾಖೆಗಳಲ್ಲಿ ಕುಂದಾಪುರ, ಮಂಗಳೂರು, ಉಡುಪಿ ಶಾಖೆಗಳ ತರುವಾಯ ಕಾರ್ಕಳ ಶಾಖೆಯು ನಾಲ್ಕನೆಯ ಸ್ಥಾನದಲ್ಲಿದೆ.

ಜೀವವಿಮಾ ಉದ್ಯಮವು ರಾಷ್ಟ್ರೀಕೃತಗೊಂಡ ಬಳಿಕ ಮೊದಲ ವರ್ಷದಲ್ಲಿ (1956 - 57) ಕಾರ್ಕಳ ತಾಲೂಕಿನ ವಿಮಾ ವ್ಯವಹಾರದ ಒಟ್ಟು ಮೌಲ್ಯ ಸುಮಾರು ರೂ. 20ಲಕ್ಷ. 1969 - 70ರಲ್ಲಿ ಇದು ರೂ. ಎಪ್ಪತ್ತು ಲಕ್ಷವನ್ನು ಮೀರಿತು. 1980ಕ್ಕೆ ರೂ. ಎರಡು ಕೋಟಿಯಷ್ಟಾಯಿತು. 1980ರಲ್ಲಿ ನವಂಬರ ಒಂದರಂದು (ರಾಜ್ಯೋತ್ಸವ ದಿನ) ಕಾರ್ಕಳ ಶಾಖೆಯು ಉದಯವಾಯಿತು. ಶಾಖೆಯ ಕ್ಷಿಪ್ರ ಪ್ರಗತಿಯನ್ನು ಈ ಕೆಳಗಿನ ವಿವರಗಳು ತೋರಿಸುತ್ತವೆ.

ವರ್ಷ	ಪಾಲಿಸಿ ಸಂಖ್ಯೆ	ವಿಮಾನ ಮೌಲ್ಯ
1980 – 81	1842	ರೂ. 2.28 ಕೋಟಿ
1981 – 82	2120	ರೂ. 3.00 ಕೋಟಿ
1982 – 83	2792	ರೂ. 4.58 ಕೋಟಿ
1983 – 84	2958	ರೂ. 4.78 ಕೋಟಿ

1983 - 84ರಲ್ಲಿ ಜೀವವಿಮಾ ಪಾಲಿಸಿ ಮಾರಾಟದ ಸಮೀಕ್ಷೆಯಲ್ಲಿ ಕಂಡು ಬಂದ ಅಂಶಗಳು :

ಸರಾಸರಿ	ಪ್ರತಿ ಲಕ್ಷ ಜನಸಂಖ್ಯೆಗೆ ಮಾರಾಟವಾದ ಪಾಲಿಸಿಗಳು	ತಲಾವಾರು ವಿಮೆ
ಕಾರ್ಕಳ ಶಾಖೆಯ ಸರಾಸರಿ	1157	ರೂ. 187.32
ಉಡುಪಿ ವಿಭಾಗದ ಸರಾಸರಿ	869	ರೂ. 132.81
ದಕ್ಷಿಣ ವಲಯದ ಸರಾಸರಿ	477	ರೂ. 83.54
ಅಖಿಲ ಭಾರತದ ಸರಾಸರಿ	345	ರೂ. 64.20

ವಿಮಾ ಸೌಲಭ್ಯವು ಪಟ್ಟಣ ಪ್ರದೇಶದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಪಸರಿಸಿದ ತುಲನಾತ್ಮಕ ವಿವರವು ಈ ಕೆಳಗಿನಂತಿದೆ :

ನಿಧಿಗಳ ವರ್ಷ	ಪಟ್ಟಣ ಪ್ರದೇಶ			ಗ್ರಾಮಾಂತರ ಪ್ರದೇಶ		
	ಜೀವವಿಮಾ ಸಂಖ್ಯೆ	ಮಾರಾಟ ಪ್ರತಿನಿಧಿಗಳ ಪಾಲಿಸಿಗಳ ಸಂಖ್ಯೆ	ವಿಮಾ ವಾದ (ಲಕ್ಷ ರೂ.)	ಜೀವವಿಮಾ ಮೌಲ್ಯ ಸಂಖ್ಯೆ	ಮಾರಾಟ ಪ್ರತಿನಿಧಿಗಳ ಪಾಲಿಸಿಗಳ ಸಂಖ್ಯೆ	ವಿಮಾ ವಾದಮೌಲ್ಯ (ಲಕ್ಷ ರೂ.)
1980–81	52	1003	138.13	58	839	90.15
1981–82	50	755	130.10	68	1365	169.99
1982–83	49	1121	215 97	83	1671	241 53
1093–84	56	1054	210 37	104	1904	267.57

ಪಟ್ಟಣ ಪ್ರದೇಶದಲ್ಲಿನ ಜೀವವಿಮಾ ವ್ಯವಹಾರದಲ್ಲಿ ವಿಶೇಷ ವ್ಯತ್ಯಾಸ ಕಂಡುಬಾರದೆ ಗ್ರಾಮಾಂತರ ಪ್ರದೇಶಗಳಲ್ಲಿ ಗಣನೀಯವಾಗಿ ಏರಿದ್ದು ಗಮನಿಸಬೇಕಾದ ಅಂಶ. ಹಾಗೆಯೇ 1983 - 84ರಲ್ಲಿ ಇಬ್ಬರು ಅಭಿವೃದ್ಧಿ ಅಧಿಕಾರಿಗಳು ತಲಾ ಒಂದು ಕೋಟಿಗೂ ಮಿಕ್ಕಿ ವ್ಯವಹಾರ ಮಾಡಿದ್ದು ಅವರಲ್ಲೊಬ್ಬರು ಗ್ರಾಮಾಂತರ ಪ್ರದೇಶದವರು. ರೂ. 30ಲಕ್ಷಕ್ಕೂ ಮಿಕ್ಕಿದ ಮೌಲ್ಯದ ಜೀವವಿಮಾ ಪಾಲಿಸಿಗಳನ್ನು ಮಾರಾಟ ಮಾಡಿದ ಮೂವರಲ್ಲಿ ಇಬ್ಬರು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುವವರು. ರೂ. 10ಲಕ್ಷಕ್ಕೂ ಮೀರಿದ ಜೀವವಿಮಾ ವ್ಯವಹಾರ ನಡೆಸಿದ 15 ಪ್ರತಿನಿಧಿಗಳಲ್ಲಿ 9ಮಂದಿ ಗ್ರಾಮಾಂತರ ಪ್ರದೇಶಗಳವರು.

ಕುದುರೆಮುಖ ಯೋಜನೆ


ಕಾರ್ಕಳದಿಂದ 32ಮೈಲು ದೂರವಿರುವ ಕುದುರೆಮುಖದ ಗಣಿಗಾರಿಕೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿರುವುದಾದರೂ, ಕಾರ್ಕಳದ ಆರ್ಥಿಕ ಜೀವನಕ್ಕೆ ಹೊಸ ಆಯಾಮಗವನ್ನು ನೀಡಿತ್ತು. ಕುದುರೆಮುಖದಿಂದ ಮಾಳದ ಕಣಿವೆಯನ್ನು ಕಡಿದು ಕೆಳಗಿಳಿದ ರಸ್ತೆ ಕಾರ್ಕಳದ ಮೂಲಕ ಹಾದು ಪಡುಬಿದ್ರಿ ಮಾರ್ಗವಾಗಿ ಮಂಗಳೂರನ್ನು ಮುಟ್ಟಿದಾಗ ರಸ್ತೆಯುದ್ದಕ್ಕೂ ಆರ್ಥಿಕ ಆಶೆ ಆಕಾಂಕ್ಷೆಗಳ ನಿರೀಕ್ಷೆಯನ್ನು ಪೊರಹೊಮ್ಮಿಸಿತ್ತು. ಕಾರ್ಕಳವು ಕುದುರೆಮುಖ ಮತ್ತು ಮಂಗಳೂರಿಗೆ ಮಧ್ಯದಲ್ಲಿರುವ ವ್ಯವಹಾರೀ ಕೇಂದ್ರವಾಗಿ ಕುದುರೆಮುಖದ ಕಾಮಗಾರಿ ಕೆಲಸಗಳಿಗೆ ಅಗತ್ಯವಿರುವ ಹಿನ್ನೆಲೆಯನ್ನು ಒದಗಿಸಿತು. ಆ ಮೇಲೆ ಕುದುರೆಮುಖ ಯೋಜನೆಗಾದ ಹಿನ್ನಡೆಯು ಕಾರ್ಕಳದ ಆರ್ಥಿಕ ಚಕ್ರದ ಚಲನೆಯನ್ನೂ ನಿಧಾನಿಸಿತು.

ಕಾರ್ಕಳದ ಆರ್ಥಿಕ ಚಿತ್ರವು ಪೂರ್ಣಗೊಳ್ಳಬೇಕಾದರೆ ಸಾಮಾಜಿಕ ಜೀವನದ ಮೇಲೆ ವಿದ್ಯೆಯು ಬೀರಿದ ಪರಿಣಾಮವನ್ನು ಪ್ರತಿಬಿಂಬಿಸುವುದು ಅಗತ್ಯ. ಒಂದು ಕಾಲದಲ್ಲಿ ಕಾರ್ಕಳದ ಕೆಲವೇ ಕುಟುಂಬಗಳು ಮಂಗಳೂರಿಗೋ ಉಡುಪಿಗೋ ಹೋಗಿ ಉಚ್ಚ ಶಿಕ್ಷಣವನ್ನು ಪಡೆಯಬೇಕಾಗಿದ್ದು ಇಂದು

ಅಂತಹ ಸವಲತ್ತುಗಳು ಕಾರ್ಕಳ, ಮೂಡುಬಿದ್ರಿ ಮತ್ತು ಹೆಬ್ರಿಗಳಂತಹ ಊರುಗಳಲ್ಲೇ ದೊರೆಯುವಂತಾಗಿದೆ. ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿಗೆ ಈಗ ಇಪ್ಪತ್ತೈದನೆಯ ವರ್ಷ. ಹೆಚ್ಚಾಗಿ ಇಲ್ಲಿ ಕಲಿತ ವಿದ್ಯಾರ್ಥಿಗಳೇ ಕಾರ್ಕಳದಲ್ಲಿ ಉಚ್ಚ ಶಿಕ್ಷಣದ ಪ್ರಥಮ ಜನಾಂಗವಾದರು. ವೃತ್ತಿಪರರಾಗಿ ಬ್ಯಾಂಕು ಮುಂತಾದ ಸಂಸ್ಥೆಗಳಲ್ಲಿ ರಾಷ್ಟ್ರದ ಉದ್ದಗಲಕ್ಕೂ ಹಬ್ಬಿದರು. ವಿದೇಶಗಳಲ್ಲಿಯೂ ನೆಲೆಯೂರಿದರು. ಅಲ್ಲದೆ, ಕಾರ್ಕಳದ ನೆಲದ ರುಚಿಯನ್ನು ಸವಿಯುತ್ತಿರುವವರು ಹಲವರು ಇವರಲ್ಲಿ ತಮ್ಮ ಕುಟುಂಬಗಳ ಬೌದ್ಧಿಕ ವಿಕಾಸಕ್ಕೂ ಆರ್ಥಿಕ ಚೈತನ್ಯಕ್ಕೂ ದಾರಿದೀಪವಾದರು. ಅಜ್ಞಾನ, ಅಂಧ ಶ್ರದ್ಧೆಗಳಿಂದ ಮೇಲೆದ್ದು ಮುಂದಿನ ಪೀಳಿಗೆಯ ವಿದ್ಯಾಪರಂಪರೆಯನ್ನು ಪೋಷಿಸಿದರು. ಸಮಾಜದ ಕ್ಷೇಮಕ್ಕೆ ಕಹಳೆಯೂದಿದರು.

○

ಶಿಕ್ಷಣ ಸೌಲಭ್ಯ



ಕೆ. ರಘುನಾಥಭಟ್ಟ, ಎಂ. ಎ, ಬಿ. ಲಿಬ್‌ಎಸ್ಸ್‌ಸಿ

1960 ರಿಂದ 1967ರ ವರೆಗೆ ಕಾಲೇಜಿನ ಗ್ರಂಥಪಾಲರಾಗಿದ್ದು, ಅನಂತರ ಇಂಗ್ಲಿಷ್ ಉಪನ್ಯಾಸಕ ಹಾಗೂ ಪ್ರಕೃತ ವಿಭಾಗ ಪ್ರಮುಖರೂ ಆಗಿರುವ ಶ್ರೀ ರಘುನಾಥ ಭಟ್ಟರು ಭೋಧನ ವಿಷಯವಾಗಿರುವ ಇಂಗ್ಲಿಷಿನೊಂದಿಗೆ ಕನ್ನಡದಲ್ಲೂ ಆಸಕ್ತರು. 'ಶಿಕ್ಷಣ ಸಂಪ್ರದಾಯ' ವೆಂಬ ಲೇಖನ, ವಿದ್ಯಾ ವೃಕ್ಷದ ಬೇರು ಕಾರ್ಕಳದಲ್ಲಿ ಎಷ್ಟು ಆಳಕ್ಕೆ ಇಳಿದಿದೆ, ಅದರ ಕೊಂಬೆಗಳು ಎಷ್ಟು ಅಗಲವಾಗಿ ಚಾಚಿವೆ, ಎಂತೆಂತಹ ಮಹ ನೀಯರು ಆ ವೃಕ್ಷಕ್ಕೆ ನೀರೆರೆದರು, ಎಂತೆಂತಹವರು ಅದರ ನೆರಳಲ್ಲಿ ಆಸರೆಯನ್ನು ಪಡೆದರು, ಇನ್ನೆಷ್ಟು ಜನ ಹೂ ಮುಡಿದು, ಹಣ್ಣು ತಿಂದು ತೃಪ್ತಿ – ಸಂತೋಷಗಳನ್ನು ಪಟ್ಟರು ಎಂಬುದನ್ನು ಚಿತ್ರಿಸುತ್ತದೆ.

ಶಿಕ್ಷಣ ಸೌಲಭ್ಯ

ಅದ್ವೈತ-ಮಾಧ್ವ-ಜೈನ-ವೀರಶೈವ ಪಂಥಗಳ ಸಂಪರ್ಕವನ್ನು ಆಯಾ ಪಂಥಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ ಪಡೆದ ಕಾರ್ಕಳದಲ್ಲಿ, ಆ ಪಂಥಗಳ ದಾರ್ಶನಿಕರು, ವಿದ್ಯಾವೇತ್ತರು, ತಮ್ಮ ತಮ್ಮ ವಿಚಾರಧಾರೆಯನ್ನು ಜನರಲ್ಲಿ ಹರಡಲು ಗುರುಕುಲ, ಪಾಠಶಾಲೆಗಳನ್ನು ರಾಜಾಶ್ರಯದಲ್ಲೋ, ಧರ್ಮಸಂಸ್ಥಾನಗಳ ನೆರಳಲ್ಲೋ, ಸ್ವಂತ ಶ್ರಮದಿಂದಲೋ ತೆರೆದು, ಕಾಲಕಾಲಕ್ಕೆ ವಿದ್ಯಾಪ್ರಚಾರ, ಸಾಹಿತ್ಯಸೃಷ್ಟಿ, ಗ್ರಂಥರಚನೆ, ಧರ್ಮಪ್ರಚಾರ ಇತ್ಯಾದಿ ಆಗಿದ್ದುದು, ಈ ಸಂಪುಟದ ಸಹಲೇಖನಗಳಲ್ಲಿ ಚೆನ್ನಾಗಿ ಬಿಂಬಿತವಾಗಿದೆ.

ಪ್ರಕೃತ ಲೇಖನದಲ್ಲಿ, ಕಾರ್ಕಳದ ಹಾಗೂ ಅದರ ಪರಿಸರದ ಶಿಕ್ಷಣ ಪ್ರಚಾರದಲ್ಲಿ ನಿರತರಾಗಿದ್ದ, ಆಗಿರುವ ಸಂಸ್ಥೆ, ವ್ಯಕ್ತಿಗಳಲ್ಲಿ ಹೆಚ್ಚು ಪ್ರಸಿದ್ಧವಾದ ಕೆಲವನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಈ ಸಮೀಕ್ಷೆಯು ಹತ್ತೊಂಬತ್ತನೇ ಶತಮಾನಕ್ಕೂ ಹಿಂದೆ ಇದ್ದ ವಿದ್ಯಾಸಂಸ್ಥೆಗಳ, ವ್ಯಕ್ತಿಗಳ ವಿವರವನ್ನು ಒಳಗೊಂಡಿಲ್ಲ. ಆದರೂ ಆ ಕಾಲಕ್ಕೆ ಕುಗ್ರಾಮ 'ಮಾಳ'ದಲ್ಲಿ ಅಸ್ತಿತ್ವದಲ್ಲಿದ್ದ ಒಂದು 'ಗುರುಕುಲ'ದ ಕುಲಪತಿಯಾಗಿದ್ದ ಓರ್ವ ಮಹಾನುಭಾವರ ಸುಪುತ್ರಿಯೇ 'ಪಂಡಿತಾ ರಮಾಬಾಯಿ ಸರಸ್ವತಿ'ಯೆಂದು, ಮುಂದೆ ಖ್ಯಾತಳಾದ ರಮಣೀಮಣಿಯೆಂಬುದನ್ನು ಗಮನಿಸಿದರೆ ಆದರ ಹಿಂದಿನ ಕಾಲದಲ್ಲಿ, ಈ ರಮ್ಯ ಪರಿಸರದಲ್ಲಿದ್ದಿರಬಹುದಾದ ವಿದ್ಯಾಸಂಸ್ಥೆಗಳ ಕುರಿತ ಊಹೆಯನ್ನು ಮಾಡಬಹುದು. ಕಾರ್ಕಳದ ಸುತ್ತಲ ಮಲೆನಾಡ ಸೆರಗಿನಲ್ಲಿ ಹಿಂದೂ, ಇಂದೂ ಅಡಗಿರುವ ಹಲವು 'ತೆರೆಮರೆ'ಯ ವಿದ್ವಾಂಸರು, ಅವರು ಪರಂಪರೆಯನ್ನು ನಡೆಸಿ ಬಂದಿರುವ ರೀತಿ ಕಾರ್ಕಳದ ಮಣ್ಣಿನಲ್ಲಿ ವಿದ್ಯಾಭ್ಯಾಸಕ್ಕೆ ಯಾವ ಸಾರವತ್ತಾದ ಗೊಬ್ಬರವಿದೆ ಎಂದು ತೋರಿಸುತ್ತದೆ.

ಕಾಲಗತಿಯಿಂದ ಸನಾತನ ವಿದ್ಯಾಭ್ಯಾಸದ ಬಗೆಗೆ ಜನರಲ್ಲಿ ಅನಾದರ ತೋರಿಬಂದಿದ್ದರೂ, ಆಧುನಿಕತೆಯ ಗಾಳಿ ಬೀಸಿದಾಗ, ಆ ಹೊಸ ಗಾಳಿಯಲ್ಲಿ ತೇಲಿಬಂದ ಅರ್ವಾಚೀನ ವಿದ್ಯಾಪದ್ಧತಿಯನ್ನು ಕಾರ್ಕಳವು ಅಳವಡಿಸಿಕೊಂಡಿತು. ಹಾಗೆ ಅಳವಡಿಸಿಕೊಂಡು, ಅದರ ಪ್ರಯೋಜನವು ತಮ್ಮ ಸಹಜೀವಿಗಳಿಗೆ ಒದಗಬೇಕೆಂದು ಚಿಂತಿಸಿ ಪ್ರಯತ್ನಿಸಿದವರಲ್ಲಿ ಕುಕ್ಕುಂದೂರು ಅನಂತಪದ್ಮನಾಭ ಕಾಮತ್ (ಪದ್ಮ ಕಾಮತ್) ಹಾಗೂ ಅವರ ಪುತ್ರ ಸುಬ್ಬರಾಯ ಕಾಮತ್ (ಸುಬ್ಬ ಕಾಮತ್) ಮೊದಲಿಗರು. ಶ್ರೀಮಂತ ಜಮೀನುದಾರರಾದ ಪದ್ಮ ಕಾಮತರು ಕಾರ್ಕಳದ ಅನೇಕ ವಿದ್ಯಾಸಂಸ್ಥೆಗಳಿಗೆ ಸ್ಥಳ, ಧನದಾನ ಮಾಡಿದ ಕೀರ್ತಿವಂತರು. ಈ ಶತಕದಾದಿಯಲ್ಲಿ ಅವರೂ ಸುಬ್ಬ ಕಾಮತರೂ ಮಾಡಿದ ತ್ಯಾಗ, ದಾನಗಳ ಸಾಕ್ಷಿಯಾಗಿ 'ಶ್ರೀಮದ್ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯ', ಎಸ್. ವಿ. ಟಿ. ಶಾಲಾ ಸಂಕೀರ್ಣ ಹಾಗೂ ಈಗಿನ ಸರಕಾರೀ ಜೂನಿಯರ್ ಕಾಲೇಜ್ ಇತ್ಯಾದಿಗಳು ಸ್ಥಾಪಿಸಲ್ಪಟ್ಟವು. ಇವುಗಳಲ್ಲದೇ ಕಾರ್ಕಳದ ಇನ್ನೂ ಕೆಲವು ಶಿಕ್ಷಣ ಸಂಸ್ಥೆಗಳ ಪರಿಚಯು ಕೆಳಗಿನ ಸಾಲುಗಳಲ್ಲಿ ಇದೆ.

1) ಸರಕಾರೀ ಜೂನಿಯರ್ ಕಾಲೇಜು : ಈಗ ಸರಕಾರಿಯಾಗಿದ್ದರೂ, ಈ ಸಂಸ್ಥೆಯು ಆರಂಭವಾದದ್ದು 1880ರ ದಶಕದಲ್ಲಿ – ಮಾಧ್ಯಮಿಕ ಶಾಲೆಯಾಗಿ ಆಗಿನ ತಾಲೂಕು–ಜಿಲ್ಲಾ–ಬೋರ್ಡುಗಳ ಆಡಳಿತೆಗೆ ಒಳಪಟ್ಟಿತ್ತು. ಈ ಸಂಸ್ಥೆಯು ಇರುವ ಸುಮಾರು 2 ಎಕ್ರೆ ಸ್ಥಳದಲ್ಲಿ, ಮೊದಲ 2 ಕಟ್ಟಡಗಳು ಇರುವ (ಕೋಟೆಕಣಿ ಬಳಿಯ) ಜಾಗವನ್ನೂ ಹಾಗೂ ಕಟ್ಟಡದ ಬಗ್ಗೆ ಹಣವನ್ನೂ ಸ್ಥಳೀಯರಿಂದ ವಂತಿಗೆಯಾಗಿ ಪಡೆಯಲಾಗಿತ್ತೆಂಬುದರ ಉಲ್ಲೇಖವನ್ನು ಸಂಸ್ಥೆಯ ಕಟ್ಟಡದ ಗೋಡೆಯಲ್ಲಿರುವ

ಫಲಕದಲ್ಲಿ ಕಾಣಬಹುದು. ಕುಕ್ಕುಂದೂರು ಪದ್ಮನಾಭ ಕಾಮತ್‌ರದು ಇದರಲ್ಲಿ ಗಣ್ಯ ಪಾತ್ರ. ಅವರ ನೆನಪಿಗಾಗಿ ಈ ಸಂಸ್ಥೆಗೆ ಒಂದು ದಿನ ರಜೆ ಘೋಷಿಸುವ ಸಂಪ್ರದಾಯವು ಇತ್ತೀಚಿನ ವರೆಗೂ ಇತ್ತೆಂಬುದನ್ನು ಗಮನಿಸಿದಾಗ ಶ್ರೀ ಕಾಮತರ ಪಾತ್ರ ಎಷ್ಟು ಹಿರಿದೆಂಬುದನ್ನು ತಿಳಿಯಬಹುದು. 1920ರಲ್ಲಿ ಪ್ರೌಢಶಾಲೆಯಾಗಿ ವಿಸ್ತಾರಗೊಂಡು, 1961–62ರಲ್ಲಿ ಸರಕಾರೀ ಸಂಸ್ಥೆಯಾಗಿ ಹಾಗೂ ಜೂನಿಯರ್ ಕಾಲೇಜಾಗಿ ಪರಿವರ್ತಿತವಾಗಿ, ಕಾರ್ಕಳದ ಬಹುಮಂದಿ ಯುವಕರ ವಿದ್ಯಾದಾಹವನ್ನು ನೀಗಿಸಿದ ಸಂಸ್ಥೆ ಇದಾಗಿದೆ. ಈ ಸಂಸ್ಥೆಯ (ಹಾಸ್ಕೂಲ್) ಪ್ರಪ್ರಥಮ ಮುಖ್ಯೋಪಾಧ್ಯಾಯರಾಗಿ ಶ್ರೀ ಜಪ್ಪು ಕೃಷ್ಣರಾವ್ ಎಂಬವರು ತಮ್ಮ ವಿದ್ಯಾರ್ಥಿಪ್ರೇಮ, ಆಡಳಿತ ದಕ್ಷತೆಗೆ ಹೆಸರಾಗಿದ್ದರಂತೆ. ಅತಿ ಸಾತ್ವಿಕರಾಗಿದ್ದ ಅವರು, ತಮ್ಮ ವೈಯಕ್ತಿಕ ಕಷ್ಟಕಾರ್ಪಣ್ಯಗಳನ್ನೂ ವಿದ್ಯಾ ಸೇವೆಯಲ್ಲಿ ಮರೆತು ಮೆರೆದವರು, ಎಂದು ಹಲವು ಹಿರಿಯರು ಅವರನ್ನು ಈಗಲೂ ನೆನೆಯುತ್ತಾರೆ. ಅವರ ಅನಂತರ ಸಂಸ್ಥೆಯ ಕೀರ್ತಿಯನ್ನು ಹರಡಿದ ಮುಖ್ಯೋಪಾಧ್ಯಾಯರೂ ಉಪಾಧ್ಯಾಯರುಗಳೂ ಹಲವು ಮಂದಿ. ಆಗ ವಿದ್ಯಾರ್ಥಿಗಳಾಗಿದ್ದ ಈಗಿನ ವಯೋವೃದ್ಧರಿಗೆಲ್ಲ ಅದೊಂದು ಮಧುರ ಸ್ಮರಣೆ ಯಾಗಿದೆ. ಶ್ರೀ ಶ್ರೀನಿವಾಸ ಕಿಣಿ, ಶ್ರೀ ಬಾಲಕೃಷ್ಣ ಪುರಾಣಿಕ, ಶ್ರೀ ಕೆ. ಪಿ. ನರಸಿಂಹ ವೆಂಕಟೇಶ ಶೆಣೈ, ಶ್ರೀ ಬಸ್ರೂರ ಸದಾಶಿವರಾವ್, ಶ್ರೀ ಉದ್ಯಾವರ ಭವಾನಿಶಂಕರ ರಾವ್, ಶ್ರೀ ಸಂಜೀವ ಶೆಣೈ, ಶ್ರೀ ಬಿ. ಶ್ಯಾಮರಾಯ ಶೆಟ್ಟಿ, ಶ್ರೀ ಎನ್. ಆರ್. ಆಚಾರ್ ಇವರೆಲ್ಲ ಶಿಸ್ತಿನ ಪಾಲನೆ, ವಿದ್ಯಾರ್ಥಿ ವಾತ್ಸಲ್ಯ, ಅಧ್ಯಯನ ಕುಶಲತೆ, ಕರ್ತವ್ಯದಕ್ಷತೆಗಳಿಗೆ ಹೆಸರಾದವರು. ಶಿಸ್ತಿಗೆ ಎತ್ತಿದ ಕೈ ಎನಿಸಿದ್ದ ದಿ। ಕೆ. ಶ್ರೀನಿವಾಸ ಕಿಣಿಯವರನ್ನು ಸ್ಮರಿಸುವಾಗ ಈಗಲೂ ಹಲವರಲ್ಲಿ ಭಯಮಿಶ್ರಿತವಾದ ಗೌರವ ಭಕ್ತಿಗಳು ಮೂಡುತ್ತವೆ. ಅಂತೆಯೇ ಉಪಾಧ್ಯಾಯ ವರ್ಗದಲ್ಲಿ ಅನೇಕರು ಬಹು ಖ್ಯಾತನಾಮರು ಚಿರಸ್ಮರಣೀಯರು. ದಿ। ರಾಘವೇಂದ್ರ ರಾಯರು ಮತ್ತು ದಿ। ಜಾನ್ ಪಿಂಟೊ ಅಂತಹವರು. ಶ್ರೀ ರಾಘವೇಂದ್ರ ರಾಯರು ಶಿಸ್ತು ಹಾಗೂ ಇಂಗ್ಲಿಷ್ ಪಾಠಗಳನ್ನು ಅವರ ಅಸಂಖ್ಯ ಶಿಷ್ಯರು ಇಂದಿಗೂ ನೆನೆದು ಕೊಂಡಾಡುತ್ತಾರೆ. ಶ್ರೀ ಜೋನ್ ಪಿಂಟೋರವರು 1914–18ರ ಮಹಾಯುದ್ಧದ ಯೋಧರಾಗಿದ್ದು, ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿ ಊರಿನ ಹಲವರಿಗೆ ಕ್ರಿಕೆಟ್ ಇತ್ಯಾದಿ ಕ್ರೀಡೆ ಗಳಲ್ಲಿ ತರಬೇತಿ ಕೊಟ್ಟು ಜನಪ್ರೀತರಾದವರು. ಅಂತೆಯೇ ದಿ। ಕೊರಗ ಶೆಟ್ಟಿಯವರು ಈ ಶಾಲೆಯ ಸ್ಕೌಟ್ ಚಟುವಟಿಕೆಗಳಲ್ಲೂ, ಯಕ್ಷಗಾನ ಪ್ರಸಂಗಗಳನ್ನೂ ವಿದ್ಯಾರ್ಥಿಗಳಿಂದ ಅಭಿನಯಿಸುವಲ್ಲಿಯೂ ಮೂರು ದಶಕಗಳಿಂದಲೂ ದುಡಿದವರು. ಅವರು ಸ್ವಂತ ಖರ್ಚಿನಲ್ಲಿ ವೇಷ-ಭೂಷಣಗಳನ್ನು ಸಂಗ್ರಹಿಸಿ ಶಾಲೆಯ ವಾರ್ಷಿಕೋತ್ಸವದಲ್ಲಿ ಮಕ್ಕಳಿಗೆ ತರಬೇತಿ ಕೊಟ್ಟು, ಆಡಿಸಿ ರಂಜಿಸಿದವರು. ಬಹುಶಃ ಜಿಲ್ಲೆಯಲ್ಲಿ ಈಗ ಉದಿಸಿರುವ ಹಲವು ಬಾಲಮೇಳಗಳಿಗೆ ಅವರೇ ಮೂಲ ಸ್ಫೂರ್ತಿಯೋ ಏನೋ?

ಮದ್ರಾಸು ಸರಕಾರ 50ರ ದಶಕದಲ್ಲಿ ವಿದ್ಯಾಭ್ಯಾಸ ಕ್ರಮಗಳಲ್ಲಿ 'ದೃಶ್ಯ-ಶ್ರಾವ್ಯ' ವಿಧಾನಗಳನ್ನು ಅಳವಡಿಸಿದಾಗ ರೇಡಿಯೋ, ಪ್ರೊಜೆಕ್ಟರ್ ಇತ್ಯಾದಿ ಸಲಕರಣೆಗಳನ್ನು ಒಡನೆಯೇ ಒದಗಿಸಿಕೊಂಡ ಜಿಲ್ಲೆಯ ಬೆರಳೆಣಿಕೆಯ ಶಾಲೆಗಳಲ್ಲಿ ಕಾರ್ಕಳದ ಶಾಲೆಯೂ ಒಂದು. ದಿ। ಬಿ. ಶಾಮರಾಯ ಶೆಟ್ಟಿ ಹಾಗೂ ಶ್ರೀ ರಾಮಕೃಷ್ಣ ಆಚಾರ್ಯರು ಈ ದಿಸೆಯಲ್ಲಿ ನೆನಪಿಡಬೇಕಾದವರು. ಶ್ರೀ ಆಚಾರ್ಯರು ಈ ಶಾಲೆಯಿಂದ ನಿವೃತ್ತರಾದನಂತರ (1966) ಅತ್ತೂರಿನ ಪ್ರೌಢ ಶಾಲೆಯ ಪ್ರಥಮ ಮುಖ್ಯೋಪಾ ಧ್ಯಾಯರಾಗಿ ಆ ಶಾಲೆಯ ಪ್ರಗತಿಯ ಅಸ್ತಿಭಾರವನ್ನು ಹಾಕಿದವರು. ಅಂತೆಯೇ ಈ ಶಾಲೆಯಲ್ಲಿ ವಿಜ್ಞಾನ ಅಧ್ಯಾಪಕರಾಗಿ ದುಡಿದು ಮೂಡಬಿದಿರೆಯ ಜೈನ ಹ್ಯಾಸ್ಕೂಲು ಸ್ಥಾಪಿತವಾದಾಗ ಆ ಸಂಸ್ಥೆಯ ಆಡಳಿತ ವರ್ಗದಿಂದ ಆಮಂತ್ರಿತರಾಗಿ ಆ ಶಾಲೆಯ ಸ್ಥಾಪಕ ಮುಖ್ಯೋಪಾಧ್ಯಾಯರಾಗಿದ್ದ ದಿವಂಗತ ಹಟ್ಟಂಗಡಿ ದೇವರಾಯರೂ ಊರಿನವರ ನೆನಪಿನಲ್ಲಿ ಹಸುರಾಗಿದ್ದಾರೆ.

ಈ ಸಂಸ್ಥೆಯು ಜಿಲ್ಲಾ ಬೋರ್ಡಿನ ಅಧೀನತೆಯಿಂದ ಸರಕಾರಿ ಸಂಸ್ಥೆಯಾಗಿ ಪರಿವರ್ತಿತವಾದ ಕೆಲವೇ ವರ್ಷಗಳಲ್ಲಿ ಜ್ಯೂನಿಯರ್ ಕಾಲೇಜಾಗಿ ಭಡ್ತಿಯಾಯಿತು. ಪ್ರಥಮದ 4–5 ವರ್ಷಗಳಲ್ಲಿ ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ ಶಿಕ್ಷಣ ನೀಡುತ್ತಿದ್ದರೂ ಕಾರಣಾಂತರಗಳಿಂದ ವಿಜ್ಞಾನ ವಿಭಾಗ ವನ್ನು ಮುಚ್ಚಬೇಕಾಯಿತು. ತಾಲೂಕಿನ ಇತರೆಡೆಗಳಲ್ಲಿ (ಬೈಲೂರು, ಹೆಬ್ರಿ, ಬೆಳ್ಮಣ್ಣು)ಗಳಲ್ಲಿರುವ

ಸರಕಾರಿ ಜ್ಯೂನಿಯರ್ ಕಾಲೇಜುಗಳಲ್ಲೂ ವಾಣಿಜ್ಯ, ಮಾನವಿಕ ವಿಷಯುಗಳನ್ನು ಮಾತ್ರ ಅಧ್ಯಯನ ಮಾಡಲು ಅವಕಾಶವಿದೆ. ಹೆಬ್ರಿಯಲ್ಲಿ 3 ವರ್ಷಗಳ ಹಿಂದೆ ಕಾಲೇಜನ್ನು ತೆರೆಯಲಾಗಿದೆ. ಅದೂ ವಾಣಿಜ್ಯ–ಮಾನವಿಕ ವಿಷಯಗಳನ್ನು ಮಾತ್ರ ಒಳಗೊಂಡಿದೆ.

2) **ಶ್ರೀ ವೆಂಕಟರಮಣ ದೇವಾಲಯದ ವಿದ್ಯಾಸಂಸ್ಥೆಗಳು :** ಕಾರ್ಕಳದ ಪ್ರಮುಖ ಶ್ರೀಮಂತ ಧಾರ್ಮಿಕ ಸಂಸ್ಥೆಯಾದ ಈ ದೇವಳವು, ಧಾರ್ಮಿಕ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿಯಾದ ವಿದ್ಯಾ ದಾನವನ್ನೂ ಸಾಕಷ್ಟು ಮಾಡುತ್ತಿದೆ. 'ಶ್ರೀ ವೆಂಕಟರಮಣ ದೇವಳದ ವಿದ್ಯಾಮಂಡಳಿ' ಎಂಬ ಪ್ರತ್ಯೇಕ ವಿಭಾಗದ ವತಿಯಿಂದ ದೇವಳದ ಜಮೀನುಗಳಲ್ಲಿ ಆದಾಯ ಬಲದಿಂದ ಈ ಕೆಳಗೆ ನಮೂದಿಸಿದ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ.

ಅ) ಶ್ರೀ ವೆಂಕಟರಮಣ ದೇವಳದ ಪ್ರೌಢ ಪ್ರಾಥಮಿಕ ಶಾಲೆ: ಮಾಳಿಗೆ ಶಾಲೆಯೆಂದೇ ಹಲವು ವರ್ಷ ಪರಿಚಿತವಾದ ಈ ಶಾಲೆ ಆರಂಭವಾದುದೇ ದೇವಳದ ಪೌಳಿಯ ಉಪ್ಪರಿಗೆಯಲ್ಲಿ, 1940ರ ಸುಮಾರಿಗೆ. ಈಗಿನ ವಠಾರಕ್ಕೆ ವರ್ಗಾವಣೆ ಹೊಂದಿದ ಈ ಶಾಲೆಯಲ್ಲಿ ವಿದ್ಯಾರ್ಥಿ ಸಂಖ್ಯೆ ಗಣನೀಯವಾಗಿದೆ. ಕಟ್ಟುನಿಟ್ಟಿನ ಶಿಸ್ತು, ಪಾಠ ಪ್ರವಚನಗಳಿಗೆ ಹೆಸರಾದ ಈ ಶಾಲೆಯಲ್ಲಿ ದಿ। ಶ್ರೀನಿವಾಸ ಹೆಗ್ಡೆಯವರಂಥ ಶಿಸ್ತಿನ ಮುಖ್ಯೋಪಾಧ್ಯಾಯರೂ ಇದ್ದರು. ಸ್ಕೌಟ್ ಚಳವಳಿಯಲ್ಲಿ ಕಾರ್ಕಳ ತಾಲೂಕಿನಲ್ಲೇ ಅವರು ಹಿರಿಯರಾಗಿದ್ದರು. 'ಚಿತ್ರ'ದ ರುಚಿಯ ಮೂಲಕ, ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡ ಅನೇಕ ವಿದ್ಯಾರ್ಥಿಗಳು ಇಂದೂ ತಮ್ಮ ಪ್ರೌಢ ಜೀವನದಲ್ಲಿ ಅವರನ್ನು ಸ್ಮರಿಸುತ್ತಾರೆ.

ಆ) ಶ್ರೀ ವೆಂಕಟರಮಣ ದೇವಳದ ಕನ್ಯಾ ಪ್ರೌಢಶಾಲೆ ಹಾಗೂ ಜ್ಯೂನಿಯರ್ ಕಾಲೇಜು: ಕಾರ್ಕಳ ಪೇಟೆ ಹಾಗೂ ಆಸುಪಾಸಿನ ಹೆಣ್ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಸ್ಥಾಪಿತವಾದ ಈ ಸಂಸ್ಥೆ, ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತಕ್ಕೆ ಬಂದಿದೆ. ಮೊದ ಮೊದಲು ಅಧ್ಯಾಪಿಕೆಯರಿಂದಲೇ ನಡೆಸಲ್ಪಡುತ್ತಿದ್ದ ಈ ಸಂಸ್ಥೆ ಪರಿಸ್ಥಿತಿಗನುಗುಣವಾಗಿ ಪುರುಷ ಶಿಕ್ಷಕರನ್ನೂ ಒಳಗೊಂಡಿದೆ. ಒಂದು ಪ್ರಥಮ ದರ್ಜೆ ಕಾಲೇಜಿಗೆ ಬೇಕಾಗುವಷ್ಟು ವಿದ್ಯಾರ್ಥಿನಿಯರು ಇಲ್ಲಿ ಕಲಿಯುತ್ತಿದ್ದಾರೆ. ಪದವಿಪೂರ್ವ ವಿಭಾಗದಲ್ಲಿ ವಾಣಿಜ್ಯ ಮತ್ತು ಮಾನವಿಕ ವಿಭಾಗಗಳು ಮಾತ್ರ ಈ ಶಾಲೆಯಲ್ಲಿವೆ. ಈ ಸಂಸ್ಥೆ ಊರಿನ ಹೆಣ್ಣುಮಕ್ಕಳಿಗೆ ಒಂದು ವರದಾನ.

ಇ) ಹೆಣ್ಣುಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಮೊದಲು ಆರಂಭವಾದ 'ಎಸ್. ವಿ. ಟಿ. ಕಿರಿಯ ಪ್ರಾಥಮಿಕ ಶಾಲೆ' ಈಗ ಸಂಯುಕ್ತ ಶಾಲೆಯಾಗಿ ಕಾರ್ಯ ವಹಿಸುತ್ತಿದೆ. ಇಲ್ಲಿ ಮೊದಲು ಅಧ್ಯಾಪಕಿಯಾಗಿದ್ದ ದಿ। ಬಿ. ಕಾಮಾಕ್ಷಿ ಅಮ್ಮನವರು (ಕಾಮಾಕ್ಷಿ ಟೀಚರ್) ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದವರು. ಅಂತೆಯೇ ಶ್ರೀಮತಿ ಬೆನೆಡಿಕ್ಟಾ ಡಿ'ಸೋಜ ಎಂಬ ಮಹಿಳೆ ತನ್ನ ಸರಳತೆ. ಮಕ್ಕಳ ಮೇಲಿನ ಮಮತೆ ಹಾಗೂ ಆಂಗ್ಲ ಭಾಷಾ ಉಚ್ಚಾರದ ಸ್ಪಷ್ಟತೆಗೆ ಸುಪರಿಚಿತರಾಗಿ 'ಬೆನ್ನಿ ಟೀಚರ್' ಎಂದೇ ಗುರುತಿಸ ಲ್ಪಟ್ಟಿದ್ದರು.

ಈ ಮೂರೂ ಸಂಸ್ಥೆಗಳಿರುವ ಹಾಗೂ ಶ್ರೀ ಭುವನೇಂದ್ರ ಪ್ರೌಢಶಾಲೆಯಿರುವ ನಿವೇಶನಗಳ ಬಹುಭಾಗವು ಕುಕ್ಕುಂದೂರು ಪದ್ಮನಾಭ ಕಾಮತ್–ಸುಬ್ರಾಯ ಕಾಮತರ ಒಡೆತನಕ್ಕೆ ಒಳಪಟ್ಟಿದ್ದು ಅವರು, ಆ ಸಂಸ್ಥೆಗಳಿಗೆ ದಾನವಾಗಿ ಇತ್ತವುಗಳು. ಆ ಸಂಸ್ಥೆಗಳ ಕಟ್ಟಡಗಳಲ್ಲಿರುವ ದಾನ ಶಾಸನಗಳಲ್ಲಿ ಈ ವಿಷಯ ತಿಳಿಯುತ್ತದೆ.

3) ಶ್ರೀ ವೆಂಕಟರಮಣದೇವಳದ ವಿದ್ಯಾಪ್ರಚಾರ ಕಾರ್ಯಕ್ರಮಕ್ಕೆ ಒತ್ತಾಸೆಯಾಗಿಸಂತ ಇನ್ನೊಂದು ಸಂಸ್ಥೆ– "ಶ್ರೀ ವ್ಯಾಸ ರಘುಪತಿ-ಸಂಸ್ಕೃತ ವಿದ್ಯಾಶಾಲಾ ನಿಧಿ"– ಈ ಕಾಶೀ

ಮಠಾಧೀಶ ಶ್ರೀಮದ್ ಭುವನೇಂದ್ರ ತೀರ್ಥ ಸ್ವಾಮೀಜಿಯವರ ಸತ್ಪ್ರೇರಣೆಯಿಂದ, ಅವರ ಮಾರ್ಗ ದರ್ಶನ, ನಿರ್ದೇಶಗಳಂತೆ, ವೈದಿಕ, ಸಂಸ್ಕೃತ, ವೈದ್ಯಕ ಸಾಹಿತ್ಯ ಶಿಕ್ಷಣಕ್ಕೆ ಮೀಸಲಾದ ಈ ನಿಧಿಯ ಸ್ಥಾಪಕರು, ಕುಕ್ಕುಂದೂರು ಅನಂತಪದ್ಮನಾಭ ಕಾಮತ್, ಅವರ ಮಗ ಸುಬ್ರಾಯ ಕಾಮತ್ ಹಾಗೂ ಅವರ ಕುಟುಂಬಿಕರು. ಇದರ ಯೋಜನೆಯಂತೆ, ಶ್ರೀ ವೆಂಕಟರಮಣ ದೇವಳದ ಕೆರೆಯ ಬಳಿ ಒಂದು ಪ್ರಾಥಮಿಕ ಶಾಲೆ (ಕೆರೆಶಾಲೆ) ಯನ್ನೂ "ವನ ಭೋಜನ" ವೆಂದು ಪ್ರಸಿದ್ಧವಾದ, "ಶ್ರೀನಿವಾಸ ಆಶ್ರಮ" ನಿವೇಶನದಲ್ಲಿ, ವಸತಿ ಸಹಿತವಾದ ಒಂದು ಮಹಾವಿದ್ಯಾಲಯವನ್ನೂ 1920ರ ಸುಮಾರಿಗೆ ತೆರೆಯಲಾಯಿತು. ಶ್ರೀ ದೇವಳಕ್ಕೆ ಸೇರಿದ ವನ ಭೋಜನದಲ್ಲಿ, ಕಟ್ಟಡಗಳೂ, ವಸತಿ ಗೃಹವೂ ಇದ್ದು, ಕಾಡು, ಬಂಡೆಗಳಿಂದ ಕೂಡಿದ ತಾಣವನ್ನು ಸಮತಟ್ಟುಗೊಳಿಸಿ, ತೆಂಗು ಮಾವುಗಳನ್ನು ನೆಟ್ಟು ನಂದನ ವನವನ್ನಾಗಿಸಿ, ಸುಮಾರು 40 ವರ್ಷಗಳ ಕಾಲ "ಶ್ರೀಮದ್ ಭುವನೇಂದ್ರ ಸಂಸ್ಕೃತ ಮಹಾಪಾಠ ಶಾಲೆ ಕೀರ್ತಿ ಪಡೆಯಿತು. ಜೋತಿಷ್ಯ, ಸಾಹಿತ್ಯ, ವೈದ್ಯ ಶಾಸ್ತ್ರಗಳನ್ನು ಕಲಿಸುವ ವಿಭಾಗಗಳಿಗೆ ಕರ್ನಾಟಕಾದ್ಯಂತ - ಅಷ್ಟೇಕೆ ಹೊರಗಿನಿಂದಲೂ ಅನೇಕ ವಿದ್ಯಾರ್ಥಿಗಳು ಬಂದು, ಅಲ್ಲಿನ ವಸತಿ ಗೃಹ "ಶೇಷಾದ್ರಿ ಭವನ"ದಲ್ಲಿ ವಾಸಿಸಿ "ಕೃಷ್ಣ ಮಂದಿರ" ದಲ್ಲಿ ಭಜನೆ, ಭೋಜನಗಳನ್ನು ಮಾಡಿ ಶ್ರದ್ಧೆಯಿಂದ ಅಧ್ಯಯನ ನಡೆಸಿ, ವಿದ್ವಾಂಸರಾಗಿ, ಉಪಾಧ್ಯಾಯರಾಗಿ, ವೈದ್ಯರಾಗಿ ಜೀವನದಲ್ಲಿ ಬೆಳಗಿದ್ದಾರೆ.

ಈ ಮಹಾಪಾಠ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದವರಲ್ಲಿ ಶ್ರೀ ಕಾಶೀಮಠಾಧೀಶರಾಗಿರುವ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರೂ, ಗೋಕರ್ಣ ಮಠಾಧೀಶರಾಗಿದ್ದು, ಈಗ ಸಮಾಧಿಸ್ಥ ರಾಗಿರುವ ಜೀವೋತ್ತಮ ತೀರ್ಥರೂ, (ತಮ್ಮ ಪೂರ್ವಾಶ್ರಮದಲ್ಲಿ) ಖ್ಯಾತರು.

ಈ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದವರಲ್ಲಿ ದಿ। ಕಾರ್ಕಳ ಕೋದಂಡರಾಮ ಜೋಶಿ, ದಿ। ಕೊಡತ್ತೂರು ಶ್ರೀನಿವಾಸ ಉಡುಪ, ದಿ। ಕುಕ್ಕುಂದೂರು ವೆಂಕಟೇಶ ಕಾಮತ್ (ಅವರು ಈ ಶಾಲೆಯ ಸಂಚಾಲಕರಾಗಿಯೂ ಕೊನೆಗೆ ಇದ್ದರು) ದಿ। ವೆಂಕಟೇಶ ಭಟ್ಟ, ದಿ। ವಾಮನ ಭಟ್ಟ ಮುಂತಾದವರು ಪ್ರಸಿದ್ಧರು.

ಇಷ್ಟೊಂದು ಪ್ರಸಿದ್ಧವಾಗಿದ್ದ, ಪ್ರಯೋಜನಕಾರಿಯಾಗಿದ್ದ, ಭಾರತೀಯ ಸಂಸ್ಕೃತಿಯ ವಿದ್ಯಾ ಭ್ಯಾಸ ಕ್ರಮವನ್ನು ಸಜೀವವಾಗಿಸಿದ ಈ ಸಂಸ್ಥೆಯೂ 1958ರ ಹೊತ್ತಿಗೆ ಸಾಕಷ್ಟು ವಿದ್ಯಾರ್ಥಿ ಗಳಿಲ್ಲದೆ ಮುಚ್ಚಬೇಕಾಯಿತು ಎಂಬುದು ಶೋಚನೀಯ ಸಂಗತಿ. ಕೊನೆಗೆ, 1961 ರಲ್ಲಿ, ಈ ಸಂಸ್ಥೆಗೆ ಪರ್ಯಾಯವಾಗಿ ಎಸ್. ವಿಟಿ ಶಾಲಾ ಸಮುಚ್ಚಯದ ಸಮೀಪದಲ್ಲಿ ಶ್ರೀ ಭುವನೇಂದ್ರ ಪ್ರೌಢ ಶಾಲೆಯನ್ನು ಆರಂಭಿಸಲಾಯಿತು.

4) **ಶ್ರೀ ಭುವನೇಂದ್ರ ಕಾಲೇಜ್:** ಶ್ರೀಮದ್ ಭುವನೇಂದ್ರ ಮಹಾಪಾಠ ಶಾಲೆಯ ಅಸ್ತಮಾನ ದಿಂದ ತೆರವಾದ "ಶ್ರೀನಿವಾಸ ಆಶ್ರಮ"ವನ್ನು 1960ರ ಜೂನ್-ಜುಲಾಯಿಯಲ್ಲಿ, ಶ್ರೀ ಭುವನೇಂದ್ರ ಕಾಲೇಜು ತುಂಬಿತು. ಕಾಲೇಜಿನಸ್ಥಾಪಕರಾಗಿದ್ದು, ಕಾರ್ಕಳದ ನಾಗರಿಕರ ಆಕಾಂಕ್ಷೆಗೂ, ವಿದ್ಯಾತೃಷ್ಣೆಗೂ ನೀರೆರೆದು ಪ್ರೋತ್ಸಾಹಿಸಿದ ಮಣಿಪಾಲದ ಅಕೆಡೆಮಿಯ ಸ್ಥಾಪಕ - ಅಧ್ಯಕ್ಷ ದಿ। ಡಾ। ತೋನ್ಸೆ ಮಾಧವ ಅನಂತ ಪೈಯವರನ್ನು ಇಲ್ಲಿ ಸ್ಮರಿಸಿದಷ್ಟೂ ಸಾಲದು. ಊರಿನ ನಾಗರಿಕರು ಕಾಲೇಜಿಗಾಗಿ ಹಂಬಲಿಸುತ್ತಿ ದ್ದರೂ, 1959ರ ಕೊನೆಯವರೆಗೂ, ಕಾರ್ಕಳದಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವ ದಿನ ಬರಲಿಲ್ಲ. ಕಾರ್ಕಳ ದಲ್ಲಿ ಹ್ಯಾಸ್ಕೂಲ್ ಮುಗಿಸಿದ ವಿದ್ಯಾರ್ಥಿಗಳಲ್ಲಿ ಶೇಕಡಾ 80ರಷ್ಟು ಮಂದಿ, ಮಂಗಳೂರು ಅಥವಾ ಉಡುಪಿಗೆ ಹೋಗಿ ವಿದ್ಯಾಭ್ಯಾಸ ಮುಂದರಿಸುವ ಆರ್ಥಿಕ ಚೈತನ್ಯವಿರದವರು. ಈ ಕಾರಣದಿಂದ ಎಷ್ಟೋ ಉತ್ಸಾಹಿ, ಮೇಧಾವಿಯುವಕರ ವಿದ್ಯಾಕಾಂಕ್ಷೆ ಕಮರಿ ಹೋಗಿತ್ತು. ಅದನ್ನು ಅಸಹಾಯಕರಾಗಿ ನೋಡಿ, ಮೌನವಾಗಿ ಮರುಗುತ್ತಿದ್ದ ಮಧ್ಯಮ ವರ್ಗದ ತಂದೆತಾಯಂದಿರೂ ಅನೇಕ ಜನ ! ಉದ್ಯೋ

ಗಾಕಾಂಕ್ಷಿಗಳಾಗಿ ಹೊರ ಊರಿಗೆ ಹೋಗಿ, ತಮ್ಮ ವಿದ್ಯಾ ಮಟ್ಟದ ಕಾರಣದಿಂದಾಗಿ, ಅವಕಾಶ ಸಿಗದೆ
ನಿರಾಶೆ ಪಡುತ್ತಿದ್ದವರೂ ಅದೆಷ್ಟೋ ಮಂದಿ.

1960 ಫೆಬ್ರುವರಿ ತಿಂಗಳಲ್ಲಿ, ಡಾ॥ ಮಾಧವ ಪೈಯವರು ಕಾರ್ಕಳಕ್ಕೆ ಭೇಟಿ ನೀಡಿ, ಜನರಲ್ಲಿ ಉತ್ಸಾಹ ತುಂಬಿ, ಕಾಲೇಜು ಸ್ಥಾಪಿಸುವ ಕ್ರಮ ಕೈಗೊಂಡರು. ಊರ ಹಿರಿಯರೊಡನೆ ಸಮಾಲೋಚಿಸಿ, ಶ್ರೀ ವೆಂಕಟರಮಣ ದೇವಳ, SV SV Fund ಹಾಗೂ ಆಸುಪಾಸಿನ ಉದಾರ ದಾನಿಗಳ ಸಹಾಯ ದಿಂದ, ಶ್ರೀ ಭುವನೇಂದ್ರ ಕಾಲೇಜಿನ "ಶಂಕುಸ್ಥಾಪನೆ"ಯು ವಿಧ್ಯುಕ್ತವಾಗಿ, 1960 ಮಾರ್ಚ 4 ರಂದು ಶ್ರೀ ಕಾಶೀ ಮಠಾಧೀಶರಾದ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಶುಭಾಶೀರ್ವಾದ ಗಳೊಂದಿಗೆ ನಡೆಯಿತು. ಅಂತೆಯೇ ಕಾಲೇಜಿನ ಪೋಷಕರಾದ ಮಣಿಪಾಲ ಅಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನವರು, ಸಂಸ್ಕೃತ ಕಾಲೇಜಿನ ಕಟ್ಟಡವನ್ನು ಸೂಕ್ತ ಮಾರ್ಪಾಡುಗಳೊಂದಿಗೆ, ವಿಜ್ಞಾನ, ವಾಣಿಜ್ಯ ವಿಷಯುಗಳನ್ನು ಭೋಧಿಸುವ ಬಗ್ಗೆ ಸಜ್ಜುಗೊಳಿಸಿದರು. ಶೇಷಾದ್ರಿ ಭವನದಲ್ಲಿ ವಿದ್ಯಾರ್ಥಿ ಗಳ ವಸತಿ ಗೃಹವೂ 'ಆಯುರ್ವೇದ ಶಾಲೆಯಲ್ಲಿ ಪಾಕ ಶಾಲೆಯೂ ಸಜ್ಜಾಯಿತು' ಮೈಸೂರು ವಿಶ್ವವಿದ್ಯಾನಿಲಯದ ಸಮಿತಿಯೊಂದು ಕಾರ್ಕಳಕ್ಕೆ ಬಂದು, ವ್ಯವಸ್ಥೆಯನ್ನು ಪರೀಕ್ಷಿಸಿ, ತೃಪ್ತಿ ಸೂಚಿಸಿದ್ದು, ಊರಿನವರ ಉತ್ಸಾಹಕ್ಕೆ ಗರಿ ಕಟ್ಟಿದಂತಾಯಿತು.

ಜೂನ್ ತಾರೀಕು ಒಂದರಿಂದಲೇ ಕಾಲೇಜಿನ ಕಾರ್ಯಾಲಯ ಆರಂಭವಾಗಿ, ಮಂಗಳೂರಿನ ಸೈಂಟ್ ಎಲಾಯಿಸಿಯಸ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ಅಧ್ಯಾಪಕರಾಗಿದ್ದ ಶ್ರೀ ಕೆ. ದಾಮೋದರ ಕಿಣಿಯವರನ್ನು ಪ್ರಿನ್ಸಿಪಾಲರಾಗಿ ನೇಮಿಸಲಾಯಿತು, ಅಂತೆಯೇ ಬೇಕಾದ ಸಿಬಂದಿ, ಅಧ್ಯಾಪಕ ವರ್ಗದ ನೇಮಕವೂ ಆಗಿ, ಜುಲ್ಯಾ 1 ರಂದು ಕಾಲೇಜಿನ ತರಗತಿಗಳೂ ಆರಂಭವಾದುವು. ಪ್ರಿನ್ಸಿಪಾಲ ರಲ್ಲದೆ ಒಂಬತ್ತು ಮಂದಿ ಉತ್ಸಾಹಿ ಯುವಕ ಪ್ರಾಧ್ಯಾಪಕರನ್ನೊಳಗೊಂಡ ಸಿಬಂದಿ ವರ್ಗವು ಕಾರ್ಯೋನ್ಮುಖವಾಗಿ, 1 - 2 ವರ್ಷಗಳಿಂದ ನಿರ್ಜನವಾಗಿದ್ದ "ಶ್ರೀನಿವಾಸ ಆಶ್ರಮ"ದ ಮಠಾರವು ವಿದ್ಯಾರ್ಥಿ - ವಿದ್ಯಾರ್ಥಿನಿಯರ ಕಲರವದಿಂದ ಸಜೀವವಾಯಿತು.

ಕಾಲೇಜಿನಲ್ಲಿ ಮೊದಲ ವರ್ಷದಲ್ಲಿ ಇದ್ದ ವಿದ್ಯಾರ್ಥಿ ಸಂಖ್ಯೆ - 140. ಮುಂದಿನ ವರ್ಷಗಳಲ್ಲಿ ಹೆಚ್ಚುತ್ತಾ, ಸಾವಿರದ ಗಡಿಯನ್ನು ದಾಟಿತು. ಈಗ 25ನೇ ವರ್ಷದಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ - 1300 – ಅದರಲ್ಲಿ 120 ರಷ್ಟು ಮಂದಿ ವಿದೇಶೀಯರು; 500 ರಷ್ಟು ಮಂದಿ ವಿದ್ಯಾರ್ಥಿ ನಿಯರು ! ಉಪಾಧ್ಯಾಯರ ಸಂಖ್ಯೆಯೂ 10 ರಿಂದ 47 ಕ್ಕೇರಿದೆ. ಕಟ್ಟಡಗಳೂ, ವಿಸ್ತಾರಗೊಂಡು, ಉತ್ತಮ ಗ್ರಂಥ ಭಂಡಾರ, ಪ್ರಯೋಗ ಶಾಲೆ, ಆಟದ ಬಯಲು, ಇತ್ಯಾದಿ ಸವಲತ್ತುಗಳನೊಳ ಗೊಂಡು, ತಾಲೂಕಿನ, ಜನತೆಯ ವಿದ್ಯಾಕಾಂಕ್ಷೆಯ ಸಾಕಾರ ರೂಪವಾಗಿದೆ. ಜಿಲ್ಲೆಯಲ್ಲಿಯೇ ದೊಡ್ಡ ವಿದ್ಯಾರ್ಥಿನಿಲಯ (300 ಮಂದಿಗೆ ಅವಕಾಶ), 30,000 ಗ್ರಂಥಗಳಿರುವ ವಿಸ್ತಾರವಾದ ಗ್ರಂಥಾಲಯ ವಿಶಾಲ ಸಭಾಗೃಹ, ಕ್ರೀಡಾಂಗಣಗಳನ್ನು ಹೊಂದಿದ್ದು ಇಂತಹ ಸೌಕರ್ಯ ಸೌಲಭ್ಯಗಳಿರುವ ಕಾಲೇಜುಗಳು ಕರ್ನಾಟಕದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ.

5) ಶ್ರೀ ಭುವನೇಂದ್ರ ಹೈಸ್ಕೂಲ್: ಈ ಹಿಂದೆ ಹೇಳಿದಂತೆ, ಶ್ರೀ ವ್ಯಾಸ ರಘುಪತಿ ವಿದ್ಯಾಶಾಲಾ ಫಂಡಿನಿಂದ ನಡೆಯುತ್ತಿರುವ ಸಂಸ್ಕೃತ ಪಾಠಶಾಲೆಯನ್ನು ಮುಚ್ಚಿದ ಮೇಲೆ, ಆ ನಿಧಿಯ ನೆರವಿ ನಿಂದ ಮುಖ್ಯವಾಗಿ ಸಂಸ್ಕೃತ ವಿದ್ಯಾಭ್ಯಾಸದ ಪ್ರಸಾರದ ಸಲುವಾಗಿ ಒಂದು ಪ್ರತ್ಯೇಕ ಪ್ರೌಢ ಶಾಲೆ ಯನ್ನು ಆರಂಭಿಸಲಾಯಿತು. 1952ರಷ್ಟು ಹಿಂದೆಯೇ, ಮಹಾ ಪಾಠಶಾಲೆಯ ಪೂರಕ ಸಂಸ್ಥೆಯಾಗಿ "ಶ್ರೀ ಮದ್ ಭುವನೇಂದ್ರ ಒರಿಯಂಟಲ್ ಪ್ರೌಢ ಶಾಲೆಯನ್ನು ಆರಂಭಿಸಲಾಯಿತು. ಆ ಶಾಲೆಗೆ ಹಿರಿಯ ಅದ್ಯಾಪಕರೂ, ಆಗತಾನೇ ಬೋರ್ಡ್ ಹ್ಯಾಸ್ಕೂಲ್‌ನಿಂದ ವಿಶ್ರಾಂತರೂ ಆಗಿದ್ದ ಶ್ರೀ (ದಿ) ರಾಘ ವೇಂದ್ರ ರಾಯರು ತಮ್ಮ ಸೇವೆಯನ್ನು ಸಲ್ಲಿಸಿದರು. ಮುಖ್ಯೋಪಾಧ್ಯಾಯರಾಗಿ, 1958 ರಿಂದ 1980ರ ವರೆಗೆ ಶ್ರೀ ಶ್ರೀನಿವಾಸ ಕಾಮತರು ಶಾಲೆಯನ್ನು ಸಮರ್ಥವಾಗಿ ನಡೆಸಿದರು. ಸರಕಾರದ ಆದೇಶದಂತೆ 1962ರಲ್ಲಿ ಸಾಮಾನ್ಯ ಪ್ರೌಢ ಶಾಲೆಯಾಗಿ ಪರಿವರ್ತನೆ ಹೊಂದಿದ ಈ ಶಾಲೆಯು

1978–79ರಲ್ಲಿ ಬೆಳ್ಳಿಹಬ್ಬ ಆಚರಿಸಿತು. ಎಸ್. ವಿ. ಟಿ. ಹೆಮ್ಮಕ್ಕಳ ಶಾಲೆಯು ಬಳಿಯಲ್ಲಿ ಚಿಕ್ಕ ಸ್ಥಳದಲ್ಲಿ ಕಾರ್ಯವಹಿಸುವ ಈ ಶಾಲೆ ಸ್ಥಳಾಭಾವವಿದ್ದರೂ. ತನ್ನ ಶಿಸ್ತು, ಉತ್ತಮ ಪಾಠ ಪ್ರವಚನಗಳಿಗಾಗಿ ಖ್ಯಾತಿಹೊಂದಿದೆ.

6) ಅತ್ತೂರು ಪ್ರೌಢ ಶಾಲೆ: ಕಾರ್ಕಳ ಬಳಿಯ ಪರ್ಪಲೆ ಗುಡ್ಡದ ಪಶ್ಚಿಮ-ಉತ್ತರ ತಪ್ಪಲಿನ ಪ್ರಶಾಂತ ವಾತಾವರಣದ 'ಸೈಂಟ್ ಲಾರೆನ್ಸ್' ಧರ್ಮ ಕ್ಷೇತ್ರದ ವಠಾರದಲ್ಲಿರುವ ಈ ಪೌಢಶಾಲೆ ಮೊದಲು ಹಿರಿಯ ಪ್ರಾಥಮಿಕ ಶಾಲೆಯಾಗಿ 50 ವರ್ಷಗಳ ಹಿಂದೆಯೇ ಆರಂಭವಾಗಿದ್ದು, ಆ ಧರ್ಮ ಕ್ಷೇತ್ರದ ಪವಾಡಪುರುಷರೆಂದೇ ಖ್ಯಾತರಾದ ರೆ। ಫಾ। ಲಾರೆನ್ಸ್ ಡಿ'ಸೋಜರು ಅದರ ಸ್ಥಾಪಕರು – ಮಂಗಳೂರಿನ 'ಡಯೋಸೀಸ್'ನ ಆಡಳಿತಕ್ಕೆ ಒಳಪಟ್ಟಿರುವ ಈ ಶಾಲೆ 1964ರಲ್ಲಿ ಪ್ರೌಢಶಾಲೆಯಾಗಿ ಪರಿವರ್ತಿತವಾಗಿ. ಪರಿಸರದ ಗ್ರಾಮೀಣ, ಮಕ್ಕಳ ವಿದ್ಯಾಕಾಂಕ್ಷೆಯನ್ನು ತಣಿಸುತ್ತದೆ.

7) ಕುಕ್ಕುಂದೂರು ದುರ್ಗಾ ಪ್ರೌಢ ಶಾಲೆ: ದಿ। ಕಾರ್ಕಳ ಜೋಗಳಬೆಟ್ಟು ನಾರಾಯಣ ರಾಯ (ಅಯ್ಯಣ್ಣ ಪಂಡಿತ)ರಿಂದ 60 ವರ್ಷಗಳ ಹಿಂದೆ, ಪ್ರೌಢ ಪ್ರಾಥಮಿಕ ಶಾಲೆಯಾಗಿ ಆರಂಭವಾದ ಈ ಶಾಲೆ, ಅವರ ನಿಧನಾನಂತರ ಶ್ರೀ ಶಿರ್ವ ಶಿವಣ್ಣ ಶೆಟ್ಟರ ಆಡಳಿತೆಯಲ್ಲಿ 1981ರಲ್ಲಿ ಪ್ರೌಢ ಶಾಲೆಯಾಗಿ ಪರಿವರ್ತಿತವಾಗಿದೆ. ಕಾರ್ಕಳ-ಉಡುಪಿ ಹೆದ್ದಾರಿಯಲ್ಲಿ ಕುಕ್ಕುಂದೂರು ಜೋಡು ರಸ್ತೆಯಲ್ಲಿ ವಿಶಾಲವಾದ ಸ್ವಂತ ಸ್ಥಳದಲ್ಲಿ ಶಿಕ್ಷಣ ಕಾರ್ಯದಲ್ಲಿ ಮಗ್ನವಾಗಿದೆ.

8) ನಿಟ್ಟೆ ವಿದ್ಯಾಸಂಸ್ಥೆಗಳು : ಕಾರ್ಕಳ ತಾಲೂಕಿನ ನಿಟ್ಟೆ ಸುತ್ತಮುತ್ತಲಿನ ಗ್ರಾಮೀಣ ಪರಿಸರದ ಸರ್ವತೋಮುಖ ಅಭಿವೃದ್ಧಿ ಮಾಡುವ ಕಾರ್ಯದಲ್ಲಿ ಸಹಾಯ ಮಾಡುವ 'ನಿಟ್ಟೆ ಎಜ್ಯುಕೇಷನ್ ಟ್ರಸ್ಟ್' ಸಂಸ್ಥೆಗಳೇ (ಎ) ಶಂಕರ ಅಡ್ಯಂತಾಯ ಸ್ಮಾರಕ ಪ್ರೌಢಶಾಲೆ-ಜೂನಿಯರ್ ಕಾಲೇಜ್; (ಬಿ) ರುಕ್ಮಿಣಿ ಅಡ್ಯಂತಾಯ ತಾಂತ್ರಿಕ ಸಂಸ್ಥೆ; (ಸಿ) ಗುಲಾಬಿ ಶೆಟ್ಟಿ ವೈದ್ಯ ರಸಾಯನ ಶಾಸ್ತ್ರಶಾಲೆ. ಇವು ಇತ್ತೀಚೆಗೆ ಆರಂಭವಾಗಿದ್ದರೂ ತಮ್ಮ ಉದ್ದೇಶ ಸಾಧನೆಗಾಗಿ ಶ್ರಮಿಸುತ್ತಿವೆ.

9) ಕಾರ್ಕಳ ತಾಲೂಕಿನ ಕೆಲವು ಪ್ರಮುಖ ಪ್ರೌಢಶಾಲೆಗಳು, ವಿದ್ಯಾ ಸಂಸ್ಥೆಗಳು: ಮೂಡಬಿದಿರೆಯ ದಿಗಂಬರ ಜೈನ ವಿದ್ಯಾವರ್ಧಕ ಸಂಘವು ಹಲವು ಸಂಸ್ಥೆಗಳನ್ನು ನಡೆಸುತ್ತಿದೆ. ಅದರ ಪ್ರೌಢ ಪ್ರಾಥಮಿಕ ಶಾಲೆ – ಜೈನ್ ಜೂನಿಯರ್ ಕಾಲೇಜು ಹಾಗೂ ಶ್ರೀ ಧವಳ ಪ್ರಥಮ ದರ್ಜೆ ಕಾಲೇಜುಗಳೂ ಅದರಂತೆಯೇ ಮಣಿಪಾಲದ ಎಕೆಡೆಮಿಯವರ ಆಶ್ರಯದಲ್ಲಿ ಆರಂಭಿಸಲ್ಪಟ್ಟ ಶ್ರೀ ಮಹಾವೀರ ಕಾಲೇಜುಗಳೂ ಅಲ್ಲಿವೆ. ಮಹಾವೀರ ಕಾಲೇಜ್ ಈಗ ತಾಂತ್ರಿಕ ಶಿಕ್ಷಣಕ್ಕೂ ಅವಕಾಶವಿತ್ತಿರುತ್ತದೆ. 'ಧವಳಾ' ಕಾಲೇಜಿನಲ್ಲಿ ವಾಣಿಜ್ಯ ಮಾನವಿಕ ಶಾಸ್ತ್ರಗಳಿಗೆ ಅವಕಾಶವಿದೆ. 'ಮಹಾವೀರ'ದಲ್ಲಿ ವಿಜ್ಞಾನವೂ ಪಠ್ಯ ವಿಷಯವಾಗಿದೆ. ಮಹಾವೀರ ಕಾಲೇಜಿನ ವಿದ್ಯಾರ್ಥಿನೀ ನಿಲಯವು ದೇಶಾಂತರದ ವಿದ್ಯಾರ್ಥಿನಿಯರಿಗಾಗಿ ಮೀಸಲಾದುದು. ಮಣಿಪಾಲದ ವೈದ್ಯಕೀಯ ಯಂತ್ರಶಾಸ್ತ್ರದ ಕಾಲೇಜುಗಳಿಗೆ ಹೋಗುವ ಉದ್ದೇಶದಿಂದ ಭಾರತಕ್ಕೆ ಬರುವ ಈ ವಿದ್ಯಾರ್ಥಿನಿಯರು ಮೂಡಬಿದಿರೆಯಲ್ಲಿ ತಮ್ಮ ಪದವೀಪೂರ್ವ ಶಿಕ್ಷಣವನ್ನು ಪಡೆಯುತ್ತಾರೆ.

ಮೂಡಬಿದರೆಯಲ್ಲಿ ಇನ್ನೂ ಹಲವು ಪ್ರೌಢಶಾಲೆಗಳಿವೆ. ಬಾಬೂ ರಾಜೇಂದ್ರ ಪ್ರಸಾದ ಪ್ರೌಢಶಾಲೆ, ಪ್ರಾಂತ್ಯ ಸರಕಾರೀ ಪ್ರೌಢ ಶಾಲೆ, ಆಲಂಗಾರಿನಲ್ಲಿ ಕ್ರೈಸ್ತ ಸನ್ಯಾಸಿನಿಯರು ನಡೆಸುವ ಹೆಣ್ಮಕ್ಕಳ ಪ್ರೌಢಶಾಲೆ ಇತ್ಯಾದಿಗಳು ಗ್ರಾಮಾಂತರದ ಮೂಡಬಿದರೆಯ ಯುವಕ ಯುವತಿಯರ ವಿದ್ಯಾಕಾಂಕ್ಷೆಯನ್ನು ಪೂರೈಸಲು ಯತ್ನಿಸುತ್ತಿವೆ. ಮೂಡಬಿದರೆಯ ಗ್ರಾಮೀಣ ಪರಿಸರದ ಕಡಂದಲೆಯಲ್ಲಿ ಇದೀಗ ಒಂದು ವೈದ್ಯ ಶಾಸ್ತ್ರ ಸಂಬಂಧದ ಶಾಲೆಯೂ (Pharmacy) ಆರಂಭ ವಾಗಿದೆ.

ಕಾರ್ಕಳ ತಾಲೂಕಿನ ಇನ್ನೊಂದು ಪ್ರಮುಖ ಕೇಂದ್ರವಾದ ಹೆಬ್ರಿಯಲ್ಲಿ 1980 ರಿಂದ

ಒಂದು ಸರಕಾರೀ ಕಾಲೇಜು ಆರಂಭವಾಗಿದ್ದು, ಅಲ್ಲಿ ವಾಣಿಜ್ಯ, ಮಾನವಿಕ ವಿಷಯಗಳಲ್ಲಿ ಬೋಧನೆ ನಡೆಯುತ್ತಿದೆ. ಮುದ್ರಾಡಿ, ಅಜೆಕಾರುಗಳಲ್ಲಿಯೂ ಪ್ರೌಢ ಶಾಲೆಗಳಿವೆ.

ಬಜಗೋಳಿಯಲ್ಲಿ ಒಂದು ಪ್ರೌಢ ಶಾಲೆಯನ್ನು ಸರಕಾರವು 1980 ರಿಂದ ನಡೆಸುತ್ತಿದೆ. ಅಂತೆಯೇ ಇನ್ನೂ ಮಲೆನಾಡಾದ ನೆಲ್ಲಿ ಕಾರು, ನಾರಾವಿಗಳಲ್ಲಿಯೂ ಪ್ರೌಢ ಶಾಲೆಗಳವೆ.

ಸಾಣೂರು, ಕಾಂತಾವರ, ಬೆಳ್ವಾಯಿಗಳಲ್ಲೂ ಒಂದೊಂದು ಪ್ರೌಢ ಶಾಲೆ ಇದೆ. ಹೆಚ್ಚಿನವು 1980 ರಲ್ಲಿ ಸ್ಥಾಪಿತವಾದುವುಗಳು.

ನೀರೆ - ಬೈಲೂರಿನಲ್ಲಿ ಇರುವ ಸರಕಾರೀ ಜ್ಯೂನಿಯರ್ ಕಾಲೇಜು ಆ ಪರಿಸರದಲ್ಲಿ ಒಂದು ಪ್ರಮುಖ ಸಂಸ್ಥೆ. ಹತ್ತಿರದ ಪಳ್ಳಿಯಲ್ಲಿಯೂ ಒಂದು ಪ್ರೌಢ ಶಾಲೆ ಕಾರ್ಯ ನಿರ್ವಹಿಸುತ್ತಿದೆ. ಸ್ನಾತಕ ವ್ಯಾಸಂಗಕ್ಕೆ ಕಾರ್ಕಳವೇ ಇವರೆಲ್ಲರಿಗೆ ಸನಿಹದ ಊರು.

ಈ ವರೆಗೆ ಗಮನಿಸಿದ ಪ್ರೌಢ ಶಾಲೆಗಳೂ, ಕಾಲೇಜುಗಳೂ ಅಲ್ಲದೆ, ಇವೆಲ್ಲವುಗಳಿಗೆ ಪೂರಕವಾಗಿ ನೂರಾರು ಪ್ರಾಥಮಿಕ ಶಾಲೆಗಳು ಕಾರ್ಕಳ ತಾಲೂಕಿನಲ್ಲಿದ್ದು, ಅವುಗಳ ಅಂಕೆ ಸಂಖ್ಯೆಗಳನ್ನು ಕಲೆ ಹಾಕುವುದೂ ಸಾಹಸವಾಗುತ್ತದೆ. ಆದರೂ ಕಾರ್ಕಳ ಪಟ್ಟಣದಲ್ಲಿರುವ ಕೆಲವು ಪ್ರಮುಖ ಹಳೆ - ಹೊಸ ಪ್ರಾಥಮಿಕ ಶಿಕ್ಷಣ ಕೇಂದ್ರಗಳನ್ನು ಹೆಸರಿಸಬಹುದು :

ಈ ಲೇಖನದ ಆರಂಭದಲ್ಲಿ ಗಮನಿಸಿದ, ಎಸ್‌ವಿಟಿ ವಿದ್ಯಾಸಂಸ್ಥೆಗಳಲ್ಲದೆ, ಸರಕಾರದ ವತಿಯಿಂದ ನಡೆಸುವ ಪ್ರಾಥಮಿಕ ಶಾಲೆಗಳಲ್ಲಿ, ಕಾರ್ಕಳ ನಗರದ ನಡುವೆ ಇರುವ, ಶತಮಾನದಷ್ಟು ಹಳೆಯ "ಮೈನ್" ಶಾಲೆಗೆ ತನ್ನದೇ ವೈಶಿಷ್ಟ್ಯವಿದೆ. ಹಲವು ಉತ್ತಮ ಶಿಕ್ಷಕರನ್ನು ಹೊಂದಿದ ಕೀರ್ತಿ ಇದಕ್ಕಿದೆ. "ಪೆರ್ವಾಜೆ ಶಾಲೆ"ಯೆಂದು ಪರಿಚಿತವಾಗಿರುವ ಇನ್ನೊಂದು ಸರಕಾರೀ ಪ್ರಾಥಮಿಕ ಶಾಲೆಯು ತನ್ನ ಹೆಸರಿನ ಪರಿಸರದಿಂದ ದೂರವಾಗಿದ್ದರೂ ಕಾರ್ಕಳದ ಅನಂತಶಯನ - ತೆಳ್ಳಾರು ರಸ್ತೆಯ, ಹಾಗೂ ಶ್ರೀ ಭುವನೇಂದ್ರ ಕಾಲೇಜಿನ ಆಸುಪಾಸಿನ ಪರಿಸರದ ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸುತ್ತದೆ. 50 ವರ್ಷಕ್ಕೂ ಹೆಚ್ಚು ಸಮಯದಿಂದ ಇರುವ ಈ ಶಾಲೆಯು. ಈಗ ವಿಶಾಲ ಬಯಲು, ಕಟ್ಟಡ. ಇತ್ಯಾದಿಗಳಿಂದ ಪ್ರಗತಿ ಪಥದಲ್ಲಿದೆ.

"ಮಿಶನ್ ಶಾಲೆ" – "ಮೈನ್" ಶಾಲೆಯ ನೆರೆಕರೆಯಲ್ಲಿರುವ ಇನ್ನೊಂದು ಪ್ರಾಥಮಿಕ ಶಾಲೆ. ಬಾಸೆಲ್ - ಮಿಶನಿನ ಆಡಳಿತದಲ್ಲಿದೆ.

'ಕ್ರೈಸ್ತಕಿಂಗ' ಪ್ರೌಢ ಪ್ರಾಥಮಿಕ ಶಾಲೆ – ಸ್ಥಳಿಯ ಕ್ರಿಸ್ತ ಮಂದಿರದ ವಠಾರದಲ್ಲಿ ಅರ್ಧ ಶತಕ ದಿಂದಲೂ ಈ ಶಾಲೆ ನಡೆಯುತ್ತಿದೆ.

'ರಾಮಪ್ಪ ಶಾಲೆ'ಯೆಂದು ಪರಿಚಿತವಾಗಿರುವ, ಕಾರ್ಕಳದ ಹಿರಿಯ ದಾನಿ, ಜಮೀನುದಾರ ರಾಗಿದ್ದ ದಿ॥ ರಾಮಪ್ಪ ಕಲ್ಯರಿಂದ ಪೋಷಿಸಲ್ಪಟ್ಟ ಈ ಶಾಲೆ ಆನೆಕೆರೆ ವಠಾರದಲ್ಲಿ ಸ್ಥಾಪಿತವಾಗಿದೆ.

ಹಿರಿಯಂಗಡಿಯ 'ಭುಜ ಬಲಿ ಪ್ರೌಢ ಪ್ರಾಥಮಿಕ ಶಾಲೆ'ಯೂ 40 ವರ್ಷಗಳಿಂದ ನಡೆಯು ತ್ತಿದ್ದು ಕಳೆದ ವರ್ಷ (1984) ವಷ್ಟೇ ಪ್ರೌಢ ಶಾಲೆಯಾಗಿ ಬೆಳೆದಿದೆ. ಇದರ ಅಂಗ ಸಂಸ್ಥೆಯಾಗಿರುವ "ಭುಜಬಲಿ ಬ್ರಹ್ಮಚರ್ಯಾ ಶ್ರಮ"ವು ಸಾತ್ವಿಕ ಜೀವನ ನಡೆಸಲು, ತಮ್ಮ ಧರ್ಮದ ಅನುಯಾಯಿ ಗಳಿಗೆ ಅನುವು ಮಾಡಿಕೊಡುವ ವಿಶಿಷ್ಟ ವಸತಿಗೃಹವಾಗಿದೆ.

ಕಾರ್ಕಳದ ಜೇಸೀ ಸೇವಾ ಸಂಸ್ಥೆಯ ಆಶ್ರಯದಲ್ಲಿ ಆರಂಭವಾಗಿರುವ ಆಂಗ್ಲಭಾಷಾ ಮಾಧ್ಯಮದ ಬಾಲವಾಡಿ (Nursery school),ಹಾಗೂ ಪ್ರಾಥಮಿಕ ಶಾಲೆಗಳು ಕಾರ್ಕಳದ ವಿದ್ಯಾಕ್ಷೇತ್ರದಲ್ಲಿ ಒಂದು ಹೊಸ ಬೆಳವಣಿಗೆ, 1979 ರಿಂದ ನಡೆಯುವ ಈ ಸಂಸ್ಥೆ ಬಹು ಸಂಖ್ಯೆಯಲ್ಲಿ ಮಕ್ಕಳನ್ನು ಆಕರ್ಷಿಸುತ್ತಿದೆ.

ಶಿಕ್ಷಣ ಪ್ರಸಾರದಲ್ಲಿ ಸಾಂಪ್ರದಾಯಿಕ ಸಂಸ್ಥೆಗಳಾದ ಶಾಲಾ - ಕಾಲೇಜುಗಳಲ್ಲದೇ, ಗ್ರಂಥಾಲಯುಗಳ ಪಾಲೂ ಬಹು ದೊಡ್ಡದೆಂಬುದು ಎಲ್ಲರೂ ಒಪ್ಪಿರುವ ಮಾತು. ಈ ದೃಷ್ಟಿಯಿಂದ, ಕಾರ್ಕಳದಲ್ಲಿ ಗ್ರಂಥಾಲಯು ಚಳುವಳಿ, ಗ್ರಂಥಾಲಯುಗಳು ಮಾಡಿದ ಕೆಲಸಗಳನ್ನು ಸಂಕ್ಷಿಪ್ತವಾಗಿಯೂದರೂ ಸೂಚಿಸದಿದ್ದರೆ, ಈ ಲೇಖನವು ಪೂರ್ಣವಾಗದು.

ಈ ಶತಕದ ಆದಿಯಿಂದಲೂ, ಕಾರ್ಕಳದ ಸಮಾಜ ಸೇವಕರು, ಸ್ವಾತಂತ್ರ್ಯ ಚಳುವಳಿ, ವಿದ್ಯಾ ಪ್ರಸಾರ ಇತ್ಯಾದಿಗಳ ಬಗ್ಗೆ, ಜನರಲ್ಲಿ ತಿಳುವಳಿಕೆಯುಂಟು ಮಾಡುವುದಕ್ಕಾಗಿ ಉಚಿತ ವಾಚನಾಲಯು, ಗ್ರಂಥ ಭಂಡಾರಗಳನ್ನೂ ತೆರೆದುದು ದಾಖಲೆಯಾಗಿದೆ. ಶ್ರೀ ಪದ್ಮನಾಭ ಕಾಮತ್ ಮತ್ತಿತರರು, ಕಾರ್ಕಳದಲ್ಲಿ (1915 - 20 ವರ್ಷಗಳಲ್ಲಿ) ಮನೆ ಮನೆಗೆ ಜ್ಞಾನ ದೀಪಗಳಾದ ಗ್ರಂಥಗಳನ್ನು ವಿತರಿಸಿ, ಜನಜಾಗೃತಿಯು ಕೆಲಸ ಮಾಡಿದ್ದನ್ನು ಬೇರೊಂದಡೆ ವಿವರಿಸಲಾಗಿದೆ. "ಕಾರ್ಕಳ ಪಬ್ಲಿಕ್ ಲೈಬ್ರೆರಿ"ಯು 1950 - 51ರ ವರೆಗೆ, ಎಸ್‌ವಿಟಿ ಶಾಲಾ ವಠಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕೊನೆಗೆ ಅದರ ಸಂಗ್ರಹದಲ್ಲಿದ್ದ ಸುಮಾರು 500 ಉತ್ತಮ ಗ್ರಂಥಗಳು ಶ್ರೀ ಭುವನೇಂದ್ರ ಕಾಲೇಜಿನ ಗ್ರಂಥ ಭಂಡಾರದ ಭಾಗವಾದುವು (1960 - 61). ಇಂಥಾ ಸಾರ್ವಜನಿಕ ಗ್ರಂಥ ಭಂಡಾರಗಳು ಮಾತ್ರವಲ್ಲದೇ, ಶ್ರೀ ಕೆ. ಪಿ. ಮುಕುಂದ ಪ್ರಭು, ಪದ್ಮನಾಭ ಕಾಮತ್, ಇತ್ಯಾದಿ ಮಹನೀಯರ ಮನೆಗಳಲ್ಲಿ ಸದಭಿರುಚಿಯು ಖಾಸಗಿ ಗ್ರಂಥ ಭಂಡಾರಗಳೂ ಇದ್ದುವು. ಅವುಗಳ ಉಪಯೋಗವನ್ನು ಜಿಜ್ಞಾಸುಗಳು ಆಗಿನ ದಿನಗಳಲ್ಲಿ ಮಾಡಿಕೊಂಡರು. ಕಾರ್ಕಳದ ಬೋರ್ಡ್ ಹ್ಯಾಸ್ಕೂಲಿನ ಗ್ರಂಥ ಭಂಡಾರವು ಹಲವಾರು ಇಂಗ್ಲಿಷ್ ಕನ್ನಡ ಗ್ರಂಥ ರತ್ನಗಳನ್ನು ಒಳಗೊಂಡಿವೆ.

ಸಾಮಾನ್ಯ ಜನರ ಜ್ಞಾನ ದಾಹವನ್ನು ತೀರಿಸುವಲ್ಲಿ, "ಲೋಕಲ್ ಲೈಬ್ರೆರಿ" ಚಳವಳಿ – 1954 ರಿಂದ ಮಹತ್ತರ ಪಾತ್ರ ವಹಿಸುತ್ತಿದೆ. ಈ ಸಂಸ್ಥೆ ಸರಕಾರಿಯಾಗಿದ್ದರೂ, ಅದರ ಸಿಬಂದಿಯುವರ ಕಾರ್ಯ ಪಟುತ್ವ. ಉತ್ಸಾಹದಿಂದಾಗಿ, ಒಂದು ಉಪಯುಕ್ತ ಸಂಸ್ಥೆಯಾಗಿ ಬೆಳೆದು ಬಂದಿದೆ. 20 ಸಾವಿರಕ್ಕೂ ಹೆಚ್ಚು ಇಂಗ್ಲಿಷ್, ಕನ್ನಡ, ಹಿಂದಿ ಗ್ರಂಥಗಳನ್ನು ಒಳಗೊಂಡು ಹಲವು ಪತ್ರಿಕೆಗಳನ್ನು ಧರ್ಮಾರ್ಥವಾಗಿ ಓದುಗರಿಗೆ ಪೂರೈಸುವ ಮೂಲಕ ದೈನಂದಿನ ವಾರ್ತೆಗಳನ್ನು ವಿವಿಧ ವಿಷಯುಗಳ ಜ್ಞಾನವನ್ನೂ ಒದಗಿಸುತ್ತದೆ. ಸ್ಥಳಾಭಾವದಿಂದ. ಆಗಾಗ್ಗೆ ಕಟ್ಟಡ ಬದಲಾಯಿಸಬೇಕಾಗಿ ಬಂದರೂ, ವಾಚಕರ ಸಂಖ್ಯೆ ಹೆಚ್ಚುತ್ತಿದೆ.

ಈ ಚಳುವಳಿಯು ಇನ್ನೊಂದು ವೈಶಿಷ್ಟ್ಯವೆಂದರೆ ಗ್ರಾಮಾಂತರಗಳಲ್ಲಿ ಇರುವ "ವಿತರಣಾ ಕೇಂದ್ರಗಳು" – ಹೆಬ್ರಿ, ಮೂಡಬಿದರೆ, ನಾರಾವಿ, ಬೈಲೂರು, ಮುಂತಾದ ಕಡೆಗಳಲ್ಲಿ ಈ ಕೇಂದ್ರಗಳಿದ್ದು, ಅವುಗಳಲ್ಲಿ ಹೆಬ್ರಿ, ಮೂಡಬಿದರೆಗಳಲ್ಲಿ ಸ್ವತಂತ್ರ ಶಾಖಾ ಗ್ರಂಥಾಲಯುಗಳಾಗಿವೆ. ವಿದ್ಯಾರ್ಥಿಗಳಿಗಾಗಿ ವಿಶಿಷ್ಟ ವಿಭಾಗಗಳಿರುವ ಈ ಸಂಸ್ಥೆಯು ನಿಜವಾಗಿಯೂ ವಿದ್ಯಾ ಪ್ರೇಮಿಗಳಿಗೆ ಒಂದು ವರದಾನ ವಾಗಿದೆ.

ಅನುಬಂಧ

ಕಾರ್ಕಳದ ಸಾಮಾಜಿಕ-ಆರ್ಥಿಕ ಸಮೀಕ್ಷೆ

ಸಂಕ್ಷಿಪ್ತ ವರದಿ

ಎಸ್. ರವೀಂದ್ರ ಮಲ್ಲಿ.

ಕಾರ್ಕಳದ ಸಾಮಾಜಿಕ - ಆರ್ಥಿಕ ಸಮೀಕ್ಷೆ

ಶ್ರೀ ಭುವನೇಂದ್ರ ಕಾಲೇಜಿನ ಸುಮಾರು 100ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾರ್ಕಳ ಪೇಟೆಯ ಅಂಕಿ ಅಂಶಗಳ ಸಮೀಕ್ಷೆಯನ್ನು (Census Survey)1983 - 84ರಲ್ಲಿ ಕೈಗೆತ್ತಿಕೊಂಡರು. ಪ್ರತಿಯೊಂದು ಮನೆಗೂ ಭೇಟಿ ನೀಡಿ ದೊಡ್ಡ ಪ್ರಮಾಣದಲ್ಲಿ, ಸಾಧ್ಯವಾದಷ್ಟು ಪ್ರಾಮಾಣಿಕವಾದ ಮಾಹಿತಿಗಳನ್ನು ಸಂಗ್ರಹಿಸಿದರು. ವರ್ಷದ ವಿದ್ಯಾರ್ಜನೆಯ ಜೊತೆಗೆ ಇದನ್ನು ನಡೆಸಬೇಕಾದುದರಿಂದ ಹಿಡಿದ ಕೆಲಸವನ್ನು 1983 - 84ರಲ್ಲಿ, ಮುಗಿಸಲಾಗಲಿಲ್ಲ. ಹಾಗಾಗಿ ಉಳಿದ ಸ್ವಲ್ಪಾಂಶವನ್ನು 1984 - 85ರಲ್ಲಿ ಮುಂದುವರಿಸಿ ಸಂಗ್ರಹಿಸಿದ ಅಂಕಿ - ಅಂಶಗಳನ್ನು ಕ್ರೋಢೀಕರಿಸಲಾಯಿತು. ವಿದ್ಯಾರ್ಥಿಗಳನ್ನು ತರಗತಿ ಕೊಠಡಿಯ ನಿರ್ಬಂಧಗಳಿಂದ ಹೊರತಂದು ಸಮಾಜ ಜೀವನದ ನೈಜತೆಯಲ್ಲಿ ಬೆರೆಯುವಂತೆ ಮಾಡಿ, ಹೊಸ ಆಯಾಮವನ್ನು ಕಾಣಿಸುವುದು ಈ ಸಮೀಕ್ಷೆಯ ಉದ್ದೇಶಗಳಲ್ಲೊಂದು. ವಿದ್ಯಾರ್ಥಿಗಳ ಸೂಕ್ಷ್ಮಬುದ್ಧಿ, ಸಹನೆ, ವ್ಯವಹಾರಕುಶಲತೆಗಳೇ ಅವರ ಸಾಮಾಜಿಕತೆಯನ್ನು ಪರೀಕ್ಷಿಸುವ ಒರೆಗಲ್ಲು. ಸಮೀಕ್ಷೆಯಿಂದ ದೊರೆತ ವಿವರಗಳು ಈ ಕೆಳಗಿನಂತಿವೆ:

ಸಾಮಾನ್ಯ ವಿವರಗಳು: ಸಮೀಕ್ಷೆಯು ಕಾರ್ಕಳದ ಪುರಸಭೆಯ ಪರಿಮಿತಿಯೊಳಗಿನ ಆರು ವಾರ್ಡುಗಳಿಗೆ ವಿಸ್ತರಿಸಿತ್ತು. ಒಟ್ಟು 1981 ಮನೆಗಳನ್ನೂ, 12,241ರಷ್ಟು ಜನಸಂಖ್ಯೆಯನ್ನೂ ಒಳಗೊಂಡಿತ್ತು. ಒಟ್ಟು ಜನಸಂಖ್ಯೆಯು 6233 ಮಂದಿ ಗಂಡು (Male) ಮತ್ತು 6008 ಮಂದಿ ಹೆಣ್ಣು (Female) ಆಗಿದ್ದಾರೆ. ಸಮೀಕ್ಷೆಯು ಜನಸಂಖ್ಯೆಯ ಜಾತಿಮತಗಳ ಅಂಕಿ ಅಂಶಗಳನ್ನು ಕೂಡಾ ಸಂಗ್ರಹಿಸಿತ್ತು. ಅದರ ವಿವರಗಳನ್ನು ಕೆಳಗೆ ಕೊಡಲಾಗಿದೆ:

ವಾರ್ಡು ನಂಬ್ರ	ಸಮೀಕ್ಷೆ ಮಾಡಿದ ಮನೆಗಳ ಸಂಖ್ಯೆ	ಜನಸಂಖ್ಯೆ			
		ಹಿಂದೂಗಳು	ಮುಸಲ್ಮಾನರು	ಕ್ರೈಸ್ತರು	ಇತರರು
1	574	3,032	545	160	11
2	491	2,983	94	146	16
3	388	2,015	163	272	—
4	225	683	16	49	—
5	185	1,023	182	120	—
6	118	465	206	60	—
ಒಟ್ಟು: 6	1981	10,201	1206	807	27

ಮಾತೃಭಾಷೆ: ಹಾಗೆಯೇ ಸಮೀಕ್ಷೆಯು ಜನರ ಮಾತೃಭಾಷೆಗಳ ಆಧಾರದ ಮೇಲೆ ಅಂಕೆ ಅಂಶಿಗಳನ್ನು ಸಂಗ್ರಹಿಸಿದ ತಖ್ತೆ ಹೀಗಿದೆ:

	ವಾರ್ಡು ನಂಬ್ರ	ತುಳು	ಕನ್ನಡ	ಕೊಂಕಣಿ	ಉರ್ದು	ಮಲಯಾಳಂ	ಮರಾಠಿ	ತಮಿಳು	ಇತರ
	1	1449	438	999	313	159	28	—	83
	2	1244	706	887	109	27	47	—	156
	3	972	502	708	176	—	—	—	50
	4	72	68	846	40	—	—	—	—
	5	697	162	249	187	—	—	—	—
	6	94	34	218	212	58	71	136	44
ಒಟ್ಟು:	6	4528	1910	3907	1037	244	146	136	333

ಮನೆಮಾಲಕತ್ವ: ಸಮೀಕ್ಷೆ ನಡೆಸಿದ 1981 ಮನೆಗಳಲ್ಲಿ 1323 ಸ್ವಂತ ಮನೆಗಳಾಗಿದ್ದು ಉಳಿದ 658 ಮನೆಗಳು ಬಾಡಿಗೆಯ ಮನೆಗಳಾಗಿವೆ - ಹೆಚ್ಚು ಕಡಿಮೆ 50% ಮಾತ್ರ ಬಾಡಿಗೆಯ ಮನೆಗಳು. ಇಲ್ಲಿರುವ ನಿವಾಸಿಗಳಲ್ಲಿ ಹೆಚ್ಚಿನವರು ಈ ಪ್ರದೇಶವನ್ನೇವಾಸಸ್ಥಾನವನ್ನಾಗಿ ಆರಿಸಿಕೊಂಡಿರುವ ಅಂಶ ಇವರಿಂದ ತಿಳಿಯುತ್ತದೆ. ಉದ್ಯೋಗಾವಕಾಶಗಳು ಕಡಿಮೆಯಿರುವುದರಿಂದ ಹೊರಗಿನವರು ಇಲ್ಲಿ ಬಂದು ಬಾಡಿಗೆಯ ಮನೆಗಳಲ್ಲಿ ನಿಲ್ಲುವ ಪ್ರಮೇಯವೂ ಕಡಿಮೆಯಿದೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರ ಇಲ್ಲಿರುವ ನಿವಾಸಿಗಳಲ್ಲಿ ಶೇಕಡಾ 70%ರಷ್ಟು ಮನೆಯವರು ಕಳೆದ 16 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಇಲ್ಲಿಯೇ ವಾಸವಾಗಿದ್ದವರು.

ಶೌಚ, ಸ್ನಾನಗೃಹ ವ್ಯವಸ್ಥೆ: ಸಾಮಾಜಿಕ ಆರೋಗ್ಯಕ್ಕೆ ಸಂಬಂಧಪಟ್ಟು ಸಮೀಕ್ಷೆಯು ಮನೆಗಳಿಗೆ ಪ್ರತ್ಯೇಕ ಸ್ನಾನಗೃಹ ಮತ್ತು ಪಾಯಿಖಾನೆಗಳು ಇವೆಯೇ ಎಂಬ ವಿವರವನ್ನು ಸಂಗ್ರಹಿಸಿದೆ. ಅದರಲ್ಲಿ ಕಂಡುಬಂದ ಅಂಶಗಳನ್ನು ಕೆಳಗೆ ಕೊಡಲಾಗಿದೆ:

ವಾರ್ಡು ನಂಬ್ರ	ಪ್ರತ್ಯೇಕ ಶೌಚ, ಸ್ನಾನ ಗೃಹಗಳಿರುವ ಮನೆಗಳ ಸಂಖ್ಯೆ	ಇಲ್ಲದ ಮನೆಗಳ ಸಂಖ್ಯೆ
1	342	225
2	293	194
3	236	148
4	200	11
5	130	85
6	76	41

ಹೀಗೆ 1277 ಮನೆಗಳಿಗೆ ಪ್ರತ್ಯೇಕ ಶೌಚಸ್ನಾನದ ವ್ಯವಸ್ಥೆಗಳಿದ್ದರೆ 704 ಮನೆಗಳಿಗೆ ಆ ವ್ಯವಸ್ಥೆಗಳಿಲ್ಲ. ಹೆಚ್ಚು ಕಡಿಮೆ 30% ಮನೆಗಳು ಸಾಮಾಜಿಕ ರೋಗಗಳಿಗೆ ಕಾರಣವಾಗುವ ವಾತಾವರಣದಲ್ಲಿವೆ.

ಬೇಸಾಯದ ಭೂಮಿ : ಸಮೀಕ್ಷೆಯು ವಿಶೇಷವಾಗಿ ಪೇಟೆಯ ಪರಿಸರವನ್ನೇ ಒಳಗೊಂಡದ್ದರಿಂದ ಹೆಚ್ಚಿನ ಮನೆಗಳು ಬೇಸಾಯದ ಭೂಮಿಯನ್ನು ಹೊಂದಿರಲಿಲ್ಲ. 756 ಮನೆಗಳು ಮಾತ್ರ ಭೂಮಿಯನ್ನು ಹೊಂದಿದ್ದು ಉಳಿದ 1225 ಮನೆಗಳವರು ಬೇಸಾಯದ ಭೂಮಿಯಿಲ್ಲದವರು. ವ್ಯಾಪಾರಿಗಳು, ವಿವಿಧ ಉದ್ಯೋಗಿಗಳೇ ಇಲ್ಲಿ ಹೆಚ್ಚು ನೆಲೆಸಿರುವುದು ಕೂಡ ಇದಕ್ಕೆ ಇನ್ನೊಂದು ಕಾರಣವಾಗಿರಬಹುದು.

ಸಾಕ್ಷರತೆ : ಇಂದಿನ ಸಾಮಾಜಿಕ ಪಿಡುಗಾಗಿರುವ ಸಾಕ್ಷರತೆಯ ಮೇಲೂ ಸಮೀಕ್ಷೆಯು ಸಾಕಷ್ಟು ಕ್ಷ-ಕಿರಣವನ್ನು ಬೀರಿದೆ. ಈ ಸಮೀಕ್ಷೆಗೆ ಒಳಪಟ್ಟ 2000ಕ್ಕೂ ಮಿಕ್ಕಿ ಜನರು ನಿರಕ್ಷರರು. ಅದಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವವರು ಏಳನೆಯ ತರಗತಿಗಿಂತ ಕಡಿಮೆ ಓದಿದವರು. ಹೆಚ್ಚು ಕಡಿಮೆ 1500 ಜನರು ಎಸ್. ಎಸ್. ಎಲ್. ಸಿ.ಗಿಂತ ಮೊದಲೇ ಶಾಲೆ ಬಿಟ್ಟಿದ್ದರೆ 1200 ಮಂದಿ ಪಿ.ಯು.ಸಿ.ಗಿಂತ ಮೊದಲು ವಿದ್ಯೆಯನ್ನು ನಿಲ್ಲಿಸಿದವರು. ಅಂತೆಯೇ 600ರಷ್ಟು ಜನರು ಪದವಿಪೂರ್ವದಲ್ಲಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತವರು. 898 ಮಂದಿ ಪದವೀಧರರು ಮತ್ತು 178 ಮಂದಿ ತಾಂತ್ರಿಕ ಹಾಗೂ ಡಿಪ್ಲೊಮಾ ಕೋರ್ಸ್ ಮಾಡಿದವರು. ಹಲವಾರು ಕಾರಣಗಳಿಗಾಗಿ ತಮ್ಮ ವ್ಯಾಸಂಗವನ್ನು ಮೊಟಕುಗೊಳಿಸಿದವರ ಸಂಖ್ಯೆ ಸುಮಾರು 2743. ದಿನಪತ್ರಿಕೆ, ವಾರಪತ್ರಿಕೆಯೇ ಮೊದಲಾದ ಸಾಕ್ಷರತೆಯನ್ನು ವೃದ್ಧಿಸುವ ಪರಿಕರಗಳ ಉಪಯೋಗವು 833 ಮನೆಗಳಲ್ಲಿ ಕಂಡು ಬಂದಿದ್ದರೆ ಉಳಿದ 1148 ಮನೆಗಳಲ್ಲಿ ಈ ಹವ್ಯಾಸ ಕಂಡು ಬರಲಿಲ್ಲ. ಪ್ರಾಯಶಃ ಇದೊಂದು ರಾಷ್ಟ್ರೀಯ ಸಮಸ್ಯೆಯಾಗಿದ್ದು ಅದಕ್ಕೆ ಕಾರ್ಕಳವು ಅಪವಾದವಲ್ಲವೆಂಬುದು ವಿದಿತವಾಗಿದೆ.

ಅಂತರ್ಜಾತೀಯ ವಿವಾಹ : ಅಂತರ್ಜಾತೀಯ ವಿವಾಹವನ್ನು ಬಹುಮಟ್ಟಿಗೆ ಒಪ್ಪದ ಸಂಪ್ರದಾಯ ಸಮಾಜ ಕಾರ್ಕಳದ್ದು. 521 ಮನೆಗಳವರು ಅಂತರ್ಜಾತೀಯ ವಿವಾಹವನ್ನು ಸಮರ್ಥಿಸಿದ್ದರೆ, 1460 ಮನೆಗಳ ಯಜಮಾನರು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ವರದಕ್ಷಿಣೆ : ಪ್ರಚಲಿತ ಸಮಾಜದಲ್ಲಿ ಪೆಡಂಭೂತವಾಗಿ ಬೆಳೆಯುತ್ತಿರುವ ಸಾಮಾಜಿಕ ಸಮಸ್ಯೆಯಾದ ವರದಕ್ಷಿಣೆಯ ಕುರಿತು ಕಾರ್ಕಳದ ಸಮಾಜದಲ್ಲಿ ಉಂಟಾಗಿರುವ ಜಾಗೃತಿಯನ್ನೂ ಪ್ರಜ್ಞೆಯನ್ನೂ ಸಮೀಕ್ಷೆಯು ತೋರಿಸಿದೆ. 1824 ಕುಟುಂಬಗಳು ವರದಕ್ಷಿಣೆಗೆ ವಿರೋಧವನ್ನು ವ್ಯಕ್ತಪಡಿಸಿದ್ದರೆ, ಬರೇ 157 ಕುಟುಂಬಗಳು ವರದಕ್ಷಿಣೆಯನ್ನು ಸಮರ್ಥಿಸಿವೆ. ಈ ಪ್ರಜ್ಞೆಯು ಜೀವನದಲ್ಲಿ ಅನುಷ್ಠಾನಕ್ಕೆ ಬಂದಲ್ಲಿ ಕಾರ್ಕಳದ ಜನತೆಯ ಸಂಸ್ಕಾರ ಉನ್ನತ ಮಟ್ಟದ್ದಾಗುವುದು. ಸಮೀಕ್ಷೆಯು ತಿಳಿಸುವಂತೆ ಜನರ ಅಭಿಪ್ರಾಯ ಅನುಕೂಲವಾಗಿದ್ದರೂ, ಅನುಷ್ಠಾನಕ್ಕೆ ಅಡಚಣೆಗಳಿರುವಂತೆ ಭಾಸವಾಗುತ್ತದೆ.

ಕಾರ್ಕಳದ ಪೇಟೆಯ ಜನರಲ್ಲಿರುವ ವಾಹನಗಳಲ್ಲಿ ಸೈಕಲುಗಳೇ ಅತ್ಯಧಿಕ ಸಂಖ್ಯೆಯದ್ದೆಂದು ಸಮೀಕ್ಷೆ ತಿಳಿಸುತ್ತದೆ. ಆರ್ಥಿಕ ಮುಗ್ಗಟ್ಟಿನ ದೆಸೆಯಿಂದಾಗಿ ಈ ಬಡವನ ವಾಹನ ಹೆಚ್ಚು ಜನಪ್ರಿಯವಾಗಿದೆಯೆಂದು ಊಹಿಸಬಹುದು. ಸ್ಕೂಟರ್, ಮೋಟಾರ್ ಸೈಕಲ್, ರಿಕ್ಷಾ, ಲೋರಿ, ಕಾರು ಮತ್ತು ಜೀಪುಗಳು ಕ್ರಮವಾಗಿ ತಮ್ಮ ಸ್ಥಾನಗಳನ್ನು ಪಡೆಯುತ್ತವೆ.

ಶ್ರಾವಣ - ಚಾಕ್ಷುಷ ಉಪಕರಣಗಳಲ್ಲಿ ರೇಡಿಯೋ - ಟ್ರಾನ್ಸಿಸ್ಟರ್‌ಗಳು ಒಂದು ಸಾವಿರಕ್ಕಿಂತಲೂ ಅಧಿಕವಾಗಿವೆ. ಟೇಪ್ ರೆಕಾರ್ಡರುಗಳು 300ಕ್ಕೂ ಮಿಕ್ಕಿವೆ. ಅಲ್ಲದೆ ಟು - ಇನ್ - ವನ್ ಮತ್ತು ವಿಡಿಯೋಗಳು ಕೂಡಾ ಉಪಯೋಗದಲ್ಲಿವೆ:

ಆರ್ಥಿಕ ಸಮೀಕ್ಷೆಗಳು

ಜನ ಸಂಖ್ಯೆಯ ರಚನೆ: ಸಮೀಕ್ಷೆಗೊಳಪಟ್ಟ ಜನಸಂಖ್ಯೆಯನ್ನು ಪ್ರಾಯಕ್ಕನುಗುಣವಾಗಿ ವಿಂಗಡಿಸಿದಾಗ 962 ಜನರು 5ವರ್ಷಕ್ಕಿಂತ ಕೆಳಗಿನವರು; 2590 ಜನರು 6ರಿಂದ 14ವರ್ಷಗಳ ಪ್ರಾಯದವರು; 1716 ಜನರು 15ರಿಂದ 20ವರ್ಷಗಳ ಪ್ರಾಯದವರು; 5919 ಜನರು 21ರಿಂದ 58ವರ್ಷವಾದವರು; ಹಾಗೂ 1054 ಜನರು 59 ವರ್ಷಕ್ಕಿಂತ ಮೇಲ್ಪಟ್ಟವರೆಂಬ ಅಂಶ ತಿಳಿದು ಬಂದಿದೆ. ಇವರಲ್ಲಿ ಸಂತಾನೋತ್ಪತ್ತಿಯ ಪ್ರಾಯದವರು ಅತ್ಯಧಿಕವಾಗಿರುವುದು ಜನಸಂಖ್ಯೆಯ ಶೀಘ್ರ ಬೆಳವಣಿಗೆಗೆ ಕಾರಣವಾಗಿದೆ ಎಂಬ ಅಂಶವು ಬೆಳಕಿಗೆ ಬಂದಿದೆ.

ಉದ್ಯೋಗ – ವೃತ್ತಿಗಳು : ಸಮೀಕ್ಷೆಗೆ ಸಂಬಂಧಪಟ್ಟ 12241 ಜನರಲ್ಲಿ 493 ಮಂದಿ ಬೀಡಿ ಕಟ್ಟುವವರು; 666 ಮಂದಿ ಕೂಲಿ ಕೆಲಸ ಮಾಡುವವರು; 207ಮಂದಿ ಬ್ಯಾಂಕು ನೌಕರರು; 385ಮಂದಿ ವ್ಯಾಪಾರಿಗಳು; 179ಮಂದಿ ಅಧ್ಯಾಪಕರು; 251ಮಂದಿ ಸರಕಾರಿ ಉದ್ಯೋಗಿಗಳು; 289ಮಂದಿ ಖಾಸಗಿ ವೃತ್ತಿಯಲ್ಲಿರುವವರು; 233ಮಂದಿ ಬೇಸಾಯದ ಕೆಲಸದವರು ಹಾಗೂ 906ಮಂದಿ ಇತರ ಕಸುಬುಗಳವರು. ಇವರೆಲ್ಲರ ಒಟ್ಟು ಸಂಖ್ಯೆ 3609 – ಎಂದರೆ ಹೆಚ್ಚುಕಡಿಮೆ 35%.

ವಾರ್ಷಿಕ ಆದಾಯ : ಆರ್ಥಿಕತೆಯ ಅಳತೆಗೋಲಾದ ಆದಾಯದ ವಿವರಗಳನ್ನು ಸಮೀಕ್ಷೆಯು ವಿಶ್ಲೇಷಿಸಿದೆ. ಸಂಪಾದನೆ ಮಾಡುವ ವ್ಯಕ್ತಿಗಳಿಗೆ ಸೀಮಿತವಾಗಿದ್ದ ಇದರ ವಿವರಗಳು ಹೀಗಿವೆ: 2208 ಮಂದಿಯ ವಾರ್ಷಿಕ ಆದಾಯವು ರೂ. 3600 = 00 ರ ವರೆಗಿದ್ದರೆ; 1243ಮಂದಿಗೆ ರೂ. 3600 = 00 ರಿಂದ ರೂ. 10,000 = 00ರ ವರೆಗೆ ಆದಾಯವಿದೆ. 282ಮಂದಿಯ ಆದಾಯ ರೂ.10,000 = 00 ದಿಂದ ರೂ. 15,000 = 00 ದಷ್ಟಿದೆ. 168ಜನರ ಆದಾಯ ರೂ. 15,000 = 00 ದಿಂದ ರೂ. 30,000 = 00 ದ ವರೆಗಿದ್ದು 33 ಜನರಿಗೆ ರೂ. 30,000 = 00ಕ್ಕೂ ಅಧಿಕ ಆದಾಯವಿದೆ.

ವಿಮೆ, ಬ್ಯಾಂಕು ಮತ್ತು ಕುಟುಂಬ ಕಲ್ಯಾಣ: ಆಧುನಿಕ ಆರ್ಥಿಕ ಪ್ರಜ್ಞೆಗಳಾದ ಜೀವವಿಮೆ, ಬ್ಯಾಂಕ್ ಅಕೌಂಟ್ ಮತ್ತು ಕುಟುಂಬ ಕಲ್ಯಾಣಗಳ ಕುರಿತು ಸಮೀಕ್ಷಿಸಿದಾಗ 1050 ಕುಟುಂಬಗಳು ಜೀವವಿಮೆಯನ್ನು ಅಳವಡಿಸಿರುವುದು ಕಂಡುಬಂದಿದೆ. ಆದರೂ ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯ ಕುಟುಂಬಗಳು (931) ವಿಮೆಯನ್ನು ಅಳವಡಿಸಿಕೊಳ್ಳದಿರುವುದು ಜೋಡಿಸಬೇಕಾದ ಜಿರುಕಿನ ವಿಸ್ತಾರವನ್ನು ಎತ್ತಿ ತೋರಿಸುತ್ತದೆ.

ಬ್ಯಾಂಕಿನ ಜ್ಞಾನ ಹಾಗೂ ವ್ಯವಹಾರದಲ್ಲಿ ಸಮೀಕ್ಷೆಯಿಂದ ದೊರೆತ ವಿವರಗಳು ಹೆಚ್ಚು ತೃಪ್ತಿಕರವಾಗಿವೆ. 1658 ಮನೆಗಳು ಬ್ಯಾಂಕಿನ ವ್ಯವಹಾರ ಉಳ್ಳವುಗಳು. 323 ಮನೆಗಳು ಮಾತ್ರ ಬ್ಯಾಂಕಿನ ವ್ಯವಹಾರ ಇರದವುಗಳು.

ಕುಟುಂಬ ಕಲ್ಯಾಣ ಯೋಜನೆಯನ್ನು ಅಳವಡಿಸಿದ ಕುಟುಂಬಗಳು 225 ಮಾತ್ರ.

ಸಾರ್ವಜನಿಕ ಸೌಕರ್ಯಗಳು : ಸಮೀಕ್ಷೆಯು ಏಳು ಮುಖ್ಯ ಸಾರ್ವಜನಿಕ ಸೇವಾಸೌಲಭ್ಯಗಳನ್ನು ಆಯ್ದುಕೊಂಡಿತ್ತು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ, ವೈದ್ಯಕೀಯ ಸೌಲಭ್ಯ, ನೀರಿನ ಸರಬರಾಜು, ವಿದ್ಯುತ್ ವಿತರಣೆ, ಸಾರಿಗೆ ಸಂಪರ್ಕ, ಪೋಲಿಸ್ ಇಲಾಖೆ.

ವಿದ್ಯಾಸಂಸ್ಥೆಗಳು ಮತ್ತು ರಸ್ತೆಯ ಸ್ಥಿತಿ ಇವುಗಳ ಸೇವೆಯನ್ನು ತೃಪ್ತಿಕರ, ಅತೃಪ್ತಿಕರ ಮತ್ತು ಅಭಿಪ್ರಾಯವಿಲ್ಲ ಎಂದು ವಿಭಾಗಿಸಿದಾಗ ಲಭಿಸಿದ ಅಂಶಗಳನ್ನು ಕೆಳಗೆ ತೋರಿಸಲಾಗಿದೆ:

ಅಭಿಪ್ರಾಯ	ಆಸ್ಪತ್ರೆ	ನೀರು	ವಿದ್ಯುತ್	ಸಾರಿಗೆ	ಪೋಲೀಸ್	ವಿದ್ಯೆ	ರಸ್ತೆ
ತೃಪ್ತಿಕರ	932	789	734	942	996	1260	820
ಅತೃಪ್ತಿಕರ	468	670	755	354	385	188	529
ಅಭಿಪ್ರಾಯವಿಲ್ಲ	403	344	314	507	422	355	454

ಕಾರ್ಕಳ ನಗರದ ಸಮಸ್ಯೆಗಳು ಮತ್ತು ಪರಿಹಾರಗಳು:

ಎಲ್ಲಾ ವಾರ್ಡುಗಳಲ್ಲಿಯೂ ಮೂಡಿ ಬಂದ ಅಭಿಪ್ರಾಯದಂತೆ ವಿದ್ಯುತ್ ಕಡಿತ ಅತಿದೊಡ್ಡ ಸಮಸ್ಯೆಯೆಂದು ಪರಿಗಣಿಸಲ್ಪಟ್ಟಿದೆ. ಅಷ್ಟೇ ದೊಡ್ಡದಾಗಿ ಕಂಡ ಇನ್ನೊಂದು ಸಮಸ್ಯೆಯೆಂದರೆ ನಳ್ಳಿನೀರು. ಇದರ ಪರಿಶುದ್ಧತೆ ಮತ್ತು ಪ್ರವಾಹ ಎರಡೂ ಸಮಸ್ಯೆಯಾಗಿದೆ. ಬೆಲೆ ಏರಿಕೆಯು ಸರ್ವಸಾಮಾನ್ಯ ಎಲ್ಲಾ ವರ್ಗದ ಜನರು ಎದುರಿಸುವ ಇನ್ನೊಂದು ಸಮಸ್ಯೆ. ಸರ್ಕಾರಿ ಆಸ್ಪತ್ರೆಯ ಸೇವಾ ಸೌಲಭ್ಯಗಳು ಸುಧಾರಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಅಗಲ ಕಿರಿದಾದ ರಸ್ತೆಗಳು ಇನ್ನೊಂದು ಸಮಸ್ಯೆಯೆಂದು ಪ್ರಕಟವಾಗಿದೆ. ನಗರದೊಳಗೆ ಸಿಟಿಬಸ್ಸು ಇಲ್ಲದಿರುವ ಸಮಸ್ಯೆಯೂ ಕೆಲವರನ್ನು ಕಾಡುತ್ತಿದೆ. ತೆರಿಗೆಯ ಹೊರೆಯು ಅಧಿಕವೆಂದು ಅಭಿಪ್ರಾಯ ಪಟ್ಟವರು ಹಲವರು. ರಸ್ತೆದೀಪಗಳ ಅವ್ಯವಸ್ಥೆ, ಚರಂಡಿ ಯೋಜನೆಯ ಅಭಾವ, ನುಸಿ, ಅಲೆಮಾರಿ ಪ್ರಾಣಿಗಳ ಸಮಸ್ಯೆಯೂ ಎತ್ತಿತೋರಿಸಲ್ಪಟ್ಟಿದೆ. ಬಾಡಿಗೆ ಮನೆಗಳ ಸಮಸ್ಯೆ, ಚಿಮಿಣಿ ಎಣ್ಣೆ, ಸಕ್ಕರೆಯೇ ಮೊದಲಾದ ಕಂಟ್ರೋಲ್ ವಸ್ತುಗಳ ವಿತರಣೆಯ ಅಸಮರ್ಪಕತೆ, ನಿರುದ್ಯೋಗ ಸಮಸ್ಯೆಗಳೂ ಪ್ರತಿಬಿಂಬಿತವಾಗಿವೆ. ಹಾಗೆಯೇ ವಾಹನ ನಿಯಂತ್ರಿಸುವಲ್ಲಿ ಸಂಬಂಧ ಪಟ್ಟವರ ನಿಸ್ಸಹಾಯಕತೆಯು ಸೂಚಿತವಾಗಿದೆ. ವಿದ್ಯಾಸಂಸ್ಥೆಗಳ ಕಾರ್ಯ ವೈಖರಿಯನ್ನು ಕೆಲವರು ಮೆಚ್ಚಲಿಲ್ಲ.

ಮೇಲಿನ ಸಮಸ್ಯೆಗಳನ್ನು ಹೋಗಲಾಡಿಸುವುದಲ್ಲದೆ ನಗರಕ್ಕೊಂದು ಪುರಭವನ, ಸಾರ್ವಜನಿಕ ಉದ್ಯಾನ, ರಾಮ ಸಮುದ್ರವನ್ನು ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿಗೊಳಿಸುವುದು. ನಗರದ ನೈರ್ಮಲ್ಯವನ್ನು ಕಾಪಾಡುವುದು. ಮಾರ್ಕೆಟ್ಟಿಗೆ ಹೆಚ್ಚು ಸ್ಥಳಾವಕಾಶವನ್ನು ಕಲ್ಪಿಸಿ ಮೀನು ಮತ್ತು ತರಕಾರಿ ವಿಭಾಗಗಳನ್ನು ಪ್ರತ್ಯೇಕಿಸುವುದು, ನಗರದ ಒಳರಸ್ತೆಗಳಿಗೆ ಡಾಮರ್ ಹಾಕುವುದು, ಅಡುಗೆಯ ಅನಿಲದ ವಿತರಣೆಯನ್ನು ಸುಗಮಗೊಳಿಸುವುದು. ಉದ್ಯೋಗಾವಕಾಶಗಳನ್ನು ಕಲ್ಪಿಸುವುದಕ್ಕಾಗಿ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸುವುದು, ಮನೋರಂಜನೆಯ ವ್ಯವಸ್ಥೆಯ ವಿಸ್ತರಣೆ, ಅಗ್ನಿಶಾಮಕ ದಳದ ಆವಶ್ಯಕತೆಯೇ ಇತ್ಯಾದಿ ಹಲವಾರು ಸಲಹೆ ಸೂಚನೆಗಳನ್ನು ಮುಂದಿಟ್ಟಿದ್ದಾರೆ.

ಕಾಲೇಜನ್ನು ಕುರಿತು: ಸಮೀಕ್ಷೆಯು ಶ್ರೀ ಭುವನೇಂದ್ರ ಕಾಲೇಜನ್ನು ಕುರಿತು ವಿಶೇಷವಾಗಿ ಜನಾಭಿಪ್ರಾಯವನ್ನು ಸಂಗ್ರಹಿಸಿತ್ತು. ಸಮೀಕ್ಷೆಗೊಳಪಟ್ಟ 1981 ಒಟ್ಟುಮನೆಗಳ ಪೈಕಿ 1975 ಮನೆಗಳು ಕಾಲೇಜಿನ ಶಿಸ್ತನ್ನು, ಕಾರ್ಯತತ್ಪರತೆಯನ್ನು. ಅದು ಹಾಕಿಕೊಟ್ಟ ವಿದ್ಯಾಪರಂಪರೆಯನ್ನು. ರಾಜಕೀಯ ಪ್ರವೇಶಿಸದೆ ಕಾಲೇಜಿನ ವಾತಾವರಣ ಶುದ್ಧವಾಗಿರುವುದನ್ನು. ಇವೆಲ್ಲದಕ್ಕೆ ಸತತವಾಗಿ ಶ್ರಮಿಸುತ್ತಿರುವವರನ್ನು ಮುಕ್ತ ಕಂಠದಿಂದ ಶ್ಲಾಘಿಸಿವೆ. ಇಂತಹ ಕಾಲೇಜು ಇಲ್ಲಿ ಇರುವುದು ಈ ಊರಿನವರ ಭಾಗ್ಯ ಎನ್ನುವಷ್ಟರ ಮಟ್ಟಿಗೆ ಮೆಚ್ಚಿದ್ದಾರೆ. ಆರು ಮನೆಗಳು ಮಾತ್ರ ಕಾಲೇಜಿನ ಕುರಿತು ತಮ್ಮ ಅತೃಪ್ತಿಯನ್ನು ವ್ಯಕ್ತ ಪಡಿಸಿವೆ. ಅತೃಪ್ತಿಯ ಮುಖ್ಯ ಅಂಶಗಳೆಂದರೆ ಊರಿನ ಮಕ್ಕಳಿಗೆ ಕಾಲೇಜಿನಲ್ಲಿ ಸೀಟಿಗೆ ಆದ್ಯತೆ ಇಲ್ಲದಿರುವುದು, ವಿದ್ಯಾರ್ಥಿಗಳ ನೈತಿಕ ಮಟ್ಟ ಕುಸಿಯುತ್ತಿರು

ವುದು; ಶಿಸ್ತು ಅತಿ ಕಠಿಣವಾಗಿರುವುದು; ಕಾಲೇಜಿನ ವ್ಯವಹಾರಗಳಲ್ಲಿ ಏಕಸ್ವಾಮ್ಯ ಇರುವುದು ಹಾಗೂ ಕಾಲೇಜು ಪೇಟೆಯಿಂದ ಹೆಚ್ಚು ದೂರದಲ್ಲಿರುವುದು. ಈ ಅತೃಪ್ತಿಗಳನ್ನು ಸೂಕ್ಷ್ಮವಾಗಿ ವಿವೇಚಿಸಿದರೆ, ಇವುಗಳನ್ನು ಸಂಸ್ಥೆಯ ದೋಷಗಳೆಂದು ಪರಿಗಣಿಸುವುದು ಸಮರ್ಪಕವೆನಿಸದು. ಕಾಲೇಜಿಗೆ ಪ್ರವೇಶ ವನ್ನು ನೀಡುವಾಗ ವ್ಯಾಸಂಗದಲ್ಲಿರುವ ಅಭಿರುಚಿಯನ್ನು ಆದ್ಯ ಗಮನದಲ್ಲಿಡಬೇಕಾಗುತ್ತದೆ. ಅಭಿರುಚಿ ಯಿಲ್ಲದ ಒಬ್ಬಿಬ್ಬರಿದ್ದರೂ ಕ್ಲಾಸಿನ ಹಾಗೂ ಸಂಸ್ಥೆಯ ಶಿಸ್ತು ಕೆಟ್ಟು ಹೋಗಿ ಆ ಮೂಲಕ ಉತ್ತಮ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಧಕ್ಕೆ ಬರುವುದು. ಕಾಲೇಜು ಪೇಟೆಯಿಂದ ಹೊರಗಿದ್ದರೆ ವಿದ್ಯಾರ್ಥಿಗಳಿಗೆ ಅನಗತ್ಯವಾದ ಆಕರ್ಷಣೆ ಮತ್ತು ಪ್ರಲೋಭನೆಗಳು ಕಡಿಮೆಯಾಗಿ ಉತ್ತಮ ವ್ಯಾಸಂಗದ ವಾತಾವರಣವು ರೂಪುಗೊಳ್ಳುವುದು. ಯುವಕರಲ್ಲಿ ಶಿಸ್ತು ಶಿಥಿಲವಾಗುತ್ತಿರುವ ಈಗಿನ ಕಾಲದಲ್ಲಿ ಶಿಸ್ತಿನ ಬೆಲೆ ಅವನು ಜವಾಬ್ದಾರಿಯನ್ನು ಹೊತ್ತ ಪ್ರಜೆಯಾದಾಗ ಅರಿವಾಗುತ್ತದೆ. ಕಠಿಣ ಶಿಸ್ತಿನಿಂದ ಅನನುಕೂಲಪಟ್ಟ ವಿದ್ಯಾರ್ಥಿಗಳು ತಮ್ಮ ಭಾವೀ ಜೀವನದಲ್ಲಿ ಸುಖಸಂತೃಪ್ತಿಗಳನ್ನು ಕಂಡಾಗ ತಾವು ಶಿಸ್ತಿಗೆ ತೆತ್ತ ಬೆಲೆಯ ಅರಿವಾಗುತ್ತದೆ. ಅಪ್ರಬುದ್ಧ ವಿದ್ಯಾರ್ಥಿಗಳು ತಮ್ಮ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರವಾಗಿ ಮಾರ್ಪಡಿಸದಂತೆ ನೋಡಿಕೊಳ್ಳುವುದು ಕಾಲೇಜಿನ ಕಾರ್ಯಕರ್ತರ ಮುಖ್ಯ ಕರ್ತವ್ಯ. ಹಾಗೆಯೇ ನಶಿಸುತ್ತಿರುವ ನೈತಿಕ ಮೌಲ್ಯಗಳ ಕುರಿತು ವಿದ್ಯಾರ್ಥಿ ಸಮುದಾಯವನ್ನು ಎಚ್ಚರಿಸುವ ಉದ್ದೇಶದಿಂದ ಕಾಲೇಜಿನಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರವನ್ನು ಕಳೆದ ಕೆಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಇದಕ್ಕೆ ವಿದ್ಯಾರ್ಥಿ ಪ್ರತಿಕ್ರಿಯೆಯು ಹೆಚ್ಚುತ್ತಾ ಇದೆ.

ಸಮೀಕ್ಷೆಯು ಈ ಕಾಲೇಜಿನಿಂದ ಹೊರಬಂದ ಪದವೀಧರರ ಅಂಕೆ ಸಂಖ್ಯೆಗಳ ವಿವರಗಳನ್ನು ಈ ಕೆಳಕಂಡಂತೆ ತೋರಿಸುತ್ತದೆ.

ಬಿ. ಎ...	870
ಬಿ. ಎಸ್‌ಸಿ ...	920
ಬಿ. ಕಾಂ ...	1400
ಒಟ್ಟು	3190

ಪದವೀಧರರನ್ನು ಮತ್ತು ವ್ಯಾಸಂಗ ಮಾಡಿದವರನ್ನು ವಿಶ್ಲೇಷಿಸಿದಾಗ ಈ ಕೆಳಗಿನ ವಿವರಗಳು ದೊರೆತಿವೆ :

ವೈದ್ಯರು – 439

ಪದವೀಧರ ಇಂಜಿನಿಯರರು – 244

ಇಂಜಿನಿಯರರು – 92

ದಂತ ವೈದ್ಯರು – 30

ಫಾರ್ಮಸಿಸ್ಟ್ಸ್ – 31

ನ್ಯಾಯವಾದಿಗಳು – 200

ಅಧ್ಯಾಪಕರು – 100

ಸ್ನಾತಕೋತ್ತರ ಪದವೀಧರರು – 150

ಪದವೀಧರ ರೈತರು – 50

ಒಟ್ಟು – 1336

ಶ್ರೀ ಭುವನೇಂದ್ರ ಕಾಲೇಜು ಮಾನವ ಪ್ರಯತ್ನಗಳ ಅನರ್ಘ್ಯ ಮತ್ತು ತ್ಯಾಗಗಳ ಪ್ರತೀಕ. ಪ್ರಜ್ಞಾವಂತ ಸಮಾಜವು ತನಗೆ ತಪ್ಪಿಹೋದ ಸದವಕಾಶವನ್ನು ತನ್ನ ಮುಂದಿನ ಪೀಳಿಗೆಗೆ ಒದಗಿಸಿಕೊಟ್ಟ ಜ್ಞಾನದೇಗುಲವೇ ಈ ವಿದ್ಯಾಸಂಸ್ಥೆ. ಅಹರ್ನಿಶಿ ದುಡಿದ ಅದೆಷ್ಟೋ ದಾನಿಗಳ ಕನಸಿನ ಕೂಸು ಈ ಕಾಲೇಜು. ಅವರ ಸುಂದರ ಕನಸನ್ನು ನೆನಸಾಗಿ ಮಾಡಿದ ವಿದ್ಯಾದೇವಿಯ ಮಕುಟದ ರತ್ನ. ಕಾರ್ಕಳದ ಮನೆ ಮನೆಯ ಅದೃಷ್ಟವನ್ನು ರೂಪಿಸಿ ಭವ್ಯ ಭವಿಷ್ಯವನ್ನು ರೂಪಿಸಿದ ಮಹಾನ್ ಸಂಸ್ಥೆ. ವ್ಯಾಪಾರಿಗಳಾಗಿ, ಕೈಗಾರಿಕೋದ್ಯಮಿಗಳಾಗಿ, ನ್ಯಾಯವಾದಿಗಳಾಗಿ, ಅಧ್ಯಾಪಕರಾಗಿ, ವೈದ್ಯರಾಗಿ, ಇಂಜಿನಿಯರುಗಳಾಗಿ, ಬ್ಯಾಂಕು ಉದ್ಯೋಗಿಗಳಾಗಿ, ಪ್ರಗತಿಪರ ರೈತರಾಗಿ ಕಾರ್ಕಳದ ನೆಲವನ್ನು ಹಸನುಗೊಳಿಸುತ್ತಾ ಜೀವನದ ವಿವಿಧ ಮುಖಗಳಲ್ಲಿ ಮುಖಂಡರಾಗಿ ನಿಂತು ತಮ್ಮ ಸಾಮಾಜಿಕ ಕರ್ತವ್ಯವನ್ನು ನಿರ್ವಹಿಸುವಲ್ಲಿ ನಿಷ್ಣಾತವೆನಿಸಿದೆ, ಈ ಕಾಲೇಜಿನಿಂದ ಹೊರಬಂದ ವಿದ್ಯಾರ್ಥಿ ಸಮುದಾಯ. ಪ್ರಗತಿ ಮತ್ತು ಸಮೃದ್ಧಿಯ ಸಂಕೇತವಾಗಿ ಬಲಿಷ್ಠರಾಗಿ ಬೆಳೆದಿರುವ ಈ ಸಂಸ್ಥೆಯು ಕೀರ್ತಿಶೇಷರಾದ ಡಾ॥ ಮಾಧವ ಪೈಗಳ ದೂರದರ್ಶಿತ್ವ, ನಾಯಕತ್ವ, ನಿಸ್ವಾರ್ಥಸೇವೆ, ಕರ್ತೃತ್ವ ಶಕ್ತಿಗಳಿಗೆ ಮುಡಿಪಾಗಿಟ್ಟ ಕಾಣಿಕೆ. ಕಾರ್ಕಳದ ಜನತೆಯ ಕೃತಜ್ಞತೆಯ ಕುಡಿ. ಪಾಠದ ಚಟುವಟಿಕೆಗಳಲ್ಲಾಗಲೀ ಪಾಠೇತರ ಚಟುವಟಿಕೆಗಳಲ್ಲಾಗಲೀ ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿರುವ ಈ ಕಾಲೇಜು 'ಮಣಿಪಾಲ ಕಾಂಪ್ಲೆಕ್ಸ್'ನಿಂದ ಹೊರಗೆ ಸ್ಥಾಪನೆಯಾದ ಪ್ರಥಮ ಕಾಲೇಜು; ಪದವಿ ಪೂರ್ವ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕನ್ನು ಪಡೆದ ಜಿಲ್ಲೆಯ ಪ್ರಥಮ ಕಾಲೇಜು; ಅಂತಿಮ ಬಿ.ಕಾಂ ಪದವಿ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕನ್ನು ಪಡೆದ ಜಿಲ್ಲೆಯ ಪ್ರಥಮ ಕಾಲೇಜು; ಈ ಇಪ್ಪತ್ತೈದು ವರ್ಷಗಳಲ್ಲಿ ಅತ್ಯಧಿಕ ಸಂಖ್ಯೆಯ ವೈದ್ಯರನ್ನು ಮತ್ತು ಇಂಜಿನಿಯರರನ್ನು ದೇಶಕ್ಕೆ ಒಪ್ಪಿಸಿದ ಜಿಲ್ಲೆಯ ಪ್ರಥಮ ಕಾಲೇಜು, ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವನ್ನು ಒದಗಿಸಿದಜಿಲ್ಲೆಯ ಪ್ರಥಮ ಕಾಲೇಜು; ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಎನ್.ಸಿ.ಸಿ. ಮತ್ತು ಎನ್. ಎಸ್. ಎಸ್. ಗಳಿಗೆ ನೊಂದಾಯಿಸಿದ ಜಿಲ್ಲೆಯ ಪ್ರಥಮ ಕಾಲೇಜು; ಬೋಧನಾ ಕ್ರಮದಲ್ಲಿ ಮತ್ತು ಪರೀಕ್ಷೆಯ ಕ್ರಮದಲ್ಲಿ ನವೀನ ಪ್ರಯೋಗಗಳನ್ನು ಅನುಷ್ಠಾನಕ್ಕೆ ತಂದುದು; ಬಂಡೆ ಹತ್ತುವ, ಈಜುಗಾರಿಕೆಯ, ಕ್ರೀಡಾ ತರಬೇತಿಯ, ಚಿತ್ರ ಬಿಡಿಸುವ, ಸಂಗೀತ ಶಿಕ್ಷಣದ, ಸೌಕರ್ಯಗಳನ್ನು ಒದಗಿಸುದುದು; ಪ್ರತಿವರ್ಷವೂ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರಗಳನ್ನು ಜರಗಿಸಿದುದು ಈ ಕಾಲೇಜಿನ ಮಹತ್ವದ ಸಾಧನೆಗಳು.

ಇಂದು ರಜತ ಮಹೋತ್ಸವವನ್ನು ಆಚರಿಸುತ್ತಿರುವ ಈ ಕಾಲೇಜಿನ ಗರಿಮೆ ಹಿರಿಮೆಗಳಿಗೆ ಮನಸೋತ ಅಭಿಮಾನಿಗಳ ವೃಂದವು ಸ್ವೇಚ್ಛೆಯಿಂದ ಮಹಾಪೂರದಂತೆ ದಾನಿಗಳಾಗಿ ಮುಂದೆ ಬಂದುದು ಈ ಸಂಸ್ಥೆಯ ಮೇಲಿರುವ ಅಪಾರ ಅನುಕಂಪಕ್ಕೆ ಸಾಕ್ಷಿಯಾಗಿದೆ. ಈ ಸಂಸ್ಥೆಯ ಸಿಹಿಕಹಿಗಳಲ್ಲಿ ಸಹಭಾಗಿಯಾದವರಿಗೆ ಇದರ ಪ್ರಗತಿಗಾಗಿ ಪರಿಶ್ರಮಪಟ್ಟವರಿಗೆ ಇದರ ಶ್ರೇಯೋಭಿವೃದ್ಧಿಗಾಗಿ ಪಣತೊಟ್ಟವರಿಗೆ ಇದೊಂದು ವಿಶ್ವಾಸದ ಸೆಲೆಯಾಗಿದೆ, ತೃಪ್ತಿಯ ಚಿಲುಮೆಯಾಗಿದೆ.